ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಶಿವಮೊಗ್ಗ
ಶನಿವಾರ, 21 ಮಾರ್ಚ್ 2026
ಸಂಪುಟ 16, ಸಂಚಿಕೆ 327, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹4
RNI: KAR KAN 2010/64051
hosadigantha.com
epaper.hosadigantha.com
Hosadigantha Digital



ಸನಾತನ ಧರ್ಮಕ್ಕೆ ಅವಮಾನ: ಬಿಜೆಪಿ ಕಿಡಿ | ೦೨
ಆಫ್ಘಾನ್‌ಗೆ ಭಾರತದಿಂದ ನೆರವು | ೦೨
ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಾಧನೆ | ೦೫

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಅಶ್ವಿನಿ

ದಿನದ ಮಾತು

ವಿದ್ಯೆ ಎಂಬ ಗುಪ್ತ ಧನವು ಪ್ರಳಯ ಕಾಲದಲ್ಲೂ ನಾಶವಾಗುವುದಿಲ್ಲ.

▲ ನೀತಿಶತಕ

ನೀವು ವಿನಾ ಕಾರಣ ಮಾತನಾಡುತ್ತೀರಾ?

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ದಶಾವತಾರಿ, ಯಕ್ಷಗುರು ಗೋವಿಂದ ಭಟ್ ಇನ್ನಿಲ್ಲ



• ತೀರ್ಥಹಳ್ಳಿ: 'ನಡೆದಾಡುವ ವಿಶ್ವಕೋಶ', 'ದಶಾವತಾರಿ', 'ಯಕ್ಷಗುರು' ಎಂದೇ ಯಕ್ಷಗಾನ ಕ್ಷೇತ್ರದಲ್ಲಿ ಖ್ಯಾತರಾಗಿದ್ದ ಸೂರಿಕುಮೇರಿ ಕೆ. ಗೋವಿಂದ ಭಟ್ (90) ಹೆದ್ದೂರಿನ ಸಮೀಪದ ಸಂತೆಕೊಪ್ಪದಲ್ಲಿ ಅವರ ಮಗನ ಮನೆಯಲ್ಲಿ ಶುಕ್ರವಾರ ವಿಧಿವಶರಾಗಿದ್ದಾರೆ. ಅಂತಿಮ ಕ್ರಿಯೆಯನ್ನು ಶನಿವಾರ ಹೆದ್ದೂರು ಸಂತೆಕೊಪ್ಪದಲ್ಲಿ ನಡೆಸಲಾಗುವುದು ಎಂದು ಕುಟುಂಬ ಮೂಲಗಳಿಂದ ತಿಳಿದು ಬಂದಿದೆ. ಶ್ರೀಕ್ಷೇತ್ರ ಧರ್ಮಸ್ಥಳ ಮೇಳವೊಂದರಲ್ಲಿಯೇ ಸುಮಾರು 50 ವರ್ಷಗಳ ಕಾಲ ತಿರುಗಾಟ ನಡೆಸಿದ್ದ ಇವರು ಕೆಲವು ವರ್ಷಗಳ ಹಿಂದೆ ವಯೋಸಹಜದ ಕಾರಣ ಮೇಳದಿಂದ ನಿವೃತ್ತರಾಗಿದ್ದರು. ➡ಪುಟ ೪

ಪ್ರಾಥಮಿಕ, ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್

• ಬೆಂಗಳೂರು: 2026-27ನೇ ಶೈಕ್ಷಣಿಕ ಸಾಲಿನಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾ ವಿಕಾಸ ಯೋಜನೆಯಲ್ಲಿ ಉಚಿತವಾಗಿ ಶೂ ಮತ್ತು ಸಾಕ್ಸ್ ವಿತರಿಸಲು ಸರ್ಕಾರ ಆದೇಶಿಸಿದೆ.

• ಪುಟ ೫

ಗಲ್ಫ್ ಮೇಲಿನ ಇರಾನ್ ದಾಳಿ ಖಂಡಿಸಿದ ಮೋದಿ

• ಹೊಸದಿಲ್ಲಿ: ಗಲ್ಫ್ ರಾಷ್ಟ್ರಗಳ ಇಂಧನ ಮೂಲಸೌಕರ್ಯಗಳ ಮೇಲಿನ ಇರಾನ್ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಖಂಡಿಸಿದ್ದಾರೆ. ಕತಾರ್, ಫ್ರಾನ್ಸ್, ಜೋರ್ಡನ್, ಒಮನ್ ಹಾಗೂ ಮಲೇಷ್ಯಾ ನಾಯಕರ ಜತೆ ಮಧ್ಯಪ್ರಾಚ್ಯ ಯುದ್ಧ ಕುರಿತು ಚರ್ಚೆ ನಡೆಸಿದ ಪ್ರಧಾನಿ ಮೋದಿ, ಪ್ರದೇಶದಲ್ಲಿ ಯುದ್ಧ ತೀವ್ರತೆ ಹೆಚ್ಚುತ್ತಿರುವ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ.

• ಪುಟ ೨

ಕೆನಡಾದಲ್ಲಿ ಭಾರತ ಗುಪ್ತ ಚಟುವಟಿಕೆ ನಡೆಸುತ್ತಿಲ್ಲ

• ಪುಟ ೨

300 ಬೆಟ್ಟಿಂಗ್ ಆ್ಯಪ್‌ಗಳಿಗೆ ಕೇಂದ್ರ ಸರ್ಕಾರ ನಿರ್ಬಂಧ

• ಪುಟ ೨

ಇಂಧನ ಘಟಕಗಳ ಮೇಲೆ ಪರಸ್ಪರ ದಾಳಿ, ಜಾಗತಿಕ ಆತಂಕ

ಅನಿಲ ಪೂರೈಕೆ ಬಾಧಿತ



• ದುಬೈ/ಹೊಸದಿಲ್ಲಿ: ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಮೂರನೇ ವಾರವೂ ಮುಂದುವರಿದಿದ್ದು, ಪ್ರಮುಖ ಇಂಧನ ಘಟಕಗಳನ್ನು ಗುರಿಯಾಗಿಸಿ ಪರಸ್ಪರ ದಾಳಿಗಳು ನಡೆಯುತ್ತಿದ್ದು, ಜಾಗತಿಕ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ. ಮಧ್ಯಪ್ರಾಚ್ಯ ಯುದ್ಧದಿಂದ ಆಮದು ಮೇಲೆ ಮಾರಕ ಪರಿಣಾಮ ಬಿದ್ದಿದ್ದು, ಎಲ್‌ಪಿಜಿ ಪೂರೈಕೆ ಕಳವಳಕಾರಿ ಎಂದು ಕೇಂದ್ರ ಸರ್ಕಾರ ಹೇಳಿದೆ. ಹೊಸದಿಲ್ಲಿಯಲ್ಲಿ ಶುಕ್ರವಾರ ನಡೆದ ದೈನಂದಿನ ಮಾಹಿತಿ ನೀಡುವ ಸಭೆಯಲ್ಲಿ ಪೆಟ್ರೋಲಿಯಂ ಕಾರ್ಯದರ್ಶಿ ಸುಜಾತಾ ಶರ್ಮಾ ಅವರು, ಸರಬರಾಜು ಸಾಮಾನ್ಯವಾಗಿದ್ದರೂ ಬೇಡಿಕೆ ಏರಿಕೆಯಿಂದ ಪರಿಸ್ಥಿತಿ ಚಿಂತಾ ಜನಕವಾಗಿದೆ ಎಂದರು. ಗ್ರಾಹಕರು ಸಾಧ್ಯವಾದಲ್ಲಿ ಪೈಪ್ಡ್ ನ್ಯಾಚುರಲ್ ಗ್ಯಾಸ್ (ಪಿಎನ್‌ಜಿ) ಬಳಕೆಗೆ ಆದ್ಯತೆ ನೀಡ ಬೇಕು ಎಂದು ಮನವಿ ಮಾಡಿದರು. ಒತ್ತಡ ಕಡಿಮೆ ಮಾಡಲು 13,700ಕ್ಕೂ ಹೆಚ್ಚು ಪಿಎನ್‌ಜಿ ಸಂಪರ್ಕಗಳನ್ನು ನೀಡಲಾಗಿದೆ. ➡ಪುಟ ೪



6 ಭಾರತೀಯರ ಬಲಿ

ಮಧ್ಯಪ್ರಾಚ್ಯ ಯುದ್ಧದ ವಿವಿಧ ಘಟನೆಗಳಲ್ಲಿ ಆರು ಭಾರತೀಯರು ಮೃತಪಟ್ಟಿದ್ದು, ಇನ್ನೊಬ್ಬರು ಕಾಣೆಯಾಗಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಶುಕ್ರವಾರ ತಿಳಿಸಿದೆ.

ಜಾಗತಿಕ ಆರ್ಥಿಕತೆಗೆ ದೊಡ್ಡ ಹೊಡೆತ

ಗಲ್ಫ್ ಪ್ರದೇಶದ ಇಂಧನ ತಾಣಗಳ ಮೇಲೆ ದಾಳಿ ಮತ್ತು ಹಾರ್ಮುಜ್ ಜಲಸಂಧಿಯಲ್ಲಿ ಸಾಗಣೆಗೆ ಅಡಚಣೆ ಉಂಟಾಗಿರುವುದು ಜಾಗತಿಕ ಇಂಧನ ಸಂಕಷ್ಟದ ಭೀತಿಯನ್ನು ಹೆಚ್ಚಿಸಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ.47 ಏರಿಕೆಯಾಗಿ 107ಕ್ಕೆ ತಲುಪಿದ್ದು, ಇಂಧನ ಮತ್ತು ಆಹಾರ ದರಗಳು ವಿಶ್ವದಾದ್ಯಂತ ಏರಿಕೆಯಾಗುತ್ತಿವೆ. ಹೀಲಿಯಂ ಮತ್ತು ಸಲ್ಫರ್ ಮುಂತಾದ ಪ್ರಮುಖ ಮೂಲ ವಸ್ತುಗಳ ಸರಬರಾಜು ಅಡಚಣೆಗೆ ಒಳಗಾಗಿದ್ದು, ಸರಕು ಸರಪಳಿಯಲ್ಲಿ ಮತ್ತಷ್ಟು ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ.

ಪ್ರವಾಸಿ ತಾಣಗಳು ಇರಾನ್ ಗುರಿ

ಪ್ರವಾಸಿ ತಾಣಗಳೂ ಶತ್ರುಗಳಿಗೆ ಸುರಕ್ಷಿತವಾಗಿರುವುದಿಲ್ಲ ಎಂದು ಇರಾನ್ ಸೇನಾ ವಕ್ತಾರ ಜನರಲ್ ಅಬೋಲ್ಫಝಲ್ ಶೆಕಾರ್ಚಿ ಎಚ್ಚರಿಸಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್ ನೌಕಾಪಡೆ ಮತ್ತು ವಾಯುಪಡೆಯು ಕುಸಿದಿದೆ ಎಂದು ಹೇಳಿದ್ದರೆ, ಇರಾನ್ ಅದನ್ನು ತಳ್ಳಿಹಾಕಿದೆ. ಕ್ರಾಂತಿಕಾರಿ ಗಾರ್ಡ್ ವಕ್ತಾರ ಅಲಿ ಮೊಹಮ್ಮದ್ ನಾಇನಿ, 'ಯುದ್ಧದ ನಡುವೆಯೂ ಕ್ಷಿಪಣಿ ಉತ್ಪಾದನೆ ನಡೆಯುತ್ತಿದೆ; ಸಂಗ್ರಹದಲ್ಲಿ ಸಮಸ್ಯೆ ಇಲ್ಲ' ಎಂದಿದ್ದಾರೆ. ಆದರೆ ಅವರ ಹೇಳಿಕೆಯ ಕೆಲವೇ ಗಂಟೆಗಳ ನಂತರ ಅವರು ವಾಯುದಾಳಿಯಲ್ಲಿ ಮೃತಪಟ್ಟಿದ್ದಾರೆ. ಜತೆಗೆ ಬಸಿಜ್ ಫೋರ್ಸ್‌ನ ಇಂಟೆಲಿಜೆನ್ಸ್ ಡೈರೆಕ್ಟರೇಟ್ ಮುಖ್ಯಸ್ಥ ಇಸ್ಮೈಲ್ ಅಹಮದಿ ಕೂಡಾ ಮೃತಪಟ್ಟಿದ್ದಾರೆ. ಹೊಸ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ, ಶತ್ರುಗಳ ಭದ್ರತೆಯನ್ನು ಕಿತ್ತುಕೊಳ್ಳಬೇಕು ಎಂದು ಹೇಳಿದ್ದಾರೆ.

ಬಹ್ರೈನ್ ಕಿಂಗ್ ಜತೆ ಮೋದಿ ಮಾತುಕತೆ

• ಪುಟ ೪

ಮತ್ತಷ್ಟು ನೌಕೆ ರವಾನೆ

ಇರಾನ್ ಕೇಂದ್ರೀಕೃತ ಯುದ್ಧ ಸನ್ನಿವೇಶ ಉಲ್ಬಣಿಸುತ್ತಿರುವ ನಡುವೆಯೇ ಅಮೆರಿಕ ಮಧ್ಯಪ್ರಾಚ್ಯದಲ್ಲಿ ತನ್ನ ಸೈನಿಕ ಹಾಜರಾತಿಯನ್ನು ಮತ್ತಷ್ಟು ಬಲಪಡಿಸಿದೆ. ಮೂರು ಹೆಚ್ಚುವರಿ ಯುದ್ಧನೌಕೆಗಳೊಂದಿಗೆ ಸುಮಾರು 2,500ಕ್ಕೂ ಹೆಚ್ಚು ಮೆರೈನ್ಸ್‌ನ್ನು ಪ್ರದೇಶದತ್ತ ಕಳುಹಿಸಿರುವುದು ಪಶ್ಚಿಮ ಏಷ್ಯಾದ ಉದ್ವಿಗ್ನತೆಯನ್ನು ಇನ್ನಷ್ಟು ಗಂಭೀರಗೊಳಿಸಿದೆ. ಅಮೆರಿಕದ ಯುಎಸ್‌ಎಸ್ ಬಾಕ್ಸರ್ ಸೇರಿ ಇನ್ನೆರಡು ಅಂಫಿಬಿಯಸ್ ಅಸಾಲ್ಟ್ ಶಿಪ್‌ಗಳು ಸ್ಯಾನ್ ಡಿಯಾಗೋದಿಂದ ಹೊರಟಿದ್ದು, 11ನೇ ಮೆರೈನ್ ಎಕ್ಸ್‌ಪೆಡಿಶನರಿ ಯುನಿಟ್‌ನ ಸೈನಿಕರೂ ಈ ದಳದ ಭಾಗವಾಗಿದ್ದಾರೆ ಎಂದು ಅಮೆರಿಕದ ಅಧಿಕಾರಿಗಳು ದೃಢಪಡಿಸಿದ್ದಾರೆ.

ಪ್ರೀಮಿಯಂ ತೈಲ ದರ ಏರಿಕೆ

• ಪುಟ ೪

ಗಲ್ಫ್ ದೇಶಗಳ ಮೇಲೆ ದಾಳಿ

ಕುವೈತ್, ಕತಾರ್ ಸೇರಿದಂತೆ ಗಲ್ಫ್ ದೇಶಗಳಲ್ಲಿರುವ ರಿಫೈನರಿ ಘಟಕಗಳನ್ನೂ ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ. ಕತಾರ್‌ನ ಮಿನಾ ಅಲ್-ಅಹ್ಮದಿ ರಿಫೈನರಿ ಮೇಲೆ ಎರಡು ಹಂತದ ದಾಳಿ ನಡೆಸಲಾಗಿದೆ. ಕುವೈತ್‌ನ ಪ್ರಮುಖ ತೈಲ ರಿಫೈನರಿ ಮೇಲೆ ಡ್ರೋನ್ ದಾಳಿ ನಡೆಸಿದ್ದು, ಬೆಂಕಿ ಕಾಣಿಸಿಕೊಂಡಿದೆ. ಬಹ್ರೇನ್ ಮತ್ತು ಸೌದಿ ಅರೇಬಿಯಾದಲ್ಲಿಯೂ ದಾಳಿಗಳ ಪ್ರಯತ್ನ ನಡೆದಿದೆ. ದುಬೈನಲ್ಲಿ ಈದ್-ಉಲ್-ಫಿತ್ರ್ ಸಂದರ್ಭದಲ್ಲಿ ಸ್ಫೋಟಗಳು ಕೇಳಿಬಂದಿದ್ದು, ಕ್ಷಿಪಣಿಗಳನ್ನು ಧ್ವಂಸ ಮಾಡಲಾಗಿದೆ. ಟೆಹ್ರಾನ್ ಮತ್ತು ಜೆರುಸಲೇಮ್‌ನಲ್ಲಿಯೂ ಸ್ಫೋಟಗಳು ವರದಿಯಾಗಿವೆ. ಇನ್ನೊಂದೆಡೆ ಇಸ್ರೇಲ್, ಲೆಬನಾನ್ ಮತ್ತು ಸಿರಿಯಾದಲ್ಲಿಯೂ ದಾಳಿ ವಿಸ್ತರಿಸಿದೆ.

ಮೂಡದ ಒಮ್ಮತ | ಹೈಕಮಾಂಡ್ ಪ್ರವೇಶ

ದಾವಣಗೆರೆ ದಕ್ಷಿಣ ಕಾಂಗ್ರೆಸ್ ಕಗ್ಗಂಟು



"ದಾವಣಗೆರೆಯಲ್ಲಿ ಶಾಮನೂರು ಕುಟುಂಬ ಟಿಕೆಟ್ ಕೇಳುತ್ತಿದೆ. ಬಾಗಲಕೋಟೆಯಲ್ಲಿ ಎಚ್.ವೈ. ಮೇಟಿ ಕುಟುಂಬಕ್ಕೆ ಟಿಕೆಟ್ ಕೊಡುತ್ತಿಲ್ಲವೇ? ಹಾಗೆಯೇ ಇಲ್ಲಿಯೂ ತಮ್ಮ ಕುಟುಂಬಕ್ಕೆ ಕೊಡಬೇಕು ಎಂದು ಹೇಳುತ್ತಿದೆ. ಅತ್ತ ಅಲ್ಪಸಂಖ್ಯಾತ ಸಮುದಾಯವೂ ಬೇಡಿಕೆ ಇಟ್ಟಿದೆ. ಯಾರು ಬೇಕಾದರೂ ಟಿಕೆಟ್ ಕೇಳಬಹುದು. ಅದರಲ್ಲಿ ತಪ್ಪೇನಿಲ್ಲ, ಆದರೆ, ಅಂತಿಮವಾಗಿ ಪಕ್ಷ ತೀರ್ಮಾನ ಮಾಡಲಿದೆ.

■ ಎಂ.ಬಿ.ಪಾಟೀಲ್, ಸಚಿವ

• ಬೆಂಗಳೂರು: ಎರಡು ವಿಧಾನಸಭಾ ಕ್ಷೇತ್ರಗಳ ಪೈಕಿ ಬಾಗಲಕೋಟೆಗೆ ಅಭ್ಯರ್ಥಿ ಆಯ್ಕೆ ಬಹುತೇಕ ಅಂತಿಮವಾಗಿದ್ದರೂ, ದಾವಣಗೆರೆ ದಕ್ಷಿಣ ಮಾತ್ರ ನಾಯಕರು ಪಟ್ಟು ಸಡಿಲಿಸದ ಹಿನ್ನೆಲೆಯಲ್ಲಿ ಖುದ್ದು ರಾಜ್ಯ ಉಸ್ತುವಾರಿಯ ಮಧ್ಯಪ್ರವೇಶದ ನಂತರವೂ ಕಗ್ಗಂಟಾಗಿಯೇ ಉಳಿದಿದೆ. ಪರಿಣಾಮ ಈ ವಿಚಾರ ಈಗ ಹೈಕಮಾಂಡ್ ಅಂಗಳಕ್ಕೆ ಹೋಗಿದ್ದು, ಎರಡು ದಿನಗಳಲ್ಲಿ ಅಂತಿಮಗೊಳ್ಳುವ ಸಾಧ್ಯತೆ ಇದೆ.

ಅಭ್ಯರ್ಥಿಗಳ ಆಯ್ಕೆ ವಿಚಾರಕ್ಕಾಗಿಯೇ ಶುಕ್ರವಾರ ನಗರಕ್ಕೆ ಆಗಮಿಸಿದ್ದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಪಕ್ಷದ ಪ್ರಬಲ ಆಕಾಂಕ್ಷಿಗಳು ಹಾಗೂ ವೀರಶೈವ-ಲಿಂಗಾಯತ, ಅಲ್ಪಸಂಖ್ಯಾತ ಸೇರಿದಂತೆ ನಾಯಕರೊಂದಿಗೆ ಹಲವು ಸುತ್ತಿನ ಮಾತುಕತೆ ನಡೆಸಿದರು. ಆದಾಗ್ಯೂ ಒಮ್ಮತ ಮೂಡಲಿಲ್ಲ ಎಂದು ಮೂಲಗಳು ತಿಳಿಸಿವೆ. ಮಧ್ಯಾಹ್ನ ನೇರವಾಗಿ ಹೋಟೆಲ್ ತಾಜ್ ವೆಸ್ಟ್‌ಎಂಡ್ ಬಂದಿಳಿದ ಸುರ್ಜೇವಾಲ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಒಂದು ಸುತ್ತಿನ ಸಭೆ ನಡೆಸಿದರು. ➡ಪುಟ ೪

ಬಿಜೆಪಿಯಿಂದ ವೀರಣ್ಣ ಚರಂತಿಮಠ ನಾಮಪತ್ರ

• ಬಾಗಲಕೋಟೆ: ಶಾಸಕ ಎಚ್.ವೈ. ಮೇಟಿ ನಿಧನದಿಂದ ತೆರವಾಗಿರುವ ಸ್ಥಾನಕ್ಕೆ ನಡೆಯುತ್ತಿರುವ ಉಪ ಚುನಾವಣೆಯಲ್ಲಿ ಬಿಜೆಪಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದು, ಪಕ್ಷದ ಮುಖಂಡ ವೀರಣ್ಣ ಚರಂತಿಮಠ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ. ಪತ್ನಿ ರಾಜೇಶ್ವರಿ ಅವರೊಂದಿಗೆ ತಹಶೀಲ್ದಾರ ಕಚೇರಿಗೆ ಆಗಮಿಸಿದ ವೀರಣ್ಣ ಚರಂತಿಮಠ ಅವರು ಚುನಾವಣಾ ಅಧಿಕಾರಿ ಸಂತೋಷ್ ಜಗಲಾಸರ್ ಅವರಿಗೆ ನಾಮಪತ್ರ ಸಲ್ಲಿಸಿದರು. ಶುಭ ಮುಹೂರ್ತದ ಹಿನ್ನೆಲೆಯಲ್ಲಿ ನಾಮಪತ್ರ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದರು. ➡ಪುಟ ೪

2 ಕ್ಷೇತ್ರಗಳ ಅಭಿಪ್ರಾಯ ಸಂಗ್ರಹಿಸಿದ್ದೇವೆ: ಡಿಸಿಎಂ

• ಪುಟ ೪

ಮಧ್ಯಪ್ರಾಚ್ಯ ಯುದ್ಧ: ಕೇಂದ್ರದ ನಿಲುವಿಗೆ ಕೈ ಸಂಸದರ ಮೆಚ್ಚುಗೆ

ತಟಸ್ಥ ನೀತಿ ಜವಾಬ್ದಾರಿ ನಡೆ





• ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ಇಸ್ರೇಲ್-ಅಮೆರಿಕ ಮತ್ತು ಇರಾನ್ ನಡುವಿನ ಉದ್ವಿಗ್ನತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಯಾವುದೇ ಪಕ್ಷದ ಪರವಾಗಿಲ್ಲದೆ ತಟಸ್ಥ ನಿಲುವನ್ನು ಅನುಸರಿಸುತ್ತಿರುವುದು ರಾಜಕೀಯ ಚರ್ಚೆಗೆ ಕಾರಣವಾಗಿದೆ. ಕೆಲ ವಿರೋಧ ಪಕ್ಷಗಳು ಇದನ್ನು ಟೀಕಿಸುತ್ತಿದ್ದರೂ, ಕಾಂಗ್ರೆಸ್ ಸಂಸದರಾದ ಶಶಿ ತರೂರ್ ಮತ್ತು ಮನೀಶ್ ತಿವಾರಿ ಕೇಂದ್ರ ಸರ್ಕಾರದ ಕ್ರಮವನ್ನು ಸಮರ್ಥಿಸಿದ್ದಾರೆ. ಕೇಂದ್ರದ ಈ ನಿಲುವು ಪ್ರಬುದ್ಧ ಮತ್ತು ಜವಾಬ್ದಾರಿಯುತ ಕಾರ್ಯತಂತ್ರದ ಸೂಚಕ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಾರ್ಯತಂತ್ರದ ವಿವೇಕ: ಭಾರತದ ಮೌನವನ್ನು ತಪ್ಪಾಗಿ ಅರ್ಥೈಸಬಾರದು ಎಂದು ತಿರುವನಂತ ಪುರಂನ ಕಾಂಗ್ರೆಸ್ ಸಂಸದ ಶಶಿ ತರೂರ್ ಹೇಳಿದ್ದಾರೆ. ➡ಪುಟ ೪

ವಿಭಿನ್ನ ಅಭಿಪ್ರಾಯಗಳ ನಡುವೆ ಕೆಲವರ ಬೆಂಬಲ

ಮಧ್ಯಪ್ರಾಚ್ಯ ಯುದ್ಧ ಸಂಬಂಧ ಕೇಂದ್ರ ಸರ್ಕಾರದ ನಿಲುವುಗಳ ಬಗ್ಗೆ ಕಾಂಗ್ರೆಸ್‌ನೊಳಗೆ ಭಿನ್ನ ಅಭಿಪ್ರಾಯಗಳಿದ್ದರೂ, ಆ ಪಕ್ಷದ ಕೆಲವು ಸಂಸದರು ಕೇಂದ್ರ ಸರ್ಕಾರದ ತಟಸ್ಥ ನಿಲುವಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಜಾಗತಿಕ ಉದ್ವಿಗ್ನ ಪರಿಸ್ಥಿತಿಯಲ್ಲಿ ಭಾರತ ತನ್ನ ಕಾರ್ಯತಂತ್ರದ ಸ್ವಾಯತ್ತತೆಯನ್ನು ಉಳಿಸಿಕೊಂಡು, ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸುವ ದಿಸೆಯಲ್ಲಿ ನಡೆದುಕೊಳ್ಳುತ್ತಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

ಏಕತೆ, ಅನುಶಾಸನ, ಧರ್ಮದ ಅನುಸರಣೆಯಿಂದ ಶಾಶ್ವತ ಶಾಂತಿ

ಸಂಘರ್ಷಕ್ಕೆ ಸ್ವಾರ್ಥ ಮೂಲ ಕಾರಣ



• ನಾಗಪುರ: ಸ್ವಾರ್ಥಪೂರಿತ ಹಿತಾಸಕ್ತಿಗಳು ಮತ್ತು ಪ್ರಾಬಲ್ಯ ಮೆರೆಯುವ ದುರ್ಬಯಕೆಯೇ ಇಂದು ವಿಶ್ವದಲ್ಲಿ ಕಂಡುಬರುತ್ತಿರುವ ಸಂಘರ್ಷಗಳಿಗೆ ಮೂಲ ಕಾರಣವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಶುಕ್ರವಾರ ಹೇಳಿದ್ದು, ಏಕತೆ, ಅನುಶಾಸನ ಮತ್ತು ಧರ್ಮ ಅನುಸರಣೆಯಿಂದ ಮಾತ್ರವೇ ಶಾಶ್ವತ ಶಾಂತಿ ಸಾಧಿಸಲು ಸಾಧ್ಯ ಎಂದಿದ್ದಾರೆ.

ಅವರು ನಾಗಪುರದಲ್ಲಿ ವಿಶ್ವ ಹಿಂದು ಪರಿಷತ್ತಿನ ವಿದರ್ಭ ಪ್ರಾಂತ ಕಾರ್ಯಾಲಯಕ್ಕೆ ಶಿಲಾನ್ಯಾಸಗೈದು ಮಾತನಾಡಿದರು. ಕಳೆದ 2000 ವರ್ಷಗಳಿಂದ ಜಗತ್ತು ವಿವಿಧ ವಿಚಾರಗಳೊಂದಿಗೆ ಪ್ರಯೋಗಗಳನ್ನು ನಡೆಸಿಯೂ ಸಂಘರ್ಷ ಪರಿಹಾರದಲ್ಲಿ ಅತ್ಯಲ್ಪ ಯಶಸ್ಸು ಮಾತ್ರವೇ ಲಭಿಸಿದೆ ಎಂಬುದರತ್ತ ಅವರು ಬೊಟ್ಟು ಮಾಡಿದರು. ➡ಪುಟ ೪

ಭಾರತದತ್ತ ಭರವಸೆಯ ದೃಷ್ಟಿ

ಜಾಗತಿಕ ಸಂಘರ್ಷ ಮುಂದುವರಿಯುತ್ತಿರುವಂತೆಯೇ, ಭಾರತ ಮಾತ್ರವೇ ಯುದ್ಧಗಳನ್ನು ಅಂತ್ಯಗೊಳಿಸಬಹುದು. ಯಾಕೆಂದರೆ ಇದು ಭಾರತದ ಸಹಜ ಸ್ವಭಾವ ಎಂಬ ಧ್ವನಿಗಳು ಜಗತ್ತಿನೆಲ್ಲೆಡೆಯಿಂದ ಮೂಡಿಬರುತ್ತಿದೆ. ಭಾರತೀಯರು ಮಾನವೀಯ ನಿಯಮಗಳನ್ನು ಅನುಸರಿಸಿದರೆ, ಉಳಿದ ಜಗತ್ತು ಕಾಡಿನ ನ್ಯಾಯವನ್ನು ಅನುಸರಿಸುತ್ತಿರುವ ಈ ಸಂದರ್ಭ, ಮುಗ್ಗರಿಸುತ್ತಿರುವ ಜಗತ್ತಿಗೆ ಧರ್ಮದ ಅಡಿಪಾಯವನ್ನು ಒದಗಿಸಿ ಸಮತೋಲನವನ್ನು ಪುನಸ್ಥಾಪಿಸುವ ಹೊಣೆಗಾರಿಕೆ ಭಾರತಕ್ಕಿದೆ ಎಂದು ಮೋಹನ್ ಭಾಗ್ವತ್ ದೃಢವಾಗಿ ಸಾರಿದರು.

ನೀರಾನೆ ದಾಳಿಗೆ ಪಶುವೈದ್ಯೆ ಸಾವು

▸▸ ತ್ಯಾವರೆಕೊಪ್ಪದ ಹುಲಿ-ಸಿಂಹಧಾಮದಲ್ಲಿ ದುರಂತ

▸▸ ಚಿಕಿತ್ಸೆ ವೇಳೆ ಘಟನೆ

• ಶಿವಮೊಗ್ಗ: ಸಮೀಪದ ತ್ಯಾವರೆಕೊಪ್ಪದ ಹುಲಿ-ಸಿಂಹಧಾಮದಲ್ಲಿ ಗರ್ಭಿಣಿ ನೀರಾನೆ ಪರೀಕ್ಷಿಸಲು ತೆರಳಿದ್ದ ತರಬೇತಿ ನಿರತ ಪಶುವೈದ್ಯೆಯೊಬ್ಬರು ನೀರಾನೆ ದಾಳಿಗೆ ಬಲಿಯಾಗಿದ್ದಾರೆ. ಬೆಂಗಳೂರು ಪಶುವೈದ್ಯ ಕಾಲೇಜಿನಲ್ಲಿ ಶಿಕ್ಷಣ ಪಡೆದಿದ್ದ ಡಾ.ಸಮೀಕ್ಷಾ ರೆಡ್ಡಿ (27) ಮೃತಪಟ್ಟವರು. ನೀರಾನೆ ದಾಳಿಯಿಂದ ತೀವ್ರ ಗಾಯಗೊಂಡ ಸಮೀಕ್ಷಾ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ. ವೈದ್ಯೆ ಸಾವು ಹಲವು ಅನುಮಾನಗಳಿಗೆ ಕಾರಣವಾಗಿದ್ದು, ಈ ಕುರಿತು ತನಿಖೆ ನಡೆಸುವಂತೆ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಆದೇಶಿಸಿದ್ದಾರೆ. ➡ಪುಟ ೪

ವಾರದಲ್ಲಿ ವರದಿ ನೀಡಲು ಖಂಡ್ರೆ ಸೂಚನೆ

• ಪುಟ ೪

ಶ್ರೀರಾಮ ಯಂತ್ರ ಸ್ಥಾಪನೆ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮುರ್ಮು ಹೇಳಿಕೆ

ಅಯೋಧ್ಯೆ ಧೂಳನ್ನು ಸ್ಪರ್ಶಿಸಿದ್ದು ಸೌಭಾಗ್ಯ

• ಅಯೋಧ್ಯೆ: ಪ್ರಭು ಶ್ರೀರಾಮ ಜನಿಸಿದ ನಗರವಾದ ಅಯೋಧ್ಯೆಯ ಪವಿತ್ರ ಧೂಳನ್ನು ಸ್ಪರ್ಶಿಸಿದ್ದು ನನ್ನ ಪರಮ ಸೌಭಾಗ್ಯವೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ಮಂದಿರದ ದ್ವಿತೀಯ ಮಹಡಿಯಲ್ಲಿ ರಾಮ ಯಂತ್ರ ಸ್ಥಾಪನೆಯ ಕಾರ್ಯಕ್ರಮಕ್ಕೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, 2083ರ ಸಂವತ್ಸರದ ಆರಂಭ ಮತ್ತು ನವರಾತ್ರಿಯ ಮೊದಲ ದಿನವಾದ ಚೈತ್ರ ಶುಕ್ಲ ಪ್ರತಿಪದದಂದು ಭಗವಂತನ ದರ್ಶನ ನಿಜಕ್ಕೂ ಅವಿಸ್ಮರಣೀಯ ಎಂದು ಹೇಳಿದರು.

ಭಾರತವು ಸಮಗ್ರವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ ಎಂದು ಹೇಳಿದ ಮುರ್ಮು ಅವರು, ಪ್ರಭು ಶ್ರೀರಾಮನ ಆಶೀರ್ವಾದದಿಂದ ಭಾರತ ತನ್ನ ಗುರಿಗಳನ್ನು 2047ರ ವೇಳೆಗೆ ತಲುಪುವುದು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಮ ರಾಜ್ಯದ ಆದರ್ಶವು ಆರ್ಥಿಕ ಸಮೃದ್ಧಿ ಮತ್ತು ಸಾಮಾಜಿಕ ಸಾಮರಸ್ಯದ ಅತ್ಯುನ್ನತ ಮಾನದಂಡಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪುನರುಜ್ಜೀವನವು ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಆಯಾಮಗಳಲ್ಲಿ ನಡೆಯುತ್ತಿದೆ, ನಾಗರಿಕರು ಏಕತೆಯ ಮನೋಭಾವದಿಂದ ಮುಂದುವರಿಯಬೇಕು ಎಂದು ಮುರ್ಮು ಹೇಳಿದರು. ➡ಪುಟ ೪



ಸರಯೂ ನೀರಿನಿಂದ ಅಯೋಧ್ಯೆ ಪವಿತ್ರ: ಯೋಗಿ

ಸರಯೂ ತಾಯಿ ತನ್ನ ಶುದ್ಧ ನೀರಿನಿಂದ ಇಡೀ ಪ್ರದೇಶದ ಜತೆಗೆ ಅಯೋಧ್ಯಾ ಧಾಮವನ್ನು ಪವಿತ್ರಗೊಳಿಸುತ್ತಿದ್ದಾಳೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದರು. ರಾಮರಾಜ್ಯದ ಅನುಭವವನ್ನು ಉಲ್ಲೇಖಿಸಿದ ಅವರು, ಪ್ರಪಂಚದಾದ್ಯಂತ ಯುದ್ಧಗಳು ನಡೆಯುತ್ತಿದ್ದರೂ, ನಾವು ಶ್ರೀರಾಮ ಯಂತ್ರದ ಸ್ಥಾಪನೆಯಲ್ಲಿ ಭಾಗವಹಿಸುತ್ತಿದ್ದೇವೆ ಎಂದರು. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಷೇರು ಸೂಚ್ಯಂಕ	
ಬೆಳ್ಳಿ: 2,55,000 (2,60,000) ಅಪರಂಜಿ ಚಿನ್ನ: 1,50,930 (1,50,280) ಆಭರಣ ಚಿನ್ನ: 1,38,350 (1,37,750) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ, (ಆವರಣದಲ್ಲಿ ಹಿಂದಿನ ದಿನದ ದರ)	ಬಿಎಸ್‌ಇ 74,532 (325↑) ಎನ್‌ಎಸ್‌ಇ 23,114 (112↑)	$1 = ₹93.70

ಕಿರುಸುದ್ದಿ

ಡಾ. ಅನೀತ್ ಕುಮಾರ್‌ಗೆ ನ್ಯಾಷನಲ್ ಸೋಷಿಯಲ್ ಇಂಪ್ಯಾಕ್ಟ್ ಪ್ರಶಸ್ತಿ

ಚಿಕ್ಕಮಗಳೂರು: ಬೆಂಗಳೂರಿನ ಗಾಂಧಿ ಭವನದಲ್ಲಿ ಮಾ.14 ರಂದು ಎನ್.ಐ.ಎಫ್. ಎ.ಎ. ಸಂಸ್ಥೆ ಆಯೋಜಿಸಿದ್ದ ಸಂವೇದ–2 ರಕ್ತದಾನ ಶಿಬಿರ–2025ರ ರಾಷ್ಟ್ರ ಮಟ್ಟದ ಕಾರ್ಯಕ್ರಮದಲ್ಲಿ ಜಿಲ್ಲೆಯ ಖ್ಯಾತ ವೈದ್ಯ ಡಾ. ಅನೀತ್ ಕುಮಾರ್ ಅವರು 20ಕ್ಕೂ ಹೆಚ್ಚು ರಕ್ತದಾನ ಶಿಬಿರ ಪೂರೈಸಿದ ಹಿನ್ನೆಲೆ ಅವರಿಗೆ ನ್ಯಾಷನಲ್ ಸೋಷಿಯಲ್ ಇಂಪ್ಯಾಕ್ಟ್ ಪ್ರಶಸ್ತಿ ನೀಡಿ ಗೌರವಿಸಿದೆ.

ಈ ಸಂದರ್ಭದಲ್ಲಿ ಪದಭೂಷಣ ಪ್ರಶಸ್ತಿ ವಿಜೇತ ಡಾ.ಚಂದ್ರಶೇಖರ್, ಎನ್.ಐ.ಎಫ್.ಎ.ಎ. ಸಂಸ್ಥಾಪಕಿ ಡಾ. ಅಶ್ವಿನಿ ಶೆಟ್ಟಿ, ಮಹಾರಾಷ್ಟ್ರ ಯುನಿವರ್ಸಿಟಿ ಕುಲಪತಿ ಗೋವಿಂದಪ್ಪ, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್‌ಲಿಂಗಯ್ಯ ಉಪಸ್ಥಿತರಿದ್ದರು.

ಜಾನಪದ ಸಂಭ್ರಮ ಮತ್ತು ಸೇವಾ ದೀಕ್ಷೆ ಕಾರ್ಯಕ್ರಮ

ಚಿಕ್ಕಮಗಳೂರು: ಕರ್ನಾಟಕ ಜಾನಪದ ಪರಿಷತ್ತು ತಾಲ್ಲೂಕು ಘಟಕದಿಂದ ಮಾ.21 ರಂದು ಹಮ್ಮಿಕೊಂಡಿರುವ ಜಾನಪದ ಸಂಭ್ರಮ ಮತ್ತು ಸೇವಾ ದೀಕ್ಷೆ ಕಾರ್ಯಕ್ರಮದ ಆಹ್ವಾನ ಪತ್ರಿಕೆಯ ನ್ನು ಮಂಗಳವಾರ ಸಂಜೆ ನಗರದ ಬಸವತತ್ವ ಪೀಠದಲ್ಲಿ ಶ್ರೀ ಡಾ.ಬಸವ ಮರುಳಸಿದ್ಧಸ್ವಾಮಿಯವರು ಬಿಡುಗಡೆಗೊಳಿಸಿದರು.

ಈ ವೇಳೆ ಮಾತನಾಡಿದ ಕ.ಜಾ.ಪ. ತಾಲ್ಲೂಕು ಅಧ್ಯಕ್ಷ ಸಚಿನ್‌ಸಿಂಗ್ ಅಂದಿನ ಕಾರ್ಯಕ್ರಮವನ್ನು ಶಾಸಕ ಹೆಚ್.ಡಿ.ತಮ್ಮಯ್ಯ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಜಾಪ ಜಿಲ್ಲಾಧ್ಯಕ್ಷ ಜಿ.ಬಿ.ಸುರೇಶ್, ಪರಿಸರವಾದಿ ಸ.ಗಿರಿಜಾಶಂಕರ್, ಜಿ.ಪಂ. ಮಾಜಿ ಅಧ್ಯಕ್ಷೆ ರೇಖಾಹುಲಿಯಪ್ಪಗೌಡ ಭಾಗವಹಿಸಲಿದ್ದು, ಸಾಂಸ್ಕೃತಿಕ ಚಿಂತಕ ಡಾ. ಜೆ.ಪಿ.ಕೃಷ್ಣೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಅದೇ ದಿನ ಸಂಜೆ 7 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಈ ಸಮಾರಂಭದಲ್ಲಿ ಕರ್ನಾ ಟಕ ಜಾನಪದ ಪರಿಷತ್ತಿಗೆ ನೂತನವಾಗಿ ತಾಲ್ಲೂಕು, ಮಹಿಳಾ ಹಾಗೂ ನಗರ ಘಟಕಕ್ಕೆ ಪದಾಧಿಕಾರಿಗಳ ನ್ನು ನೇಮಕ ಮಾಡಲಾಗುವುದು. ಬಸವತತ್ವ ಪೀಠದ ಶ್ರೀ ಡಾ.ಬಸವ ಮರುಳಸಿದ್ಧ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಜಾನಪದ ಪರಿಷತ್ ತಾಲ್ಲೂಕು ಗೌರವಾಧ್ಯಕ್ಷ ಸುಮಾ ಪ್ರಸಾದ್, ಕಾರ್ಯದರ್ಶಿ ಡಾ.ವಿಜಯ್ ಜಾನಪದ, ಹಿರಿಯ ರಂಗಕರ್ಮಿ ಚಂದ್ರಮೂರ್ತಿ, ಮಹಿಳಾ ಘಟಕದ ಅಧ್ಯಕ್ಷೆ ನೇತ್ರಾ ಅಣ್ಣಪ್ಪ, ನಗರಾಧ್ಯಕ್ಷ ಮಹೇಶ್ ಮೇದಾರ್, ಕಸಾಪ ತಾಲ್ಲೂಕು ಅಧ್ಯಕ್ಷ ಮಾವಿನಕೆರೆ ದಯಾನಂದ್ ಉಪಸ್ಥಿತರಿದ್ದರು.

ಅಡುಗೆ ಅನಿಲ ಸಿಲಿಂಡರ್ ಬಗ್ಗೆ ಸುಳ್ಳು ಸುದ್ದಿ ಗ್ರಾಹಕರು ನಂಬಬೇಡಿ: ಚಂದ್ರಪ್ಪ

ಕಡೂರು: ಈಗ ನಡೆಯುತ್ತಿರುವ ಯುದ್ಧದ ಕಾರಣದಿಂದಾಗಿ ವಿಶ್ವದ ಎಲ್ಲಾ ದೇಶಗಳಲ್ಲಿ ಅಡುಗೆ ಅನಿಲ ಸಿಲಿಂಡರ್ ಹಾಗೂ ಪೆಟ್ರೋಲ್ ಡೀಸೆಲ್‌ಗೆ ತೀವ್ರ ತೊಂದರೆಯನ್ನು ಅನುಭವಿಸುವಂತೆ ಆಗಿದೆ. ಆದರೆ ಭಾರತ ದೇಶದಲ್ಲಿ ಅಂತಹ ಯಾವುದೇ ತೊಂದರೆ ಆಗಿರುವುದಿಲ್ಲ,ಅದರಲ್ಲಿಯೂ ಕರ್ನಾಟಕದಲ್ಲಿ ಅಡುಗೆ ಅನಿಲ ಸಿಲಿಂಡರ್ ಗೆ ಯಾವುದೇ ತೊಂದರೆಯಾಗದೆ ಮಾಮೂಲಿಯಾಗಿ 30 ದಿನಗಳ ನಂತರ ಸಿಲಿಂಡರಿಗೆ ಬುಕ್ ಮಾಡಲು ಅವಕಾಶವಿದೆ. ಸಿಲಿಂಡರ್ ಬುಕ್ ಆದ ಒಂದು ವಾರದೊಳಗೆ ತಮ್ಮ ಮನೆಗೆ ಅಡುಗೆ ಅನಿಲ ಸಿಲಿಂಡರ್ ದೊರೆಯುತ್ತದೆ. ಗ್ರಾಹಕರು ಯಾವುದೇ ಕಾರಣಕ್ಕೂ ಸುಳ್ಳು ಸುದ್ದಿಗಳನ್ನು ನಂಬಬೇಡಿ ಎಂದು ವಿಷ್ಣು ಪ್ರಸಾದ್ ಗ್ಯಾಸ್ ಏಜೆನ್ಸಿ ಮಾಲೀಕ ಎಮ್.ಎಸ್. ಚಂದ್ರಪ್ಪ ತಿಳಿಸಿದರು.

ಅವರು ಪತ್ರಿಕೆಗೆ ಮಾಹಿತಿ ನೀಡಿ ಮಾತನಾಡಿ, ನಮ್ಮ ಏಜೆನ್ಸಿಯಿಂದ ಯಾವುದೇ ಗ್ರಾಹಕರಿಗೆ ತೊಂದರೆಯಾಗಿಲ್ಲ, ಗ್ರಾಹಕರುಗಳು ಗಾಬರಿಯಾಗುವ ಅವಶ್ಯಕತೆಯೂ ಇಲ್ಲ, ಹಾಗೂ ಗ್ರಾಹಕರುಗಳು ಸುಳ್ಳು ಸುದ್ದಿಗಳಿಂದ ಮಧ್ಯರಾತ್ರಿ ಬೆಳಗಿನ ಜಾವ ಬಂದು ಗ್ಯಾಸ್ ಏಜೆನ್ಸಿಗಳ ಮುಂದೆ ನಿಲ್ಲುವ ಅವಶ್ಯಕತೆಯೂ ಇಲ್ಲ, ಮಾಮೂಲಿಯಾಗಿ ಸಿಗುವುದಕ್ಕಿಂತ ಸ್ವಲ್ಪ ಸಮಯ ಅವಕಾಶ ಬೇಕಾಗಲಿದೆ. ಸರ್ಕಾರ ಯುದ್ಧದಿಂದಾಗಿ 30 ದಿನಗಳಿಗೆ ಒಮ್ಮೆ ಅಡುಗೆ ಅನಿಲ ಸಿಗುವಂತೆ ಮಾಡಿದೆ. ಕಾಳ ಸಂತೆ ಕೋರರಿಗೆ ಅವಕಾಶ ನೀಡದಂತೆ ಗ್ಯಾಸ್ ಏಜೆನ್ಸಿಯೊಂದಿಗೆ ಗ್ರಾಹಕರುಗಳು ಸಹಕರಿಸಬೇಕು ಎಂದರು.

ಜೂಜಾಟ: ಐವರ ಬಂಧನ

ಚಿಕ್ಕಮಗಳೂರು: ಇಸ್ಪೀಟ್ ಜೂಜಾಟ ಆಡುತ್ತಿದ್ದ 5 ಮಂದಿ ಆರೋಪಿಗಳನ್ನು ಶೃಂಗೇರಿ ಪೊಲೀಸರು ಬಂಧಿಸಿದ್ದಾರೆ. ಪಟ್ಟಣದ ಗಾಂಧಿ ಮೈದಾನದ ಪಾರ್ಕ್ ಬಳಿ ಜೂಜಾಡುವಾಗ ದಾಳಿ ನಡೆಸಿದ ಪೊಲೀಸರು ರವಿ, ಮುತ್ತು, ಪರಮೇಶಪ್ಪ, ಸತೀಶ್, ಮಲ್ಲೇಶ್ ಎಂಬುವವರನ್ನು ಬಂಧಿಸಿ, ಜೂಜಿಗೆ ಪಣವಾಗಿಟ್ಟದ್ದ 1,680 ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ.



ಪಂಚಾಂಗ ಶ್ರವಣ ಕಾರ್ಯಕ್ರಮ

ಬಾಳೆಹೊನ್ನೂರು: ಪಟ್ಟಣದ ಮಾರಿಗುಡಿ ರಸ್ತೆ ಪಕ್ಕದ ಶ್ರೀ ವಾಣಿ ಕಲೆ ಮತ್ತು ಸಾಹಿತ್ಯ ಅಧ್ಯಯನದ ಆವರಣದಲ್ಲಿ 40ನೇ ವರ್ಷದ ಪಂಚಾಂಗ ಶ್ರವಣ ಕಾರ್ಯಕ್ರಮ ನಡೆಯಿತು. ಸುನೀಲ್ ಭಟ್ ಅವರು ಪಂಚಾಂಗ ಪೂಜಾ, ಧಾರ್ಮಿಕ ವಿಧಿ, ವಿಧಾನ ಪೂಜೆ ನಡೆಸಿ ಪಂಚಾಂಗ ವಾಚನ ಮಾಡಿದರು. ಜಿಲ್ಲಾ ಚುಸಾಪ ಅಧ್ಯಕ್ಷ ಯಜ್ಞಪುರುಷ ಭಟ್, ವೇದಾವತಿ, ಬಿ. ಎಸ್. ತಾರಾ, ಮನೋಜ್ ಹಾಗೂ ಕೃಷ್ಣಭಟ್ ಉಪಸ್ಥಿತರಿದ್ದರು.

ಕ್ರೇನ್ ಡಿಕ್ಕಿ: ಓರ್ವ ಸಾವು

ಚಿಕ್ಕಮಗಳೂರು: ಕ್ರೇನ್ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಚಾಲಕ ಮೃತಪಟ್ಟ ಘಟನೆ ಗುರುವಾರ ರಾತ್ರಿ 11.45 ರ ವೇಳೆಗೆ ಅಜ್ಜಂಪುರದ ಕಣಬಗಟ್ಟೆ ದೇವಸ್ಥಾನದ ಬಳಿ ನಡೆದಿದೆ.

ಬಸವರಾಜಪ್ಪ ಎಂಬುವವರು ಮೃತ ದುರ್ದೈವಿಯಾಗಿದ್ದು, ಟಿವಿಎಸ್ ಎಕ್ಸ್‌ಎಲ್ ವಾಹನದಲ್ಲಿ ಕಣಬಗಟ್ಟೆ ದೇವಸ್ಥಾನದಿಂದ ಅವರ ಮನೆಗೆ ತೆರಳುತ್ತಿದ್ದಾಗ ಹರಿಯನಹಳ್ಳಿ ಕಡೆಯಿಂದ ಬಂದ ಕ್ರೇನ್ ಎದುರಿನಿಂದ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡ ಬಸವರಾಜಪ್ಪ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕ್ರೇನ್ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಅಜ್ಜಂಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮದ್ಯ ಮಾರಾಟ: ಪತ್ಯೇಕ ಪ್ರಕರಣದಲ್ಲಿ ಇಬ್ಬರ ಬಂಧನ

ಚಿಕ್ಕಮಗಳೂರು: ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ರಮೇಶ ಎಂಬಾತನನ್ನು ಕಡೂರು ಪೊಲೀಸರು ಬಂಧಿಸಿದ್ದಾರೆ.

ಕಡೂರು ಪಟ್ಟಣದ ಎಪಿಎಂಸಿ ಸಂತೆ ನಡೆಯುವ ಸ್ಥಳದಲ್ಲಿ ಆರೋಪಿಯು ಬಿಡಿಯಾಗಿ ಮದ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದ ಹಿನ್ನೆಲೆಯಲ್ಲಿ ಸಂಚಾರ ಠಾಣಾಧಿಕಾರಿ ಲೀಲಾವತಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಮದ್ಯ ವಶ: ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಮಣಿಕಂಠ ಎಂಬಾತನನ್ನು ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ. ಆರೋಪಿಯುವ ಕೈಮರ ಗ್ರಾಮದ ಸುಧಾ ಹೋಟೆಲ್ ಮುಂಭಾಗದಲ್ಲಿ ನಿಂತು ಅಕ್ರಮವಾಗಿ ಸಾರ್ವಜನಿಕ ಮದ್ಯ ಮಾರಾಟ ಮಾಡುವಾಗ ಸಿಕ್ಕಿಬಿದ್ದಿದ್ದಾನೆ. ಆತನಿಂದ 900 ರೂ. ಬೆಲೆಯ ಮದ್ಯ ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿದೆ.

ಕಾಲರ್ ಐಡಿ ಧರಿಸಿರುವ ಬೀಟಮ್ಮ! ಮನೆಯಿಂದ ಹೊರ ಬರಲು ಭಯ

ಮತ್ತೆ ತೋಟಕ್ಕೆ ಬೀಟಮ್ಮ ಗ್ಯಾಂಗ್ ಲಗ್ಗೆ

ಚಿಕ್ಕಮಗಳೂರು: ಕಳೆದ ಕೆಲವು ದಿನಗಳಿಂದ ಕಾಣಿಸಿಕೊಳ್ಳದ ಕಾಡಾನೆ ಬೀಟಮ್ಮ ತಂಡದ ಹಿಂಡು ಮತ್ತೆ ಕಾಫಿ ತೋಟಗಳಿಗೆ ಲಗ್ಗೆ ಇಟ್ಟಿದ್ದು, ಮಲೆನಾಡಿಗರ ನಿದ್ದೆಗೆಡಿಸಿವೆ.

ಅರಣ್ಯ ಇಲಾಖೆಯಕಾಲರ್ ಐಡಿ ಧರಿಸಿರುವ ಬೀಟಮ್ಮ ತನ್ನೊಂದಿಗೆ ಮರಿಗಳು ಸೇರಿದಂತೆ ಐದಾರು ಆನೆಗಳೊಂದಿಗೆ ಕಾಫಿ ತೋಟಗಳಲ್ಲಿ ಓಡಾಡುತ್ತಿದ್ದು, ಜನರು ಮನೆಯಿಂದ ಹೊರಬರಲು ಭಯ ಪಡುತ್ತಿದ್ದಾರೆ. ಹಲವು ಕಡೆಗಳಲ್ಲಿ ಈ ಹಿಂಡು ದಾಂಧಲೆ ನಡೆಸುತ್ತಿರುವ ಘಟನೆಗಳು ವರದಿಯಾಗಿವೆ.

ಬೀಟಮ್ಮ ಗ್ಯಾಂಗ್ ಮರಿಗಳನ್ನು ಕಾಳಜಿಯಿಂದ ಜೊತೆಯಲ್ಲಿ ಕರೆದೊಯ್ಯುವ ಅಪರೂಪದ ದೃಶ್ಯ ಅರಣ್ಯ ಇಲಾಖೆ ಡ್ರೋನ್ ಕ್ಯಾಮರಾದಲ್ಲಿ ಸೆರೆಯಾಗಿದೆ. ಮೂಡಿಗೆರೆ ತಾಲೂಕಿನ ಜಿ.ಹೊಸಳ್ಳಿ–ಕಸ್ಕೆಬೈಲು ಗ್ರಾಮದಲ್ಲಿ ಆನೆಗಳು ಮರಿಗಳ ಜೊತೆ ಜಾಗರೂಕತೆಯಿಂದ ಸಂಚರಿಸುತ್ತಿರುವ ದೃಶ್ಯ ಸೆರೆಸಿಕ್ಕಿದೆ.

ತಮ್ಮ ಮರಿಗಳ ಸುರಕ್ಷತೆ ಆನೆಗಳು ಆದ್ಯತೆ ನೀಡುತ್ತವೆ. ಈ ಸಂದರ್ಭದಲ್ಲಿ ಮನುಷ್ಯರನ್ನು ಕಂಡರೆ ಇನ್ನಷ್ಟು ರೊಚ್ಚಿಗೆದ್ದು ದಾಳಿ ಮಾಡುವ ಸಾಧ್ಯತೆ ಇರುವ ಕಾರಣ ಕಾರ್ಮಿಕರು ತೋಟದ ಕೆಲಸಕ್ಕೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ವಾಹನಗಳಲ್ಲಿ ತಿರುಗಾಡಲು ಸಹ ಭಯ ಪಡುವ ಸ್ಥಿತಿ ಎದುರಾಗಿದೆ.

ಕೂಡಲೇ ಆನೆ ಹಾವಳಿಗೆ ಶಾಶ್ವತ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜನತೆ ಆಗ್ರಹಿಸುತ್ತಿದ್ದಾರೆ. ಯುಗಾದಿ ಮುನ್ನಾದಿನವೇ ಮೂಡಿಗೆರೆಯಲ್ಲಿ 70ಕ್ಕೂ ಹೆಚ್ಚು ಕಾಡಾನೆಗಳು ಬೀಡು ಬಿಟ್ಟಿದ್ದವು. ಸ್ಥಳೀಯವಾಗಿ ಬೀಟಮ್ಮ, ಭೀಮ ಎಂಬ ಹೆಸರಿನ ಗುಂಪಿನ ಕಾಡಾನೆಗಳು ಕಾಫಿ ತೋಟ, ಭತ್ತದ ಗದ್ದೆಗಳಿಗೆ ನುಗ್ಗಿ ಹಾನಿ ಮಾಡಿದ್ದವು. ಇವುಗಳ ಹಾವಳಿಯಿಂದ ರೈತರು ಕೃಷಿ ಜಮೀನಿನಲ್ಲಿ ಓಡಾಡುವುದಕ್ಕೆ ಭಯಪಡುವಂತಾಗಿದೆ.

ಒಂದೇ ತಾಲೂಕಿನಲ್ಲಿ ಹಲವು ಗುಂಪುಗಳಾಗಿ ಕಾಡಾನೆಗಳು ಸಂಚರಿಸುತ್ತಿದ್ದು, ವಿದ್ಯಾರ್ಥಿಗಳು ಪರೀಕ್ಷೆಗೆ ಹೋಗುವುದಕ್ಕೂ ಭಯಪಡುವಂತಾಗಿದೆ. ಕೆಲವೇ ದಿನಗಳ ಹಿಂದಷ್ಟೇ ಚಿಕ್ಕಮಗಳೂರು ಹಾಗೂ ಎನ್‌ಆರ್ ಪುರದಲ್ಲಿ ಕಾಡಾನೆ ದಾಳಿಗೆ ಸರಣಿ ಸಾವುಗಳು ಸಂಭವಿಸಿರುವ ಘಟನೆ ಹಸಿರಾಗಿರುವುದರಿಂದ ಜನರು ಆನೆ ಹಾವಳಿ ವಿಚಾರ ತಿಳಿದಾಗಿನಿಂದ ಹೊರಕ್ಕೆ ಬರಲು ಹೆದರುತ್ತಿದ್ದಾರೆ.





ಮನೆಯಂಗಳಕ್ಕೆ ಬಂದ ಕಾಡಾನೆಗಳು

ಈ ನಡುವೆ ಮೂಡಿಗೆರೆ ತಾಲೂಕಿನ ಸತ್ತಿಹಳ್ಳಿ ಗ್ರಾಮಕ್ಕೆ ಎರಡು ಕಾಡಾನೆಗಳು ನುಗ್ಗಿ ಅಪಾರ ಪ್ರಮಾಣದ ಬೆಳೆ ನಾಶ ಮಾಡಿವೆ. ಮನೆ ಅಂಗಳಕ್ಕೂ ನುಗ್ಗಿ ಕಾಂಪೌಂಡ್ ಧ್ವಂಸಗೊಳಿಸಿದ್ದು, ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಯಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಜನರಿಗೆ ಎಚ್ಚರಿಕೆ ನೀಡಿದ್ದಾರೆ. ಗ್ರಾಮದ ರಸ್ತೆಯಲ್ಲೇ ಎರಡು ಕಾಡಾನೆಗಳು ಸಂಚರಿಸುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಾಡಾನೆಗಳು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚರಿಸುತ್ತಿರುವ ಸಾಧ್ಯತೆ ಇರುವುದರಿಂದ ರಾತ್ರಿ ಸಮಯದಲ್ಲಿ ಅನಾವಶ್ಯಕವಾಗಿ ಹೊರಗೆ ತಿರುಗಾಡಬಾರದು ಎಂದು ಅರಣ್ಯ ಸಿಬ್ಬಂದಿಗಳು ಸೂಚಿಸಿದ್ದಾರೆ.

ಅರಣ್ಯ ಇಲಾಖೆ ಸಿಬ್ಬಂದಿ, ಎಲಿಫೆಂಟ್ ಟಾಸ್ಕ್ ಫೋರ್ಸ್‌ಗಳು ಆನೆಗಳನ್ನು ದೂರ ಓಡಿಸಲು ಪ್ರಯತ್ನ ಮಾಡುತ್ತಿದ್ದು, ಸಾರ್ವಜನಿಕರು ಎಚ್ಚರದಿಂದಿರುವಂತೆ ಸೂಚನೆಗಳನ್ನು ನೀಡುತ್ತಿದೆ. ಸ್ಥಳೀಯರು ತಕ್ಷಣವೇ ಸೂಕ್ತ ಕ್ರಮ ಕೈಗೊಂಡು ಕಾಡಾನೆಗಳನ್ನು ಕಾಡಿನತ್ತ ಹಿಮ್ಮೆಟ್ಟಿಸುವಂತೆ ಹಾಗೂ ಬೆಳೆ ನಷ್ಟಕ್ಕೆ ಪರಿಹಾರ ನೀಡುವಂತೆ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸಂಸ್ಕೃತಿ ಪ್ರಗತಿಗೆ ದಾರಿದೀಪ

ಶೃಂಗೇರಿ: ಭಾರತೀಯ ಸಂಸ್ಕೃತಿ ಅತ್ಯಂತ ಶ್ರೇಷ್ಠವಾಗಿದ್ದು, ಜಗತ್ತಿನ ಸರ್ವೋತೋಮುಖ ಪ್ರಗತಿಗೆ ದಾರಿದೀಪವಾಗಿದೆ ಎಂದು ವಾಗ್ಮಿ ಉಳುವೆ ಗಿರೀಶ್ ಹೇಳಿದರು.

ಮೆಣಸೆ ಗ್ರಾಪಂ ಶೆಟ್ಟಿಹಳ್ಳಿ ನಾಗೇಂದ್ರರವರ ಮನೆಯಲ್ಲಿ ಗುರುವಾರ ಹೆಬ್ಬಾರ ಬ್ರಾಹ್ಮಣ ಯುವ ಘಟಕ ಯುಗಾದಿ ಸಂಭ್ರಮ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಚೈತ್ರ ಶುದ್ಧ ಪಾಡ್ಯದ ವರ್ಷಾರಂಭಕ್ಕೆ ನೈಸರ್ಗಿಕ, ಐತಿಹಾಸಿಕ ಮತ್ತು ಧಾರ್ಮಿಕ ಕಾರಣವಿದೆ. ಜನವರಿ ಒಂದರ ಹೊಸ ವರ್ಷ ಆರಂಭಕ್ಕೆ ಈ ರೀತಿಯ ಯಾವುದೇ ಇತಿಹಾಸವಿಲ್ಲ, ಯುಗಾದಿಯಂದೇ ಹೊಸ ವರ್ಷ ಆಚರಿಸಬೇಕು. ಪಂಚಾಂಗದ ನಿತ್ಯ ಶ್ರವಣದಿಂದ ಗಂಗಾ ಸ್ನಾನದ ಫಲ ಲಭಿಸುತ್ತದೆ ಎಂದರು.

ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿಗಳ ಸ್ಮರಣೆ ದರ್ಶನ ಮತ್ತು ಸೇವೆಯಿಂದ ಶ್ರೇಯಸ್ಸು ಲಭಿಸುತ್ತದೆ. ಜಗದ್ಗುರುಗಳ 77ನೇ ವರ್ಧಂತಿ ಮಹೋತ್ಸವವು ಚೈತ್ರ ಶುಕ್ಲ ಪಂಚಮಿ ದಿನವಾದ ಮಾ.24 ರಂದು ನಡೆಯಲಿದ್ದು, ಈ ಸಂದರ್ಭದಲ್ಲಿ ಆಸ್ತಿಕ ಜನರು ಜಗದ್ಗುರುಗಳ ಆಹ್ನಿಕ ದರ್ಶನ ಪಡೆಯಬೇಕು. ಶ್ರೀ ಶಂಕರಾಚಾರ್ಯರು ತಿಳಿಸಿರುವ ಧರ್ಮ ಸಂದೇಶವನ್ನು ಆಚರಣೆ ಮಾಡಿ ನಮ್ಮ ಸನಾತನ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಮಹತ್ತರವಾದ ಜವಾಬ್ದಾರಿ ನಮ್ಮ ಮೇಲಿದೆ. ಧರ್ಮದ ಆಚರಣೆಯಿಂದ ಮಾತ್ರ ಸುಖ ಸಂತೋಷ, ನೆಮ್ಮದಿಯಿಂದ ಇರಲು ಸಾಧ್ಯ ಎಂದರು.

ಯುವ ಘಟಕದ ಅಧ್ಯಕ್ಷ ಪ್ರೀತಂ ಶೆಟ್ಟಿಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಸಮಿತಿ ಉಪಾಧ್ಯಕ್ಷ ಹೆಬ್ಬಿಗೆ ಗಣೇಶರಾವ್,ಶೆಟ್ಟಿಹಳ್ಳಿ ಗೋಪಾಲಕೃಷ್ಣ ರಾವ್, ಜಾನಕಮ್ಮ, ಪ್ರತಿಮಾನಾಗೇಂದ್ರ, ಆದಿತ್ಯಾ, ಪ್ರವೀಣ ಇದ್ದರು.



ಸ್ವದೇಶೀ ಜಾಗರಣ ಮಂಚ್‌ನ ಕ್ಷೇತ್ರೀಯ ಸಂಚಾಲಕ ಜಗದೀಶ್

ಹಿಂದುತ್ವದಲ್ಲಿದೆ ಬದುಕಿನ ಮೌಲ್ಯ





ಚಿಕ್ಕಮಗಳೂರು: ಪ್ರಕೃತಿಗೆ ಹೊಸತನ ತಂದು ಸ್ವಚ್ಛ ಪರಿಸರ ಸೃಷ್ಟಿಯಾಗುವುದು ಯುಗಾದಿ ಹಬ್ಬದಲ್ಲಿ ಮಾತ್ರ. ಹಿಂದುತ್ವದಲ್ಲಿ ವೈಜ್ಞಾನಿಕ ಚಿಂತನೆ ಹಾಗೂ ಬದುಕಿನ ಮೌಲ್ಯಗಳನ್ನು ಸವಿಸ್ತಾರವಾಗಿ ತಿಳಿಸಲಾಗಿದೆ ಎಂದು ಸ್ವದೇಶಿ ಜಾಗರಣ ಮಂಚ್‌ನ ಕ್ಷೇತ್ರಿಯ ಸಂಚಾಲಕ ಜಗದೀಶ್ ಹೇಳಿದರು.

ನಗರದ ಗಾಯತ್ರಿ ಸಮುದಾಯ ಭವನದಲ್ಲಿ ಗುರುವಾರ ಸಂಜೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವತಿಯಿಂದ ಆಯೋಜಿಸಿದ್ದ ಯುಗಾದಿ ಉತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಉಪನ್ಯಾಸ ನೀಡಿದರು.

ಮನೆಯ ಅಗ್ನಿಮೂಲೆಗೆ ಅಡುಗೆ ಕೋಣೆ, ಸೂರ್ಯೋದಯದ ಕಡೆ ಬಾಗಿಲು ನಿರ್ಮಾಣವು ಪ್ರಕೃತಿ ದತ್ತವಾದ ಪದ್ಧತಿಗಳು. ಹಿಂದುತ್ವದ ಜೀವನ ಶೈಲಿಗೆ ಸಾವಿರಾರು ವರ್ಷಗಳ ಆಚಾರವಿದೆ. ಹಿಂದೂ ಧರ್ಮ ವೈಜ್ಞಾನಿಕ ಮತ್ತು ಸತ್ಯಕ್ಕೆ ಪೂರಕವಾದ ಧರ್ಮವಾಗಿದೆ ಎಂದರು.

ಹೊಸ ವರ್ಷದಂದೇ ಆರ್‌ಎಸ್‌ಎಸ್ ಸಂಸ್ಥಾಪಕರಾದ ಕೇಶವ ಬಲಿರಾಮ್ ಹೆಡಗೇವಾರ್ ಅವರ ಜನ್ಮದಿನ ಆಚರಿಸಲಾಗುತ್ತಿದೆ. 1925ರಲ್ಲೇ ನವ ತರುಣರೊಂದಿಗೆ ಆರ್‌ಎಸ್‌ಎಸ್ ಸ್ಥಾಪಿಸಿದ ಹೆಡಗೇವಾರ್ ಹಿಂದುತ್ವದ ಉಳಿವಿಗಾಗಿ ಸಹನೆಯಿಂದಲೇ ಸಂಘಟನೆಯನ್ನು ಬೆಳೆಸಿದವರು. ಇದೀಗ ಶತಮಾನೋತ್ಸವ ಸಂಭ್ರಮ ಆಚರಿಸಿಕೊಂಡಿದ್ದು, ಸಂಘದಿಂದ ಬೆಳೆದ ವ್ಯಕ್ತಿ ರಾಷ್ಟ್ರದ ಪ್ರಧಾನಿಯಾಗಿ, ವಿಶ್ವನಾಯಕರಾಗುತ್ತಿದ್ದಾರೆ ಎಂದು ತಿಳಿಸಿದರು.

> **ರಾಷ್ಟ್ರನಿಷ್ಠೆ ಸ್ವಾಭೀಮಾನಕ್ಕೆ ಎಂದಿಗೂ ರಾಜಿಯಾಗದ ವ್ಯಕ್ತಿ ಹೆಡಗೇವಾರ್. ಗೋಹತ್ಯೆ ಸಂಪೂರ್ಣ ವಿರೋಧಿಸುತ್ತಿದ್ದರು. ಕಮ್ಯೂನಿಸ್ಟ್ ಸೇರಿದಂತೆ ಹಲವು ರಾಜಕೀಯ ಪಕ್ಷಗಳು, ಸಂಘ-ಸಂಸ್ಥೆಗಳು ಉಗಮಿಸಿದರೂ ಅವುಗಳಲ್ಲಿ ಬಹುತೇಕ ಪಕ್ಷ, ಸಂಘಟನೆಗಳು ಹತ್ತಾರು ಭಾಗವಾಗಿವೆ. ಆದರೆ ಆರ್‌ಎಸ್‌ಎಸ್ ಸಂಘಟನೆ ಸ್ಥಾಪನೆಗೊಂಡು ನೂರು ವರ್ಷ ಪೂರೈಸಿದರೂ, ಒಂದೇ ಹಾದಿಯಲ್ಲಿ ಸಾಗಿ, ರಾಷ್ಟ್ರದಹಿತ ಚಿಂತನೆಯನ್ನು ಎತ್ತಿಹಿಡಿಯುತ್ತಿದೆ.**
>
> ■ ಜಗದೀಶ್, ಸ್ವದೇಶಿ ಜಾಗರಣ ಮಂಚ್‌ನ ಕ್ಷೇತ್ರಿಯ ಸಂಚಾಲಕ

ಕೇಶವ ಹೆಡಗೇವಾರ್ ಅವರು ಸದ್ವಿಚಾರದಡಿ ಸಂಘ ಸ್ಥಾಪಿಸಿದ ಕಾರಣ ಇಂದು ದೇಶಾದ್ಯಂತ ಅನೇಕ ಶಾಖೆಗಳನ್ನು ತೆರೆದು ಹಿಂದುತ್ವದ ಪ್ರಚಾರದಲ್ಲಿ ತೊಡಗಿಸಿಕೊಂಡಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಬ್ಲೂಮ್ ಬಯೋಟೆಕ್ ಮಾಲೀಕ ಸುಹಾಸ ಮೋಹನ್, ಆರ್‌ಎಸ್‌ಎಸ್ ನಗರ ಸಂಘಚಾಲಕ ರಾಜಾರಾಮ್ ಕೋಟೆ, ಘನಶ್ಯಾಮ್ ಆಳ್ವಾ ಹಾಗೂ ಗಣವೇಷಧಾರಿಗಳು ಉಪಸ್ಥಿತರಿದ್ದರು.

ಶಾಸಕ ಎಚ್.ಡಿ. ತಮ್ಮಯ್ಯ ದೂರು

ಅನಿಲ ಅಭಾವಕ್ಕೆ ಕೇಂದ್ರವೇ ಕಾರಣ

ಚಿಕ್ಕಮಗಳೂರು: ಕೇಂದ್ರ ಸರ್ಕಾರಕ್ಕೆ ಬಡವರ ಬಗ್ಗೆ ಕಾಳಜಿ ಇಲ್ಲ, ಅಡುಗೆ ಅನಿಲ ಹಾಗೂ ವಾಣಿಜ್ಯ ಬಳಕೆ ಅನಿಲ ಅಭಾವ ತಲೆ ದೋರಲು ಕೇಂದ್ರದ ವೈಫಲ್ಯವೇ ಕಾರಣ ಎಂದು ಶಾಸಕ ಎಚ್.ಡಿ. ತಮ್ಮಯ್ಯ ದೂರಿದರು.

ಅವರು ಇಂದು ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡ ಕ್ಷೇತ್ರದ ಸೀತಾಳಯ್ಯನಗಿರಿ ರಸ್ತೆ, ಅತ್ತಿಗುಂಡಿರಸ್ತೆ, ಕೈಮರಕ್ಕೆ ಸಂಪರ್ಕಕಲ್ಪಿಸುವ 3.50 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ರಸ್ತೆಗಳನ್ನು ಉದ್ಘಾಟಿಸಿ ಮಾತನಾಡಿದರು.

ಚೀನಾ ಮಾದರಿಯಲ್ಲಿ ಕೇಂದ್ರ ಸರ್ಕಾರ ಆರು ತಿಂಗಳಿಗಾಗುವಷ್ಟು ಅಡುಗೆ ಅನಿಲ, ವಾಣಿಜ್ಯ ಬಳಕೆ ಟೆಂಡರ್, ಸಿಎನ್‌ಜಿ ಗ್ಯಾಸ್ ದಾಸ್ತಾನು ಮಾಡಿಕೊಳ್ಳುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ದೂರಿದರು.

ಭಾವನೆಗಳನ್ನು ಕೆರಳಿಸಿ ಬಿಜೆಪಿ ರಾಜಕಾರಣ ಮಾಡುತ್ತಿದ್ದು, ಸಮಾಜದಲ್ಲಿ ಬೆಂಕಿ ಹಚ್ಚುವ ಕೆಲಸ ಮಾಡಿದರೆ ನಂದಿಸಲು ಅವರಿಂದಲೂ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಪ್ರಪಂಚದಲ್ಲೇ ಮಾದರಿ ಶಾಂತಿಯನ್ನು ಸಾರುತ್ತಿರುವ ಭಾರತದ ಮೌಲ್ಯವನ್ನು ಎತ್ತಿ ಹಿಡಿಯಬೇಕೆಂದರು.

ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರವನ್ನು ಅಧಿಕಾರಕ್ಕೆ ತಂದ ಮತದಾರ ಬಂಧುಗಳಿಗೆ ಸಲ್ಲುತ್ತದೆ. ನಮ್ಮ ಮೇಲೆ ಭರವಸೆ ಇಟ್ಟು ಮತ ನೀಡಿ ಜಯಗಳಿಸಲು ಸಹಕರಿಸಿದ ನಿಮ್ಮ ನಿರೀಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಪಿ. ಮಂಜೇಗೌಡ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಪ್ರವೀಣ್ ಬೆಟಗೆರೆ, ಹಿರೇಮಗಳೂರು ರಾಮಚಂದ್ರ, ಜಗದೀಶ್, ಗ್ರಾಮಸ್ಥರುಗಳಾದ ಶಾಂತಕುಮಾರ್, ಧರ್ಮಣ್ಣ, ಮುನ್ನ, ಶಂಕರ್, ಸಾವಿತ್ರಿ, ಎಣಿ ಮಲ್ಲಿಕಾರ್ಜುನ ಮತ್ತಿತರರು ಉಪಸ್ಥಿತರಿದ್ದರು.



ಸಿಕ್ಕಸಿಕ್ಕಲ್ಲಿ ಉಗಿಯುವವರಿಗೆ ದಂಡ ವಿಧಿಸಿ:ಒತ್ತಾಯ

ಬಾಳೆಹೊನ್ನೂರು: ಬಿ ಕಣಬೂರು ಗ್ರಾಪಂ ವ್ಯಾಪ್ತಿಯಲ್ಲಿ ಸಿಕ್ಕ ಸಿಕ್ಕಲ್ಲಿ ಕಸ ಎಸೆಯುವುದು ಮತ್ತು ಗುಟ್ಕ ತಿಂದು ಉಗಿಯುವವರ ವಿರುದ್ಧ 500 ರೂ. ದಂಡ ವಿಧಿಸುವ ಸಭಾ ನಡುವಳಿಯನ್ನು ಜಾರಿ ಗೊಳಿಸಬೇಕೆಂದು ಬಳಕೆದಾರರ ವೇದಿಕೆ ಒತ್ತಾಯಿಸಿದೆ.

ಇದೀಗ ಆಡಳಿತಾಧಿಕಾರಿಗಳು ನೇಮಕವಾಗಿದ್ದು, ಯಾವುದೇ ಮುಲಾಜಿಲ್ಲದೆ ಒತ್ತಡಕ್ಕೂ ಮಣಿಯದೇ ದಂಡ ವಸೂಲು ಮಾಡಬೇಕು. ಪಟ್ಟಣದ ಬಸ್ ಸ್ಟ್ಯಾಂಡ್ ಮುಂಭಾದಲ್ಲಿ ರೈತ ಹಾಗೂ ಜೋಡೆತ್ತು ಕಲಾಕೃತಿ ಲಯನ್ಸ್‌ನವರು ನಿರ್ಮಿಸಿಕೊಟ್ಟಿದ್ದು ಹಾಗೂ ಇನ್ನರ್‌ವ್ಹೀಲ್ ಕ್ಲಬ್‌ನವರು ಐ ಲವ್ ಬಾಳೆಹೊನ್ನೂರು ನಿರ್ಮಿಸಿ ಕೊಟ್ಟಿದ್ದು, ಹಾಗೂ ಬಿ. ಕಣಬೂರು ಗ್ರಾಪಂನವರು ಮಹಾತ್ಮ ಗಾಂಧೀಜಿಯವರ ಪ್ರತಿಮೆ ಹಾಗೂ ಸುಂದರ ಪಾರ್ಕ್ ನಿರ್ಮಿಸಿದ್ದಾರೆ. ಉದ್ಘಾಟನೆಗೊಂಡ ಒಂದು ತಿಂಗಳೊಳಗೆ ಪರ ಊರಿನ ಕೆಲವು ಪ್ರಯಾಣಿಕರು ಗುಟ್ಕ ತಿಂದು ಉಗಿಯಲು ಪ್ರಾರಂಭಿಸಿದ್ದಾರೆ. ತಕ್ಷಣವೇ ಠಾಣೆಗೆ ದೂರು ನೀಡಿ ಸಿಸಿ ಟಿವಿ ಪರಿಶೀಲಿಸಿ ದಂಡ ವಿಧಿಸಬೇಕು ಎಂದು ಒತ್ತಾಯಿಸಿದ್ದಾರೆ.

ಪಟ್ಟಣದಲ್ಲಿ ಕಸ ವಿಲೇವಾರಿ ಸಮರ್ಪಕವಾಗದೇ ಇದ್ದು ದೀಪಕ್ ಹೋಟೆಲ್ ಪಕ್ಕದ ಖಾಲಿ ನಿವೇಶನದಲ್ಲಿ ಕಸ ಹಾಕಿದ್ದಾರೆ. ಅದೇ ರೀತಿ ಖಾನ್ ಪ್ಲಾಸ್ ಪಕ್ಕ ಲೋಕೋಪಯೋಗಿ ಇಲಾಖೆ ನಿವೇಶನದ ಸುತ್ತಮುತ್ತ ಕಸ ಹಾಕಿದ್ದಾರೆ. ಕಳೆದ ತಿಂಗಳು ರಾಜ್ಯ ಹೆದ್ದಾರಿ ಅಕ್ಕಪಕ್ಕದಲ್ಲಿ ಸಂತೆ ನಡೆಸಲು ಅವಕಾಶ ಮಾಡಿಕೊಟ್ಟಿದ್ದು ಕೆಲವರು ಪ್ಲಾಸ್ಟಿಕ್ ಹಾಗೂ ಇನ್ನಿತರೆ ಕಸವನ್ನು ಮಾರಿ ದೇವಸ್ಥಾನದ ಆವರಣದಲ್ಲಿ ಬಿಸಾಡಿದ್ದಾರೆ. ಹಾಗೂ ಮಾರ್ಕೆಟ್ ಮತ್ತು ಹಳೇ ಟಿಬಿ ರಸ್ತೆಯಲ್ಲೂ ಕಸ ಹಾಕಿದ್ದು, ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಕಸವನ್ನು ತೆರವು ಮಾಡಿಸಬೇಕೆಂದು ಬಳಕೆದಾರರ ವೇದಿಕೆ ಒತ್ತಾಯಿಸಿದೆ.



24ಕ್ಕೆ ಬಂಜಾರ ಸಮಾಜದಿಂದ ಬೆಂಗಳೂರು ಚಲೋ

ಕಡೂರು: ಇದೇ ತಿಂಗಳ 24 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಬಂಜಾರ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿರುವ ಒಳ ಮೀಸಲಾತಿಯ ಬಗ್ಗೆ ಬಂಜಾರ ಸಮಾಜದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮಿಗಳು ಹಾಗೂ ಭೋವಿ ಸಮಾಜದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಪ್ರತಿಭಟನೆಯಲ್ಲಿ ಭಾಗವಹಿಸಲು ಕಡೂರು ತಾಲೂಕಿನ ಎಲ್ಲಾ ಬಂಜಾರ ತಾಂಡಾಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬಂಜಾರ ಸಮಾಜದ ಬಂಧುಗಳು ಭಾಗವಹಿಸಲಿದ್ದಾರೆ ಎಂದು ಕಡೂರು ತಾಲೂಕು ಬಂಜಾರ ಸಮಾಜದ ಅಧ್ಯಕ್ಷ ಕುಮಾರ್ ನಾಯಕ್ ತಿಳಿಸಿದರು.



ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಪ್ರತಿಭಟನೆಯಲ್ಲಿ ತಾಲೂಕಿನ ಕೊರಚ ಕೊರಮ ಸಮಾಜದವರು ಹಾಗೂ ಭೋವಿ ಸಮಾಜದ ಬಾಂಧವರು ಸಹ ಭಾಗವಹಿಸಲಿದ್ದಾರೆ. ರಾಜ್ಯ ಸರ್ಕಾರವು ಹೊಸದಾಗಿ ಮಾಡಿರುವ ಒಳ ಮೀಸಲಾತಿಯಲ್ಲಿ ನಾಲ್ಕು ಸಮುದಾಯಗಳಿಗೆ ಅನ್ಯಾಯ ವಾಗಿದ್ದು ಇದರಿಂದಾಗಿ ಹಳೆಯ ಮೀಸಲಾತಿಯನ್ನು ಬದಲಾಯಿಸದಂತೆ ಹಾಗೂ ಹೊಸದಾಗಿ ತರಲು ಪ್ರಯತ್ನಿಸುತ್ತಿರುವ ಒಳ ಮೀಸಲಾತಿಯನ್ನು ಜಾರಿಗೆ ತಾರದಂತೆ ಒತ್ತಾಯಿಸಲು ಪ್ರತಿಭಟನೆಯನ್ನು ಏರ್ಪಡಿಸಲಾಗಿದೆ. ರಾಜ್ಯಾದ್ಯಂತ ನಾಲ್ಕು ಸಮುದಾಯಗಳಿಂದ ಲಕ್ಷಾಂತರ ಜನ ಭಾಗವಹಿಸಲಿದ್ದಾರೆ. ಹೊಸ ಮೀಸಲಾತಿ ಜಾರಿಗೆ ತಾರದಂತೆ ಈಗಾಗಲೇ ಕೋರ್ಟ್ ತಡೆಯಾಜ್ಞೆ ನೀಡಿದೆ ಎಂದರು.

ಪ್ರಕಾಶ್ ನಾಯಕ್, ರಾಜ ನಾಯಕ್, ಶ್ರೀನಿವಾಸ್ ನಾಯಕ್, ಸತೀಶ್ ನಾಯಕ್, ಶ್ರೀನಿವಾಸ ನಾಯಕ್, ದೇವರಾಜ್ ನಾಯಕ್, ರಾಮಚಂದ್ರ ನಾಯಕ್, ರಾಜೇಶ್ ನಾಯಕ್, ಕೋಡಿಹಳ್ಳಿ ಶ್ರೀನಿವಾಸ್ ನಾಯಕ್ ಮತ್ತಿತರರು ಇದ್ದರು.

ಕಿರುಸುದ್ದಿ

ಪತ್ನಿ, ಮಗಳು ಸೇರಿ ಐವರ ಮೇಲೆ ಆ್ಯಸಿಡ್ ದಾಳಿ ನಡೆಸಿ ಕಾಲ್ಕಿತ್ತ ಆರೋಪಿ

ಚಿತ್ರದುರ್ಗ: ಕೌಟುಂಬಿಕ ಕಲಹ ಹಿನ್ನೆಲೆಯಲ್ಲಿ ತನ್ನಿಂದ ದೂರವಿದ್ದ ಪತ್ನಿಯ ಮೇಲೆ ಕೋಪಗೊಂಡ ವ್ಯಕ್ತಿ ತನ್ನ ಪತ್ನಿ, ಮಗಳು ಸೇರಿದಂತೆ ಐವರ ಮೇಲೆ ಆ್ಯಸಿಡ್ ದಾಳಿ ನಡೆಸಿದ್ದಾನೆ. ಅಲ್ಲದೆ ಪತ್ನಿಯ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ಚಿತ್ರದುರ್ಗ ನಗರದ ಮಾಳಪ್ಪನಹಟ್ಟಿಯಲ್ಲಿ ಬೆಳಕಿಗೆ ಬಂದಿದೆ. ಮೊಹಮದ್ ಸುಹೇಲ್(44) ಎಂಬಾತನೇ ಆಸಿಡ್ ದಾಳಿ ಮಾಡಿ ಪರಾರಿಯಾಗಿರುವ ಆರೋಪಿ. ಈ ಘಟನೆಯಲ್ಲಿ ಆತನ ಪತ್ನಿ ತಾಸಿನಾಬಾನು, ಮಗಳು ಸೇರಿದಂತೆ ಐವರು ಗಾಯಗೊಂಡಿದ್ದಾರೆ. ಕೌಟುಂಬಿಕ ಕಲಹದ ಕಾರಣ ಇವರಿಬ್ಬರೂ ಕಳೆದ ಎಂಟು ತಿಂಗಳುಗಳಿಂದ ಪರಸ್ಪರ ದೂರವಾಗಿ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದು ತಿಳಿದುಬಂದಿದೆ.ಮೊಹಮದ್ ಸುಹೇಲ್ ಹಾಗೂ ತಾಸಿನಾಬಾನು ಪ್ರೀತಿಸಿ ಮದುವೆಯಾಗಿದ್ದರು. ಮದುವೆಯ ನಂತರ ಮೊಹಮ್ಮದ್ ಸುಹೇಲ್ ನೀಡುತ್ತಿದ್ದ ಕಿರುಕುಳಕ್ಕೆ ಬೇಸತ್ತು ತಾಸಿನಾಬಾನು ಕೆಲ ತಿಂಗಳ ಹಿಂದಷ್ಟೇ ಬೆಂಗಳೂರು ನಗರ ಸೇರಿದ್ದಳು. ಇದೀಗ ರಂಜಾನ್ ಹಬ್ಬಕ್ಕೆಂದು ತಾಸಿನಾಬಾನು ಮಾಳಪ್ಪನಹಟ್ಟಿಯಲ್ಲಿರುವ ತನ್ನ ಸಹೋದರಿ ಮನೆಗೆ ಬಂದಿದ್ದರು. ಈ ವೇಳೆ ಏಕಾಏಕಿ ಮನೆಗೆ ನುಗ್ಗಿದ ಆರೋಪಿ ಮೊಹಮದ್ ಸುಹೇಲ್ ಆ್ಯಸಿಡ್ ದಾಳಿ ನಡೆಸಿದ್ದಾನೆ. ಬಳಿಕ ಪತ್ನಿಯ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದಾನೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಗ್ಯ ವಿಚಾರಣೆ: ಆ್ಯಸಿಡ್ ದಾಳಿಯಲ್ಲಿ ಗಾಯಗೊಂಡು ದಾವಣಗೆರೆಯ ಎಸ್.ಎಸ್. ಆಸ್ಪತ್ರೆಯಲ್ಲಿ ದಾಖಲಾಗಿರುವ ಇಬ್ಬರು ಮಹಿಳೆಯರು ಮತ್ತು ಮೂವರು ಮಕ್ಕಳನ್ನು ಶುಕ್ರವಾರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪೊಲೀಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಭೇಟಿ ಮಾಡಿ, ಸಂತ್ರಸ್ಥರ ಆರೋಗ್ಯ ವಿಚಾರಿಸಿದರು.

ನಾಳೆ ಗಮಕ ಕಾರ್ಯಕ್ರಮ

ಚಿತ್ರದುರ್ಗ: ಚಿತ್ರದುರ್ಗದ ಗಮಕ ಕಲಾಭಿಮಾನಿಗಳ ಸಂಘವು ನಡೆಸುತ್ತಿರುವ ಮಾಸಿಕ ಗಮಕ ಸಂಭ್ರಮದ 32ನೇ ಕಾರ್ಯಕ್ರಮವು ಮಾ.22 ರ ಭಾನುವಾರ ಸಂಜೆ 6 ಗಂಟೆಗೆ ನಗರದ ಜೆ.ಸಿ.ಆರ್. ಬಡಾವಣೆಯ ಗಣಪತಿ ದೇವಾಲಯದಲ್ಲಿ ನಡೆಯಲಿದೆ. ಚಿತ್ರದುರ್ಗದ ಸಂಧ್ಯಾರಾಗ ಸುಗಮ ಸಂಗೀತ ಶಾಲೆಯ ಪ್ರಾಂಶುಪಾಲರಾದ ವಿದುಷಿ ಸಂಧ್ಯಾ ಜಯಶಂಕರ್ ಹಾಗೂ ಶಿಷ್ಯವೃಂದದಿಂದ ಸುಗಮ ಸಂಗೀತ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸರ್ಕಾರಿ ಕಲಾ ಕಾಲೇಜಿನ ವಾಣಿಜ್ಯ ಶಾಸ್ತ್ರ ಉಪನ್ಯಾಸಕರಾದ ಡಾ.ಭಾರ್ಗವಿ, ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಹುಳ್ಳಿಕಟ್ಟೆ ಹಾಲು ಉತ್ಪಾದಕರ ಸಹಕಾರ ಸಂಘ ರದ್ದತಿಗೆ ಕ್ರಮ

ಚಿತ್ರದುರ್ಗ: ಚಳ್ಳಕೆರೆ ತಾಲ್ಲೂಕು ಹುಳ್ಳಿಕಟ್ಟೆ ಹಾಲು ಉತ್ಪಾದಕರ ಸಹಕಾರ ಸಂಘವನ್ನು ರದ್ದುಗೊಳಿಸಲು ಕ್ರಮಕೈಗೊಳ್ಳಲಾಗಿದೆ. ಇದರಿಂದ ಬಾಧಿತರಾಗುವ ವ್ಯಕ್ತಿಗಳು ಈ ಪ್ರಕಟಣೆ ದಿನಾಂಕದಿಂದ ಏಳು ದಿನಗಳೊಳಗಾಗಿ ಸಮಾಪನಾಧಿಕಾರಿಗಳಿಗೆ ಲಿಖಿತವಾಗಿ ಆಕ್ಷೇಪಣೆಗಳನ್ನು ನೀಡಲು ತಿಳಿಸಿದೆ. ತಪ್ಪಿದ್ದಲ್ಲಿ ಸಂಘದ ರದ್ಧತಿಗೆ ಕ್ರಮವಿಡಲಾಗುವುದು ಎಂದು ಹಾಲು ಉತ್ಪಾದಕರ ಸಹಕಾರ ಸಂಘದ ಸಮಾಪನಾಧಿಕಾರಿ ತಿಳಿಸಿದ್ದಾರೆ.

ಎಚ್.ಎಸ್.ನವೀನ್‌ಗೆ ಪಿಹೆಚ್‌ಡಿ ಪದವಿ

ಚಿತ್ರದುರ್ಗ: ಹಿರಿಯೂರು ತಾಲೂಕಿನ ಹರಿಯಬ್ಬೆ ಗ್ರಾಮದ ಎಚ್.ಎಸ್.ನವೀನ್ ಅವರು ಮಂಡಿಸಿದ ಯಂತ್ರ ಕಲಿಕೆ ಅಲ್ಗಾರಿದಮ್‌ಗಳನ್ನು ಬಳಸಿಕೊಂಡು ಅಡಿಕೆ ರೋಗ ಪತ್ತೆಗಾಗಿ ಹೈಬ್ರಿಡ್ ವರ್ಗೀಕರಣದೊಂದಿಗೆ ಮಣ್ಣಿನ ಶಿಫಾರಸು ಮತ್ತು ನೀರಾವರಿ ನಿರ್ವಹಣೆಗೆ ಒಂದು ಸ್ಮಾರ್ಟ್ ಚೌಕಟ್ಟು ಸಂಶೋಧನಾ ಪ್ರಬಂಧಕ್ಕೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ನೀಡಿದೆ. ಆಕ್ಸ್‌ಫರ್ಡ್ ತಾಂತ್ರಿಕ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಇ.ಸರವಣ ಕುಮಾರ್ ಮಾರ್ಗದರ್ಶನ ನೀಡಿದ್ದರು. ಡಾ. ನವೀನ್ ಎಚ್ ಎಸ್ ಪ್ರಸ್ತುತ ಬೆಂಗಳೂರಿನ ವೇಮನ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕಂಪ್ಯೂಟರ್ ಸೈನ್ಸ್ ಅಂಡ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ.

ರಂಗಮ್ಮ ನಿಧನ



ಚಿತ್ರದುರ್ಗ: ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಹೋಬಳಿಯ ಗೌಡಗೆರೆ ಗ್ರಾಮದ ನಿವಾಸಿ ರಂಗಮ್ಮ(83) ಬುಧವಾರ ನಿಧನರಾದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಿಕಟಪೂರ್ವ ಜಿಲ್ಲಾಧ್ಯಕ್ಷ ಬಿ.ದಿನೇಶ್ ಗೌಡಗೆರೆ ಸೇರಿದಂತೆ ನಾಲ್ಕು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು ಇದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಜಮೀನಿನಲ್ಲಿ ನೆರವೇರಿತು.



ಯುಗಾದಿಯ ದಿನದಂದು ಹೊಸದುರ್ಗ ತಾಲೂಕಿನ ದೇವಿಗೆರೆ ಗ್ರಾಮದಲ್ಲಿ ಹೊಸವರ್ಷವನ್ನು ಆಚರಿಸಿ ಅಖಂಡ ಭಾರತಾಂಬೆಗೆ ಪೂಜೆಯನ್ನು ಸಲ್ಲಿಸಿ, ಸಿಹಿಯನ್ನು ಹಂಚಿ, ಅದ್ದೂರಿ ಮೆರವಣಿಗೆಯನ್ನು ನೆರವೇರಿಸಲಾಯಿತು. ಈ ಕಾರ್ಯಕ್ರಮದಲ್ಲಿ ದೇವಿಗೆರೆಯ ಎಲ್ಲಾ ಹಿಂದೂ ಬಾಂಧವರು ಹಾಗೂ ಯುವಕರು ಭಾಗವಹಿಸಿದ್ದರು.

ಕೇಂದ್ರ, ರಾಜ್ಯ ಸರ್ಕಾರ ಅನುದಾನ ನೀಡಲೇಬೇಕು

ಚಿತ್ರದುರ್ಗ: ನನಗೆ ನನ್ನ ಆರೋಗ್ಯ, ಬದುಕು ಮುಖ್ಯವಲ್ಲ, ಬಯಲುಸೀಮೆ ಚಿತ್ರದುರ್ಗ ಜಿಲ್ಲೆಯ ಲಕ್ಷಾಂತರ ಜನರ ಬದುಕು ಉನ್ನತಗೊಳ್ಳಬೇಕು. ಅದೇ ನನ್ನ ಗುರಿ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಕೆ.ಟಿ.ತಿಪ್ಪೇಸ್ವಾಮಿ ಹೇಳಿದರು.

ಹಿರಿಯೂರು ತಾಲ್ಲೂಕಿನ ಬೀರನಹಳ್ಳಿ ತಮ್ಮ ನಿವಾಸಕ್ಕೆ ಪತ್ರಕರ್ತರು, ವಿವಿಧ ಸಂಘಟನೆಗಳ ಮುಖಂಡರ ಭೇಟಿವೇಳೆ ಮಾತನಾಡಿ, ಮೂರು ತಿಂಗಳು ನಿರಂತರ ಹೋರಾಟ ನಡೆಸಿ, ಜಿಲ್ಲಾಧಿಕಾರಿ ಕಚೇರಿ ಬಳಿ ಉಪವಾಸ ಸತ್ಯಾಗ್ರಹ ನಡೆಸಿದರೂ ಕೇಂದ್ರ ಮತ್ತು ರಾಜ್ಯ ಸರ್ಕಾರ ಜಿಲ್ಲೆಯ ಭದ್ರಾ ಯೋಜನೆ ಪರವಾಗಿ ಬಜೆಟ್‌ನಲ್ಲಿ ಹಣ ಘೋಷಿಸಲಿಲ್ಲ. ಕೇಂದ್ರ ಸರ್ಕಾರ 2023ರ ಬಜೆಟ್‌ನಲ್ಲಿ 5,300 ಕೋಟಿ ರೂ. ಘೋಷಿಸಿತು, ಜೊತೆಗೆ ರಾಷ್ಟ್ರೀಯ ಯೋಜನೆಯೆಂದು ಘೋಷಿಸುತ್ತೇವೆಂದು ನರೇಂದ್ರ ಮೋದಿ ಸೇರಿ ಎಲ್ಲ ನಾಯಕರು ಘೋಷಿಸಿದರು. ಅದೇ ರೀತಿ ರಾಜ್ಯ ಸರ್ಕಾರ ತನ್ನ ಜವಾಬ್ದಾರಿ ನಿರ್ವಹಿಸುವಲ್ಲಿ ಸ್ಪಷ್ಟವಾಗಿ ತಿಳಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ ಅಂತರ್ಜಲ ಕುಸಿತಗೊಂಡಿದೆ. ಕುಡಿಯುವ ನೀರು ಯೋಗ್ಯವಿಲ್ಲವೆಂದು ಅನೇಕ ವರದಿಗಳು ಹೇಳಿವೆ. ಕುಡಿಯುವ ನೀರಿಗಾಗಿ ಎಲ್ಲೆಡೆ ಪರದಾಟ ಆರಂಭವಾಗಿದೆ. ಆದರೂ ಸರ್ಕಾರಗಳು ನಮ್ಮ ಜಿಲ್ಲೆಗೆ ಭದ್ರಾ ನೀರು ಹರಿಸಿ ಬದುಕು ಹಸನುಗೊಳಿಸುವ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರು.



ಮೂರು ತಿಂಗಳು ಸರಣಿ ರೀತಿ ಜಿಲ್ಲೆಯಲ್ಲಿ ಚಳವಳಿ ನಡೆಸಲಾಯಿತು. ಜನರು ಎಲ್ಲೆಡೆ ಕೂಗು ಹಾಕಿದರು. ಚಳ್ಳಕೆರೆ, ಮೊಳಕಾಲ್ಮೂರು, ಹೊಸದುರ್ಗ, ಹೊಳಲ್ಕೆರೆ ತಾಲ್ಲೂಕುಗಳು ಸಂಪೂರ್ಣ ಬಂದ್ ಮಾಡುವ ಮೂಲಕ ಭದ್ರಾ ಚಳವಳಿ ತೀವ್ರ ಸ್ವರೂಪ ಪಡೆದುಕೊಂಡಿತು. ಜಿಲ್ಲಾ ಕೇಂದ್ರದಲ್ಲಿ 3 ಸಾವಿರ ಮಂದಿ ಸೇರಿ ಸಮಾವೇಶ ನಡೆಸಿ ಸರ್ಕಾರದ ಮೇಲೆ ಒತ್ತಡ ತರುವ ಕೆಲಸ ಮಾಡಲಾಯಿತು. ಜಿಲ್ಲೆಯ ಜನಪ್ರತಿನಿಧಿಗಳು ಎಲ್ಲರೂ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಬಳಿ ತೆರಳಿ ಭದ್ರಾ ಯೋಜನೆಗೆ 5 ಸಾವಿರ ಕೋಟಿ ರೂ. ಮೀಸಲಿಡುವಂತೆ ಮನವಿ ಮಾಡಿದರು. ಆದರೂ ಯಾವುದು ಫಲ ಕೊಡಲಿಲ್ಲ ಎಂದರು.

ಯಾವ ಕಟ್ಟುಪಾಡಿಗೂ ಒಳಗಾಗದ ಶರಣ | ಡಾ. ಶ್ರೀ ಬಸವಕುಮಾರ ಸ್ವಾಮೀಜಿ

ಅಲ್ಲಮರು ನಿಷ್ಠುರವಾದಿ

ಚಿತ್ರದುರ್ಗ: ಕನ್ನಡ ನಾಡಿನ ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಲೋಕದ ನಿರ್ಮಾಣಯ ಅಲ್ಲಮಪ್ರಭುಗಳು ಎಂದು ಎಸ್.ಜೆ.ಎಂ. ವಿದ್ಯಾಪೀಠ ಹಾಗೂ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಆಡಳಿತ ಮಂಡಳಿಯ ಸದಸ್ಯರಾದ ಡಾ.ಬಸವಕುಮಾರ ಸ್ವಾಮೀಜಿಗಳು ತಿಳಿಸಿದರು.

ಮುರುಘಾಮಠದಲ್ಲಿ ಅಲ್ಲಮ ಪ್ರಭುಗಳ ಜಯಂತಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಅಲ್ಲಮ ಪ್ರಭುಗಳ ಜೀವನ ಮತ್ತು ಸಾಧನೆ ಅತ್ಯಂತ ಅನನ್ಯವಾದದು. ಈ ನೆಲದ ಬಳ್ಳಿಗಾವಿಯ ಬಳ್ಳಿಗೆ ಒಮ್ಮಿಂದೊಮ್ಮೆ ಅರಳಿದ ಹೂವಾಗಿ, ಜ್ಞಾನ ವೈಚಾರಿಕತೆಯ ಪ್ರಾಜ್ಞನಾಗಿ, 12ನೇ ಶತಮಾನದ ಎಲ್ಲ ಶರಣರ, ಸಾಧಕರ, ಸಿದ್ದರ, ಸಂತರ ಮೇಲೆ ತನ್ನ ಆಳವಾದ ಪ್ರಭಾವ ಬೀರಿದವರು. ಶರಣ ಮಾರ್ಗಕ್ಕೆ ಗುರುವಾದವರು ಎಂದರು.

ಅನುಭವ ಮಂಟಪದ ಪ್ರಥಮ ಅಧ್ಯಕ್ಷನಾದವರು, ಶೂನ್ಯ ಸಿಂಹಾಸನದ ದೊರೆಯಾದವರು. ಒಬ್ಬ ವ್ಯಕ್ತಿ ಇಷ್ಟೊಂದು ಅಂತರ್ಮುಖಿಯಾಗಿ ಬದುಕಲು ಸಾಧ್ಯವೇ ಎಂಬುದನ್ನು ಸಾಧಿಸಿ ತೋರಿಸಿದವರು ಅಲ್ಲಮ ಪ್ರಭುಗಳು. ಅವರು ಯಾವ ಕಟ್ಟುಪಾಡಿಗೆ ಒಳಗಾಗಲಿಲ್ಲ, ಎಲ್ಲಾ ಮಾರ್ಗಗಳ, ಎಲ್ಲಾ ಪಂಥಗಳ, ಎಲ್ಲಾ ವ್ಯಕ್ತಿಗಳ ಗುಣಾಂಶವನ್ನು ಮೆಚ್ಚಿದವರು. ಅವಗುಣಗಳನ್ನು ಖಂಡಿಸಿದವರು. ಅಲ್ಲಮನ ಆ ನಿಷ್ಠುರತೆಯ ಹಿಂದೆ ವೈಚಾರಿಕತೆಯ ಪ್ರಖರತೆ ಇತ್ತು ಎಂದು ಹೇಳಿದರು.

ಅಲ್ಲಮರಲ್ಲಿ ಸತ್ಯ ಪ್ರೇಮಿ ಶುದ್ಧ ಬುದ್ಧಿ ಇತ್ತು. ಮಾತೃ ಹೃದಯದ ವಾತ್ಸಲ್ಯವಿತ್ತು. ಚಾರಿತ್ರಿಕ ಬುದ್ಧಿಯ ಸೂಕ್ಷ್ಮತೆ ಇತ್ತು. ಈ ಕಾರಣದಿಂದಾಗಿಯೇ 12ನೇ ಶತಮಾನದ ಎಲ್ಲಾ ಶರಣರು ಅವರಿಗೆ ತಲೆ ಬಾಗುತ್ತಿದ್ದರು. ಅಲ್ಲಮ ಪ್ರಭುದೇವರ ವ್ಯಕ್ತಿತ್ವ ಮತ್ತು ಅವರ ವಚನಗಳ ರಚನೆ, ಕನ್ನಡ ಸಾಹಿತ್ಯ,



ಸಾಂಸ್ಕೃತಿಕ, ಆಧ್ಯಾತ್ಮಿಕ ಲೋಕಕಷ್ಟೇ ಸೀಮಿತವಾಗದೆ ಇಡೀ ಭಾರತೀಯ ಮತ್ತು ಜಾಗತಿಕ ಲೋಕಕ್ಕೆ ಅಸಾಧಾರಣವಾದ ಕಾಣಿಕೆಯಾಗಿದೆ ಎಂದರು.

ಒಬ್ಬ ಸಾಹಿತಿ ಪ್ರಭುದೇವರನ್ನು ನೋಡುವ ದೃಷ್ಟಿಕೋನಕ್ಕೂ, ಒಬ್ಬ ಸ್ವಾಮೀಜಿ ನೋಡುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಯಾಕೆಂದರೆ ಅಲ್ಲಮ ಈ ನೆಲದ ಬಹುದೊಡ್ಡ ತತ್ವಜ್ಞಾನಿ. ಜಗತ್ತಿನ ಧರ್ಮಗಳೆಲ್ಲ ಮತಗಳಾಗಿ, ಜಾತಿಗಳಾಗಿ ವಿಜೃಂಭಿಸುತ್ತಿದ್ದ ಕಾಲಘಟ್ಟದಲ್ಲಿ ಮತವೇ ಬೇರೆ, ಧರ್ಮವೇ ಬೇರೆ ಎಂದು ಸಾಧಿಸಿ ತೋರಿಸಿದವರು ಅಲ್ಲಮ ಪ್ರಭುದೇವರು. ಇಂತಹ ಅಲ್ಲಮ ವ್ಯಕ್ತಿಯಾಗಿ ಮಾತ್ರವಲ್ಲ ಒಂದು ಸಿದ್ಧಾಂತವಾಗಿ ಕಂಡವರು. ಉರಿವ ಅಗ್ನಿಗೆ ಮೈಯೆಲ್ಲಾ ನಾಲಿಗೆ ಎಂಬಂತೆ ಅಲ್ಲಮರು ಶಬ್ದದೊಳಗೆ ನಿಶಬ್ದ ಕಂಡವರು ಎಂದು ಹೇಳಿದರು.

ನಿವೃತ್ತ ಪ್ರಾಂಶುಪಾಲ ಕೊಟ್ರೇಶ್, ಅಲ್ಲಮ ಪ್ರಭುಗಳು ಹಲವಾರು ಶರಣರನ್ನು ಪ್ರಭಾವಿಸಿದವರು. ಗೊಗ್ಗಯ್ಯ, ಮುಕ್ತಾಯಕ್ಕ, ಸಿದ್ದರಾಮರಿಗೆ ಕೈವಲ್ಯ ಜ್ಞಾನವನ್ನು ನೀಡಿದವರು ಎಂದು ಬಣ್ಣಿಸಿದರು.

> **ಅಲ್ಲಮ ಪ್ರಭುಗಳ ಬಗ್ಗೆ ಶೂನ್ಯ ಸಂಪಾದನೆಗಳಲ್ಲಿ ಸಾಕಷ್ಟು ವಿವರಗಳು ದೊರಕುತ್ತವೆ. ಶೂನ್ಯ ಸಂಪಾದನೆ ಆಗಬೇಕೇ ಹೊರತು ಸಂಪಾದನೆ ಶೂನ್ಯವಾಗಬಾರದು. ಸಂಪಾದನೆ ಅದು ಜ್ಞಾನದ ಪ್ರತೀಕವಾಗಬೇಕು. ಅಲ್ಲಮಪ್ರಭು ಜ್ಞಾನದ ವೈರಾಗ್ಯ ನಿಧಿ.**
> ■ **ಕೊಟ್ರೇಶ್, ನಿವೃತ್ತ ಪ್ರಾಚಾರ್ಯ**

ಕಾರ್ಯಕ್ರಮದಲ್ಲಿ ಶ್ರೀ ಬಸವ ಯಾದವಾನಂದ ಶ್ರೀಗಳು, ಶ್ರೀ ಮುರುಘೇಂದ್ರ ಸ್ವಾಮಿಗಳು, ಶ್ರೀ ತಿಪ್ಪೇರುದ್ರ ಸ್ವಾಮಿಗಳು, ಶ್ರೀ ಬಸವ ಮಹಾಂತ ಸ್ವಾಮಿಗಳು, ಶ್ರೀ ಪೂರ್ಣಾನಂದ ಸ್ವಾಮಿಗಳು, ಪೈಲ್ವಾನ್ ತಿಪ್ಪೇಸ್ವಾಮಿ, ನಾಗರಾಜ್ ಸಂಗಮ್, ಆನಂದ್, ಬಸವರಾಜಕಟ್ಟಿ, ಬಿ.ಟಿ.ನಂದೀಶ್, ಎಂ.ಜಿ.ಲಿಂಗರಾಜ್ ಉಪಸ್ಥಿತರಿದ್ದರು.

ಪಂಚಾಂಗ ಶ್ರವಣ, ಬೇವು-ಬೆಲ್ಲ ಸೇವನೆ

ಯುಗಾದಿಯ ಸಂಭ್ರಮ



ಈ ಬಾರಿ ಯುಗಾದಿ ಹಾಗೂ ರಂಜಾನ್ ಹಬ್ಬಗಳು ಒಟ್ಟಿಗೇ ಬಂದಿದ್ದು ಚಿತ್ರದುರ್ಗದಲ್ಲಿ ಶುಕ್ರವಾರ ಹಿಂದು ಹಾಗೂ ಮುಸಲ್ಮಾನರು ಒಟ್ಟಿಗೇ ಚಂದ್ರನನ್ನು ನೋಡಿ ಪರಸ್ಪರ ಶುಭಾಶಯ ಕೋರಿದರು.

ಚಿತ್ರದುರ್ಗ: ಈ ವರ್ಷದ ಯುಗಾದಿ ಹಬ್ಬದ ಎರಡನೇ ದಿನವಾದ ಶುಕ್ರವಾರ ಚಿತ್ರದುರ್ಗ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಜನರು ಚಂದ್ರ ದರ್ಶನ ಮಾಡಿದರು. ಈ ಬಾರಿ ಯುಗಾದಿ ಹಾಗೂ ರಂಜಾನ್ ಹಬ್ಬಗಳು ಒಟ್ಟೀಗೇ ಬಂದಿದ್ದು ಚಿತ್ರದುರ್ಗದಲ್ಲಿ ಶುಕ್ರವಾರ ಹಿಂದು ಹಾಗೂ ಮುಸಲ್ಮಾನರು ಒಟ್ಟಿಗೇ ಚಂದ್ರನನ್ನು ನೋಡಿ ಪರಸ್ಪರ ಶುಭಾಶಯ ಕೋರಿದರು. ಚಂದ್ರನ ದರ್ಶನ ಬಳಿಕ ಮನೆಗಳಲ್ಲಿ ದೇವರಿಗೆ ಹಾಗೂ ಹಿರಿಯರಿಗೆ ಸಮಸ್ಕರಿಸಿ ಆಶೀರ್ವಾದ ಪಡೆದರು.

ನಂತರ ಸ್ನೇಹಿತರು, ಸಂಬಂಧಿಕರು, ಪರಿಚಯದವರು ಸೇರಿದಂತೆ ಎಲ್ಲರೂ ಪರಸ್ಪರ ಹಬ್ಬದ ಶುಭಾಷಯ ಕೋರಿದರು. ಮತ್ತೆ ಕೆಲವರು ತಮ್ಮ ಊರಿನಲ್ಲಿನ ಪ್ರತಿಯೊಬ್ಬರ ಮನೆಗಳಿಗೆ ತೆರಳಿ ಹಬ್ಬದ ಶುಭಾಶಯ ತಿಳಿಸಿದರು.

> ▸▸ ಕೋಟೆ ನಾಡು ಚಿತ್ರದುರ್ಗದಲ್ಲಿ ಯುಗಾದಿ ಹಬ್ಬದ ಸಡಗರ
> ▸▸ ಚಂದ್ರನ ದರ್ಶನ ಬಳಿಕ ಹಿರಿಯರಿಗೆ ಸಮಸ್ಕರಿಸಿ ಆಶೀರ್ವಾದ

ಹಬ್ಬದ ಅಂಗವಾಗಿ ಮನೆಯ ಅಂಗಳ ಸಾರಿಸಿ ಬಣ್ಣ ಬಣ್ಣದ ರಂಗೋಲಿ ಬಿಡಿಸಲಾಗಿತ್ತು. ಮನೆಯ ಬಾಗಿಲಿಗೆ ತಳಿರು ತೋರಣ, ಬೇವಿನ ಸೊಪ್ಪು ಕಟ್ಟಿ ಅಲಂಕರಿಸಲಾಗಿತ್ತು. ಹಬ್ಬದ ಪ್ರಯುಕ್ತ ಹೋಳಿಗೆ ಜೊತೆಗೆ ಬಗೆ ಬಗೆಯ ಅಡುಗೆ ತಯಾರಿಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ನೈವೇದ್ಯೆ ಮಾಡಲಾಯಿತು. ಪೂಜೆಯ ನಂತರ ಮನೆ ಮಂದಿ, ಮಕ್ಕಳೆಲ್ಲ ಸೇರಿ ಸಿಹಿಯೂಟ ಸವಿದು ಸಂತಸಪಟ್ಟರು.

ಜೆಎಂಐಟಿಯಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ

ಚಿತ್ರದುರ್ಗ: ನಗರದ ಎಸ್.ಜೆ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಎಲೆಕ್ಟ್ರಾನಿಕ್ಸ್ ಕಮ್ಯುನಿಕೇಷನ್ ಇಂಜನಿಯರಿಂಗ್ ವಿಭಾಗ ಹಾಗೂ ಐಕ್ಯುಎಸಿ, ಐಐಸಿ ಘಟಕಗಳ ಸಹಯೋಗದಲ್ಲಿ ಆಟೋಮೋಟಿವ್ ಇಂಡಸ್ಟ್ರಿ ಓವರ್ ವ್ಯೂ ರೋಡ್ ಮ್ಯಾಪ್ ಟೂ ನೆಟ್ ವರ್ಕ್ ಇಂಜನಿಯರಿಂಗ್ ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಪ್ರಾಂಶುಪಾಲರಾದ ಡಾ.ಪಿ.ಬಿ.ಭರತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಆಟೋಮೋಟಿವ್ ಉದ್ಯಮವು ಕೇವಲ ಮೆಕ್ಯಾನಿಕಲ್ ಇಂಜನಿಯರಿಂಗ್ ಗೆ ಸೀಮಿತವಾಗಿಲ್ಲ, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಹಾಗೂ ನೆಟ್‌ವರ್ಕ್ ತಂತ್ರಜ್ಞಾನದ ಸಂಗಮವಾಗಿದೆ. ಪ್ರಸ್ತುತ ಆಟೋಮೋಟಿವ್ ಕ್ಷೇತ್ರವು ಹಸಿರು ಇಂಧನ, ಸ್ವಯಂಚಾಲಿತ ವಾಹನಗಳ ಕಡೆ ಮುಖ ಮಾಡಿದೆ ಎಂದರು.

ಎಲೆಕ್ಟ್ರಾನಿಕ್ಸ್ ತಂತ್ರಜ್ಞಾನ ಬಳಕೆಯಲ್ಲಿರುವ ಕಾರಣ ನೆಟ್ ವರ್ಕ್ ಇಂಜನಿಯರುಗಳ ಅಗತ್ಯತೆ ಆಟೋಮೋಟಿವ್ ಕ್ಷೇತ್ರಕ್ಕೆ ಇದ್ದು, ಮುಂದಿನ ದಿನಗಳಲ್ಲಿ ಆಟೋ ಗ್ಯಾರೇಜ್ ಗಳು ನವೀನ ರೂಪ ಪಡೆದು ನೆಟ್‌ವರ್ಕ್ ಸರ್ವರ್ ರೂಮ್ ಆಗಿ ಮಾರ್ಪಾಡಾಗುತ್ತವೆ. ಮುಂದಿನ ಪೀಳಿಗೆಗೆ ಆಟೋಮೊಬೈಲ್ ಕ್ಷೇತ್ರದಲ್ಲಿ ಉತ್ತಮ ಅವಕಾಶಗಳು ಕಾದಿವೆ ಎಂದು ತಿಳಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ಕೊಯಮತ್ತೂರಿನ ರಾಬರ್ಟ್ ಬೋಷ್‌ನ ಸೀನಿಯರ್ ಸಾಫ್ಟ್‌ವೇರ್ ಇಂಜಿನಿಯರ್ ದೀಕ್ಷಿತ್ ಎಲ್.ಎಂ., ಬೆಂಗಳೂರು ಹೆಚ್‌ಪಿ ಕಂಪನಿ ಟೆಕ್ನಿಕಲ್ ಸ್ಟಾಫ್ ಚಂದನ್ ಬಣಕಾರ್ ಉಪನ್ಯಾಸ ನಡೆಸಿಕೊಟ್ಟರು.

ಮೌಲ್ಯಮಾಪನ ಬಹಿಷ್ಕಾರ ಕೈಬಿಟ್ಟ ಉಪನ್ಯಾಸಕರು

ಚಿತ್ರದುರ್ಗ: ಪಿಯು ಆಡಳಿತ ಮಂಡಳಿ ನಿಯಂತ್ರಣ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದ ಮೇರೆಗೆ ಮೌಲ್ಯಮಾಪನ ಬಹಿಷ್ಕಾರದ ನಿರ್ಧಾರವನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ ಎಂದು ಜಿಲ್ಲಾ ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷರಾದ ಬಿ.ಆರ್.ಮಲ್ಲೇಶ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪಿಯು ಆಡಳಿತ ನಿಯಂತ್ರಣವನ್ನು ಜಿ.ಪಂ. ಸಿಇಒಗಳಿಗೆ ವಹಿಸುವ ಪ್ರಸ್ತಾವನೆಯನ್ನು ಸದ್ಯಕ್ಕೆ ನಮ್ಮ ಸರ್ಕಾರ ಕೈಬಿಟ್ಟಿದೆ. ಈ ಬಗ್ಗೆ ಉಪನ್ಯಾಸಕರು ಯಾವುದೇ ಆತಂಕ ಪಡುವ ಅಗತ್ಯವಿಲ್ಲ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದ್ದಾರೆ.

ವಿಧಾನ ಪರಿಷತ್ತಿನ ಶೂನ್ಯ ವೇಳೆಯಲ್ಲಿ ಸಚಿವರು ಈ ವಿಷಯ ಪ್ರಸ್ತಾಪಿಸಿ ಅಭಯ ನೀಡಿದ ಹಿನ್ನೆಲೆಯಲ್ಲಿ ಇದನ್ನು ಸ್ವಾಗತಿಸಿದ ಜಿಲ್ಲಾ ಸಂಘ ಉಪನ್ಯಾಸಕರುಗಳು ಮೌಲ್ಯಮಾಪನ ಕಾರ್ಯದಲ್ಲಿ ಭಾಗಿಯಾಗುವ ಮೂಲಕ ಸಕಾಲದಲ್ಲಿ ಮೌಲ್ಯಮಾಪನ ಮುಗಿಸಿ ಏಪ್ರಿಲ್ 7 ನೇ ತಾರೀಖು ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಣೆಗೆ ಅನುವು ಮಾಡಿಕೊಡುವಂತೆ ತಿಳಿಸಿದ್ದಾರೆ. ಸಂಘದ ಎಲ್ಲಾ ಐದು ಬೇಡಿಕೆಗಳ ಬಗ್ಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ವಿಶೇಷವಾಗಿ ವಿದ್ಯಾರ್ಥಿ ಉಪನ್ಯಾಸಕರ ಅನುಪಾತವನ್ನು 180:1 ಇಳಿಸುವ ವಿಚಾರವಾಗಿ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಸೂಚಿಸಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರನ್ನು ಕಾರ್ಯಭಾರ ಸರಿದೂಗಿಸಲು ಸರ್ಕಾರಿ ಕಾಲೇಜಿಗೆ ನಿಯೋಜಿಸುವ ವಿಷಯವನ್ನು ಆದ್ಯತೆಯಾಗಿ ಪರಿಗಣಿಸಿದ್ದಾರೆ ಎಂದು ತಿಳಿಸಿದ್ದಾರೆ.



ಚಿತ್ರದುರ್ಗ ನಗರದ ಮಾಳಪ್ಪನಹಟ್ಟಿಯಲ್ಲಿ ನಡೆದ ಆಸಿಡ್ ದಾಳಿಯಲ್ಲಿ ಗಾಯಗೊಂಡು ದಾವಣಗೆರೆಯ ಆಸ್ಪತ್ರೆಯಲ್ಲಿ ದಾಖಲಾಗಿರುವ ಇಬ್ಬರು ಮಹಿಳೆಯರು ಮತ್ತು ಮೂವರು ಮಕ್ಕಳನ್ನು ಶುಕ್ರವಾರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪೊಲೀಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಹಬ್ಬದಲ್ಲಿ ಸಂಭ್ರಮಿಸಿದ ನಿರಾಶ್ರಿತರ ಕೇಂದ್ರದ ನಿವಾಸಿಗಳು

ಚಿತ್ರದುರ್ಗ: ಯುಗಾದಿ ಅಂಗವಾಗಿ ತಾಲೂಕಿನ ಗೋನೂರಿನ ನಿರಾಶ್ರಿತರ ಕೇಂದ್ರದ ನಿವಾಸಿಗಳು ಗುರುವಾರ ಸಾಮೂಹಿಕವಾಗಿ ಎಣ್ಣೆ ಹಚ್ಚಿಕೊಂಡ ಅಭ್ಯಂಜನ ಸ್ನಾನ ಮಾಡಿ ಸಂಭ್ರಮದಲ್ಲಿ ತೇಲಿದರು. ಇಲ್ಲಿ ಒಟ್ಟು 425 ಮಂದಿ ಆಶ್ರಯ ಪಡೆಯುತ್ತಿದ್ದು, 347 ಪುರುಷರು, 78 ಮಹಿಳೆಯರಿದ್ದಾರೆ. ಎಲ್ಲರಿಗೂ ಸ್ನಾನಕ್ಕೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿತ್ತು.

ಇದೇ ವೇಳೆ ನಿರಾಶ್ರಿತರಿಗೆ ಹೊಸ ಬಟ್ಟೆ ಹಾಗೂ ಯೂನಿಫಾರ್ಮ್ ವಿತರಿಸಲಾಯಿತು. ನಂತರ ಎಲ್ಲರ ಅಭ್ಯಂಜನ ಸ್ನಾನ ಮುಗಿದ ಬಳಿಕ ಒಗ್ಗೂಡಿ ಹಬ್ಬ ಆಚರಿಸಲಾಯಿತು. ಹೋಳಿಗೆ, ಕೋಸುಂಬರಿ, ತರಕಾರಿ ಗೊಜ್ಜು, ಹೋಳಿಗೆ ಸಾಂಬಾರ್, ಅನ್ನ, ತಿಳಿ ಸಾಂಬಾರ್ ಸೇರಿ ತರಹೇವಾರಿ ಖಾದ್ಯ ಸಿದ್ಧಪಡಿಸಲಾಗಿತ್ತು. ಎಲ್ಲರೂ ಹಬ್ಬದೂಟ



ಸವಿದರು. ಕೇಂದ್ರದ ಮೇಲ್ವಿಚಾರಕರಾದ ಮಹದೇವಯ್ಯ, ಅಧೀಕ್ಷಕ ವಿಜಯ್‌ಕುಮಾರ್, ಸಿಬ್ಬಂದಿಗಳಾದ ರಮೇಶ್, ದೇವರಾಜ್, ಪಾಲಯ್ಯ ಪಾಲ್ಗೊಂಡಿದ್ದರು.

ನಗರ ಸೇರಿದಂತೆ ಜಿಲ್ಲೆಯ ಎಲ್ಲೆಡೆ ಮನೆ ಮನೆಗಳಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಕಿರಿಯರಿಂದ ಹಿರಿಯರವರೆಗೂ ಎಣ್ಣೆಸ್ನಾನ ಮಾಡಿ ಯುಗಾದಿ ಹಬ್ಬ ಆಚರಿಸಿದರು. ಯುವಕರ ಪೈಕಿ ಅನೇಕರು ದ್ವಿಚಕ್ರ ವಾಹನಗಳಲ್ಲಿ ಸಂಚರಿಸುತ್ತ ಗಮನ ಸೆಳೆದರು. ಮನೆಗಳ ಮುಂಬಾಗಿಲು, ದೇವರ ಮನೆಯ ಬಾಗಿಲುಗಳಿಗೆ ಹಸಿರು ಮಾವಿನ ಎಲೆ ಮಧ್ಯೆ ಬೇವಿನ ಎಲೆ ಗೊಂಚಲು, ಪುಷ್ಪಗಳಿಂದ ತಳಿರು-ತೋರಣ ಸಿದ್ದಪಡಿಸಿ ಸಿಂಗರಿಸಲಾಗಿತ್ತು. ಮಹಿಳೆಯರು ಆವರಣದಲ್ಲಿ ಆಕರ್ಷಕವಾಗಿ ರಂಗೋಲಿಗಳನ್ನು ಹಾಕಿ ವಿವಿಧ ವರ್ಣದಿಂದ ಮನೆಯಂಗಳವನ್ನು ಅಲಂಕರಿಸಿದ್ದರು.


ಅಭ್ಯಂಜನ ಸ್ನಾನ ಉತ್ತಮ ಆರೋಗ್ಯಕ್ಕೆ ಪೂರಕವಾಗಿದ್ದು, ನೀರಿಗೆ ಎಣ್ಣೆ, ಬೇವಿನ ಎಲೆ ಬೆರೆಸಿ ಸ್ನಾನದ ಬಳಿಕ ಪುಣ್ಯಾಹ ಮಂತ್ರಗಳನ್ನು ಪಠಿಸಿ, ಮಾವಿನ ಎಲೆಯಿಂದ ಮನೆಯ ಎಲ್ಲೆಡೆ ಕಳಶದ ನೀರನ್ನು ಪ್ರೋಕ್ಷಿಸಿ ಸಂಪ್ರದಾಯದಂತೆ ಆಚರಿಸಿದರು.

ಒಂದು ವಾರ ಧಾರ್ಮಿಕ ಕಾರ್ಯಕ್ರಮ | ಬಂಡಿಗಳಿಗೆ ಹಸಿರು ಸೊಪ್ಪಿನ ಅಲಂಕಾರ

ಪರಶುರಾಂಪುರದಲ್ಲಿ ಕೊಲ್ಲಾಪುರದಮ್ಮನ ಜಾತ್ರೆ

ಪರಶುರಾಂಪುರ: ಗ್ರಾಮದ ಆರಾಧ್ಯ ದೇವತೆ ಲಕ್ಷ್ಮೀಕೊಲ್ಲಪುರದಮ್ಮ ದೇವಿ ಜಾತ್ರೆ ಅಂಗವಾಗಿ ಶುಕ್ರವಾರ ವಿವಿಧ ದೇವತಾ ಕೈಂಕರ್ಯಗಳ ಜತೆ ಗುಗ್ಗರಿ ಬಂಡಿ ಉತ್ಸವ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಇಲ್ಲಿ ಎತ್ತಿನ ಬಂಡಿಗಳನ್ನು ಹೊಂಗೆ, ಬೇವು, ಮಾವು, ಬಾಳೆ ಕಂದು, ತೆಂಗಿನ ಗರಿಗಳಿಂದ ಅಲಂಕರಿಸಿ ಮದುವಣಗಿತ್ತಿಯಂತೆ ಎತ್ತುಗಳನ್ನ ಅಣಿ ಮಾಡಿಕೊಂಡು ಚೌಡೇಶ್ವರಿ ಹಾಗೂ ಲಕ್ಷ್ಮೀಚನ್ನಕೇಶವ ದೇವಸ್ಥಾನದ ವರಗೆ ಜನಪದ ವಾದ್ಯಗಳೊಂದಿಗೆ ಮೆರವಣಿಗೆ ನಡೆಸಲಾಯಿತು. ಯುಗಾದಿ ಹಬ್ಬದ ಎರಡನೇ ದಿನದಿಂದ ಒಂದು ವಾರಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ಸಾಂಪ್ರದಾಯದಂತೆ ಊರಿನ ಕೈವಾಡಸ್ಥರು, ಹಿರಿಯರು ಜನಪ್ರತಿನಿಧಿಗಳು, ದೇವಸ್ಥಾನ ಕಮಿಟಿಯವರು ಹಾಗೂ ಮತ್ತಿತರೆ ಗ್ರಾಮದ ಎಲ್ಲಾ ಬಾಂಧವರು ಹಾಗೂ ಭಕ್ತರು ಇಲ್ಲಿಯವರೆಗೂ ದೇವರ ಕಾರ್ಯಗಳನ್ನು ತಪ್ಪದೆ ನಡೆಸಿಕೊಂಡು ಬಂದಿದ್ದಾರೆ.



ನಿತ್ಯವೂ ಕಾರ್ಯಕ್ರಮಗಳು: ಯುಗಾದಿ ದಿನದಿಂದ ಬೇವು ಬೆಲ್ಲ ಸೇವಿಸುವದರಿಂದ ಆರಂಭವಾದ ಮಹೋತ್ಸವಗಳು ಒಂದು ವಾರಗಳವರೆಗೆ ನಿತ್ಯ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ವಿಶೇಷ ಕಾರ್ಯಕ್ರಮಗಳ ಜತೆಗೆ ಜಾತ್ರೆ ನಡೆಯುತ್ತದೆ. ಮಾ.20 ಶುಕ್ರವಾರ ಲಕ್ಷ್ಮೀಚನ್ನಕೇಶವ ಸ್ವಾಮಿ, ಚೌಡೇಶ್ವರಿದೇವಿಯ ದೇವಿಯ ಜಾತ್ರಾ ಮಹೋತ್ಸವ ರುಗಿತು. ಜಾತ್ರೆಯ ದಿನದಂದು ಎತ್ತಿನಗಾಡಿಗಳು ಮತ್ತು ಲಘು ವಾಹನಗಳನ್ನು ಸಿಂಗರಿಸಿಕೊಂಡು ದೇವಸ್ಥಾನ ಪ್ರದಕ್ಷಿಣೆ ಹಾಕಿ ನಂತರ ಭಕ್ತಾದಿಗಳಿಗೆ ಪಾನಕ ಮತ್ತು ಗುಗ್ಗರಿಯನ್ನು ಪ್ರಸಾದವಾಗಿ ನೀಡಿದರು.

ಮಾ.21 ಶನಿವಾರ ಕೋಲ್ಲಪುರದಮ್ಮ ದೇವಿಗೆ ಗಂಗಾ ಪೂಜೆ, ಮೆರವಣಿಗೆ ಬಳಿಕ ಪಾನಕ ವಿತರಣೆ ನಡೆಯುವುದು.

ಮಾ.22 ಭಾನುವಾರ ದೇವಿಗೆ ವಿವಿಧ ಪೂಜಾ ಕೈಂಕರ್ಯ, ಸಂಜೆ ರಥೋತ್ಸವ ನಡೆಯುವುದು.

ಮಾ.23 ಸೋಮವಾರ ಸಿಡಿ ಉತ್ಸವ, ಮಾ.24 ಮಂಗಳವಾರ ಬೆಳಗ್ಗೆ ದೇವಿಗೆ ಹಿಟ್ಟಿನ ಆರತಿ, ಜತೆ ದೇವರ ಕೃಪೆಗೆ ಪಾತ್ರರಾಗಲು ಭಕ್ತಾದಿಗಳು ತಮ್ಮ ಹರಕೆಯ ಸೇವೆಯನ್ನ ಒಪ್ಪತ್ತಿನಿಂದ ಶ್ರದ್ಧಾ ಭಕ್ತಿಯಿಂದ ನೆರವೇರಿಸುವರು.

ಜೋಡಿ ತುಂಬಿನಕೆರೆಯಲ್ಲಿ ಯುಗಾದಿ ಹಬ್ಬದಂದು ಕ್ರಿಕೆಟ್ ಪಂದ್ಯಾವಳಿ

ಕ್ರೀಡೆಯಿಂದ ಸೌಹಾರ್ದ ವಾತಾವರಣ ಸಾಧ್ಯ

ಹೊಸದುರ್ಗ: ಯುಗಾದಿ ಹಬ್ಬದ ಸಂದರ್ಭದಲ್ಲಿ ಯುವಕರು ಜೂಜಾಟದಂತಹ ಅನಾರೋಗ್ಯಕರ ಚಟಗಳಿಂದ ದೂರವಿದ್ದು, ಗ್ರಾಮದ ಯುವಕರೆಲ್ಲ ಸೇರಿ ಕ್ರಿಕೆಟ್ ಆಡುವುದರ ಮೂಲಕ ಕ್ರೀಡೆಯಲ್ಲಿ ತೊಡಗಿಸಿಕೊಂಡು ತಮ್ಮ ಮನಸ್ಸು ಮತ್ತು ಗ್ರಾಮವನ್ನು ಆರೋಗ್ಯಕರವಾಗಿ ಕಾಪಾಡಿಕೊಳ್ಳುತ್ತಿರುವುದು ಸಂತೋಷದಾಯಕ ಸಂಗತಿ ಎಂದು ಭದ್ರಾ ವನ್ಯಜೀವಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್ ಸಾಗರ್ ತಿಳಿಸಿದರು.

ತಾಲೂಕಿನ ಜೋಡಿ ತುಂಬಿನಕೆರೆಯಲ್ಲಿ ಯುಗಾದಿ ಪ್ರಯುಕ್ತ ಆಯೋಜಿಸಲಾದ ಕ್ರಿಕೆಟ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು,ಅರಣ್ಯ ಮತ್ತು ಕಾಡು ಪ್ರಾಣಿಗಳ ರಕ್ಷಣೆ ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದ್ದು,ಉತ್ತಮ ಪರಿಸರದಲ್ಲೇ ಉತ್ತಮ ಪ್ರತಿಭೆಗಳು ಬೆಳೆಯುತ್ತವೆ.ಸಾರ್ವಜನಿಕರು ಅರಣ್ಯ ಪ್ರದೇಶಗಳಲ್ಲಿ ಅತಿಕ್ರಮ ಪ್ರವೇಶ ಮಾಡಬಾರದು ಎಂದು ಎಚ್ಚರಿಸಿದರು.

ಯುವಕರು ಮಳೆಗಾಲದಲ್ಲಿ ಬೀಜದ ಉಂಡೆಗಳನ್ನು ತಯಾರಿಸಿ ಅರಣ್ಯ ಪ್ರದೇಶಗಳಲ್ಲಿ ಹರಡಬೇಕು. ಅವು ಮೊಳಕೆ ಒಡೆದು ಮುಂದಿನ ದಿನಗಳಲ್ಲಿ ಹಸಿರು ಕಾಡಾಗಿ ಬೆಳೆಯುವುದರಿಂದ ಉತ್ತಮ ಮಳೆಯಾಗುತ್ತದೆ ಹಾಗೂ ರೈತರ ಬದುಕಿಗೂ ಸಹಕಾರಿಯಾಗುತ್ತದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಯುವ ಮುಖಂಡ ಗೂಳಿಹಟ್ಟಿ ಕೃಷ್ಣಮೂರ್ತಿ ಮಾತನಾಡಿ, ತುಂಬಿನಕೆರೆ ಯುವಕರ ತಂಡ ಪ್ರತಿ ವರ್ಷ ದೇವಸ್ಥಾನ



ಮತ್ತು ಅದರ ಆವರಣವನ್ನು ಸ್ವಚ್ಛಗೊಳಿಸಿ, ವಿಜೃಂಭಣೆಯಿಂದ ಯುಗಾದಿ ಹಬ್ಬವನ್ನು ಆಚರಿಸುತ್ತಾರೆ. ಅಕ್ಕಪಕ್ಕದ ಗ್ರಾಮಗಳ ಯುವಕರನ್ನು ಆಹ್ವಾನಿಸಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸುವ ಮೂಲಕ ಹಬ್ಬದ ವಾತಾವರಣವನ್ನು ಸೃಷ್ಟಿಸುತ್ತಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಯುವ ಉದ್ಯಮಿ ಜ್ಯೋತಿಷ್ ಚೌದರಿ, ಸುರೇಶ್ ಸಾಗರ, ಡಾ.ಶ್ರೀಧರ, ಶಶಿಧರ, ತುಂಬಿನಕೆರೆ ಬಸವರಾಜ್, ಟಿ. ರಮೇಶ, ರಾಜಪ್ಪ, ಕಿರಣ್ ಕುಮಾರ, ಪ್ರದೀಪ, ರೋಹಿತ, ಗಿರೀಶ, ಲೋಕೇಶ, ರವಿ, ಹನುಮಂತಪ್ಪ ಪೂಜಾರಿ, ಸಿ. ಮೂರ್ತಿ, ಮಲ್ಲಿಕಾರ್ಜುನ, ಪ್ರಶಾಂತ, ಸಿದ್ದೇಶ, ಶ್ರೀನಿವಾಸ, ನಯನ ಹರೀಶ, ಅನಿಲ್ ಉಪಸ್ಥಿತರಿದ್ದರು.

ಕಿರುಸುದ್ದಿ

ಚೆರಡೋಣಿ ಕೆರೆಗೆ ನೀರು ಹರಿವು: ಗ್ರಾಮಸ್ಥರಲ್ಲಿ ಹರ್ಷ

ಬಸವಾಪಟ್ಟಣ: ಸಮೀಪದ ಚಿರಡೋಣಿ ಗ್ರಾಮದಲ್ಲಿ ಪುನರುಜ್ಜೀವನಗೊಂಡ ಕೆರೆಗೆ ಭದ್ರಾ ಉಪನಾಲೆಯಿಂದ ಪ್ರಥಮ ಬಾರಿಗೆ ನೀರು ಹರಿದ ಹಿನ್ನೆಲೆ ಗ್ರಾಮಸ್ಥರಲ್ಲಿ ಅಪಾರ ಸಂತೋಷ ವ್ಯಕ್ತವಾಗಿದೆ. ಕೆಲ ವರ್ಷಗಳಿಂದ ನೀರಿನ ಕೊರತೆಯಿಂದ ಬಳಲುತ್ತಿದ್ದ ಈ ಕೆರೆ, ಇದೀಗ ಅಭಿವೃದ್ಧಿ ಕಾಮಗಾರಿಗಳ ನಂತರ ಜೀವಂತಗೊಂಡಿದೆ. ಗ್ರಾಮಸ್ಥರು ಕೆರೆಯ ತಟದಲ್ಲಿ ಗ್ರಾಮಸ್ಥರೆಲ್ಲರೂ ಸೇರಿಕೊಂಡು ಸಂಭ್ರಮಿಸಿದರು. ಕೆರೆ ನಮ್ಮ ಜೀವನಾಡಿ. ನೀರು ಬಂದಿರುವುದು ನಮ್ಮ ಜಾನುವಾರುಗಳಿಗೆ ತುಂಬಾ ಉಪಯುಕ್ತವಾಗಿದೆ. ಕೆರೆಯ ಪುನರುಜ್ಜೀವನ ಕಾರ್ಯದಿಂದ ಭೂಗರ್ಭ ಜಲಮಟ್ಟವೂ ಏರಿಕೆಯಾಗಲಿದೆ. ಇದರಿಂದ ನಮ್ಮ ಗ್ರಾಮದ ಭವಿಷ್ಯ ಉಜ್ವಲವಾಗಲಿದೆ ಎಂದು ಹೇಳಿದರು. ಸ್ಥಳೀಯರು ಮುಂದುವರೆದು ಕೆರೆಯನ್ನು ಶುದ್ಧವಾಗಿ ಉಳಿಸಿಕೊಂಡು, ತ್ಯಾಜ್ಯವನ್ನು ಕೆರೆಗೆ ಹಾಕದಂತೆ ಸಂರಕ್ಷಣೆ ಮಾಡುವುದಾಗಿ ಪ್ರತಿಜ್ಞೆ ಕೈಗೊಂಡರು. ದೇವಸ್ಥಾನ ಆಡಳಿತ ಸಮಿತಿ ಹಾಗೂ ಸಾರ್ವಜನಿಕರ ಸಹಕಾರದಿಂದ ಈ ಕಾರ್ಯ ಯಶಸ್ವಿಯಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

4 ದಿನ ನೀರು ಪೂರೈಕೆ ವ್ಯತ್ಯಯ

ದಾವಣಗೆರೆ: ನಗರಕ್ಕೆ ಸರಬರಾಜಾಗುವ 24×7 ಕುಡಿಯುವ ನೀರಿನ ವಿತರಣೆಯಲ್ಲಿ ವ್ಯತ್ಯಯವಾಗಲಿದೆ. ಕೆಯುಐಡಿಎಫ್‌ಸಿ ಇಲಾಖೆ ವತಿಯಿಂದ ರಾಜನಹಳ್ಳಿ ಜಾಕ್‌ವೆಲ್ ನಿಂದ ಬಾತಿ ನೀರು ಶುದ್ಧೀಕರಣ ಘಟಕಕ್ಕೆ ಸಾಗುವ ನೀರನ್ನು ಸರಬರಾಜು ಮಾಡುವ ಪೈಪ್‌ಲೈನ್ ದುರಸ್ತಿ ಕಾರ್ಯವನ್ನು ಮಾ.24ರವರೆಗೆ ಕೈಗೊಳ್ಳಲಾಗಿದೆ. ಬೆಸ್ಕಾಂ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಆಗುತ್ತಿರುವುದರಿಂದ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ತಿಳಿಸಿದ್ದಾರೆ.

ಮಾದಿಗ ದಂಡೋರ ಸಭೆ ಇಂದು

ದಾವಣಗೆರೆ: ಜಿಲ್ಲಾ ಮಾದಿಗ ದಂಡೋರ ಉನ್ನತ ಮಟ್ಟದ ಸಮಿತಿ ಸಭೆಯನ್ನು ಮಾ.21ರಂದು ಬೆಳಗ್ಗೆ 11.30ಕ್ಕೆ ನಗರದ ಪಿ.ಬಿ ರಸ್ತೆಯಲ್ಲಿರುವ ಶಂಕರ ವಿಹಾರ ಬಡಾವಣೆಯಲ್ಲಿ ಕರೆಯಲಾಗಿದೆ. ಸಭೆಗೆ ಜಿಲ್ಲಾ ಸಮಿತಿ ಪದಾಧಿಕಾರಿಗಳು, ಉನ್ನತ ಮಟ್ಟದ ಸಮಿತಿಗೆ ಆಯ್ಕೆಯಾಗಿರುವ ಹಿರಿಯ ಮುಖಂಡರು, ತಾಲೂಕು ಘಟಕಗಳ ಅಧ್ಯಕ್ಷರು ಆಗಮಿಸಬೇಕೆಂದು ಸಂಘಟನೆಯ ಜಿಲ್ಲಾಧ್ಯಕ್ಷ ಹೆಚ್.ಸಿ.ಗುಡ್ಡಪ್ಪ ಕೋರಿದ್ದಾರೆ.

ಇಂದು ಮಧುಮೇಹ ಶಿಬಿರ

ದಾವಣಗೆರೆ: ಮಧುಮೇಹ ಮುಕ್ತ ಜೀವನ ಕುರಿತು ಚಿಂತನ ಮತ್ತು ಸಂದರ್ಶನ ಕಾರ್ಯಕ್ರಮವನ್ನು ಮಾ.21ರಂದು ಸಂಜೆ 4.30ಕ್ಕೆ ನಗರದ ಶಿವಯೋಗಿ ಮಂದಿರದ ಜಗದ್ಗುರು ಜಯದೇವ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗಿದೆ. ಚಿತ್ರದುರ್ಗ ಬೃಹನ್ಮಠದ ಡಾ.ಶಿವಮೂರ್ತಿ ಮುರುಘಾ ಶರಣರು, ವಿರಕ್ತಮಠದ ಡಾ.ಬಸವಪ್ರಭು ಸ್ವಾಮೀಜಿ ಸಮ್ಮುಖ ವಹಿಸುವರು. ಬೆಂಗಳೂರಿನ ಖ್ಯಾತ ಆಯುರ್ವೇದ ವೈದ್ಯ ಡಾ.ಲಕ್ಷ್ಮೀನಾರಾಯಣ ಮತ್ತವರ ಸಹೋದರಿ ಡಾ.ಶಾರದಾ ಅವರುಗಳು ಮಧುಮೇಹ ಕಾಯಿಲೆ ಕುರಿತು ಅರಿವು ಮೂಡಿಸಲಿದ್ದಾರೆ.

ಭೀಮಾಬಾಯಿ ನಿಧನ



ಬಸವಾಪಟ್ಟಣ: ಇಲ್ಲಿನ ಆಬಕಾರಿ ಇಲಾಖೆಯ ನೌಕರ ಖಂಡೋಜೀರಾವ್ ಅವರ ತಾಯಿ ಭೀಮಾಬಾಯಿ (82) ಗುರುವಾರ ನಿಧನರಾದರು. ಮೃತರಿಗೆ 7 ಜನ ಪುತ್ರಿಯರು, ಎರಡು ಜನ ಪುತ್ರರಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಬೆಳಗ್ಗೆ ಹಿಂದೂ ರುದ್ರಭೂಮಿಯಲ್ಲಿ ನಡೆಯಿತು.

ಜಿಎಂ ವಿವಿ ವಿದ್ಯಾರ್ಥಿಗಳ ತಂಡದ ಸಾಧನೆ



ದಾವಣಗೆರೆ: ಜಿ.ಎಂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ತಂಡ ಕ್ರೋನಿಕ್ಸ್ ರಾಷ್ಟ್ರೀಯ ಮಟ್ಟದ ಸ್ಮಾರ್ಟ್ ಅಪ್ ಹ್ಯಾಕಥಾನ್‌ನಲ್ಲಿ ಪ್ರಥಮ ಸ್ಥಾನ ಪಡೆದಿದೆ. ಶಿವಮೊಗ್ಗದ ಪಿಇಎಸ್ ಕ್ಯಾಂಪಸ್‌ನಲ್ಲಿ ಅನ್ವೇಷಣಾ ಟಿಬಿಐ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಜ್ವಲ್ ಜನ(ಐಎಟಿ), ಎಂ.ಪಿ. ಸಚಿನ್(ಸಿ.ಎಸ್.ಇ), ವಿ.ಡಿ. ಸುದರ್ಶನ(ಸೈಬರ್) ಹಾಗೂ ಗುರು ಶಂಕರ್ (ಸೈಬರ್) ವಿಶ್ವವಿದ್ಯಾಲಯ ತಂಡವನ್ನು ಪ್ರತಿನಿಧಿಸಿದ್ದರು. ತಂಡಕ್ಕೆ ಬಹುಮಾನದ ಜೊತೆಗೆ ಸೆಕ್ಯೂರ್ ಕ್ಲೋಕ್ ಸಂಸ್ಥೆಯೊಂದಿಗೆ ಇಂಟರ್ನ್‌ಶಿಪ್ ಅವಕಾಶವೂ ಲಭಿಸಿದೆ. ವಿದ್ಯಾರ್ಥಿಗಳ ಈ ಸಾಧನೆಗೆ ವಿಶ್ವವಿದ್ಯಾಲಯದ ಕುಲಾಧಿಪತಿ ಜಿ.ಎಂ. ಲಿಂಗರಾಜ್, ಕುಲಪತಿ ಎಸ್.ಆರ್. ಶಂಕಪಾಲ್, ಉಪಕುಲಪತಿ ಹೆಚ್.ಡಿ. ಮಹೇಶಪ್ಪ, ಕುಲಸಚಿವ ಸುನೀಲ್ ಕುಮಾರ್ ಸೇರಿದಂತೆ ಆಡಳಿತ ಮಂಡಳಿ, ಡೀನ್‌ಗಳು, ನಿರ್ದೇಶಕರು, ಮುಖ್ಯಸ್ಥರು, ಬೋಧಕ ವೃಂದ ಮತ್ತು ಸಹಪಾಠಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಮತದ ಹಕ್ಕು ಚಲಾಯಿಸಿ ಪ್ರಜಾಪ್ರಭುತ್ವ ಬಲಪಡಿಸಿ: ಡಿಸಿ

ದಾವಣಗೆರೆ: ನಗರದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಸ್ವೀಪ್ ಸಮಿತಿ ಸಹಯೋಗದಲ್ಲಿ ಮತದಾರರ ಜಾಗೃತಿಗಾಗಿ ಬೃಹತ್ ಜಾಥಾ ನಡೆಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಮಾತನಾಡಿ, ಪ್ರತಿಯೊಬ್ಬ ಅರ್ಹ ಮತದಾರರು ಏಪ್ರಿಲ್ 9ರಂದು ನಡೆಯುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ತಮ್ಮ ಹಕ್ಕನ್ನು ಚಲಾಯಿಸುವ ಮೂಲಕ ಪ್ರಜಾಪ್ರಭುತ್ವ ಬಲಪಡಿಸಬೇಕು ಎಂದು ಮನವಿ ಮಾಡಿದರು.



ರೈಲ್ವೆ ನಿಲ್ದಾಣದಿಂದ ಆರಂಭವಾಗಿ ಹೊಂಡದ ಸರ್ಕಲ್‌ವರೆಗೆ ಸಾಗಿದ ಜಾಥಾದಲ್ಲಿ ಜಿಪಂ ಸಿಇಒ ಗಿತ್ತೆ ಮಾಧವ ವಿಠಲರಾವ್, ಎಸ್ಪಿ ಡಾ.ಹೆಚ್.ಟಿ. ಶೇಖರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

ಹುರಿಯಾಳು ಘೋಷಿಸಿ ಮೊದಲು ಕಣ ಪ್ರವೇಶಿಸಿದ ಕಮಲ ಪಡೆ

ಟಿ. ಶ್ರೀನಿವಾಸ್ ದಾಸಕರಿಯಪ್ಪ ಬಿಜೆಪಿ ಅಭ್ಯರ್ಥಿ

▸ ಪವಮಾನ ಐರಣಿ



ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಮುನ್ನಡೆ ಸಾಧಿಸಿದೆ! ಕಾಂಗ್ರೆಸ್ ಅಭ್ಯರ್ಥಿ ಘೋಷಣೆಗೂ ಮುನ್ನವೇ ಯುಗಾದಿ ದಿನದಂದು ಬಿಜೆಪಿ ತನ್ನ ಅಭ್ಯರ್ಥಿಯನ್ನು ಅಂತಿಮಗೊಳಿಸುವ ಮೂಲಕ ನೇರ ಹಣಾಹಣಿಗೆ ಸಿದ್ಧವಾಗಿದೆ.

ಕಾಂಗ್ರೆಸ್ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ನಿಧನದಿಂದ ತೆರವಾಗಿರುವ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಬಿಜೆಪಿ ತನ್ನ ಅಭ್ಯರ್ಥಿ ಘೋಷಿಸಿದ್ದು, ಹೊಸ ಮುಖಕ್ಕೆ ಅವಕಾಶ ನೀಡಿದೆ. ತೀವ್ರ ಪೈಪೋಟಿ ನಡುವೆಯೂ ಎಸ್ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಟಿ. ಶ್ರೀನಿವಾಸ್ ದಾಸಕರಿಯಪ್ಪಗೆ ಬಿಜೆಪಿ ಟಿಕೆಟ್ ಒಲಿದಿದೆ. ಸಾಮಾನ್ಯ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡದ ನಾಯಕ ಸಮು ದಾಯಕ್ಕೆ ಆದ್ಯತೆ ನೀಡುವ ಮೂಲಕ ಬಿಜೆಪಿ ಹೊಸದೊಂದು ಪ್ರಯೋಗ ಮಾಡಿದೆ. ಇತ್ತ ಕಾಂಗ್ರೆಸ್ ವಲಯದಲ್ಲಿ ಟಿಕೆಟ್ ಗೊಂದಲ ಇನ್ನೂ ಮುಂದುವರೆದಿದ್ದು, ತೆರೆಮರೆಯ ರಾಜಕೀಯ ಚಟುವಟಿಕೆಗಳು ಕಾವು ಪಡೆದುಕೊಂಡಿವೆ.

ಕ್ಷೇತ್ರವನ್ನು ಈವರೆಗೆ ಪ್ರತಿನಿಧಿಸುತ್ತಿದ್ದ ಶಾಮನೂರು ಕುಟುಂಬಕ್ಕೇ ಕಾಂಗ್ರೆಸ್ ನೀಡಬೇಕೆಂಬ ಕೂಗು ಒಂದು ಕಡೆಯಾದರೆ, ಮುಸ್ಲಿಂ ಸೇರಿದಂತೆ ಅಹಿಂದ ವರ್ಗದ ಅಭ್ಯರ್ಥಿಗೆ ಅವಕಾಶ ಸಿಗಬೇಕೆಂಬ ಬೇಡಿಕೆ ಕೂಡ ಗಟ್ಟಿಯಾಗಿಯೇ ಮೊಳಗುತ್ತಿದೆ. ಶಾಮನೂರು ಕುಟುಂಬದಿಂದ ಜಿಲ್ಲಾ ಮಂತ್ರಿ ಎಸ್.ಎಸ್. ಮಲ್ಲಿಕಾರ್ಜುನ್ ಪುತ್ರ ಸಮರ್ಥ ಹೆಸರು ಮುಂಚೂಣಿಯಲ್ಲಿದ್ದು, ಎದುರಾಳಿ ಬಣದಿಂದ ವಿಧಾನ ಪರಿಷತ್ ಸದಸ್ಯ ಕೆ. ಅಬ್ದುಲ್ ಜಬ್ಬಾರ್, ಮಾಜಿ ನಗರಸಭಾಧ್ಯಕ್ಷ ಬಿ. ವೀರಣ್ಣ, ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್ಚಂದ್ರ ಸಹಿತ ಹಲವರ ಹೆಸರು ಕೇಳಿಬರುತ್ತಿದೆ. ಉಭಯ ಬಣಗಳು ಸರಣಿ ಸಭೆ ನಡೆಸುತ್ತಾ ಹೈಕಮಾಂಡ್ ಮೇಲೆ ಒತ್ತಡ ತಂತ್ರ ಅನುಸರಿಸುತ್ತಿವೆ.

ಸದ್ಯ ಕಾಂಗ್ರೆಸ್ ಪಾಳಯದಲ್ಲಿ ಭಿನ್ನಮತ ಜೋರಾಗಿದ್ದು, ಪ್ರಚಾರಕ್ಕೆ ಇನ್ನು 20 ದಿನ ಮಾತ್ರ ಉಳಿದಿರುವುದರಿಂದ ಟಿಕೆಟ್ ಘೋಷಣೆ ಮಾಡಲೇಬೇಕಾದ ಅನಿವಾರ್ಯತೆ ಹೈಕಮಾಂಡ್ ಮುಂದಿದೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಸಮರ್ಥ ಶಾಮನೂರು ಕಣಕ್ಕಿಳಿಯುವುದು ಬಹುತೇಕ ಖಚಿತ ಎನ್ನಲಾಗುತ್ತಿದೆ. ಹಾಗೇನಾದರೂ ಆದರೆ ಅಹಿಂದ ವರ್ಗಕ್ಕೆ ಟಿಕೆಟ್ ಕೇಳುತ್ತಿರುವ ಅಬ್ದುಲ್ ಜಬ್ಬಾರ್ ಟೀಂ ಮುಂದಿನ ನಡೆ ಏನು? ಎಂಬುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಒಟ್ಟಾರೆ ಈ ಬಾರಿ ದಾವಣಗೆರೆ ದಕ್ಷಿಣದಲ್ಲಿ ಕಾಂಗ್ರೆಸ್ ಹೋರಾಟ ಸುಲಭವಲ್ಲ ಎಂಬುದು ಮೇಲ್ನೋಟಕ್ಕೆ ಗೋಚರಿಸುತ್ತಿದೆ.

ದಿಗಂತ ವಿಶೇಷ

ಬಿಜೆಪಿ ಪಕ್ಷದಿಂದ ದಾವಣಗೆರೆ ದಕ್ಷಿಣಕ್ಕೆ ಮಾಜಿ ಮೇಯರ್ ಬಿ.ಜಿ. ಅಜಯಕುಮಾರ, ಧೂಡಾ ಮಾಜಿ ಅಧ್ಯಕ್ಷರಾದ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ, ದೇವರಮನೆ ಶಿವಕುಮಾರ ಹಾಗೂ ಟಿ. ಶ್ರೀನಿವಾಸ ದಾಸಕರಿ ಯಪ್ಪ ಪ್ರಬಲ ಆಕಾಂಕ್ಷಿಗಳಾಗಿದ್ದರು. ಇವರ ಜೊತೆಗೆ ಹೆಚ್.ಸಿ. ಜಯಮ್ಮ, ಬಿ.ಎಂ. ಸತೀಶ ಕೊಳೇನಹಳ್ಳಿ, ಎಂ.ಪಿ. ಕೃಷ್ಣಮೂರ್ತಿ ಪವಾರ್, ಡಾ. ನಾಸಿರ್ ಅಹಮದ್ ಕೂಡ ಟಿಕೆಟ್ ಬೇಡಿಕೆ ಇಟ್ಟಿದ್ದರು. ಯಾರಿಗೇ ಟಿಕೆಟ್ ಸಿಕ್ಕರೂ ಬಿಜೆಪಿ ಗೆಲುವಿಗೆ ಶ್ರಮಿಸುವುದಾಗಿ ಎಲ್ಲಾ ಆಕಾಂಕ್ಷಿಗಳು ಒಗ್ಗಟ್ಟು ಪ್ರದರ್ಶಿಸಿದ್ದರು. ಆದರೆ ಕಾಂಗ್ರೆಸ್ ಪಾಳಯದಲ್ಲಿ ಪರಿಸ್ಥಿತಿ ಭಿನ್ನವಾಗಿದ್ದು, ಒಂದು ಬಣಕ್ಕೆ ಟಿಕೆಟ್ ಸಿಕ್ಕರೆ ಇನ್ನೊಂದು ಬಣ ತಟಸ್ಥವಾಗಿ ಉಳಿಯುವ ಸಾಧ್ಯತೆ ಹೆಚ್ಚಾಗಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅಹಿಂದ ವರ್ಗದ ಮತಗಳೇ ಗೆಲುವಿನಲ್ಲಿ ನಿರ್ಣಾಯಕವಾಗಿವೆ. ಈ ಹಿಂದೆ 2008, 2018ರಲ್ಲಿ ಮರಾಠ ಸಮುದಾಯದ ಯಶವಂತರಾವ್ ಜಾಧವ್, 2013ರಲ್ಲಿ ಪಂಚಮಸಾಲಿ ಸಮಾಜದ ಬಿ. ಲೋಕೇಶ, 2023ರ ಚುನಾವಣೆಯಲ್ಲಿ ಪಂಚಮಸಾಲಿ ಸಮಾಜದ ಬಿ.ಜಿ. ಅಜಯಕುಮಾರ್ ಅವರುಗಳನ್ನು ಬಿಜೆಪಿ ಕಣಕ್ಕಿಳಿಸಿತ್ತು. ಇದೀಗ ನಾಯಕ ಸಮುದಾಯದ ಶ್ರೀನಿವಾಸ ದಾಸಕರಿಯಪ್ಪಗೆ ಟಿಕೆಟ್ ಘೋಷಿಸುವ ಮೂಲಕ ಸಾಂಪ್ರದಾಯಿಕ ಎದುರಾಳಿ ಕಾಂಗ್ರೆಸ್ಸಿಗೆ ಟಕ್ಕರ್ ಕೊಡಲು ಬಿಜೆಪಿ ಮುಂದಾಗಿದೆ. ಆಡಳಿತಾರೂಢ ಪಕ್ಷದ ಅಭ್ಯರ್ಥಿ ಅಂತಿಮಗೊಳ್ಳುವ ಮುನ್ನವೇ ತನ್ನ ಅಭ್ಯರ್ಥಿಯನ್ನು ಫೈನಲ್ ಮಾಡಿ ರಣೋತ್ಸಾಹ ಪ್ರದರ್ಶಿಸಿದೆ.

ಅಭ್ಯರ್ಥಿ ಪರಿಚಯ

ಮಾಹಿತಿ ತಂತ್ರಜ್ಞಾನದಲ್ಲಿ ಎಂಜಿನಿಯರಿಂಗ್ ಪದವೀಧರರಾಗಿರುವ 45 ವರ್ಷ ಹರೆಯದ ಟಿ. ಶ್ರೀನಿವಾಸ್ ದಾಸಕರಿಯಪ್ಪ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾಗಿ, ಎಸ್ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷರಾಗಿ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವರ್ತಕರಾಗಿ, ವಿದ್ಯುತ್ ಗುತ್ತಿಗೆದಾರರಾಗಿ ವೃತ್ತಿ ಬದುಕು ಕಟ್ಟಿಕೊಂಡಿದ್ದಾರೆ. ರಾಜಕೀಯ ಹಿನ್ನೆಲೆಯ ಕುಟುಂಬದಿಂದ ಬಂದಿರುವ ಇವರ ತಂದೆ ಟಿ. ದಾಸಕರಿಯಪ್ಪ ಈ ಹಿಂದೆ ಜೆಡಿಎಸ್ ಜಿಲ್ಲಾಧ್ಯಕ್ಷರಾಗಿ, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಸಹೋದರ ಗಣೇಶ ದಾಸಕರಿಯಪ್ಪ ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದಾರೆ. ಉಳಿದಂತೆ, ಶ್ರೀನಿವಾಸ್ ದಾವಣಗೆರೆ ವಿನೋಬನಗರದ ಚೌಡೇಶ್ವರಿ ದೇವಸ್ಥಾನ ಮಂಡಳಿಯ ಅಧ್ಯಕ್ಷರಾಗಿ, ಜಿಲ್ಲಾ ನಾಯಕ ಸಮುದಾಯದ ಯುವ ಘಟಕದ ಅಧ್ಯಕ್ಷರಾಗಿ, ಕ್ರೀಡಾ ಪೋಷಕರಾಗಿ ಅನೇಕ ಸಂಘ-ಸಂಸ್ಥೆಗಳಿಗೆ ಸಹಾಯಹಸ್ತ ನೀಡುತ್ತಿದ್ದಾರೆ.



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ. ಶ್ರೀನಿವಾಸ ದಾಸಕರಿಯಪ್ಪ ಶುಕ್ರವಾರ ಸಾಂಕೇತಿಕವಾಗಿ ನಾಮಪತ್ರ ಸಲ್ಲಿಸಿದರು. ಟಿಕೆಟ್ ಆಕಾಂಕ್ಷಿಗಳಾಗಿದ್ದ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ, ಬಿ.ಜಿ. ಅಜಯಕುಮಾರ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಮಹಾನಗರ ಪಾಲಿಕೆಯ ಚುನಾವಣಾ ಕಚೇರಿಗೆ ಆಗಮಿಸಿದ ಶ್ರೀನಿವಾಸ ದಾಸಕರಿಯಪ್ಪ, ಚುನಾವಣಾಧಿಕಾರಿ ಸಂತೋಷ ಕುಮಾರಗೆ ನಾಮಪತ್ರ ಹಸ್ತಾಂತರಿಸಿದರು. ಈ ವೇಳೆ ಬಿಜೆಪಿ ಕಾರ್ಯಕರ್ತರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿ ಬೆಂಬಲ ಸೂಚಿಸಿದರು.

ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ

ಮಾದರಿ ಕ್ಷೇತ್ರವನ್ನಾಗಿಸುವುದೇ ಗುರಿ



ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಟಿ. ಶ್ರೀನಿವಾಸ್ ದಾಸಕರಿಯಪ್ಪ ಹೆಸರು ಘೋಷಣೆ ಯಾಗಿರುವ ಹಿನ್ನೆಲೆಯಲ್ಲಿ ಬೆಂಬಲಿಗರಲ್ಲಿ ಉತ್ಸಾಹ ಹೆಚ್ಚಾಗಿದೆ. ಯುಗಾದಿ ಹಬ್ಬದ ದಿನವೇ ಎಸ್ಟಿ ನಾಯಕ ಸಮುದಾಯಕ್ಕೆ ಬಿಜೆಪಿ ಮಣೆ ಹಾಕಿರುವುದು ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಈ ಬಾರಿ ಗೆಲುವು ಸಾಧಿಸಲು ರಣತಂತ್ರ ರೂಪಿಸಿರುವುದು ಸ್ಪಷ್ಟವಾಗಿದೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ, ದಾವಣಗೆರೆ ದಕ್ಷಿಣವನ್ನು ಮಾದರಿ ಕ್ಷೇತ್ರ ಮಾಡುವುದೇ ನನ್ನ ಗುರಿ. ನನಗೆ ಅಭ್ಯರ್ಥಿಯಾಗಿ ಅವಕಾಶ ನೀಡಿದ ಪಕ್ಷದ ರಾಜ್ಯ ಹಾಗೂ ರಾಷ್ಟ್ರ ನಾಯಕರಿಗೆ ಹೃತ್ಪೂರ್ವಕ ಧನ್ಯವಾದ ಅರ್ಪಿಸುತ್ತೇನೆ. ಕ್ಷೇತ್ರದ ಅಭಿವೃದ್ಧಿ, ಶಿಕ್ಷಣ ವ್ಯವಸ್ಥೆ ಸುಧಾರಣೆ, ಗುಣಮಟ್ಟದ ಆರೋಗ್ಯ ಸೇವೆ, ಪ್ರಮುಖ ರಸ್ತೆಗಳ ಅಗಲೀಕರಣ, ಬಡವರಿಗೆ ಸೂರು ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸುವುದೇ ಆದ್ಯತೆ ಎಂದರು.

ಬಿಜೆಪಿ ಪಕ್ಷದಲ್ಲಿ ಯಾವುದೇ ಬಣಗಳಿಲ್ಲ, ಮಾಜಿ ಕೇಂದ್ರ ಸಚಿವ ಡಾ.ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ರಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯರ ಮಾರ್ಗದರ್ಶನದಲ್ಲಿ ಎಲ್ಲರನ್ನು ಒಟ್ಟಿಗೆ ಕರೆದುಕೊಂಡು ಚುನಾವಣೆ ಎದುರಿಸುತ್ತೇನೆ. ನನ್ನ ತಂದೆ ದಾಸಕರಿಯಪ್ಪನವರ ಸೇವಾ ಮನೋಭಾವವೇ ನನಗೆ ಪ್ರೇರಣೆ. ಈ ಬಾರಿ ಕಾಂಗ್ರೆಸ್ ವಿರುದ್ಧ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಟಿಕೆಟ್ ಘೋಷಣೆಯಾಗುತ್ತಿದ್ದಂತೆ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್ ಸೇರಿದಂತೆ ಹಲವರನ್ನು ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಭೇಟಿಯಾಗಿ ಸಹಕಾರ ಕೋರಿದ್ದಾರೆ. ಪಕ್ಷದ ಹಿರಿಯರು ಹಾಗೂ ಕಾರ್ಯಕರ್ತರು ಕೂಡ ಅಭ್ಯರ್ಥಿ ನಿವಾಸಕ್ಕೆ ಭೇಟಿ ನೀಡಿ ಅಭಿನಂದನೆ ಸಲ್ಲಿಸುತ್ತಿದ್ದಾರೆ. ನಾಮಪತ್ರ ಸಲ್ಲಿಕೆಗೆ ಮಾ.23 ಕೊನೆ ದಿನವಾಗಿರುವ ಹಿನ್ನೆಲೆಯಲ್ಲಿ ಬಿಜೆಪಿ ಬಲ ಪ್ರದರ್ಶನಕ್ಕೆ ಸಜ್ಜಾಗಿದೆ. ಇತ್ತ ಕಾಂಗ್ರೆಸ್ ಪಕ್ಷದಲ್ಲಿ ಅಭ್ಯರ್ಥಿ ಆಯ್ಕೆ ಕುರಿತ ಗೊಂದಲ ಇನ್ನೂ ತಣ್ಣಗಾಗಿಲ್ಲ.

> **ನಮ್ಮವರಿಗೆ ಟಿಕೆಟ್ ಘೋಷಣೆಯಾಗಿರುವುದು ತುಂಬಾ ಸಂತೋಷ ತಂದಿದೆ. ಯುಗಾದಿ ಹಬ್ಬದ ದಿನವೇ ಈ ಶುಭ ಸುದ್ದಿ ಬಂದಿರುವುದು ಇನ್ನಷ್ಟು ಖುಷಿ ನೀಡಿದೆ. ಹಲವು ವರ್ಷಗಳಿಂದ ಜನರ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕಳೆದ ಬಾರಿಯೇ ಟಿಕೆಟ್ ಸಿಗಬೇಕಿತ್ತು. ಆದರೆ ಈ ಬಾರಿ ಅವಕಾಶ ಸಿಕ್ಕಿದೆ. ಕ್ಷೇತ್ರದಲ್ಲಿ ಜನಬೆಂಬಲ ಉತ್ತಮವಾಗಿದ್ದು, ಖಂಡಿತವಾಗಿಯೂ ಗೆಲುವು ಸಾಧಿಸುತ್ತೇವೆ. ಪ್ರಚಾರದಲ್ಲಿ ನಾನೂ ಸಕ್ರಿಯವಾಗಿ ಭಾಗವಹಿಸುತ್ತೇನೆ.**
>
> ■ ಸಂಧ್ಯಾ ಶ್ರೀನಿವಾಸ್, ಶ್ರೀನಿವಾಸ್ ದಾಸಕರಿಯಪ್ಪ ಪತ್ನಿ

> **ಶ್ರೀನಿವಾಸ್ ಯಾವಾಗಲೂ ಬಡವರ ಪರ ಕೆಲಸ ಮಾಡುತ್ತಾ ಬಂದಿದ್ದಾನೆ. ಮನೆಗೆ ಬಂದವರಿಗೆ ಸಹಾಯ ಮಾಡುವ ಗುಣ ಅವನಲ್ಲಿದೆ. ಜನರ ಸಂಕಷ್ಟಗಳಿಗೆ ಸ್ಪಂದಿಸುವ ಮನಸ್ಸು ಹೊಂದಿದ್ದಾನೆ. ಅವನು ಗೆದ್ದು ಬಂದರೆ ಕ್ಷೇತ್ರದಲ್ಲಿ ಉತ್ತಮ ಅಭಿವೃದ್ಧಿ ಕೆಲಸಗಳು ನಡೆಯುತ್ತವೆ. ಎಲ್ಲರೂ ಮತ ಹಾಕಿ ಅವನನ್ನು ಗೆಲ್ಲಿಸಬೇಕು.**
>
> ■ ರಂಗಮ್ಮ, ಶ್ರೀನಿವಾಸ್ ದಾಸಕರಿಯಪ್ಪ ತಾಯಿ

ಜನರ ಬೆಂಬಲ, ಅಪ್ಪಾಜಿ ಕೆಲಸವೇ ಶ್ರೀರಕ್ಷೆ: ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ: ಜನರ ಬೆಂಬಲ ಮತ್ತು ಅಪ್ಪಾಜಿಯವರು ಮಾಡಿರುವ ಅಭಿವೃದ್ಧಿ ಕೆಲಸಗಳೇ ನಮಗೆ ಶ್ರೀರಕ್ಷೆಯಾಗಿವೆ ಎಂದು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಯುವಕರು ರಾಜಕೀಯಕ್ಕೆ ಬರಬೇಕು ಎಂಬುದು ಜನರ ಆಶಯವಾಗಿದೆ. ಇಂದಿನ ಯುವಜನತೆಯಲ್ಲಿ ಪರಿಸರ, ಜಾಗತಿಕ ಸಂಬಂಧಗಳು ಮತ್ತು ಅಂತಾರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಒಂದು ವಿಭಿನ್ನ ಹಾಗೂ ವಿಶಾಲವಾದ ದೃಷ್ಟಿಕೋನ ಇರುತ್ತದೆ. ಯುಗಾದಿಯ ಹೊಸ ಚಿಗುರಿನಂತೆ ರಾಜಕೀಯದಲ್ಲೂ ಯುವಕರು ಮತ್ತು ಮಹಿಳೆಯರು ಹೊಸ ಬದಲಾವಣೆ ತರುತ್ತಿದ್ದಾರೆ ಎಂದರು.

ಹಿಂದೆ ಅಪ್ಪಾಜಿ ಯವರು (ಶಾಮನೂರು ಶಿವಶಂಕರಪ್ಪ) ಕೂಡ ಬಿ-ಫಾರ್ಮ್ ಇಲ್ಲದೆಯೇ ಮೊದಲು ನಾಮಪತ್ರ ಸಲ್ಲಿಸುತ್ತಿದ್ದರು. ಯುಗಾದಿ ಮತ್ತು ರಂಜಾನ್ ಹಬ್ಬಗಳು ಒಟ್ಟಿಗೆ ಬಂದಿರುವುದರಿಂದ ಇದು ಅತ್ಯಂತ ಶುಭ ಮುಹೂರ್ತವಾಗಿದೆ. ಈ ಹಿನ್ನೆಲೆಯಲ್ಲಿ ಇಂದು ಸಾಂಕೇತಿಕವಾಗಿ ನಾಮಪತ್ರ ಸಲ್ಲಿಸುತ್ತಿದ್ದು, ಬಿ-ಫಾರ್ಮ್ ಬಂದ ನಂತರ ಸೋಮವಾರ ಅಧಿಕೃತವಾಗಿ ಮತ್ತೊಮ್ಮೆ ನಾಮಪತ್ರ ಸಲ್ಲಿಕೆ ಮಾಡಲಾಗುವುದು ಎಂದು ತಿಳಿಸಿದರು.

ನಾಮಪತ್ರ ಸಲ್ಲಿಸಿದ ಸಮರ್ಥ ಎಂ. ಶಾಮನೂರು

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕೆಂಬ ಕೂಗು ಕೇಳಿ ಬರುತ್ತಿರುವ ಮಧ್ಯೆಯೇ ದಿವಂಗತ ಶಾಮನೂರು ಶಿವಶಂಕರಪ್ಪನವರ ಮೊಮ್ಮಗ ಸಮರ್ಥ ಎಂ. ಶಾಮನೂರು ಶುಕ್ರವಾರ ಸಾಂಕೇತಿಕವಾಗಿ ಉಮೇದುವಾರಿಕೆ ಸಲ್ಲಿಸಿದ್ದಾರೆ.

ತಮ್ಮ ತಾಯಿ, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಮೇಯರ್ ಹೆಚ್.ಬಿ. ಗೋಣೆಪ್ಪ, ಕೆಪಿಸಿಸಿ ಕಾರ್ಯದರ್ಶಿ ಡಿ. ಬಸವರಾಜ, ಹಿರಿಯ ವಕೀಲ ಸಲೀಂ ಜೊತೆಗೆ ತೆರಳಿ ಕ್ಷೇತ್ರದ ಚುನಾವಣಾಧಿಕಾರಿ, ಉಪ ವಿಭಾಗಾಧಿಕಾರಿ ಸಂತೋಷಕುಮಾರಗೆ ನಾಮಪತ್ರ ಸಲ್ಲಿಸಿದರು.

ಕಾಂಗ್ರೆಸ್ ಪಕ್ಷದ ಅಧಿಕೃತ ಟಿಕೆಟ್ ಘೋಷಣೆಗೂ ಮುನ್ನವೇ ಶುಕ್ರವಾರ ಒಳ್ಳೆಯ ದಿನವೆಂಬ ಕಾರಣಕ್ಕೆ ಸಮರ್ಥ ಎಂ. ಶಾಮನೂರು ಒಂದು ಕಾಂಗ್ರೆಸ್ ಪಕ್ಷದಿಂದ, ಮತ್ತೊಂದು ಪಕ್ಷೇತರನಾಗಿ ತಮ್ಮ ಉಮೇದುವಾರಿಕೆ ಸಲ್ಲಿಸಿದರು. ಶುಕ್ರವಾರ ಅಮೃತ ಸಿದ್ಧಿಯೋಗದ ಹಿನ್ನೆಲೆಯಲ್ಲಿ ಬೆಳಗ್ಗೆ 6.30ಕ್ಕೆ ಶಾಮನೂರು ಕುಟುಂಬದ ಮನೆ ದೇವರಾದ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕು ಹಿರೇಎಮ್ಮಿಗನೂರು



ಗ್ರಾಮದ ಶ್ರೀಕಲ್ಲೇಶ್ವರ ದೇವಸ್ಥಾನಕ್ಕೆ ತೆರಳಿ, ದೇವರ ದರ್ಶನ ಪಡೆದು, ಪೂಜೆ ಸಲ್ಲಿಸಿದ ಸಮರ್ಥ ಎಂ. ಶಾಮನೂರು, ಮಧ್ಯಾಹ್ನ 12 ಗಂಟೆ ಬಳಿಕ ರಾಹುಕಾಲ ಕಳೆದ ನಂತರ ದಾವಣಗೆರೆಯಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ಮಾ.23ರಂದು ಸೋಮವಾರ ಮತ್ತೆ 3 ಸೆಟ್ ನಾಮಪತ್ರ ಸಲ್ಲಿಸಲಿದ್ದಾರೆ ಎನ್ನಲಾಗಿದೆ.

ಎಲ್ಲರ ಬೆಂಬಲ ಪಡೆದು ಮತ್ತೆ ನಾಮಪತ್ರ ಸಲ್ಲಿಸುವೆ: ಸಮರ್ಥ್



ದಾವಣಗೆರೆ: ಯುಗಾದಿ, ರಂಜಾನ್ ಹಬ್ಬ ಎರಡೂ ಕೂಡಿರುವ ಇಂದು ಒಳ್ಳೆಯ ದಿನವಾಗಿದ್ದು, ಎಲ್ಲರ ಬೆಂಬಲ ಪಡೆದು ನಾಮಪತ್ರ ಸಲ್ಲಿಸುತ್ತಿದ್ದೇನೆ ಎಂದು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಸಮರ್ಥ ಎಂ.ಶಾಮನೂರು ತಿಳಿಸಿದರು.

ಶುಕ್ರವಾರ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವನ್ನು ಕಟ್ಟಿದವರೇ ನಮ್ಮ ತಾತ ಶಾಮನೂರು ಶಿವಶಂಕರಪ್ಪನವರು. ನಮಗೆ ಟಿಕೆಟ್ ಸಿಗುವ ನಂಬಿಕೆ ಇದೆ. ನಮ್ಮ ತಾತ ಮಾಡಿದ ಎಲ್ಲಾ ಕೆಲಸಗಳನ್ನು ನಾನು ಮುಂದುವರಿಸುತ್ತೇನೆ. ಕ್ಷೇತ್ರದಲ್ಲಿ ತಾತ ಮಾಡಿದ್ದ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗುತ್ತೇನೆ. ಕಳೆದ 6 ತಿಂಗಳಿನಿಂದಲೂ ಕ್ಷೇತ್ರದಲ್ಲಿದ್ದು, ಎಲ್ಲರ ವಿಶ್ವಾಸ ಗಳಿಸಿದ್ದೇನೆ. ನನಗೆ ಅವಕಾಶ ಸಿಕ್ಕರೆ ನೂರಕ್ಕೆ ನೂರು ಗೆಲ್ಲುವ ಅವಕಾಶ ಇದೆ. ಎದುರಾಳಿ ಪಕ್ಷದಿಂದ ಯಾರೇ ಅಭ್ಯರ್ಥಿಯಾದರೂ ನಾವು ಅಭಿವೃದ್ಧಿ ಆಧಾರದಲ್ಲೇ ಚುನಾವಣೆಯನ್ನು ಎದುರಿಸುತ್ತೇವೆ. ಈ ಬಾರಿ ಜನತೆ ಕಾಂಗ್ರೆಸ್ ಕೈ ಹಿಡಿಯುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯುಗಾದಿ ಬೇಸಾಯ ಆರಂಭಿಸಿದ ರೈತರು

ಹೊನ್ನಾಳಿ: ಪಂಚಾಂಗದ ಪ್ರಕಾರ ಹಿಂದೂಗಳಿಗೆ ಹೊಸ ವರ್ಷವೆಂದೇ ಕರೆಯಲಾಗುವ ಸಂಭ್ರಮದ ಯುಗಾದಿ ಹಬ್ಬದಂತೆ ರೈತರು ಹೊಸ ಬೇಸಾಯವನ್ನು ತಾಲೂಕಿನ ಹಲವು ಗ್ರಾಮಗಳಲ್ಲಿ ಗುರುವಾರ ಯುಗಾದಿ ಬೇಸಾಯ ಆರಂಭಿಸಿದ್ದಾರೆ.

ಅರೆ ಮಲೆನಾಡಿನ ಹೆಬ್ಬಾಗಿಲಿನ ಹೊನ್ನಾಳಿ ಹಾಗೂ ನ್ಯಾಮತಿ ಅವಳಿ ತಾಲೂಕಿನಲ್ಲಿ ಹೊಸವರ್ಷ ಯುಗಾದಿಯಂದು ಮಾಡುವ ಎಲ್ಲಾ ಕೆಲಸಗಳು ಒಳ್ಳಯದಾಗುತ್ತವೆ ಎಂಬ ನಂಬಿಕೆಯಿಂದ ಗ್ರಾಮೀಣ ಪ್ರದೇಶದಲ್ಲಿ ಯುಗಾದಿ ಹಬ್ಬದಂದು ಎತ್ತುಗಳಿಗೆ ಪೂಜೆ ಹಾಗೂ ಅಲಂಕಾರ ಮಾಡಿ, ಮನೆಯಲ್ಲಿ ಹಬ್ಬ ಆಚರಿಸಿದ ನಂತರ ಮನೆಯಲ್ಲಿ ಮಾಡಿದ ನೈವೇದ್ಯಗಳನ್ನು ತಮ್ಮ ತಮ್ಮ ಜಮೀನುಗಳಿಗೆ ತಂದು ಭೂಮಿತಾಯಿಗೆ ಪೂಜೆ ಮಾಡಿ ನಂತರ ಒಂದೆರಡು ಸುತ್ತು ನೇಗಿಲು



ಹೊಡೆಯುವುದರ ಮುಖಾಂತರ ಉಳುಮೆ ಮಾಡಿ ಮುಂದಿನ ಕೃಷಿ ಚಟುವಟಿಕೆಗಳಿಗೆ ಹೆಕ್ಕೆ ಇಟ್ಟು ಹೊಸ ವರ್ಷಕ್ಕೆ ಹೊಸ ಬೇಸಾಯ ಪ್ರಾರಂಭಿಸಿದರು.

ಸನಾತನ ಕಾಲದ ತಮ್ಮ ಪೂರ್ವಿಕರಿಂದ ನಡೆದುಕೊಂಡು ಬಂದಿರುವ ಯುಗಾದಿಯಂದು ಹೊಸ ಬೇಸಾಯ ಆರಂಭಿಸುವ ಪದ್ಧತಿಯನ್ನು ಇಂದಿಗೂ ರೈತರು ಇಂದಿಗೂ ಮುಂದುವರಿ ಸಿಕೊಂಡು ಬಂದಿದ್ದಾರೆ.

ನೂತನಪರಾಭವನಾಮಸಂವತ್ಸರ ವಸಂತ ಋತುವಿನ ಚೈತ್ರ ಮಾಸದ ಶುಕ್ಲ ಪಕ್ಷದ ಪಾಡ್ಯದ ಗುರುವಾರ ರೈತರು ತಮ್ಮ ಜಮೀನಿನಲ್ಲಿ ಭೂಮಿ ಉಳುಮೆ ಮಾಡಿದರು. ತಾಲೂಕಿನ ಬೇಲಿಮಲ್ಲೂರು, ಮಾಸಡಿ, ಅರಕೆರೆ, ನರಸಗೊಂಡನಹಳ್ಳಿ, ನ್ಯಾಮತಿ ತಾಲೂಕಿನ ಜೀನಹಳ್ಳಿ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ನೂತನ ವರ್ಷ ಯುಗಾದಿಯಂದೆ ಬೇಸಾಯ ಆರಂಭಿಸಿ ಈ ಬಾರಿ ಒಳ್ಳೆ ಮಳೆ ಆಗಿ ಉತ್ತಮ ಫಸಲು ನೀಡಪ್ಪ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿ ಹಾಗೂ ಗೋವುಗಳಿಗೂ ನಮಸ್ಕಾರ ಮಾಡಿ ಬೇಸಾಯ ಪ್ರಾರಂಭಿಸಿದರು.

ಹರಿಹರ: ವಿಜೃಂಭಣೆಯ ಶ್ರೀಕಾಳಿಕಾದೇವಿ ರಥೋತ್ಸವ

ಹರಿಹರ: ನಗರದಲ್ಲಿ ಗುರುವಾರ ಶ್ರೀಕಾಳಿಕಾ ದೇವಿ ರಥೋತ್ಸವವು ನೂರಾರು ಭಕ್ತರ ಸಮ್ಮುಖ ದಲ್ಲಿ ನಡೆಯಿತು.

ನಗರದ ದೇವಸ್ಥಾನ ರಸ್ತೆಯಲ್ಲಿರುವ ಶ್ರೀಕಾಳಿಕಾದೇವಿ ದೇವಸ್ಥಾನದಲ್ಲಿ ಬುಧವಾರ ಅಮಾವಾಸ್ಯೆಯಂದು ದೇವಿಗೆ ವಿಶೇಷ ಅಭಿಷೇಕ ನೆರವೇರಿತು. ನಂತರ ಗೋಧಿ ನಿಧಿ ಪೂಜೆ, ಕಳಸ ಸ್ಥಾಪನೆ, ಸಂಜೆ ಕಂಕಣಧಾರಣೆ ನೆರವೇರಿತು.

ಯುಗಾದಿ ಪಾಡ್ಯ ನಿಮಿತ್ತ ಬೆಳಗ್ಗೆ 10ಕ್ಕೆ ಕಾಳಿಕಾದೇವಿಯ ಉತ್ಸವ ಮೂರ್ತಿಯನ್ನು ಪುಷ್ಪಾಲಂಕೃತ ರಥದಲ್ಲಿ ಸ್ಥಾಪಿಸಿ ದೇವಾಲಯದ ಮುಂಭಾಗದಿಂದ ದೇವಸ್ಥಾನ ರಸ್ತೆ ಮುಖಾಂತರ ಚನ್ನಮ್ಮ ವೃತ್ತದವರೆಗೆ ಸಮಾಳ, ಭಾಜಾ ಭಜಂತ್ರಿ ಗಳೊಂದಿಗೆ ರಥವನ್ನು ಎಳೆಯಲಾಯಿತು. ನಂತರ



ಕಾಳಿಕಾದೇವಿ ದೇವಸ್ಥಾನಕ್ಕೆ ತೇರು ಮರಳಿತು.

ಮಾ.20ರ ಶುಕ್ರವಾರ ಬೆಳಗ್ಗೆ ಓಕಳಿ ನಂತರ ದೇವಿಯ ಪಾಲಕಿ ಉತ್ಸವ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ದೇವಸ್ಥಾನಕ್ಕೆ ಆಗಮಿಸಿದ ನಂತರ ಮಹಾಮಂಗಳರಾತಿ ನೆರವೇರಿತು.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿಯ ಅಧ್ಯಕ್ಷ ರಾಜಾಚಾರ್, ಎನ್. ಗಂಗಾಧರಾಚಾರ್, ಬಿ.ಎಸ್. ನಾಗರಾಜಾಚಾರ್, ಕೆ.ಎನ್. ವೀರಾಚಾರ್, ಓಂಕಾರಾಚಾರ್ ಎಸ್. ಇಟಗಿ, ಬಿ.ವಿ. ಮೌನೇಶಾಚಾರ್, ಕೆ.ಒ. ಬಸವರಾಜಪ್ಪ ಹನಗವಾಡಿ, ಪಿ.ಆರ್. ಬ್ರಹ್ಮದೇವಾಚಾರ್, ಬಿ.ಎನ್. ತಿಪ್ಪೇಶಾಚಾರಿ, ವಿ. ಮಂಜುನಾಥಾಚಾರಿ, ಎಂ. ಶ್ರೀನಿವಾಸ್ ಮೂರ್ತಿ, ಕಾಳಿಕಾಂಬ ದೇವಸ್ಥಾನ ಸಮಿತಿ, ಗುರು ಮೌನೇಶ್ವರ ಸೇವಾ ಸಮಿತಿ, ತಾಲೂಕು ವಿಶ್ವಕರ್ಮ ಸಮಾಜ, ಕಾಳಿಕಾಂಬಾ ಮತ್ತು ಗಾಯತ್ರಿ ಮಹಿಳಾ ಸಮಾಜದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಕಿರುಸುದ್ದಿ

ಅಡಿಕೆ ಧಾರಣೆ

ಶಿವಮೊಗ್ಗ	ಸಾಗರ
ಸರಕು-59,009-86,340	ರಾಶಿ-34,989-51,689
ರಾಶಿ-45,199-54,009	ಚಾಲಿ-41,877-41,877
ಬೆಟ್ಟೆ-58,610-58,610	ಕೆಂಪುಗೋಟು-23,999-37,199
ಗೊರಬಲು-19,000-36,399	ಬಿಳಿಗೋಟು-29,899-30,266
	ಸಿಪ್ಪೆಗೋಟು-21,615-21,615

6 ಮಂದಿಗೆ 2 ವರ್ಷ ಕಠಿಣ ಶಿಕ್ಷೆ, 1.74 ಲಕ್ಷ ರೂ. ದಂಡ

ಭದ್ರಾವತಿ: ಸುಮಾರು 6 ವರ್ಷಗಳ ಹಿಂದಿನ ಜಾತಿ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ 6 ಮಂದಿಗೆ 2 ವರ್ಷ ಕಠಿಣ ಜೈಲು ಶಿಕ್ಷೆ ಹಾಗು 1.74 ಲಕ್ಷ ರು. ದಂಡ ವಿಧಿಸಿ ನಗರದ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ. ತಾಲೂಕಿನ ಲಕ್ಷ್ಮೀಪುರ ಗ್ರಾಮದ ಭೋವಿ ಜಾತಿಯ ಸೀನಪ್ಪ ಎಂಬುವರಿಗೆ ಸೇರಿದ ಸರ್ವೆ ನಂ.37/1 ಮತ್ತು 37/6ರ ಜಮೀನಿನಲ್ಲಿ 28 ಜುಲೈ 2020ರಂದು ಇದೆ ಗ್ರಾಮದ ಒಕ್ಕಲಿಗ ಜಾತಿಗೆ ಸೇರಿದ ಕೆಂಪಮ್ಮ, ಗೌತಮಿ, ನಾಗರಾಜ, ರಾಘವೇಂದ್ರ, ಬೇಬಿಯಮ್ಮ, ಲಕ್ಷ್ಮಮ್ಮ ಮತ್ತು ದೇವೇಂದ್ರರವರು ಏಕಾಏಕಿ ನುಗ್ಗಿ ಸೀನಪ್ಪ ಹಾಗು ಇವರ ಕುಟುಂಬಸ್ಥರು ಮತ್ತು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕೆಲಸಗಾರರಿಗೆ ಜಾತಿ ನಿಂದನೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ್ದರು ಎಂದು ದೂರು ದಾಖಲಾಗಿತ್ತು. ಈ ಸಂಬಂಧ ನ್ಯೂಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ವಿಚಾರಣೆ ನ್ಯಾಯಾಧೀಶರು 6 ಮಂದಿಗೆ ತಲಾ 2 ವರ್ಷ ಕಠಿಣ ಶಿಕ್ಷೆ ಮತ್ತು 1.74 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರಿ ಅಭಿಯೋಜಕಿ ಪಿ. ರತ್ನಮ್ಮ ವಾದ ಮಂಡಿಸಿದ್ದರು.

ಮೇ 25ರಂದು ಸಾಮೂಹಿಕ ವಿವಾಹ

ಭದ್ರಾವತಿ: ನಗರದ ವಿಶ್ವ ಹಿಂದೂ ಪರಿಷದ್, ವಿಶ್ವ ಭಾರತಿ ವಿಶ್ವಸ್ಥ ಮಂಡಳಿ ಮತ್ತು ಧರ್ಮಶ್ರೀ ಸಭಾ ಭವನ ಸಹಯೋಗದಲ್ಲಿ 42ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಮಹೋತ್ಸವ ಮೇ 25ರ ಭಾನುವಾರ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಉಚಿತ ಸಾಮೂಹಿಕ ವಿವಾಹ ಮಹೋತ್ಸವದ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ವರನಿಗೆ 21 ವರ್ಷ, ವಧುವಿಗೆ 18 ವರ್ಷ ತುಂಬಿರಬೇಕು. ಈ ಸಂಬಂಧ ವಯಸ್ಸಿನ ದೃಢೀಕರಣ ಪತ್ರ ಸಲ್ಲಿಸುವುದು ಹಾಗು ಇತ್ತೀಚಿನ 2 ಭಾವಚಿತ್ರ ಮತ್ತು ಆಧಾರ್ ಗುರುತಿನ ಚೀಟಿ ಕಡ್ಡಾಯವಾಗಿ ಕೋರಿಕೆ ಅರ್ಜಿ ಜೊತೆಯಲ್ಲಿ ಸಲ್ಲಿಸತಕ್ಕದ್ದಾಗಿದೆ. ಮೇ. 1ರೊಳಗೆ ಕೆ. ನಿರಂಜನ, ವ್ಯವಸ್ಥಾಪಕರು, ಮಂಜುನಾಥ ಸ್ವಾಮಿ ಕಲ್ಯಾಣ ಮಂಟಪ, ಬಿ.ಎಚ್ ರಸ್ತೆ, ಭದ್ರಾವತಿ ಈ ವಿಳಾಸದಲ್ಲಿ ಕೋರಿಕೆ ಅರ್ಜಿ ಸಲ್ಲಿಸಬೇಕು. 2ನೇ ಮದುವೆಗೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಗೆ ಶಿವಕುಮಾರ್ (9964237078), ರಾಮಪ್ಪ (9880779293) ಇವರನ್ನು ಸಂಪರ್ಕಿಸಬಹುದು.

ಇಂದು ಬಂಜೆತನ ಶಿಬಿರ

ಭದ್ರಾವತಿ: ನಗರದ ಉಂಬ್ಳೆಬೈಲ್ ರಸ್ತೆಯಲ್ಲಿರುವ ರೋಟರಿ ಕ್ಲಬ್ ಸಭಾಂಗಣದಲ್ಲಿ ಮಾ. 21ರಂದು ಶನಿವಾರ ಬೆಳಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ಬೆಂಗಳೂರಿನ ಮಿಲನ್ ಫರ್ಟಿಲಿಟಿ ಸಂಸ್ಥೆ ಮತ್ತು ರೋಟರಿ ಕ್ಲಬ್ ಸಹಯೋಗದಲ್ಲಿ ಉಚಿತ ಬಂಜೆತನ ಶಿಬಿರ ಮತ್ತು ತಜ್ಞ ವೈದ್ಯೆ ಡಾ.ಕಾವ್ಯ ಡಿ.ಶರ್ಮಾ ಅವರಿಂದ ಉಚಿತ ಸಮಾಲೋಚನೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ: 96202 13046 ಸಂಪರ್ಕಿಸಬಹುದಾಗಿದೆ.

ಸಾಗರದಲ್ಲಿ ಗಣಪತಿ ಜಾತ್ರೆ

ಸಾಗರ: ಶ್ರೀ ಮಹಾಗಣಪತಿ ಜಾತ್ರಾ ಮಹೋತ್ಸವ ಮಾ 25ರವರೆಗೆ ನಡೆಯಲಿದೆ. ಮಾ. 21ರಂದು ಪುಷ್ಪಮಂಜರಿ ಯಂತ್ರೋತ್ಸವ, ಮಾ. 22ರಂದು ಬೆಳಿಗ್ಗೆ 8 ರಿಂದ 8-15ರೊಳಗೆ ಸಲ್ಲುವ ಮೇಷ ಲಗ್ನದಲ್ಲಿ ಮಹಾಗಣಪತಿ ಮಹಾಸ್ಯಂದನ ರಥೋತ್ಸವ ನಡೆಯಲಿದೆ. ಮಾ. 23ರಂದು ಕುಂಕುಮೋತ್ಸವ, ಮಾ. 24ರಂದು ಗಣಪತಿ ಹವನ, ಮಾ. 25ರಂದು ಸಾರ್ವತ್ರಿಕ ಗಣಹೋಮ ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ ನಡೆಯಲಿದೆ. ಜಾತ್ರೋತ್ಸವ ಅಂಗವಾಗಿ ಪ್ರತಿದಿನ ಅನ್ನ ಸಂತರ್ಪಣೆ ಇರುತ್ತದೆ.

23ಕ್ಕೆ ನಾಟಕ ಪ್ರದರ್ಶನ

ಶಿವಮೊಗ್ಗ: ಹೊಂಗಿರಣ ರಂಗ ತಂಡದಿಂದ ಮಾ.23 ರಂದು ಸಂಜೆ 7 ಗಂಟೆಗೆ ಕುವೆಂಪು ರಂಗಮಂದಿರ ದಲ್ಲಿ ಪೆನ್ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಹೊಂಗಿರಣ ತಂಡದ ನಿರ್ದೇಶಕ ಡಾ.ಸಾಸ್ವೆಹಳ್ಳಿ ಸತೀಶ್ ತಿಳಿಸಿದರು. ಈ ನಾಟಕವನ್ನು ಶಿವಕುಮಾರ್ ಮಾವಲಿ ರಚಿಸಿದ್ದು, ಶ್ರೀಪಾದ್ ಭಟ್ ನಿರ್ದೇಶನ ಮಾಡಿದ್ದಾರೆ. ಲಕ್ಷ್ಮೀನಿವಾಸ ಧಾರಾವಾಹಿಯ ವೆಂಕಿ ಪಾತ್ರಧಾರಿ ಚಂದ್ರಶೇಖರ ಶಾಸ್ತ್ರಿ, ಕಾಮಿಡಿ ಕಿಲಾಡಿಗಳು ಖ್ಯಾತಿಯ ಚಂದ್ರಶೇಖರ ಹಿರೇಗೋಣಿಗೆರೆ ಅಭಿನಯಿಸಿದ್ದಾರೆ. ಸಂಗೀತ ನಿರ್ವಹಣೆ ಸನ್ನಿಧಿ ಟಿ.ಎನ್., ಹರಿಗೆ ಗೋಪಾಲಸ್ವಾಮಿ ಬೆಳಕು, ಮಾನಸಾ ಸಂತೋಷ್, ವರುಣ್‌ಸಿಂಗ್ ರಂಗನಿರ್ವಹಣೆ ಮಾಡಿದ್ದಾರೆ ಎಂದರು. ಗೌರವ ಪ್ರವೇಶ ದರ 100 ಮತ್ತು 50 ರೂ. ಇದ್ದು, ಸಭಾ ಕಾರ್ಯಕ್ರಮ ಇರುವುದಿಲ್ಲ ಎಂದರು. ಪತ್ರಿಕಾಗೋಷ್ಠಿಯಲ್ಲಿ ಮಾನಸಾ ಸಂತೋಷ್, ಗಿರಿಧರ್ ದಿಣ್ಣೆಮನೆ, ಮಂಜುನಾಥ್ ಇದ್ದರು.

ಯುಗಾದಿ ಅಂಗವಾಗಿ ವಕೀಲರ ಪಾದಯಾತ್ರೆ

ಸೊರಬ: ಯುಗಾದಿಹಬ್ಬದಅಂಗವಾಗಿ ತಾಲೂಕಿನ ವಕೀಲರ ಬಳಗದ ವತಿಯಿಂದ ಪಟ್ಟಣದ ಪುರ ದೈವ ಶ್ರೀ ರಂಗನಾಥ ದೇವಸ್ಥಾನದ ಮುಂಭಾಗದಿಂದ ಶಕ್ತಿ ಪೀಠ ಚಂದ್ರಗುತ್ತಿಯ ರೇಣುಕಾಂಬಾ ದೇವಿ ಸನ್ನಿಧಿವರೆಗೆ ಎರಡನೇ ವರ್ಷದ ಪಾದಯಾತ್ರೆ ನಡೆಸಲಾಯಿತು. ದೇವಿಗೆ ಪೂಜೆ ಸಲ್ಲಿಸಿ, ದರ್ಶನಾಶೀರ್ವಾದ ಪಡೆಯುವ ಜೊತೆಗೆ ಉತ್ತಮ ಮಳೆ ಬೆಳೆಯಾಗಲಿ, ರೈತಾಪಿ ಸಮೂಹ ಸಮೃದ್ಧಿಯಾಗಿರಲಿ, ನಾಡಿನಲ್ಲಿ ಸುಖ ಶಾಂತಿ ನೆಲೆಸಿರಲಿ ಎಂದು ವಕೀಲರ ಬಳಗದಿಂದ ಪ್ರಾರ್ಥಿಸಲಾಯಿತು. ಪಾದಯಾತ್ರೆಯಲ್ಲಿ ವಕೀಲರ ಮಕ್ಕಳು ಸಹ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ತಾಲೂಕು ವಕೀಲರ ಸಂಘದ ಉಪಾಧ್ಯಕ್ಷ



ಕೆ.ಎಚ್. ಚಂದ್ರಶೇಖರ್, ಮಾಜಿ ಅಧ್ಯಕ್ಷ ಸಿ.ವೈ. ಅಶೋಕ್, ಮಾಜಿ ಕಾರ್ಯದರ್ಶಿ ಎಸ್. ಅರುಣ್, ವಕೀಲರಾದ ಎಚ್. ಆನಂದ್, ಕೆ.ಪಿ. ಮಾರುತಿ, ಕೆ.ಎಸ್. ಪರಶುರಾಮ, ಎಚ್.ಇ. ಸತ್ಯನಾರಾಯಣ, ಶರತ್ ಯಂಕೇನ್, ಅಶೀಕ್ ನಾಗಪ್ಪ, ಯು.ಕೆ. ಗುರುಮೂರ್ತಿ, ಟಿ.ಜಿ. ಸೋಮಶೇಖರ, ಪ್ರಮುಖರಾದ ಹೂವಪ್ಪ ಯಂಕೇನ್, ಏಕಾಂತ ಮತ್ತಿತರರಿದ್ದರು.

24ರಂದು ಬೆಂಗಳೂರು ಚಲೋ

ಶಿವಮೊಗ್ಗ: ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ವತಿಯಿಂದ ಒಳಮೀಸಲಾತಿ ರೋಷ್ಟರ್ ಹಂಚಿಕೆ ವಿರೋಧಿಸಿ ಮಾ.24 ರಂದು ಬೆಂಗಳೂರು ಚಲೋ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಜಿಲ್ಲಾಧ್ಯಕ್ಷ ವೈ.ಎಂ. ನಾನ್ಯಾನಾಯ್ಕ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಗುತ್ತಿದ್ದು, ಹಳೆಯ ಮೀಸಲಾತಿ ನಿಯಮದಂತೆ ತ್ವರಿತ ನೇಮಕಾತಿ ಮಾಡಬೇಕು. ಒಳಮೀಸಲಾತಿ ರದ್ದುಪಡಿಸುವಂತೆ ಆಗ್ರಹಿಸಲಾಗುತ್ತದೆ ಎಂದರು.

ಒಳಮೀಸಲಾತಿಯಿಂದ ಬಂಜಾರ, ಭೋವಿ. ಕೊರಮ, ಕೊರಚ, ಛಲವಾದಿ ಚರ್ಮಗಾರ ಮೊದಲಾದ ಸೂಕ್ಷ್ಮ ಜಾತಿಗಳಿಗೆ ಅನ್ಯಾಯವಾಗಲಿದೆ ಎಂದು ಅವರು ಹೇಳಿದರು. ಒಳಮೀಸಲಾತಿ ಪರವಾದ ಯಾವುದೇ ಹೋರಾಟಗಳನ್ನು ಟೀಕೆ ಮಾಡುತ್ತಿಲ್ಲ. 101 ಜಾತಿಗಳವರು ಕೂಡ ಇದುವರೆಗೂ ಮೀಸಲಾತಿಯನ್ನು ಹಂಚಿಕೊಂಡೇ ಬಂದಿದ್ದೇವೆ. ಆದರೆ ಕೆಲವು ಪ್ರಭಾವಿಗಳು ಒಳಮೀಸಲಾತಿ ಹೋರಾಟ ನಡೆಸಿದ ಪರಿಣಾಮ ಈಗ ಸರ್ಕಾರ ಅದನ್ನು ಜಾರಿಗೆ ತರಲು ಮುಂದಾಗಿದೆ. ಇದು ಜಾರಿಯಾದರೆ ಅನ್ಯಾಯವಾಗುವ ಆತಂಕ ಇದೆ. ಹೀಗಾಗಿ ಹೋರಾಟ ಅನಿವಾರ್ಯ ಎಂದರು.

ಈ ಪ್ರತಿಭಟನೆಗೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಮೀಸಲಾತಿ ವಂಚಿತವಾಗಲಿರುವ ಸಮುದಾಯದವರು ಪಾಲ್ಗೊಳ್ಳುವಂತೆ ಮನವಿ ಮಾಡಿದ ಅವರು, ಸುಮಾರು 5 ಸಾವಿರ ಜನರು ಅಂದಿನ ಪ್ರತಿಭಟನೆಗೆ ತೆರಳು ಸಾಧ್ಯತೆ ಇದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಭೋವಿ ಸಮಾಜದ ಎಸ್. ರವಿಕುಮಾರ್, ಧೀರರಾಜ್ ಹೊನ್ನವಿಲೆ, ಜಗದೀಶ್, ಆಯನೂರು ಶಿವಾನಾಯ್ಕ, ವೀರಭದ್ರಪ್ಪ ಪೂಜಾರಿ, ಸುರೇಶ್ ಬನ್ನೂರು, ದೇವಿಕುಮಾರ್ ಇದ್ದರು.

ಹಣ ಪಡೆದು ಭೂ ದಾಖಲೆ ತಿದ್ದುಪಡಿ | ಸಾಗರ ತಹಶೀಲ್ದಾರ್ ಕಚೇರಿಯಲ್ಲಿ ಘಟನೆ

ರೆಡ್‌ಹ್ಯಾಂಡ್ ಆಗಿ ಬಲೆಗೆ

ಸಾಗರ: ಹಣದಾಸೆಗಾಗಿ ಭೂದಾಖಲೆಯನ್ನು ತಿದ್ದುಪಡಿ ಮಾಡಿ ನಕಲಿ ದಾಖಲೆ ಸೃಷ್ಟಿಸಿ ಹಣ ಪಡೆಯುತ್ತಿದ್ದ ಇಬ್ಬರು ಅಧಿಕಾರಿಗಳನ್ನು ತಹಶೀಲ್ದಾರ್ ಲಂಚದ ಹಣಸಹಿತ ರೆಡ್‌ಹ್ಯಾಂಡ್ ಆಗಿ ಹಿಡಿದು ಪೊಲೀಸರಿಗೆ ದೂರು ನೀಡಿದ ಘಟನೆ ಬುಧವಾರ ರಾತ್ರಿ ನಡೆದಿದೆ. ಸಾಗರ ತಹಶೀಲ್ದಾರ್ ಕಚೇರಿಯಲ್ಲಿ ನಕಲಿ ದಾಖಲೆ ಸೃಷ್ಟಿಸಿ ಸರ್ಕಾರಿ ಭೂಮಿ ಪರಭಾರೆ ಮಾಡುತ್ತಿದ್ದಾರೆ ಎಂದು ಕೇಳಿ ಬರುತ್ತಿದ್ದ ಆರೋಪಕ್ಕೆ ಇದು ಪುಷ್ಟಿ ನೀಡಿದೆ.

ಘಟನೆಯ ವಿವರ: ಸಾಗರ ತಾಲ್ಲೂಕಿನ ಆನಂದಪುರ ಹೋಬಳಿಯ ಚೆನ್ನಶೆಟ್ಟಿಕೊಪ್ಪ ಗ್ರಾಮದಲ್ಲಿ ಸ.ನಂ. 66ರಲ್ಲಿ ಹಾಲಮ್ಮ ಕೋಂ ಧರ್ಮಪ್ಪ ಎಂಬುವವರ ಹೆಸರಿಗೆ ಎರಡು ಎಕರೆ, ಇದೇ ಗ್ರಾಮದ ಸರ್ವೆ ನಂ. 18ರಲ್ಲಿ ಹರಟೆ ದ್ಯಾವಪ್ಪ ಬಿನ್ ಧರ್ಮಪ್ಪ ಎಂಬುವವರ ಹೆಸರಿಗೆ 5 ಎಕರೆ ದರಕಾಸ್ತು, ತಾಳಗುಪ್ಪ ಹೋಬಳಿಯ ಹಿರೇಮನೆ ಗ್ರಾಮದಲ್ಲಿ ಲಕ್ಷ್ಮಣ ಪೂಜಾರಿ ಬಿನ್ ರಾಮ ಪೂಜಾರಿ ಅವರ ಹೆಸರಿನಲ್ಲಿ ಸ.ನಂ. 120ರಲ್ಲಿ 20 ಗುಂಟೆ ನಕಲಿ ದಾಖಲೆಯನ್ನು ಸೃಷ್ಟಿಸಿದ್ದು ಬೆಳಕಿಗೆ ಬಂದಿದೆ.

ಶಿರಸ್ತೆದಾರನೇ ಪ್ರಕರಣದ ಕಿಂಗ್‌ಪಿನ್

ಯಾರದ್ದೋ ಹೆಸರಿನಲ್ಲಿರುವ ಅಸಲಿ ದಾಖಲೆಯನ್ನು ಸ್ಕ್ಯಾನಿಂಗ್ ಮಾಡಿ ಅಲ್ಲಿ ಇನ್ನೊಬ್ಬರ ಹೆಸರನ್ನು ಸೇರಿಸಿ ಇಡೀ ಆಸ್ತಿಯನ್ನೇ ಪರಭಾರೆ ಮಾಡುವ ವ್ಯವಸ್ಥಿತ ಸಂಚು ಇದಾಗಿತ್ತು. ತಹಶೀಲ್ದಾರ್ ಕಚೇರಿಯ ಭೂದಾಖಲೆ ವಿಭಾಗದ ಶಾಖಾ ಮೇಲ್ವಿಚಾರಕ ಹಾಗೂ ಶಿರಸ್ತೆದಾರ್ ರಾಮಾಂಜನೇಯ ಮತ್ತು ಭೂಮಾಪನಾ ವಿಭಾಗದ ಸಿಬ್ಬಂದಿ ಅಭಿಲಾಷ್ ಮೂಲಕ ದಾಖಲೆ ತಿದ್ದುಪಡಿ ಮಾಡಲು ಹೊಂಚು ಹಾಕಲಾಗಿತ್ತು. ದಾಖಲೆ ತಿದ್ದುಪಡಿ ಮಾಡಲು ಆರಂಭದ ಹಂತದಲ್ಲಿ 2 ಲಕ್ಷ ರೂಪಾಯಿ ಹಣದ ಮಾತುಕತೆ ನಡೆದಿತ್ತು. ಆದರೆ ಇದು ಅಡ್ವಾನ್ಸ್ ಮಾತ್ರವಾಗಿದ್ದು ಇನ್ನು ಹೆಚ್ಚಿನ ಹಣ ಡೀಲಿಂಗ್ ನಡೆದಿತ್ತು ಎಂದು ಕಚೇರಿಯ ಕೆಲವರು ಅಭಿಪ್ರಾಯಿಸುತ್ತಾರೆ. ದಾಖಲೆ ತಿದ್ದುಪಡಿ ಮಾಡುತ್ತಿರುವ ವಿಷಯ ತಹಶೀಲ್ದಾರ್ ರಶ್ಮಿ ಅವರ ಗಮನಕ್ಕೆ ಬಂದಿದ್ದು, ಬುಧವಾರ ಕಚೇರಿ ವೇಳೆ ಮುಗಿದ ನಂತರ ಕಂಪ್ಯೂಟರ್ ಎದುರು ಕುಳಿತು ದಾಖಲೆ ತಿದ್ದುಪಡಿ ಮಾಡುತ್ತಿದ್ದ ರಾಮಾಂಜನೇಯ ಹಾಗೂ ಅಭಿಲಾಷ್ ಅವರನ್ನು ನಗರ ಠಾಣೆ ಪೊಲೀಸರ ಸಹಕಾರದೊಂದಿಗೆ ರೆಡ್‌ಹ್ಯಾಂಡ್ ಅಗಿ ಹಿಡಿದಿದ್ದಾರೆ. ದಾಳಿಯಲ್ಲಿ ಲಂಚದ ರೂಪದಲ್ಲಿ ನೀಡಿದ್ದ 1.75 ಲಕ್ಷ ರೂ. ಹಣ ಹೊರಗೆ ನಿಲ್ಲಿಸಿದ್ದ ಕಾರಿನಲ್ಲಿತ್ತು. ಲಂಚದ ಹಣದ ಜೊತೆ ಕಾರನ್ನು ನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.



ಕಾನೂನುಬಾಹಿರವಾಗಿ ಸರ್ಕಾರಿ ದಾಖಲೆಗಳನ್ನು ತಿದ್ದುಪಡಿ ಮಾಡುತ್ತಿದ್ದ ಆರು ಜನರ ವಿರುದ್ಧ ದೂರು ದಾಖಲಿಸಿದೆ. ಸರ್ಕಾರಿ ಭೂಮಿಯನ್ನು ನಕಲಿ ದಾಖಲೆ ಸೃಷ್ಟಿಸುವ ಮೂಲಕ ಅತಿಕ್ರಮಿಸಲು ಪ್ರಯತ್ನಿಸುತ್ತಿರುವವರನ್ನು ಸುಮ್ಮನೆ ಬಿಡುವುದಿಲ್ಲ.
■ ರಶ್ಮಿ, ತಹಶೀಲ್ದಾರ್

ಆನಂದಪುರ ಹೋಬಳಿಯ ಚೆನ್ನಶೆಟ್ಟಿಕೊಪ್ಪ ಗ್ರಾಮ ಮತ್ತು ತಾಳಗುಪ್ಪ ಹೋಬಳಿಯ ಹಿರೇಮನೆ ಗ್ರಾಮದಲ್ಲಿ 1965 ಮತ್ತು 1978ನೇ ಇಸವಿಗೆ ಸಂಬಂಧಪಟ್ಟ ಬೇರೆಯವರ ಹೆಸರಿನಲ್ಲಿದ್ದ ಹಳೇಯ ಮಂಜೂರಾತಿ ಪತ್ರಗಳನ್ನು ಸಂಗ್ರಹಿಸಿ ಅದನ್ನು ತಹಶೀಲ್ದಾರ್ ಕಚೇರಿಯ ಕಂಪ್ಯೂಟರ್ ಮೂಲಕ ಸ್ಕ್ಯಾನ್ ಮಾಡಿ ನಕಲಿ ದಾಖಲೆ ಸೃಷ್ಟಿಸಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ ಉಂಟು ಮಾಡಲಾಗುತಿತ್ತು. ಮುಖ್ಯವಾಗಿ ಇಲ್ಲಿ ಅಸಲಿ ದಾಖಲೆಗಳ ನಡುವೆ ನಕಲಿ ದಾಖಲೆಗಳನ್ನು ಇರಿಸಿ ತಹಶೀಲ್ದಾರ್ ಅವರಿಂದ ಸಹಿ ಹಾಕಿಸಿಕೊಂಡು ಒಂದಿಬ್ಬರು ಅಧಿಕಾರಿಗಳು ಲಂಚ ಪಡೆಯುವ ತಂತ್ರ ನಡೆಸಿದ್ದು ತಹಶೀಲ್ದಾರ್ ರಶ್ಮಿ ಹಾಲೇಶ್ ಅವರ ಗಮನಕ್ಕೆ ಬಂದಿತ್ತು.

ಆರು ಜನರ ವಿರುದ್ಧ ಪ್ರಕರಣ ದಾಖಲು: ದಾಖಲೆ ತಿದ್ದುಪಡಿಗೆ ಸಂಬಂಧಿಸಿದಂತೆ ತಹಶೀಲ್ದಾರ್ ರಶ್ಮೀ ಹಾಲೇಶ್ ನೀಡಿದ ದೂರಿನ ಹಿನ್ನೆಲೆಯಲ್ಲಿ ಶಿರಸ್ತೆದಾರ್ ರಾಮಾಂಜನೇಯ, ಭೂಮಾಪನಾ ಇಲಾಖೆ ಸಿಬ್ಬಂದಿ ಅವಿನಾಶ್ ಎನ್.ಎಂ., ಷಣ್ಮುಖ, ಹರಟೆ ಧರ್ಮಪ್ಪ ಚನ್ನಶೆಟ್ಟಿಕೊಪ್ಪ, ಲಕ್ಷ್ಮಣ ಪೂಜಾರಿ ಹಿರೇಮನೆ, ಹಾಲಮ್ಮ ಚನ್ನಶೆಟ್ಟಿಕೊಪ್ಪ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

ತನಿಖೆ ವೇಳೆ ರಾಮಾಂಜನೇಯ ಮತ್ತು ಅವಿನಾಶ್ ಅಸಲಿ ಕಡತಗಳ ಜೊತೆ ನಕಲಿ ಕಡತಗಳನ್ನು ಸೇರಿಸಲು ಎರಡು ಲಕ್ಷ ರೂ. ಲಂಚ ಪಡೆದಿರುವುದಾಗಿ ಒಪ್ಪಿಕೊಂಡಿದ್ದಾರೆ ಎನ್ನಲಾಗಿದ್ದು, ಪ್ರಕರಣದಲ್ಲಿ ಕೆಲವು ಪ್ರಭಾವಿಗಳು ಸೇರಿದ್ದಾರೆ ಎನ್ನುತ್ತಿದ್ದು, ತನಿಖೆ ನಡೆಸಲಾಗುತ್ತಿದೆ. ರಾಮಾಂಜನೇಯ ಮತ್ತು ಅವಿನಾಶ್ ಅವರನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಡಾ.ಬಸವ ಮರುಳಸಿದ್ಧ ಸ್ವಾಮೀಜಿ ಹೇಳಿಕೆ

ಅಲ್ಲಮನ ವಚನ ಪ್ರೇರಣೆ



ಶಿವಮೊಗ್ಗ: ವಿಶ್ವಗುರು ಬಸವಣ್ಣನವರು ಸ್ಥಾಪಿಸಿದ, ಪ್ರಜಾಪ್ರಭುತ್ವದ ಪ್ರಥಮ ಮಾದರಿ ಎನಿಸಿದ ಅನುಭವ ಮಂಟಪದ ಪ್ರಥಮ ಅಧ್ಯಕ್ಷರಾಗಿದ್ದ ಅಲ್ಲಮಪ್ರಭುದೇವರು ಕನ್ನಡದ ಅನುಭಾವ ಪರಂಪರೆಗೆ ಹೊಸ ಮೌಲ್ಯಗಳನ್ನು ಕೊಟ್ಟವರು ಎಂದು ಬಸವಕೇಂದ್ರದ ಡಾ.ಬಸವ ಮರುಳಸಿದ್ಧ ಸ್ವಾಮೀಜಿ ಹೇಳಿದರು.

ಬಸವಪರ ಸಂಘಟನೆಗಳು ಶಿವಮೊಗ್ಗದ ಅಲ್ಲಮಪ್ರಭು ಮೈದಾನದಲ್ಲಿ ಹಮ್ಮಿಕೊಂಡಿದ್ದ ಅಲ್ಲಮಪ್ರಭುದೇವರ ಜಯಂತಿ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು.

ವಿಶ್ವಗುರು ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪ, ಶೂನ್ಯ ಸಿಂಹಾಸನದ ಪ್ರಥಮ ಅಧ್ಯಕ್ಷರಾದ ಅಲ್ಲಮ ಪ್ರಭುಗಳು, ದೇಶ ಸಂಚಾರ ಮಾಡಿ ಸಾಮಾನ್ಯನಿಂದ ಸಾಧಕನವರೆಗೂ- ಎಲ್ಲರ ಸಾಧನೆಯ ಓರೆಕೋರೆಗಳನ್ನು ತಿದ್ದಿ ಸರಿದಾರಿಗೆ ಕಳಿಸಿದ ಮಹಾನುಭಾವಿ. ಕನ್ನಡ ಸಾಹಿತ್ಯಕ್ಕೆ ಮೌಲಿಕ ಕೊಡುಗೆ ನೀಡಿದ ಅಲ್ಲಮಪ್ರಭುಗಳ ವಚನಗಳ ಮೌಲ್ಯಗಳು ನಮಗೆಲ್ಲ ಪ್ರೇರಣೆಯಾಗಿವೆ ಎಂದರು.

ಸಾನಿಧ್ಯವಹಿಸಿದ್ದ ಆನಂದಪುರಂ ಬೆಕ್ಕಿನಕಲ್ಮಠದ ಡಾ. ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿ, ಅಲ್ಲಮಪ್ರಭುದೇವರ ಬಯಲ ತತ್ವವು ಕನ್ನಡದ ಅಧ್ಯಾತ್ಮ ಪರಂಪರೆಯ ಅಪರೂಪದ ಪರಿಕಲ್ಪನೆಯಾಗಿದೆ ಎಂದರು.

ಬಯಲಾಗುವುದು ಪ್ರತಿಯೊಬ್ಬ ಮಾನವನಿಗೂ ಸಾಧ್ಯ. ತಾನು ಬದುಕಿನ ಯಾವುದೇ ಸ್ಥಿತಿಯಲ್ಲಿದ್ದರೂ ಬಯಲಿನೆಡೆಗೆ ಸಾಗುವ ಸುಲಭ ಮಾರ್ಗ ತೋರಿದ್ದು ಅಲ್ಲಮಪ್ರಭುದೇವರು. ಮುಕ್ತಾಯಕ್ಕನಿಂದ ಗೋರಕ್ಷನವರೆಗೂ ಅಲ್ಲಮಗಳ ಮುಖಾಮುಖಿಯಾದ ಪ್ರತಿಯೊಬ್ಬರೂ ಬಯಲ ಸಿದ್ಧಿ ಸಾಧಿಸಿದ್ದಾರೆ ಎಂದು ಹೇಳಿದರು.

ಶಾಸಕ ಡಾ.ಧನಂಜಯ ಸರ್ಜಿ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಚ್.ಎನ್.ಮಹಾರುದ್ರ, ಪ್ರಧಾನ ಕಾರ್ಯದರ್ಶಿ ಬಾರಂದೂರು ಪ್ರಕಾಶ್, ವೀರಶೈವ- ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ರುದ್ರಮುನಿ ಸಜ್ಜನ್ ಇನ್ನಿತರರು ಇದ್ದರು.

24ರಿಂದ ಅಂಬೇಡ್ಕರ್ ಭವನದಲ್ಲಿ ವ್ಯಾಪಾರ ಮೇಳ

ಶಿವಮೊಗ್ಗ: ಭಾರತ ಸರ್ಕಾರದ ಎಂಎಸ್‌ಎಂಇ ಸಚಿವಾಲಯದ ಎಂಎಸ್‌ಎಂಇ ಅಭಿವೃದ್ಧಿ ಮತ್ತು ಸೌಲಭ್ಯ ಕಚೇರಿ ಮತ್ತು ರಾಜ್ಯ ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆಯ ಸಹಯೋಗದಲ್ಲಿ ನಗರದ ಅಂಬೇಡ್ಕರ್ ಭವನದಲ್ಲಿ ಮಾ.24 ರಿಂದ 26 ರವರೆಗೆ ವ್ಯಾಪಾರ ಮೇಳ ಮತ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಎಂಎಸ್‌ಎಂಇ ನಿರ್ದೇಶಕ ದೇವರಾಜ್ ತಿಳಿಸಿದರು. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಂಪ್ರದಾಯಿಕ ಕುಶಲ ಕರ್ಮಿಗಳು, ಕುಶಲಕರ್ಮಿಗಳು ಹಾಗೂ ಸಣ್ಣ ಉದ್ಯಮಿಗಳನ್ನು ಉತ್ತೇಜಿಸುವ ಸಲುವಾಗಿ ಮೇಳ ಆಯೋಜನೆ ಮಾಡಲಾಗಿದೆ. ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿನ ಉದ್ಯಮಿಗಳು ಬರಲಿದ್ದಾರೆ. 50 ಮಳಿಗೆಗಳನ್ನು ಇದಕ್ಕಾಗಿ ತೆರೆದು ಉಚಿತವಾಗಿ ನೀಡಲಾಗುತ್ತದೆ ಎಂದರು. ಬಡಗಿ, ದೋಣಿ ತಯಾರಕ, ಶಸ್ತ್ರಸಜ್ಜಿತ ಕೆಲಸಗಾರ, ಕಮಾರ ಮತ್ತು ಟೂಲ್ ಕಿಟ್ ತಯಾರಕ, ಕುಂಬಾರ, ಬೀಗ ತಯಾರಕ, ಚಿನ್ನಸ ಕೆಲಸಗಾರ, ಶಿಲ್ಪಿ, ತೆಂಗಿನ ನಾರು ನೇಕಾರ, ಗೊಂಬೆ ತಯಾರಕ, ಕೌರಿಕ, ಹೂಮಾಲೆ ತಯಾರಕ, ಡೋಬಿ, ಟೈಲರ್ ಹೀಗೆ ವಿವಿಧ 18 ವೃತ್ತಿಗಳ ಸೂಕ್ಷ್ಮ ಉದ್ಯಮಿಗಳು ಬರಲಿದ್ದಾರೆ ಎಂದರು. ತರಬೇತಿ ಮೂಲಕ ಅಪ್‌ಗ್ರೇಡ್ ಮಾಡುವುದು, ಗುಣಮಟ್ಟದ ಉತ್ಪಾದನೆಯನ್ನು ಸಕ್ರಿಯಗೊಳಿಸುವುದು, ಆಧುನಿಕ ಸಾಧನಗಳನ್ನು ಒದಗಿಸುವುದು, ಬಡ್ಡಿ ಸಹಾಯ ಧನ ನೀಡುವುದರ ಜೊತೆಗೆ ಡಿಜಿಟಲ್ ವೈಹಿವಾಟಿಗೆ ಪ್ರೋತ್ಸಾಹ ನೀಡಲಾಗುತ್ತದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಕೈಗಾರಿಕಾ ಇಲಾಖೆಯ ಉಪನಿರ್ದೇಶಕ ಸುರೇಶ್ ಇದ್ದರು.

ಕಾಂತೇಶ್ ಜನ್ಮದಿನದ ಪ್ರಯುಕ್ತ ವಿವಿಧ ಕಾರ್ಯಕ್ರಮ

ಶಿವಮೊಗ್ಗ: ಜಿಪಂ ಮಾಜಿ ಸದಸ್ಯ ಕೆ.ಇ. ಕಾಂತೇಶ್ ಜನ್ಮ ದಿನಾಚರಣೆ ಅಂಗವಾಗಿ ಮಾ.24 ರಂದು ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕೆ.ಇ. ಕಾಂತೇಶ್ ಸ್ನೇಹ ಬಳಗದ ಸಂಚಾಲಕ ಇ. ವಿಶ್ವಾಸ್ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8 ಗಂಟೆಗೆ ವಿನೋಬನಗರದ ಶಿವಾಲಯದಲ್ಲಿ ಗೋಪೂಜೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತದೆ. ಬೆಕ್ಕಿನ ಕಲ್ಮಠದ ಆವರಣದಲ್ಲಿ ನಿರ್ಮಿಸಲಾಗುವ ಶ್ರೀ ಗುರು ಬಸವ ಮಹಾಸ್ವಾಮಿಗಳ ಗದ್ದುಗೆ ಶಂಕುಸ್ಥಾಪನೆ ಮಾಡಲಾಗುತ್ತದೆ. ಮೆಗ್ಗಾನ್ ಆಸ್ಪತ್ರೆ ಹಾಗೂ ಆಶಾಕಿರಣ ರಕ್ತನಿಧಿಗಳ ಸಹಯೋಗದಲ್ಲಿ ಸ್ವಯಂಪ್ರೇರಿತ ರಕ್ತ ದಾನ ಶಿಬಿರ ನಡೆಸಲಾಗುತ್ತದೆ ಎಂದರು.

ಅದೇ ದಿನ ಬೆಳಗ್ಗೆ 8.30ಕ್ಕೆ ಹೊಳೆ ಬಸ್‌ನಿಲ್ದಾಣದಲ್ಲಿ ಶ್ರಮಿಕರಿಗೆ ಅನ್ನದಾನ, ಕೋಟೆ ಯುವಕರ ಬಳಗ ಹಾಗೂ ರೆಡ್‌ಕ್ರಾಸ್ ಸಂಜೀವಿನಿ ರೆಡ್‌ಕ್ರಾಸ್ ಸಂಜೀವಿನಿ ಕೇಂದ್ರದಿಂದ ಕೋಟೆ ಬಯಲು ರಂಗಮಂದಿರದಲ್ಲಿ ಬೆಳಗ್ಗೆ 10 ಗಂಟೆಗೆ ರಕ್ತದಾನ ಶಿಬಿರ ಹಾಗೂ ಸೀಗೆಹಟ್ಟಿಯಲ್ಲಿ ಆರೋಗ್ಯ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದರು.

ಮಾ.22 ರಂದು ಸಂಜೆ ಶುಭಮಂಗಳ ಕಲ್ಯಾಣ ಮಂದಿರದಲ್ಲಿ ಯುವೋತ್ಸವ ಹಮ್ಮಿಕೊಳ್ಳಲಾಗಿದ್ದು, ಬಿಗ್ ಬಾಸ್ ವಿಜೇತ ಗಿಲ್ಲಿ ಅವರನ್ನು ಆಹ್ವಾನಿಸಲಾಗಿದೆ. ಮಾ.21 ಹಾಗೂ 22 ರಂದು ನಗರದ ಎನ್‌ಇಎಸ್ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಾವಳಿ ಆಯೋಜನೆ ಮಾಡಲಾಗಿದ್ದು, 20 ಕ್ಕೂ ಹೆಚ್ಚು ತಂಡಗಳು ಇದರಲ್ಲಿ ಪಾಲ್ಗೊಳ್ಳಲಿವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಹಾಲಿಂಗಯ್ಯಶಾಸ್ತ್ರಿ, ವೆಂಕಟೇಶ್, ಗಜೇಂದ್ರನಾಥ್ ಮಾಳೋದೆ, ಲಕ್ಷ್ಮೀ ಶಂಕರನಾಯಕ, ಕೋಟೆ ರಾಜು, ಚನ್ನಬಸಪ್ಪ, ಎಂ.ಜಿ. ಬಾಲು, ರಮೇಶ್ ಬಾಬು, ಶಿವಾಜಿ ಇದ್ದರು.



ನಮ್ಮೂರ ಬಳಗ ಶಿವಮೊಗ್ಗ ವತಿಯಿಂದ ಶುಕ್ರವಾರ ಫ್ರೀಡಂ ಪಾರ್ಕ್‌ನಲ್ಲಿ ಅಲ್ಲಮಪ್ರಭು ದೇವರ ಜಯಂತಿಯ ಅಂಗವಾಗಿ ಅಲ್ಲಮ ಪ್ರಭುಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಜಯಂತಿ ಆಚರಿಸಲಾಯಿತು. ಕೆ. ರಂಗನಾಥ, ನಾಗರಾಜ್ ಕಂಕಾರಿ, ಫಾಲಾಕ್ಷಿ, ರವಿ ಸುರೇಶ, ಹೆಚ್ ಪಿ ಗಿರೀಶ, ಕಿರಣ್, ವಿನಯ್, ರಾಜೇಶ್ ಮಂದಾರ, ಗುರುಪ್ರಸಾದ, ರಜನಿಕಾಂತ, ಆಚಾರಿ ಗೋಪಿ, ರಾಘವೇಂದ್ರ, ಎಸ್ ಶಿವು, ದಿವಾಕರ, ಕೆ ಎಲ್ ಪವನ, ಕೇಬಲ್ ಲೋಕೇಶ್, ರಾಜೀವ್ ರಾಯ್ಕರ, ಸುಬ್ರಮಣಿ, ಶರತ್ ಚಂದ್ರ, ದಿನೇಶ, ಮಂಜುನಾಥ, ಮನ್ವಿಕ್ ಜೈನ ಇದ್ದರು.

ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆ ನಿರಂತರವಾಗಿರಲಿ

ಸಾಗರ: ಊರು ಆರೋಗ್ಯವಾಗಿ ಇರಬೇಕಾದರೆ ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆ ನಿರಂತರವಾಗಿ ನಡೆಯುತ್ತಿರಬೇಕು ಎಂದು ಶಾಸಕ ಗೋಪಾಲಕೃಷ್ಣ ಬೇಳೂರು ತಿಳಿಸಿದರು.

ಇಲ್ಲಿನ ನೆಹರೂ ಮೈದಾನದಲ್ಲಿ ಗುರುವಾರ ಮಲೆನಾಡು ವಾಯುವಿಹಾರಿಗಳ ಸಂಘದ ವತಿಯಿಂದ ಯುಗಾದಿ ಹಬ್ಬದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಬೇವು ಬೆಲ್ಲ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಾ, ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ನಡೆಯಲು ಎಲ್ಲ ರೀತಿಯ ಸಹಕಾರ ನೀಡಲಾಗುತ್ತಿದೆ. ಯುಗಾದಿ ಹೊಸ ಸಂವತ್ಸರ ಪ್ರಾರಂಭಿಸುತ್ತದೆ. ಕಹಿ ದೂರವಾಗಿ ಸಿಹಿ ಬದುಕಿನಲ್ಲಿ ತುಂಬಲಿ ಎಂದು ತಿಳಿಸಿದರು.



ಗ್ಯಾಸ್ ಸಿಲೆಂಡರ್ ಕೊರತೆಯಿಂದ ಸ್ವಲ್ಪ ಸಂಕಷ್ಟವನ್ನು ಎದುರಿಸುತ್ತಿದ್ದೇವೆ. ಹಿಂದೆ ಕೊರೋನಾ ಸಂದರ್ಭದಲ್ಲಿ ಸಹ ಕೆಟ್ಟ ಸ್ಥಿತಿ ಎದುರಿಸಿದ್ದೇವೆ. ಅದೇ ಸ್ಥಿತಿ ಈಗ ಇದ್ದು ಜನರು ಆತಂಕಕ್ಕೆ ಒಳಗಾಗುವುದು ಬೇಡ. ಸಿಲೆಂಡರ್ ಪೂರೈಕೆಗೆ ಯಾವುದೇ ತೊಂದರೆ ಆಗದಂತೆ ಗಮನ ಹರಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಸಂಘದ ಅಧ್ಯಕ್ಷ ಕೆ.ವಿ.ಜಯರಾಮ್, ನೆಹರೂ ಮೈದಾನವನ್ನು ಕೇಂದ್ರೀಕರಿಸಿಕೊಂಡು ಮಲೆನಾಡು ವಾಯುವಿಹಾರಿಗಳ ಸಂಘ ಕೆಲಸ ಮಾಡುತ್ತಿದೆ. ಸಂಘದ ಎಲ್ಲ ಬೇಡಿಕೆಗಳನ್ನು ಶಾಸಕರು ಈಡೇರಿಸಿದ್ದಾರೆ. ಮುಂದಿನ ದಿನಗಳಲ್ಲಿ ಸಂಘದ ವತಿಯಿಂದ ಇನ್ನಷ್ಟು ಜನಪರ ಕೆಲಸ ಮಾಡಲಾಗುತ್ತದೆ. ವಾಯುವಿಹಾರಿಗಳು ಸಂಘಕ್ಕೆ ಸದಸ್ಯರಾಗುವ ಮೂಲಕ ಕಾರ್ಯಚಟುವಟಿಕೆ ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು.

ಕೆ.ಎಚ್.ಜ್ಞಾನೇಶ್ವರಪ್ಪ, ಮಾಜಿ ಅಧ್ಯಕ್ಷ ಶಾಂತರಾಮ್ ಆಚಾರ್, ಗೌರಿ ಶಂಕರ್, ವೀರಪ್ಪ, ನಾಗಪ್ಪ, ಸುರೇಶ್, ವಾಸು, ವಿನಾಯಕ್ ಇನ್ನಿತರರು ಹಾಜರಿದ್ದರು. ಕೆ.ವಿ.ಲಕ್ಷ್ಮಣ್ ಕಾರ್ಯಕ್ರಮ ನಿರ್ವಹಿಸಿದರು.

ಕಸಾಪದಿಂದ ದತ್ತಿ ಕಾರ್ಯಕ್ರಮದಲ್ಲಿ ಪ್ರೊ.ಪೂರ್ವಾಚಾರ್ ಅಭಿಮತ

ಇಂಜಿನಿಯರಿಂಗ್ ಶಿಕ್ಷಣಕ್ಕೆ ವಿಶ್ವಕರ್ಮರು ಪ್ರೇರಕ

ಶಿವಮೊಗ್ಗ: ರಾಜಪ್ರಭುತ್ವದ ಕಾಲದಲ್ಲಿ ಉತ್ತಮ ಕಸುಬುದಾರಿಕೆ ಹೊಂದಿದ್ದ ವಿಶ್ವಕರ್ಮರು, ಆಧುನಿಕ ಯುಗದಲ್ಲಿ ಇಂಜಿನಿಯರಿಂಗ್ ಶಿಕ್ಷಣಕ್ಕೆ ಪ್ರೇರಕರಾದರು ಎಂದು ಸಹ್ಯಾದ್ರಿ ಕಲಾ ಕಾಲೇಜು ಪ್ರಾಧ್ಯಾಪಕ ಪ್ರೊ. ಪೂರ್ವಾಚಾರ್ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಜಗದ್ಗುರು ಪಂಚಾಚಾರ್ಯ ಐ.ಟಿ.ಐ. ಕಾಲೇಜು ಸಹಯೋಗದಲ್ಲಿ ಏರ್ಪಡಿಸಿದ್ದ ದತ್ತಿ ಕಾರ್ಯಕ್ರಮದಲ್ಲಿ, ಕೀರ್ತಿಶೇಷ ಅರಕೆರೆ ಕಮಲಮ್ಮ ಮತ್ತು ಕೀರ್ತಿಶೇಷ ಅರಕೆರೆ ಬಸಪ್ಪಾಚ್ಚಾರ್ ಹೆಸರಿನಲ್ಲಿ ಡಾ. ಎಸ್. ಬಿ. ಭಾಗ್ಯಲಕ್ಷ್ಮಿ ಕೆ. ಆಚಾರ್ಯ, ಡಾ. ಎ.ಬಿ. ಕೃಷ್ಣಮೂರ್ತಿ ಆಚಾರ್ಯ ಅವರು ಸ್ಥಾಪಿಸಿದ ದತ್ತಿಯ ಆಶಯದಂತೆ ವಿಶ್ವಕರ್ಮರ ಪಂಚ ಕಸುಬುಗಳು ಮತ್ತು ಪ್ರಪಂಚಕ್ಕೆ ಅವರ ಕೊಡುಗೆ ವಿಚಾರವಾಗಿ ಮಾತನಾಡಿದರು.

ರಾಜನ ಕಿರೀಟದಿಂದ ಮೊದಲುಗೊಂಡು, ದೇವಾಲಯ, ರಥ, ಭವನಗಳ ನಿರ್ಮಾಣದಲ್ಲಿ, ಮರ, ಕಂಚು, ಹಿತ್ತಾಳೆ, ಚಿನ್ನಾಭರಣ ಎಲ್ಲವನ್ನೂ ಬಳಸಿಕೊಂಡು ಉತ್ತಮ ಕಸುಬುದಾರಿಕೆಯನ್ನು



ವಿಶ್ವಕರ್ಮರು ಹೊಂದಿದ್ದರು. ರಾಮಾಯಣ, ಮಹಾಭಾರತ ಸೇರಿದಂತೆ ಎಲ್ಲಾ ಕಾಲದಲ್ಲಿಯು, ವಿಶ್ವ ಕರ್ಮರ ವೃತ್ತಿ ಕಸುಬು ಪ್ರಸಿದ್ಧಿ ಪಡೆದಿತ್ತು ಎಂದರು.

ಶಿಲ್ಪಕಲೆ, ವಾಸ್ತು, ದೇವತಾಮೂರ್ತಿ, ವಿಗ್ರಹ ಕೆತ್ತನೆ ವಿಶ್ವಕರ್ಮರ ದೈನಿಕ ವೃತ್ತಿಯಾಗಿತ್ತು. 11,12 ನೇ ಶತಮಾನದಲ್ಲಿ ಕರ್ನಾಟಕದ ಶಿಲ್ಪ ಸೌಂದರ್ಯ ಜಗತ್ತಿನ ಗಮನ ಸೆಳೆದಿತ್ತು. ವಿಶ್ವಕರ್ಮ ಸಮುದಾಯ ಗೌರವಯುತ ಬದುಕು ನಿರ್ವಹಿಸಿದರು. ನಗರ ನಿರ್ಮಾಣ ಮಾಡುವಲ್ಲಿ ವಿಶ್ವಕರ್ಮರ ಮಾರ್ಗದರ್ಶನ ಮುಖ್ಯವಾಗಿರುತ್ತಿತ್ತು ವಿವರಿಸಿದರು.

ಜಗದ್ಗುರು ಪಂಚಾಚಾರ್ಯ ಐ.ಟಿ.ಐ ಕಾಲೇಜು ಸಂಸ್ಥಾಪಕ ವಿಘ್ನೇಶ್ವರ ನೀ ಸೊಲ್ಲಾಪುರ ಮಾತನಾಡಿ, ಕೌಶಲ್ಯದ ಜನ್ಮದಾತ ವಿಶ್ವಕರ್ಮ. ಅವರ ಹೆಸರಿನ ದತ್ತಿ ಕಾರ್ಯಕ್ರಮ ನಮ್ಮ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ ಎಂದು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾ ಅಧ್ಯಕ್ಷ ಡಿ. ಮಂಜುನಾಥ ಮಾತನಾಡಿ, ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಮಾಣ ಪತ್ರಕ್ಕಾಗಿ ಓದಿದರೆ ಸಾಲದು. ಆಧುನಿಕ ವ್ಯವಸ್ಥೆಯೊಳಗೆ ಕಸಬುಗಳು ಸಮುದಾಯದ ಸ್ವತ್ತಾಗಿ ಉಳಿಯದೆ ಕೌಶಲ್ಯ ಪಡೆದವರ ಸ್ವತ್ತಾಗುತ್ತೆ. ಅದಕ್ಕೆ ಕಲಿಕೆ ಶ್ರದ್ಧೆಯಿಂದ ಕೂಡಿರಬೇಕು. ವಯಸ್ಸಿನ ಪರಿಧಿಯಲ್ಲಿ ಶಿಸ್ತು ಬದ್ಧ ಬದುಕು ಮುಖ್ಯ. ಗಾಂಜಾ, ಅಫೀಮಿನ ಸಹವಾಸ, ಮೊಬೈಲ್ ಸಹವಾಸದಿಂದ ದೂರವಿರಿ ಎಂದರು.

ಜಯಲಕ್ಷ್ಮಿ ಈಶ್ವರಪ್ಪ ಉದ್ಘಾಟಿಸಿದರು. ವೇದಿಕೆಯಲ್ಲಿ ಅನ್ನಪೂರ್ಣ ಕಾಳಾಚಾರ್, ನಿರಂಜನಮೂರ್ತಿ, ರೂಪ ಚಂದ್ರಶೇಖರ, ಶ್ರೀನಿವಾಸ ಮೂರ್ತಿ, ಡಿ.ಗಣೇಶ್ ಉಪಸ್ಥಿತರಿದ್ದರು. ಉಪನ್ಯಾಸಕರಾದ ಚೇತನ ಹಿರೇಮಠ ಸ್ವಾಗತಿಸಿ, ಪರಮೇಶ್ವರ ನಿರೂಪಿಸಿದರು.

ತ್ರಿಣಿವೆಯಲ್ಲಿ ಯುಗಾದಿ ಸಂಭ್ರಮಾಚರಣೆ ಹಾಗೂ ಪಂಚಾಗ ಶ್ರವಣ

ಮನುಷ್ಯ ಸಂಸ್ಕಾರ, ಸಂಸ್ಕೃತಿ ಬೆಳೆಸಿಕೊಳ್ಳುವುದು ಮುಖ್ಯ

ಹೊಸನಗರ: ಸಂಸ್ಕೃತಿ ಸಂಸ್ಕಾರ ಕಲಿಸಿದರೆ, ಸಂಸ್ಕಾರ ಮನುಷ್ಯನ ಸಾಮಾಜಿಕ ಸ್ಥಿತಿಯನ್ನೇ ಬದಲಿಸುತ್ತದೆ. ಭಾರತ ಒಂದು ಸಾಂಸ್ಕೃತಿಕ ದೇಶ. ಆ ಕಾರಣಕ್ಕೆ ಎಂಥಾ ಪರಿಸ್ಥಿತಿಯಲ್ಲೂ ತನ್ನ ತನವನ್ನು ಸಾವಿರಾರು ವರ್ಷಗಳಿಂದ ಉಳಿಸಿಕೊಂಡು ಬಂದಿದೆ ಎಂದು ತಾಲೂಕು ವಿದ್ಯುತ್ ಗುತ್ತಿಗೆದಾರರ ಸಂಘದ ಮಾಜಿ ಅಧ್ಯಕ್ಷ ನಾರಾಯಣಮೂರ್ತಿ ಸುತ್ತಿನಬೀಸು ತಿಳಿಸಿದರು.

ಯುಗಾದಿ ಹಬ್ಬದ ಪ್ರಯುಕ್ತ ತಾಲ್ಲೂಕಿನ ತ್ರಿಣಿವೆ ಗ್ರಾಮದ ಕಲಾನಾಥೇಶ್ವರ ದೇವಸ್ಥಾನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ - ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ ಯುಗಾದಿ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯ ಮತ್ತು ಸಂಸ್ಕೃತಿ ಕುರಿತು ಪ್ರತಿಯೊಬ್ಬರಲ್ಲೂ ಕಳಕಳಿಯ ಅವಶ್ಯಕತೆ ಇದೆ ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗಣೇಶಮೂರ್ತಿ ನಾಗರಕೊಡಿಗೆ ಮಾತನಾಡಿ, ಪ್ರತಿ ಸಾಂಸ್ಕೃತಿಕ ಕಾರ್ಯಕ್ರಮವು ಒಂದು ಹೊಸ ಪ್ರತಿಭೆಯನ್ನು ಗುರುತಿಸುವಲ್ಲಿ ಫಲಕಾರಿಯಾಗಿದೆ. ಮನುಷ್ಯನ ಖಿನ್ನತೆಯನ್ನು ದೂರ ಮಾಡಲು ಸಾಹಿತ್ಯ ಅತ್ಯವಶ್ಯ ಸಿದ್ದೌಷಧವಾಗಿದ್ದು, ಒತ್ತಡದ ಬದುಕನ್ನು ನಿರ್ವಹಿಸುತ್ತಿರುವ ಈ ಕಾಲಘಟ್ಟದಲ್ಲಿ ಪ್ರತಿಯೊಬ್ಬರೂ ತಮ್ಮ ಕರ್ತವ್ಯದ ನಡುವೆ ಒಂದಷ್ಟು ಸಾಹಿತ್ಯ, ಸಂಗೀತ, ಉಪನ್ಯಾಸ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಮನಸ್ಸನ್ನು ಹದಗೊಳಿಸಿಕೊಳ್ಳಬೇಕು. ತಪ್ಪಿದಲ್ಲಿ, ಮಾನವ ಹಲವು ಖಾಯಿಲೆಗಳಿಗೆ ತುತ್ತಾಗಿ ಆತನ ಬದುಕು ನರಕ ಸದೃಶ ಆಗುವಲ್ಲಿ ಸಂದೇಹವಿಲ್ಲ, ಅಲ್ಲದೆ, ಒಳ್ಳೆಯ ಪುಸ್ತಕಗಳ ಓದು, ಸಾರ್ವಜನಿಕ



ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ, ಇವೆಲ್ಲವು ಮನುಷ್ಯನನ್ನು ಪ್ರಬುದ್ಧಗೊಳಿಸುತ್ತವೆ. ಬದುಕನ್ನು ಎದುರಿಸಲು ಮತ್ತು ಉತ್ತಮ ಸಾಧನೆ ಸಾಧಿಸಲು, ಎಂತಹ ಗಂಭೀರ ಸಂದರ್ಭವನ್ನು ನಿಭಾಯಿಸುವ ಶಕ್ತಿ ತುಂಬುತ್ತದೆ ಎಂದರು.

ಮಂಜುನಾಥ ಸುತ್ತಿನ ಬಿಸು ತಂಡದ ಕಿರಿಯರಿಂದ ತಾಳಮದ್ದಲೆ ಯಕ್ಷಗಾನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಕಲಾನಾಥೇಶ್ವರ ದೇವಸ್ಥಾನದ ಸಂಸ್ಥಾಪಕ ಸುಬ್ಬಭಟ್ಟು, ರಮಾಕಾಂತಿ, ಗಾಯತ್ರಿ, ಶೋಭ, ಲಲಿತ, ಸತ್ಯನಾರಾಯಣ ಆಚಾರ್, ಗೀತಾ, ಗಿರೀಶ, ಚಂದ್ರಶೇಖರ, ಗುಂಡಣ್ಣ, ಗೀತಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ದಾಖಲಾತಿ ಆಂದೋಲನ ಯಶಸ್ಸಿಗೆ ಸಚಿವರ ಸೂಚನೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಆಂದೋಲನವನ್ನು ಯಶಸ್ವಿಯಾಗಿ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಪತ್ರ ಬರೆದು ಮನವಿ ಮಾಡಿದ್ದಾರೆ.



ಡಿಸಿ, ಜಿಪಂ ಸಿಇಒಗಳಿಗೆ ಮಧು ಬಂಗಾರಪ್ಪ ಪತ್ರ

ಸರ್ಕಾರಿ ಶಾಲೆಗಳನ್ನು ಬಲಪಡಿಸಲು ಸರ್ಕಾರವು ಮಹತ್ವದ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ಪ್ರಮುಖವಾಗಿ ಮೂಲ ಸೌಕರ್ಯ, ಶಿಕ್ಷಕರ ನೇಮಕಾತಿ, ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ, ನಮ್ಮ ಶಾಲೆ ನಮ್ಮ ಜವಾಬ್ದಾರಿ, ಪಾಲಕರ ಸಭೆ ಸೇರಿದಂತೆ ಇನ್ನಿತರ ಕಾರ್ಯಕ್ರಮಜಾರಿಹಾಗೂಸೌಲಭ್ಯ ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಮಗುವು ಶಿಕ್ಷಣದಿಂದ ವಂಚಿತವಾಗದಂತೆ ಜಿಲ್ಲೆಯಾದ್ಯಂತ ವ್ಯವಸ್ಥಿತವಾಗಿ ದಾಖಲಾತಿ ಆಂದೋಲನ ಕೈಗೊಳ್ಳುವಂತೆ ಸಚಿವರು ಸೂಚಿಸಿದ್ದಾರೆ. ಎಸ್‌ಡಿಎಂಸಿ ಸದಸ್ಯರು, ಶಿಕ್ಷಕರು ಮತ್ತು ಹಳೆಯ ವಿದ್ಯಾರ್ಥಿಗಳ ಸಹಕಾರದೊಂದಿಗೆ ಮನೆ ಮನೆಗೆ ಭೇಟಿ ನೀಡಿ, ದಾಖಲಾತಿಗೆ ಮನವೊಲಿಸಬೇಕು, ಹಳೆಯ ವಿದ್ಯಾರ್ಥಿಗಳ ವಾಟ್ಸಾಪ್ ಗ್ರೂಪ್ಗಳ ಮೂಲಕ ಶಾಲಾಬಿವೃದ್ಧಿ ಮತ್ತು ದಾಖಲಾತಿ ಹೆಚ್ಚಿಸುವಲ್ಲಿ ಅವರ ನೆರವು ಪಡೆಯಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ದಶಾವತಾರಿ, ಯಕ್ಷಗುರು ಗೋವಿಂದ ಭಟ್ ಇನ್ನಿಲ್ಲ

ಪುಟ ೧➡ ತೆಂಕುತಿಟ್ಟು ಯಕ್ಷಗಾನ ಇದುವರೆಗೆ ಕಂಡ ಸರ್ವಶ್ರೇಷ್ಠ ಕಲಾವಿದ. ತೆಂಕು, ಬಡಗು ಎರಡೂ ತಿಟ್ಟುಗಳಲ್ಲಿ ಯಾವುದೇ ಪಾತ್ರವನ್ನಾದರೂ ಲೀಲಾಜಾಲವಾಗಿ ಮಾಡಬಲ್ಲವರಾಗಿದ್ದರು. ಅನಿವಾರ್ಯ ಸ್ಥಿತಿಯಲ್ಲಿ ಭಾಗವತ, ಚೆಂಡೆಗಾರ, ಮದ್ದಳೆಗಾರನಾಗಿಯೂ ಹಿಮ್ಮೇಳದಲ್ಲಿ ಕೆಲಸ ನಿಭಾಯಿಸಿದ್ದರು. ಮೇಳದ ಮ್ಯಾನೇಜರ್ ಇಲ್ಲದ ಕಾಲದಲ್ಲಿ ಮ್ಯಾನೇಜರ್ ಆಗಿಯೂ ಕಾರ್ಯವಹಿಸಿದ್ದರು. ಅವರೊಬ್ಬ ಸರ್ವಾಂಗೀಣ ಪರಿಪೂರ್ಣ ಕಲಾವಿದ. ನಾಯಕ, ಪ್ರತಿನಾಯಕ, ರಕ್ಕಸ, ರಕ್ಕಸಿ, ಹಾಸ್ಯ, ಮಂತ್ರಿ, ಪುಂಡುವೇಷ ಹೀಗೆ ಎಲ್ಲ ವೇಷಗಳನ್ನು ಲೀಲಾಜಾಲವಾಗಿ ನಿಭಾಯಿಸಿದ್ದ ಯಕ್ಷರಂಗದ ಸವ್ಯಸಾಚಿ.



1951ರಲ್ಲಿ ಯಕ್ಷಗಾನ ಮೇಳಕ್ಕೆ ಸೇರ್ಪಡೆಗೊಂಡು ಸುಮಾರು 70 ವರ್ಷಗಳ ಕಾಲ ಧರ್ಮಸ್ಥಳ, ಮೂಲ್ಕಿ, ಕೂಡ್ಲು, ಸುರತ್ಕಲ್ (ಕೆಳಗಿನ ಮಾರಿಗುಡಿ) ಇರಾ ಸೋಮನಾಥೇಶ್ವರ ಮೇಳಗಳಲ್ಲಿ ತಿರುಗಾಟ ನಡೆಸಿದ್ದಾರೆ. ಕೌರವ, ರಕ್ತಬೀಜ, ಇಂದ್ರಜಿತು, ಮಾಗಧ, ಕರ್ಣ, ಅತಿಕಾಯ ನರಕಾಸುರ, ತಾಮ್ರಾಕ್ಷ , ಹಿರಣ್ಯಕಶಿಪು, ದೇವೇಂದ್ರ, ಅರ್ಜುನ , ಹನುಮಂತ, ಭೀಷ್ಮ , ಬಾಹುಬಲಿ, ವಿಶ್ವಾಮಿತ್ರ ಅವರಿಗೆ ಹೆಸರು ತಂದು ಕೊಟ್ಟ ಪಾತ್ರಗಳಾಗಿವೆ.

ಅಪೂರ್ವ ವಾಗ್‌ವೈಖರಿ, ಛಂದೋಬದ್ಧವಾದ ಮಾತಿನ ಜತೆಗೆ ನೃತ್ಯದಲ್ಲೂ ಪ್ರಾವೀಣ್ಯ ಪಡೆದಿದ್ದರು. ಅವರಿಗೆ 2008ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2016ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ ಪುರಸ್ಕಾರ, ಕರ್ನಾಟಕ ಜಾನಪದ ಅಕಾಡೆಮಿ ಸಾಧನಾ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಗೌರವ ಸಮ್ಮಾನಗಳು ದೊರೆತಿವೆ. ಗೋವಿಂದ ಭಟ್ಟರು ಜನಿಸಿದ್ದು 1940ರ ಮಾರ್ಚ್ 22ರಂದು. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ವಿಟ್ಲದ ಬಳಿಯ ಕೋಡಪದವು ಕುಕ್ಕೆಮನೆಯಲ್ಲಿ, ಅವರದು ಕಡು ಬಡತನದ ಕುಟುಂಬವಾಗಿತ್ತು. ಲಕ್ಷ್ಮೀ ಅಮ್ಮ ಮತ್ತು ಕಿನಿಲ ಶಂಕರನಾರಾಯಣ ಭಟ್ಟರ ಐವರು ಮಕ್ಕಳಲ್ಲಿ ಗೋವಿಂದ ಭಟ್ಟರು ಮೂರನೆಯವರು. ಗೋವಿಂದ ಭಟ್ಟರ ಬಾಲ್ಯದ ಬದುಕು ವಸ್ತುಶಃ ಕಣ್ಣೀರ ಕತೆಯಾಗಿತ್ತು.

ಕುಣಿತ ಆವಿಷ್ಕಾರ: ಏಕತಾಳಕ್ಕೆ ದಾಖಲೆಯ 24 ಕುಣಿತಗಳನ್ನು ಆವಿಷ್ಕರಿಸಿದ್ದಾರೆ. 7ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣ ಪಡೆದಿರುವ ಗೋವಿಂದ ಭಟ್ಟರು ಬಳಿಕ ಯಕ್ಷಗಾನದತ್ತ ಒಲವು ಬೆಳೆಸಿಕೊಂಡರು. ಕುರಿಯ ವಿಠಲ ಶಾಸ್ತ್ರಿ, ಪರಮಶಿವನ್, ಮಾಧವ ಮೆನನ್, ರಾಜನ್ ಅಯ್ಯರ್ ಅವರಲ್ಲಿ ಯಕ್ಷಗಾನ ನೃತ್ಯ ಅಭ್ಯಸಿಸಿದರು. ಗೋವಿಂದ ಭಟ್ಟರಿಗೆ ಮೂವರು ಮಕ್ಕಳು, ಮೂವರು ಸೊಸೆಯಂದಿರು ಮತ್ತು ಮೂವರು ಮೊಮ್ಮಕ್ಕಳಿದ್ದಾರೆ. ಮಣಿ ಮೇಖಲೆ, ಕನಕ ರೇಖೆ, ಕಾವೇರಿ ಮಹಾತ್ಮೆ, ಮಯೂರವರ್ ವಜ್ರಗಳು ರಾಜಕೀಲರ ವಿಲಾಸ, ಮಹಾವೀರ ಸಾಮ್ರಾಟ ಅಶೋಕ, ನಹುಷೇಂದ್ರ ಎಂಬ ಏಳು ಯಕ್ಷ ಪ್ರಸಂಗಗಳನ್ನು ಬರೆದಿದ್ದಾರೆ. ಜಪಾನ್, ಅಬುದಾಬಿ, ಬಹ್ರೈನ್, ದುಬೈಗಳಲ್ಲಿ ಯಕ್ಷಗಾನ ಪ್ರದರ್ಶಿಸಿದ್ದಾರೆ. ದಿಲ್ಲಿಯಲ್ಲಿ ರಾಷ್ಟ್ರಪತಿ ಎದುರು ಯಕ್ಷಗಾನ ಪ್ರದರ್ಶಿಸಿದ್ದರು. ಡಾ.ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನ ವತಿಯಿಂದ ಗೋವಿಂದ ಭಟ್ಟರ ಜೀವನ ಚರಿತ್ರೆ, ಯಕ್ಷೋಪಾಸನೆ ಮತ್ತು ಅಭಿನಂದನಾ ಗ್ರಂಥ ಸವ್ಯಸಾಚಿ ಪ್ರಕಟಿಸಲಾಗಿದೆ.

ಕಾರಂತರೂ ಅಚ್ಚರಿಪಟ್ಟಿದ್ದರು

1985ರಲ್ಲಿ ಉಡುಪಿಯಲ್ಲಿ ಡಾ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನಡೆದ ಯಕ್ಷಗಾನ ಪ್ರಾತ್ಯಕ್ಷಿಕೆಯಲ್ಲಿ ಗೋವಿಂದ ಭಟ್ಟರು ಮತ್ತು ವಿಶ್ವೇಶ್ವರ ಭಟ್ಟರು ತೆಂಕುತಿಟ್ಟಿನ ಆವಿಷ್ಕಾರಕ ನೃತ್ಯ ವೈವಿಧ್ಯವನ್ನು ಪ್ರದರ್ಶಿಸಿದ್ದರು. ಶಿವರಾಮ ಕಾರಂತರು ತೆಂಕುತಿಟ್ಟಿನಲ್ಲಿ ಇಷ್ಟೊಂದು ನರ್ತನ ವೈವಿಧ್ಯ ಇದೆಯೇ ಎಂದು ಅಚ್ಚರಿ ಪಟ್ಟು ಮೆಚ್ಚುಗೆ ವ್ಯಕ್ತ ಪಡಿಸಿದ್ದರು.

ಡಿಜಿಪಿ ರಾಮಚಂದ್ರರಾವ್ ವಿಡಿಯೋ ನಕಲಿಯಲ್ಲ

ಬೆಂಗಳೂರು: ಸಮವಸ್ತ್ರದಲ್ಲಿಯೇ ಕಚೇರಿಯಲ್ಲಿ ಮಹಿಳೆಯರೊಂದಿಗೆ ಅನುಚಿತವಾಗಿ ವರ್ತಿಸಿ ವಿವಾದಕ್ಕೀಡಾಗಿದ್ದ ಅಮಾನತುಗೊಂಡಿರುವ ಡಿಜಿಪಿ ಕೆ.ರಾಮಚಂದ್ರ ರಾವ್ ಅವರಿಗೆ ಸಂಕಷ್ಟ ಎದುರಾಗಿದೆ. ವೈರಲ್ ಆಗಿದ್ದ ವಿಡಿಯೋಗಳು ಸಂಪೂರ್ಣ ಅಸಲಿ ಎಂದು ವಿಧಿ ವಿಜ್ಞಾನ ಪ್ರಯೋಗಾಲಯ ದೃಢಪಡಿಸಿದ್ದು, ಪ್ರಕರಣಕ್ಕೆ ಮಹತ್ವದ ತಿರುವು ಸಿಕ್ಕಿದೆ. ಎಡಿಜಿಪಿ ಆರ್. ಹಿತೇಂದ್ರ ನೇತೃತ್ವದ ನಾಲ್ವರು ಐಪಿಎಸ್ ಅಧಿಕಾರಿಗಳ ತನಿಖಾ ತಂಡ 100 ಪುಟಗಳ ವರದಿ ಸಲ್ಲಿಸಿದೆ.

ಈ ದೃಶ್ಯಗಳು 2016–17ರಲ್ಲಿ ರಾಮಚಂದ್ರ ರಾವ್ ಅವರು ಬೆಳಗಾವಿ ವಲಯದ ಐಜಿಪಿ ಆಗಿದ್ದ ಅವಧಿಯಲ್ಲಿ ಚಿತ್ರೀಕರಿಸಲ್ಪಟ್ಟಿವೆ. ಈ ಪೈಕಿ ಒಬ್ಬ ಮಹಿಳೆಯೇ ತನ್ನ ಮೊಬೈಲ್‌ನಲ್ಲಿ ಈ ದೃಶ್ಯಗಳನ್ನು ಉದ್ದೇಶಪೂರ್ವಕವಾಗಿ ಸೆರೆಹಿಡಿದಿದ್ದರು ಎಂಬ ಅಂಶವೂ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಈ ಮಧ್ಯೆ ಸಿಬ್ಬಂದಿ, ಆಡಳಿತ ಸುಧಾರಣೆ ಇಲಾಖೆ ರಾಮಚಂದ್ರ ರಾವ್ ಅವರಿಗೆ ನೋಟಿಸ್ ಜಾರಿ ಮಾಡಿದ್ದು, ಇಲಾಖಾ ತನಿಖೆ ಆರಂಭಿಸಿದೆ. ಮೇ31ರಂದು ರಾವ್ ನಿವೃತ್ತಿಯಾಗಲಿದ್ದರೂ, ಈ ಗಂಭೀರ ಪ್ರಕರಣದ ಹಿನ್ನೆಲೆಯಲ್ಲಿ ಅವರ ಪಿಂಚಣಿ ಮತ್ತು ಇತರೆ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯುವ ಸಾಧ್ಯತೆ ಹೆಚ್ಚಾಗಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ದೇವೇಗೌಡರ ಡೇಟಿಂಗ್ ಆದುದು ನನ್ನೊಂದಿಗೆ, ಆದರೆ ಅವರು ಮದುವೆಯಾದುದು ಮೋದಿಯೊಂದಿಗೆ
– ಖರ್ಗೆಯವರ ಹಾಸ್ಯ
– ಡೇಟಿಂಗ್ ಅಂದರೆ ಚೀಟಿಂಗ್ ಅಂತ ಈಗಲಾದರೂ ಗೊತ್ತಾಯಿತಾ?

ದಿನ ಭವಿಷ್ಯ

ಮೇಷ ನಿಮಗೆ ಒದಗಿ ಬರುವ ಅವಕಾಶ ಚೆನ್ನಾಗಿ ಬಳಸಿಕೊಳ್ಳಿ. ದೀರ್ಘಾವಧಿ ಯೋಜನೆ ಪೂರ್ಣ ಆಗಲಿದೆ. ನಿಮ್ಮ ನಿರ್ಧಾರಕ್ಕೆ ಸಂಗಾತಿ ಬೆಂಬಲ.

ವೃಷಭ ಕಠಿಣ ಪರಿಶ್ರಮದ ಫಲ ಸಿಗಲಿದೆ. ಉದ್ಯೋಗ ಹುಡುಕುವವರಿಗೆ ಶುಭಸುದ್ದಿ. ಕೌಟುಂಬಿಕ ಉದ್ವಿಗ್ನತೆ ನಿವಾರಣೆ. ಹೂಡಿಕೆಯಿಂದ ಲಾಭ.

ಮಿಥುನ ನಿಮ್ಮ ನಡೆನುಡಿ ಎಲ್ಲರ ಗಮನ ಸೆಳೆಯಲಿದೆ. ವೃತ್ತಿಯಲ್ಲಿ ಸಫಲತೆ. ಪ್ರೀತಿಯ ವಿಷಯದಲ್ಲಿ ನಿರಾಶೆ ಉಂಟಾದೀತು. ದೇಹಾಲಸ್ಯ ಸಂಭವ.

ಕಟಕ ಆಪ್ತರ ಜತೆ ಭಿನ್ನಾಭಿಪ್ರಾಯ ಸಂಭವ. ಎದುರಾಡಬೇಡಿ. ಸಹನೆ ಕಾಯ್ದುಕೊಳ್ಳಿ. ಹಣದ ಹರಿವಿಗೆ ತಡೆ ಒದಗೀತು. ಖರ್ಚು ಕಡಿಮೆ ಮಾಡಿ.

ಸಿಂಹ ತೃಪ್ತಿಕರ ಬೆಳವಣಿಗೆ. ಸಂಘಟಿತ ಕಾರ್ಯದಲ್ಲಿ ಸಫಲತೆ. ಕೊಟ್ಟ ಹಣ ಮರಳಿ ಸಿಗಲಿದೆ. ಪ್ರೀತಿಪಾತ್ರರ ಜತೆ ಕಾಲಕ್ಷೇಪ.

ಕನ್ಯಾ ನಿಮ್ಮಿಷ್ಟದವರ ಪ್ರೀತಿ ಗಳಿಸುವ ಯತ್ನ ಸಫಲ. ಹಾಗೆಂದು ನಿಮ್ಮ ಗುರಿ ಮರೆಯಬೇಡಿ. ಆತ್ತವೂ ಗಮನ ಕೊಡಿ. ಬಂಧುಗಳ ಕಿರಿಕಿರಿ ಎದುರಿಸುವಿರಿ.

ತುಲಾ ನಡೆನುಡಿಯಿಂದ ಎಲ್ಲರ ಆಕರ್ಷಣೆಯ ಕೇಂದ್ರವಾಗುವಿರಿ. ಖಾಸಗಿ ಮತ್ತು ವೃತ್ತಿ ಬದುಕು ತೃಪ್ತಿಕರ. ಅಜೀರ್ಣದ ಸಮಸ್ಯೆ ಹೊಟ್ಟೆ ಕೆಡಿಸೀತು.

ವೃಶ್ಚಿಕ ಅನಗತ್ಯ ವಸ್ತು ಖರೀದಿಯಿಂದ ಧನವ್ಯಯ. ಬಿಕ್ಕಟ್ಟಿಗೆ ಸಂಬಂಧಿಸಿ ಯುಕ್ತ ಸಲಹೆ ಬಂದರೆ ಸ್ವೀಕರಿಸಿ. ಹಠ ಸ್ವಭಾವ ತೋರದಿರಿ.

ಧನು ಅಧಿಕ ಕೆಲಸದಿಂದ ಆರೋಗ್ಯ ಕೆಡಬಹುದು. ಆದಾಯದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪೂರಕ ಬೆಳವಣಿಗೆ. ನಿಮ್ಮ ಮಾತಿಗೆ ಬೆಲೆ ಸಿಗಲಿದೆ.

ಮಕರ ಕೆಲಸದಲ್ಲಿ ಹೆಚ್ಚು ಪರಿಶ್ರಮ ಬೇಕಾಗುವುದು. ಹಣ ಹೂಡಿಕೆಯಿಂದ ಲಾಭ ಸಿಗಲಿದೆ. ಕೇಡು ಬಯಸುವವರ ಕುರಿತಂತೆ ಒಂದು ಕಣ್ಣಿಡಿ.

ಕುಂಭ ಎಲ್ಲರ ಜತೆಗಿನ ಸಂಬಂಧ ಚೆನ್ನಾಗಿಡಿ. ಕೆಡುಕು ಮಾತು ಬಿಡಿ. ಸಂಗಾತಿ ಜತೆಗೆ ಸಾಮರಸ್ಯ ಕಾಯ್ದುಕೊಳ್ಳಿ. ಮಕ್ಕಳ ಸಾಧನೆಯಿಂದ ತೃಪ್ತಿ.

ಮೀನ ನಿಮ್ಮ ಸಿಡುಕುತನ ಸಂಬಂಧ ಹಾಳು ಮಾಡೀತು. ಕೆಲವರು ನಿಮ್ಮ ಒಳ್ಳೆತನ ದುರುಪಯೋಗ ಮಾಡುವರು. ಖರೀದಿ ಉತ್ಸಾಹ, ಧನವ್ಯಯ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 7,0,4,1

ಹೆಣ್ಣೆಂದು ತಂದೆಯಿಂದಲೇ ಹಸುಗೂಸಿನ ಹತ್ಯೆ

ಬೆಳಗಾವಿ: ಹೆಣ್ಣುಮಗು ಎನ್ನುವ ಕಾರಣಕ್ಕೆ 15 ದಿನದ ಹಿಂದೆ ಜನಿಸಿದ್ದ ಹಸುಗೂಸಿಗೆ ವಿಷವುಣಿಸಿ ಕೊಲೆ ಮಾಡಿದ್ದ ತಂದೆಯನ್ನು ಇದೀಗ ಪೊಲೀಸರು ಬಂಧಿಸಿದ್ದಾರೆ. ಭೀಮರಾಯ ಬಂಧಿತ ಆರೋಪಿ. ತಾಲೂಕಿನ ಉಕ್ಕಡ ಗ್ರಾಮದಲ್ಲಿ ಕಳೆದ 15 ದಿನಗಳ ಹಿಂದಷ್ಟೇ ಜನಿಸಿದ್ದ ಹಸುಗೂಸು ಏಕಾಏಕಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆ ಕೈಗೊಂಡಾಗ ಪ್ರಕರಣಕ್ಕೆ ತಿರುವು ಸಿಕ್ಕಿದೆ. ಹೆತ್ತ ತಂದೆಯೇ ಹೆಣ್ಣುಮಗು ಎಂಬ ಕಾರಣಕ್ಕೆ ವಿಷವುಣಿಸಿ ಕೊಲೆ ಮಾಡಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ. ಮಗುವಿನ ಸಾವಿಗೆ ತಂದೆಯೇ ಕಾರಣ ಎಂದು ಕುಟುಂಬಸ್ಥರೇ ಆರೋಪ ಮಾಡಿದ್ದರು. ಕೂಲಿ ಕೆಲಸ ಮಾಡಿಕೊಂಡಿದ್ದ ಭೀಮರಾಯಗೆ ಗಂಡು ಮಕ್ಕಳೆಂದರೆ ಹುಚ್ಚು, ಆದರೆ 15 ದಿನದ ಹಿಂದೆ ಹೆಣ್ಣು ಮಗು ಆಗಿದ್ದಕ್ಕೆ ನೊಂದುಕೊಂಡಿದ್ದರು. ಪತ್ನಿ ತವರು ಮನೆಗೆ ಬಂದಿದ್ದ ಭೀಮರಾಯ ಮಗು ನೋಡಿ ವಾಪಸ್ ಹೋಗಿದ್ದರು. ಅವರು ಅತ್ತ ಹೋಗ್ತಿದ್ದಂತೆ ಮಗು ಅಸ್ವಸ್ಥಗೊಂಡಿತ್ತು. ಕೂಡಲೇ ಬೆಳಗಾವಿ ಬಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಅಷ್ಟರಲ್ಲಿ ಮಗು ಮೃತಪಟ್ಟಿತ್ತು. ಹತ್ತಿ ಬೆಳೆಗೆ ಸಿಂಪಡಣೆ ಮಾಡುವ ಔಷಧಿಯನ್ನು ಮಗುವಿಗೆ ಉಣಿಸಲಾಗಿದೆ ಎಂಬ ಅನುಮಾನ ವ್ಯಕ್ತವಾಗಿತ್ತು. ಮಗುವನ್ನ ಬಿಮ್ಸ್ ಆಸ್ಪತ್ರೆ ಶವಾಗಾರಕ್ಕೆ ಶಿಫ್ಟ್ ಮಾಡಿ, ಮರಣೋತ್ತರ ಪರೀಕ್ಷೆ ಬಳಿಕವೇ ಮಗುವಿನ ಸಾವಿನ ನಿಖರ ಕಾರಣ ಬಹಿರಂಗವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದರು. ಸ್ಥಳಕ್ಕೆ ಡಿಸಿಪಿ ನಾರಾಯಣ್ ಭರಮನಿ, ಬೆಳಗಾವಿ ಗ್ರಾಮೀಣ ಎಸಿಪಿ ಹಾಗೂ ಕಾಕತಿ ಸಿಪಿಐ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಆರೋಪಿ ಭೀಮರಾಯನನ್ನು ಕಾಕತಿ ಪೊಲೀಸರು ಬಂಧಿಸಿದ್ದಾರೆ.

ವರಿಷ್ಠರಿಂದಲೇ ಅಭ್ಯರ್ಥಿ ಅಂತಿಮ ಆಯ್ಕೆ | ಟಿಕೆಟ್‌ಗೆ ಪೈಪೋಟಿ ಸಹಜ

ಪಕ್ಷದಲ್ಲಿ ಒತ್ತಡಕ್ಕಿಲ್ಲ ಅವಕಾಶ

ಬೆಂಗಳೂರು: ಕಾಂಗ್ರೆಸ್‌ಗೆ ಯಾರೂ ಒತ್ತಡ ಹೇರಲು ಆಗುವುದಿಲ್ಲ, ಬ್ಲಾಕ್‌ಮೇಲ್ ಮಾಡಲೂ ಆಗುವುದಿಲ್ಲ ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಶಾಮನೂರು ಕುಟುಂಬವೂ ಕೇಳುತ್ತಿದೆ. ಹಾಗೆಯೇ ಅಲ್ಪಸಂಖ್ಯಾತ ಸಮುದಾಯವೂ ಬೇಡಿಕೆ ಇಟ್ಟಿದೆ. ಯಾರು ಬೇಕಾದರೂ ಟಿಕೆಟ್ ಕೇಳಬಹುದು. ಅದು ತಪ್ಪೇನಲ್ಲ. ಆದರೆ, ಯಾರೂ ಒತ್ತಡ ಹಾಕಲು ಬರುವುದಿಲ್ಲ, ಬ್ಲ್ಯಾಕ್‌ಮೇಲ್ ಮಾಡಲಿಕ್ಕೂ ಆಗದು ಎಂದು ಹೇಳಿದರು. ಈಗಾಗಲೇ ನಾಮಪತ್ರ ಕೂಡ ಸಲ್ಲಿಸಿದ್ದಾರಲ್ಲ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ಯಾರೋ ಮುಹೂರ್ತ ಹೇಳಿರುತ್ತಾರೆ. ಅದಕ್ಕಾಗಿ ನಾಮಪತ್ರ ಸಲ್ಲಿಸಿರುತ್ತಾರೆ. ಅದು ಸಹಜ ಕೂಡ. ನಾವೂ ಕೆಲವು ಸಲ ಹಾಗೆ ಸಲ್ಲಿಸಿದ್ದುಂಟು. ಅದೆಲ್ಲವೂ ಇದ್ದೇ ಇರುತ್ತದೆ ಎಂದು ಸಮಜಾಯಿಷಿ ನೀಡಿದರು.

ದಾವಣಗೆರೆ ಟಿಕೆಟ್ ಗೊಂದಲ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಎಂ.ಬಿ.ಪಾಟೀಲ್, ಶಾಮನೂರು ಕುಟುಂಬ ಟಿಕೆಟ್ ಕೇಳುತ್ತಿದೆ. ಬಾಗಲಕೋಟೆಯಲ್ಲಿ ಎಚ್.ವೈ. ಮೇಟಿ ಕುಟುಂಬಕ್ಕೆ ಟಿಕೆಟ್ ಕೊಡುತ್ತಿಲ್ಲವೇ? ಹಾಗೆಯೇ ಇಲ್ಲಿಯೂ ತಮ್ಮ ಕುಟುಂಬಕ್ಕೆ ಕೊಡಬೇಕು ಎಂದು ಹೇಳುತ್ತಿದೆ. ಅತ್ತ ಅಲ್ಪಸಂಖ್ಯಾತ ಸಮುದಾಯವೂ ಬೇಡಿಕೆ ಇಟ್ಟಿದೆ. ಯಾರು ಬೇಕಾದರೂ ಟಿಕೆಟ್ ಕೇಳಬಹುದು. ಅದರಲ್ಲಿ ತಪ್ಪೇನಿಲ್ಲ. ಆದರೆ, ಅಂತಿಮವಾಗಿ ಪಕ್ಷ ತೀರ್ಮಾನ ಮಾಡಲಿದೆ ಎಂದರು.

ಸಂಸದರ ಸಭೆ ದಿನಾಂಕ ಮರುನಿಗದಿ: ಮಂಗಳವಾರ ಹೊಸದಿಲ್ಲಿಯಲ್ಲಿ ನಡೆದ ರಾಜ್ಯದ ನೀರಾವರಿ ಯೋಜನೆಗಳ ಕುರಿತು ಪ್ರತಿಕ್ರಿಯಿಸಿದ ಎಂ.ಬಿ. ಪಾಟೀಲ್, ಬೇರೆ ಬೇರೆ ರಾಜ್ಯಗಳ ಚುನಾವಣೆಗಳು ನಡೆಯುತ್ತಿವೆ. ಈ ಹಂತದಲ್ಲಿ ಸಭೆ ನಡೆಸಿ, ಸರ್ವಪಕ್ಷ ನಿಯೋಗ ಪ್ರಧಾನಿ ಭೇಟಿ ಮಾಡುವುದರಿಂದ ಮುಜುಗರ ಆಗಬಹುದು ಎಂದು ಬೇರೆ ದಿನಾಂಕ ನಿಗದಿ ಮಾಡಲು ಕೇಳಿದರು. ಚುನಾವಣೆ ಮುಗಿದ ಬಳಿಕ ಮತ್ತೆ ದಿನಾಂಕ ನಿಗದಿ ಆಗಲಿದೆ. ಆಗ ರಾಜ್ಯದ ಸಂಸದರ ಜತೆ ಚರ್ಚಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಆಲಮಟ್ಟಿ ಯೋಜನೆ ಎತ್ತರ ವಿಚಾರಕ್ಕೆ ಪ್ರತಿಕ್ರಿಯಿಸಿದ ಪಾಟೀಲ್, ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ ಪ್ರಕಾರ 173 ಟಿಎಂಸಿ ನೀರು ನಮಗೆ ಸಿಕ್ಕಿದೆ. ಅದಕ್ಕಾಗಿ ಆಲಮಟ್ಟಿ ಜಲಾಶಯ ಎತ್ತರ ಹೆಚ್ಚಿಸಬೇಕು. ಹತ್ತು ವರ್ಷವಾದರೂ ಅಧಿಸೂಚನೆ ಆಗಿರಲಿಲ್ಲ, ಈ ಯೋಜನೆಗಾಗಿ ಅಗತ್ಯ ಭೂಸ್ವಾಧೀನಕ್ಕೆ ಯಾವುದೇ ಅಡೆತಡೆ ಇಲ್ಲ, ನಮ್ಮ ಸ್ವಂತ ರಿಸ್ಕ್ ಮೇಲೆ ಸ್ವಾಧೀನ ಪ್ರಕ್ರಿಯೆ ನಡೆಸಲಾಗುತ್ತಿದೆ. ನೆರೆಯ ಆಂಧ್ರಪ್ರದೇಶ ತಕರಾರು ಸಲ್ಲಿಸಿದರೂ, ಅದು ಗಣನೆಗೆ ಬರುವುದಿಲ್ಲ ಎಂದು ಹೇಳಿದರು.

2ನೇ ಏರ್‌ಪೋರ್ಟ್‌ಗೆ ಟೆಂಡರ್: ಎಂ.ಬಿ. ಪಾಟೀಲ



ರಾಜ್ಯದಲ್ಲಿ ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಟೆಂಡರ್ ಕರೆದಿದ್ದೇವೆ. ಅದರಲ್ಲಿ ನಾಲ್ಕು ಸಂಸ್ಥೆಯವರು ಭಾಗವಹಿಸಿದ್ದಾರೆ ಎಂದು ಮೂಲಸೌಕರ್ಯ ಸಚಿವ ಎಂ.ಬಿ. ಪಾಟೀಲ ತಿಳಿಸಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟೆಂಡನರ್‌ನಲ್ಲಿ ನಾಲ್ಕು ಸಂಸ್ಥೆಯವರು ಭಾಗಿಯಾಗಿದ್ದು, ಮೂರು ಸ್ಥಳ ನೋಡಿಕೊಂಡು ಹೋಗಿದ್ದಾರೆ. ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಿಗದಿತ ಸಮಯ ಇರುತ್ತದೆ. ಆ ಸಮಯ ಮುಗಿದ ಬಳಿಕ ವರದಿ ಬರಲಿದೆ. ನಂತರ ಮುಂದಿನ ಹೆಜ್ಜೆ ಇಡಲಿದ್ದೇವೆ ಎಂದರು.

ಗೆಲ್ಲುವ ಅಭ್ಯರ್ಥಿಗೆ ಟಿಕೆಟ್: ಡಾ.ಜಿ. ಪರಮೇಶ್ವರ

ಬೆಂಗಳೂರು: ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿ ಈಚೆಗೆ ಅಗಲಿದ ಮಾಜಿ ಶಾಸಕರಿಬ್ಬರ ಕುಟುಂಬಗಳಿಂದ ಟಿಕೆಟ್‌ಗಾಗಿ ಬೇಡಿಕೆ ಇದೆ. ಆದರೆ, ಅಂತಿಮವಾಗಿ ಗೆಲ್ಲುವ ಅಭ್ಯರ್ಥಿಯನ್ನು ಪಕ್ಷ ಆಯ್ಕೆ ಮಾಡುತ್ತದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.



ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟಿಕೆಟ್ ಘೋಷಣೆ ಕಷ್ಟ ಏನಿಲ್ಲ. ಗೆಲ್ಲಲೇಬೇಕಾದಂತಹ ಅಭ್ಯರ್ಥಿ ಆಯ್ಕೆಗಾಗಿ ಚರ್ಚೆ ಮಾಡುತ್ತಿದ್ದಾರೆ. ಯಾರಿಗೆ ಟಿಕೆಟ್ ನೀಡಿದರೆ ಸೂಕ್ತ ಎಂಬುದನ್ನು ಎಲ್ಲ ದೃಷ್ಟಿಯಿಂದ ನೋಡುತ್ತಿದ್ದಾರೆ. ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ. ಮೇಟಿ ಎರಡೂ ಕುಟುಂಬಗಳಿಂದಲೂ ಬೇಡಿಕೆ ಇದೆ. ಅದು ಸಹಜ ಎಂದು ಹೇಳಿದರು. ವಿಶೇಷವಾಗಿ ದಾವಣಗೆರೆಯಲ್ಲಿ ಒಂದು ಕಡೆ ಹೆಚ್ಚು ಅಲ್ಪಸಂಖ್ಯಾತರಿದ್ದಾರೆ. ಮತ್ತೊಂದು ಕಡೆ ಲಿಂಗಾಯತರೂ ಇದ್ದಾರೆ. ಎರಡೂ ಕಡೆ ನೋಡುತ್ತಿದ್ದಾರೆ. ಇನ್ನು ಬಾಗಲಕೋಟೆಯಲ್ಲಿ ಮೇಟಿ ಅವರ ಮಗನಿಗೆ ಕೊಡಬೇಕು. ಆದರೆ, ಬಹಳ ಜನ ಆಕಾಂಕ್ಷಿಗಳಿದ್ದಾರೆ. ಅಂತಿಮವಾಗಿ ಪಕ್ಷ ತೀರ್ಮಾನ ಮಾಡಲಿದೆ ಎಂದರು.

ಅನಿಲ ಪೂರೈಕೆ ಬಾಧಿತ

ಪುಟ ೧➡ ಆನ್‌ಲೈನ್ ಬುಕ್ಕಿಂಗ್ ಪ್ರಮಾಣ 93%ಕ್ಕೆ ಏರಿಕೆಯಾಗಿದೆ ಮತ್ತು ಗುರುವಾರ ಸುಮಾರು 55 ಲಕ್ಷ ರೀಫಿಲ್ ವಿನಂತಿಗಳು ಬಂದಿವೆ. ಪ್ಯಾನಿಕ್ ಬುಕ್ಕಿಂಗ್ ಕಡಿಮೆಯಾದರೂ ಬೇಡಿಕೆ ಇನ್ನೂ ಹೆಚ್ಚಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ಒಂದು ವಾರದಲ್ಲಿ 11,300 ಟನ್ ವಾಣಿಜ್ಯ ಎಲ್‌ಪಿಜಿ ವಿತರಿಸಲಾಗಿದೆ. ರಾಜ್ಯಗಳಿಗೆ ಸಂಗ್ರಹಣೆ ತಡೆಯಲು ಕಟ್ಟುನಿಟ್ಟಿನ ಮೇಲ್ವಿಚಾರಣೆ ಕೈಗೊಳ್ಳಲು ಕೇಂದ್ರ ಸರ್ಕಾರ ಸೂಚಿಸಿದೆ. ಬಂದರುಗಳಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ಸರಕು ಸರಬರಾಜು ಸುಗಮವಾಗಿದೆ. ಮಧ್ಯ ಪ್ರಾಚ್ಯದ ಪರಿಸ್ಥಿತಿಯ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಓಮಾನ್ ಮತ್ತು ಫ್ರಾನ್ಸ್ ನಾಯಕರೊಂದಿಗೆ ಚರ್ಚೆ ನಡೆಸಿದ್ದಾರೆ.

ಪ್ರೀಮಿಯಂ ತೈಲ ದರ ಏರಿಕೆ

ಭಾರತದಲ್ಲಿ ಪ್ರೀಮಿಯಂ ಪೆಟ್ರೋಲ್ ಬೆಲೆ ಶುಕ್ರವಾರದಿಂದ ಲೀಟರ್‌ಗೆ ಗರಿಷ್ಠ 2 ರೂ. 35 ಪೈಸೆಯವರೆಗೆ ಏರಿಕೆಯಾಗಿದೆ. ಆದರೆ, ಸಾಮಾನ್ಯ ಪೆಟ್ರೋಲ್ ದರ ಯಥಾಸ್ಥಿತಿಯಲ್ಲಿ ಮುಂದುವರಿದಿದೆ. ಬಿಪಿಸಿಎಲ್‌ನ ಸ್ಪೀಡ್, ಎಚ್‌ಪಿಸಿಎಲ್‌ನ ಪವರ್, ಐಒಸಿಎಲ್‌ನ ಎಕ್ಸ್‌ಪಿ95 ಪೆಟ್ರೋಲ್ ಬೆಲೆಗಳು ಲೀಟರ್‌ಗೆ 2.09 ರೂ.ನಿಂದ 2.35 ರೂ.ವರೆಗೆ ಹೆಚ್ಚಳ ಕಂಡಿವೆ. ಎಚ್‌ಪಿಸಿಎಲ್, ಐಒಸಿಎಲ್ ಮತ್ತು ಬಿಪಿಸಿಎಲ್ ಇತರ ತೈಲ ಮಾರಾಟ ಕಂಪನಿಗಳು, ಪವರ್ ಪೆಟ್ರೋಲ್, ಎಕ್ಸ್‌ಪಿ95 ಮತ್ತು ಸ್ಪೀಡ್ ಪೆಟ್ರೋಲ್ ಹೈ–ಆಕ್ಟೇನ್ ಇಂಧನಗಳ ಬೆಲೆಯನ್ನು ಹೆಚ್ಚಿಸಿವೆ. ಇರಾನ್ ಯುದ್ಧದ ಹಿನ್ನೆಲೆ ಜಾಗತಿಕ ಕಚ್ಚಾ ತೈಲದ ಬೆಲೆ ಏರಿಕೆಯಿಂದ, ಸಾಮಾನ್ಯ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ವೆಚ್ಚವನ್ನು ಕಂಪನಿಗಳು ಹೆಚ್ಚಿಸುತ್ತಿರುವುದರಿಂದ ಈ ಏರಿಕೆ ಮಾಡಲಾಗಿದೆ.

ಬಹ್ರೈನ್ ಕಿಂಗ್ ಜತೆ ಮೋದಿ ಮಾತುಕತೆ

ಪಶ್ಚಿಮ ಏಷ್ಯಾದಲ್ಲಿ ತೀವ್ರಗೊಳ್ಳುತ್ತಿರುವ ಸಂಘರ್ಷದ ನಡುವೆ, ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಬಹ್ರೈನ್‌ನ ರಾಜ ಹಮದ್ ಬಿನ್ ಇಸಾ ಅಲ್ ಖಲೀಫಾ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿ, ಪ್ರದೇಶದ ಇಂಧನ ಮತ್ತು ನಾಗರಿಕ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ತೀವ್ರವಾಗಿ ಖಂಡಿಸಿದರು. ಈ ವೇಳೆ ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿಯನ್ನು ವಿವರವಾಗಿ ಚರ್ಚಿಸಿದರು. ಈ ಸಂದರ್ಭ, ಇಂಧನ ಹಾಗೂ ನಾಗರಿಕ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳು ಜಾಗತಿಕ ಮಟ್ಟದಲ್ಲಿ ಆಹಾರ, ಇಂಧನ ಮತ್ತು ರಸಗೊಬ್ಬರ ಭದ್ರತೆಗೆ ದುಷ್ಪರಿಣಾಮ ಬೀರುತ್ತವೆ ಎಂದು ಅವರು ಎಚ್ಚರಿಸಿದರು. ಇದೇ ವೇಳೆ, ಸಮುದ್ರ ಮಾರ್ಗಗಳ ಸ್ವಾತಂತ್ರ್ಯ ಮತ್ತು ಸಾಗಣೆ ವ್ಯವಸ್ಥೆಯ ನಿರಂತರತೆ ಅತ್ಯಂತ ಮುಖ್ಯ ಎಂದು ಪ್ರಧಾನಿ ಪುನರುಚ್ಚರಿಸಿದರು. ಇದಕ್ಕೆ ಜೊತೆಗೆ, ಬಹ್ರೈನ್‌ನ ಭಾರತೀಯ ಸಮುದಾಯದ ಕಲ್ಯಾಣಕ್ಕಾಗಿ ನೀಡುತ್ತಿರುವ ನಿರಂತರ ಬೆಂಬಲಕ್ಕೆ ಮೋದಿ ಅವರು ರಾಜನಿಗೆ ಧನ್ಯವಾದಗಳನ್ನು ತಿಳಿಸಿದರು.



ನೀರಾನೆ ದಾಳಿಗೆ ಪಶುವೈದ್ಯೆ ಸಾವು

ಪುಟ ೧➡ ಮೂಲತಃ ಬೆಂಗಳೂರಿನ ಬನ್ನೇರುಘಟ್ಟ ನಿವಾಸಿಯಾಗಿದ್ದ ಸಮೀಕ್ಷಾ ಅವರು, ಕಳೆದ ಫೆಬ್ರವರಿಯಲ್ಲಿ ಪಶು ವೈದ್ಯಾಧಿಕಾರಿಯಾಗಿ ಆಯ್ಕೆಯಾಗಿ ಮೃಗಾಲಯದ ಪಶುವೈದ್ಯರಿಂದ ತರಬೇತಿ ಪಡೆಯುತ್ತಿದ್ದರು.

ಮಾ.19ರಂದು ರಾತ್ರಿ 10.30ಕ್ಕೆ ಮೃಗಾಲಯದ ಆಸ್ಪತ್ರೆಗೆ ತೆರಳಿ ಸನ್‌ಕೊನ್ಯೂರ್ ಪಕ್ಷಿಗೆ ಫಾಲೊ ಅಪ್ ಚಿಕಿತ್ಸೆ ನೀಡಿದ್ದರು. ನಂತರ ರಾತ್ರಿ 11.45ಕ್ಕೆ ಥರ್ಮಲ್ ಕ್ಯಾಮೆರಾ ಬಳಸಿ ಗರ್ಭಿಣಿ ನೀರಾನೆ(ಹಿಪ್ಪೊಪೊಟಮಸ್) ತಾಪಮಾನ ಪರೀಕ್ಷಿಸುವ ವೇಳೆ ಈ ದಾಳಿ ನಡೆದಿದೆ. ಕೂಡಲೇ ಅವರನ್ನು ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಬೆಳಗ್ಗೆ 6.30ಕ್ಕೆ ಮೃತಪಟ್ಟಿದ್ದಾರೆ ಎಂದು ಹುಲಿ–ಸಿಂಹಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕ ಅಮರಾಕ್ಷರ ತಿಳಿಸಿದ್ದಾರೆ.

ಹತ್ತಾರು ಅನುಮಾನ: ಯುವ ಪಶು ವೈದ್ಯೆ ಸಾವು ಹಲವು ಅನುಮಾನಗಳಿಗೆ ಕಾರಣವಾಗಿದೆ. ರಾತ್ರಿ 11ರ ನಂತರ ತರಬೇತಿನಿರತ ಪಶುವೈದ್ಯೆಯನ್ನು ಚಿಕಿತ್ಸೆಗೆ ಕಳುಹಿಸಿದ್ದು ಯಾರು ಎಂಬ ಪ್ರಶ್ನೆ ಎದ್ದಿದೆ. ಇಲ್ಲಿ ಕರ್ತವ್ಯದಲ್ಲಿದ್ದ ಹಿರಿಯ ಪಶುವೈದ್ಯರು ಇದೀಗ ಸಕ್ರೆಬೈಲು ಆನೆ ಬಿಡಾರಕ್ಕೆ ನಿಯೋಜನೆಗೊಂಡಿದ್ದಾರೆ. ಆ ಸ್ಥಾನಕ್ಕೆ ಬೇರೆ ಪಶುವೈದ್ಯರ ನೇಮಕ ಇನ್ನೂ ಆಗಿಲ್ಲ. ರಾತ್ರಿ ವೇಳೆ ಪ್ರಾಣಿಗಳಿಗೆ ಮೃಗಾಲಯಗಳಲ್ಲಿ ಚಿಕಿತ್ಸೆ ನೀಡುವಾಗ ಸಹಾಯಕ ಸಿಬ್ಬಂದಿ ಜತೆಯಲ್ಲಿ ತೆರಳಬೇಕು, ಅರವಳಿಕೆ ನೀಡಿ ನಂತರ ಚಿಕಿತ್ಸೆ ನೀಡಬೇಕು ಎಂಬ ಮಾರ್ಗಸೂಚಿ ಇದೆ. ಇಲ್ಲಿ ಅದ್ಯಾವುದೂ ಪಾಲನೆ ಆಗಿಲ್ಲ ಎಂಬ ಆರೋಪ ಕೇಳಿಬರುತ್ತಿದೆ.

ವಾರದಲ್ಲಿ ವರದಿ ನೀಡಲು ಖಂಡ್ರೆ ಸೂಚನೆ

ವನ್ಯಜೀವಿಗೆ ಚಿಕಿತ್ಸೆ ನೀಡಲು ತೆರಳಿದ್ದಾಗ ಪಶುವೈದ್ಯೆ ಮೃತಪಟ್ಟಿರುವುದಕ್ಕೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಸಂತಾಪ ಸೂಚಿಸಿದ್ದಾರೆ. ರಾಜ್ಯದ ಎಲ್ಲಾ ಮೃಗಾಲಯಗಳಲ್ಲಿನ ಪಶುವೈದ್ಯರು ಯಾವುದೇ ವನ್ಯಜೀವಿಗೆ ಚಿಕಿತ್ಸೆ ನೀಡುವಾಗ ಪ್ರಮಾಣಿತ ಮಾನದಂಡ ಪಾಲಿಸಬೇಕು. ಈ ದುರಂತದ ಬಗ್ಗೆ ಹಿರಿಯ ಪಶುವೈದ್ಯರು ಹಾಗೂ ಅರಣ್ಯಾಧಿಕಾರಿ ಒಳಗೊಂಡ ತಂಡ ತನಿಖೆ ನಡೆಸಿ 7 ದಿನಗಳ ಒಳಗೆ ವರದಿ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

ಅಯೋಧ್ಯೆ ಧೂಳನ್ನು ಸ್ಪರ್ಶಿಸಿದ್ದು ಸೌಭಾಗ್ಯ

ಪುಟ ೧➡ ಶ್ರೀರಾಮನ ಮೇಲಿನ ಭಕ್ತಿಯ ಪವಿತ್ರ ಬಂಧದಿಂದ ಒಗ್ಗೂಡಿ, ಎಲ್ಲರು ಒಂದು ಎಂಬ ಭಾವನೆಯನ್ನು ಅಳವಡಿಸಿಕೊಂಡು, ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮ ಮುಕ್ತಾಯವಾದ ನಂತರ ರಾಷ್ಟ್ರಪತಿ ಮುರ್ಮು ಅವರು, ಸಪ್ತ ಮಂದಿರಗಳ ದರ್ಶನ ಪಡೆದು ಅಯೋಧ್ಯೆಯಿಂದ ನಿರ್ಗಮಿಸಿದರು. ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಮಾತಾ ಅಮೃತಾನಂದಮಯಿ, ಉತ್ತರ ಪ್ರದೇಶದ ರಾಜ್ಯಪಾಲೆ ಆನಂದಿಬೆನ್ ಪಟೇಲ್, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖ ಸುರೇಶ್ ಭಯ್ಯಾಜಿ ಜೋಶಿ ಉಪಸ್ಥಿತರಿದ್ದರು. ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಕೋಶಾಧ್ಯಕ್ಷ ಗೋವಿಂದ ದೇವಗಿರಿ ಮಹಾರಾಜ, ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಪ್ರಧಾನಕಾರ್ಯದರ್ಶಿ ಚಂಪತ್ ರಾಯ್, ಗೋಪಾಲ ಹಾಗೂ ಇತರ ಪ್ರಮುಖ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸರಯೂ ನೀರಿನಿಂದ ಅಯೋಧ್ಯೆ ಪವಿತ್ರ: ಯೋಗಿ

ಪುಟ ೧➡ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವ ಮತ್ತು ಮಾರ್ಗದರ್ಶನದಲ್ಲಿ ಶ್ರೀ ರಾಮ ಜನ್ಮಭೂಮಿ ದೇವಾಲಯ ನಿರ್ಮಾಣಕ್ಕಾಗಿ ಭೂಮಿ ಪೂಜೆ ಕಾರ್ಯಕ್ರಮ, ಶ್ರೀ ರಾಮಲಲಾ ಪ್ರಾಣ ಪ್ರತಿಷ್ಠೆ, ರಾಮ ಪರಿವಾರದ ಪವಿತ್ರ ವಿಗ್ರಹ ಸ್ಥಾಪನೆ, ಧ್ವಜಾರೋಹಣ ಮತ್ತು ಶ್ರೀ ರಾಮ ಯಂತ್ರದ ಸ್ಥಾಪನೆಯು ಸನಾತನ ಧರ್ಮದ ಪ್ರತಿಯೊಬ್ಬ ಅನುಯಾಯಿ ಮತ್ತು ನಿಜವಾದ ಭಾರತೀಯನನ್ನು ಸಂತೋಷಗೊಳಿಸಿದೆ ಎಂದು ಯೋಗಿ ಆದಿತ್ಯನಾಥ್ ಹೇಳಿದರು.

ಸಂಘರ್ಷಕ್ಕೆ ಸ್ವಾರ್ಥ ಮೂಲ ಕಾರಣ

ಪುಟ ೧➡ ಮತೀಯ ಅಸಹಿಷ್ಣುತೆ, ಬಲವಂತದ ಮತಾಂತರಗಳು, ಪಾರಮ್ಯದ ವಿಚಾರಗಳು, ಮೇಲರಿಮೆ ಮತ್ತು ಕೀಳರಿಮೆಗಳು ಈಗಲೂ ಅಸ್ತಿತ್ವದಲ್ಲಿರುವುದನ್ನು ಎತ್ತಿ ತೋರಿದರು.



ಭಾರತದ ಪ್ರಾಚೀನ ಜ್ಞಾನವು ''ಎಲ್ಲರೂ ಪರಸ್ಪರ ಅವಲಂಬಿತರು ಮತ್ತು ಒಂದೇ'' ಎನ್ನುತ್ತದೆ. ಈ ಸನಾತನ ಚಿಂತನೆಯಿಂದ ನಾವು ಸಂಘರ್ಷದ ಹಾದಿಯನ್ನು ಬಿಟ್ಟು ಸೌಹಾರ್ದ ಮತ್ತು ಸಹಕಾರದ ಹಾದಿಯನ್ನು ಹಿಡಿಯಬೇಕಾಗಿದೆ. ಇದೀಗ ಆಧುನಿಕ ವಿಜ್ಞಾನ ಕೂಡ ನಿಧಾನವಾಗಿ ಇದನ್ನು ಅರ್ಥ ಮಾಡಿಕೊಳ್ಳಲಾರಂಭಿಸಿದೆ ಎಂದು ಅವರು ವಿವರಿಸಿದರು.

ಧರ್ಮವು ಕೇವಲ ಗ್ರಂಥಗಳಿಗೆ ಸೀಮಿತವಾಗಿದ್ದರೆ ಸಾಲದು, ಬದಲಾಗಿ ಅದು ನಮ್ಮ ನಡವಳಿಕೆಯಲ್ಲಿ ಪ್ರತಿಫಲಿಸಬೇಕು.

ಶಿಸ್ತು, ನೈತಿಕ ಮೌಲ್ಯಗಳ ಅನುಸರಣೆಗೆ ತೀವ್ರವಾದ ಅಭ್ಯಾಸಗಳು ಅಗತ್ಯವಿದೆ ಮತ್ತು ಇಂತಹ ಹಾದಿಯಲ್ಲಿ ಕೊಲವೊಮ್ಮೆ ಕಷ್ಟ–ಸವಾಲುಗಳು ಎದುರಿಸಬೇಕಾಗಿಯೂ ಬರಬಹುದು. ಭಾರತ ಮಾನವೀಯತೆಯಲ್ಲಿ ನಂಬಿಕೆ ಹೊಂದಿರುವುದು ಇದೇ ಹಿನ್ನೆಲೆಯಲ್ಲಿ.

ಇತರರು ಅಸ್ತಿತ್ವಕ್ಕಾಗಿ ಹೋರಾಟ ಮತ್ತು ಶಕ್ತಿ ಇರುವವರೇ ಉಳಿಯುವುದು ಎಂಬ ತತ್ವದಲ್ಲಿ ನಂಬಿಕೆ ಹೊಂದಿರುವುದನ್ನು ಉಲ್ಲೇಖಿಸಿ, ಸಂಘರ್ಷಕ್ಕೆ ಶಕ್ತಿಯ ಈ ಸಿದ್ಧಾಂತ ಕಾರಣವಾಗುತ್ತಿದೆ. ಆದರೆ ವಿಶ್ವಕ್ಕಿಂದು ಬೇಕಾಗಿರುವುದು ಸಂಘರ್ಷವಲ್ಲ, ಬದಲಿಗೆ ಸೌಹಾರ್ದ ಎಂದು ಭಾಗ್ವತ್ ಬಲವಾಗಿ ಪ್ರತಿಪಾದಿಸಿದರು.

ದಾವಣಗೆರೆ ದಕ್ಷಿಣ ಕಾಂಗ್ರೆಸ್ ಕಗ್ಗಂಟು

ಪುಟ ೧➡ ಈ ವೇಳೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೂ ಬುಲಾವ್ ನೀಡಲಾಗಿತ್ತು. ಅದರಂತೆ ಮಲ್ಲಿಕಾರ್ಜುನ್ ಅವರು ಈಶ್ವರ್ ಖಂಡ್ರೆ ಜತೆಗೆ ಸುರ್ಜೇವಾಲ ಅವರನ್ನು ಭೇಟಿ ಮಾತುಕತೆ ನಡೆಸಿದರು. ಈ ವೇಳೆ ದಾವಣಗೆರೆಯಲ್ಲಿ ಕಾಂಗ್ರೆಸ್ ನೆಲೆ ಕಂಡುಕೊಳ್ಳುವಲ್ಲಿ ತಮ್ಮ ತಂದೆಯ ಶ್ರಮ ಇದೆ. ಕುಟುಂಬಕ್ಕೇ ಟಿಕೆಟ್ ನೀಡಬೇಕು. ಈಗಾಗಲೇ ಪುತ್ರ ಸಮರ್ಥ್ ನಾಮಪತ್ರ ಸಲ್ಲಿಸಿದ್ದಾರೆ. ಅನುಕಂಪ, ಸಮುದಾಯದ ಬೆಂಬಲ ಸೇರಿದಂತೆ ಎಲ್ಲವೂ ಕೆಲಸ ಮಾಡಲಿದೆ ಮಲ್ಲಿಕಾರ್ಜುನ್ ಸಮರ್ಥನೆಗಳನ್ನು ನೀಡಿದರು ಎನ್ನಲಾಗಿದೆ.

ಇಲ್ಲಿಂದ ಕೆಪಿಸಿಸಿ ಕಚೇರಿಯಲ್ಲೂ ಹಲವು ಸುತ್ತಿನ ಮಾತುಕತೆ ನಡೆಯಿತು. ಅಲ್ಲಿ ಸುರ್ಜೇವಾಲ, ಡಿ.ಕೆ. ಶಿವಕುಮಾರ್, ಎರಡೂ ಕ್ಷೇತ್ರಗಳ ಉಸ್ತುವಾರಿ ಸಮಿತಿಗಳ ಸಂಚಾಲಕರಾದ ಮಂಜುನಾಥ ಭಂಡಾರಿ ಮತ್ತು ವಸಂತ್ ಕುಮಾರ್, ಸಚಿವರು, ಪ್ರಮುಖ ಮುಖಂಡರೊಂದಿಗೆ ಸಮಾಲೋಚನೆ ನಡೆಸಲಾಯಿತು. ಈ ಸಂದರ್ಭದಲ್ಲಿ ಪಕ್ಷದ ಸ್ಥಳೀಯ ಮುಖಂಡರು ನೀಡಿದ ವರದಿಯ ಅವಲೋಕನ, ನಾಯಕರ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು.

ಖರ್ಗೆ ಭೇಟಿ ಮಾಡಿದ ಅಲ್ಪಸಂಖ್ಯಾತ ಮುಖಂಡರು: ಇನ್ನು ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಬಿಗಿ ಪಟ್ಟು ಹಿಡಿದಿರುವ ಅಲ್ಪಸಂಖ್ಯಾತ ಮುಖಂಡರು, ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಸದಾಶಿವನಗರದಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸಕ್ಕೆ ಸಚಿವ ಜಮೀರ್ ಅಹ್ಮದ್ ಖಾನ್ ನೇತೃತ್ವದಲ್ಲಿ ಆಗಮಿಸಿದ ಅಲ್ಪ ಸಮಖ್ಯಾತ ಮುಖಂಡರು ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ನಮ್ಮ ಸಮುದಾಯದ ಒಬ್ಬರಿಗೆ ಟಿಕೆಟ್ ನೀಡಬೇಕು ಎಂದು ಮನವಿ ಮಾಡಿದರು.

ಬಿಜೆಪಿಯಿಂದ ವೀರಣ್ಣ ಚರಂತಿಮಠ ನಾಮಪತ್ರ

ಪುಟ ೧➡ ರಾಜ್ಯದ ಪ್ರಮುಖ ನಾಯಕರ ಸಮ್ಮುಖದಲ್ಲಿ ವೀರಣ್ಣ ಚರಂತಿಮಠ ಅವರು ಅಧಿಕೃತವಾಗಿ ಇನ್ನೊಮ್ಮೆ ನಾಮಪತ್ರ ಸಲ್ಲಿಸಲಿದ್ದಾರೆ. ಈ ಮೂಲಕ ಕ್ಷೇತ್ರದಲ್ಲಿ ಪಕ್ಷದ ಶಕ್ತಿ ಪ್ರದರ್ಶನಕ್ಕೂ ಬಿಜೆಪಿ ಸಜ್ಜಾಗಿದೆ. ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,59,260 ಮತದಾರರು ಇದ್ದು, ಇವರಲ್ಲಿ 1,26,761 ಪುರುಷರು, 1,32,476 ಮಹಿಳೆಯರು ಮತ್ತು 23 ಇತರೆ ಮತದಾರರಿದ್ದಾರೆ.

2 ಕ್ಷೇತ್ರಗಳ ಅಭಿಪ್ರಾಯ ಸಂಗ್ರಹಿಸಿದ್ದೇವೆ: ಡಿಸಿಎಂ

ಬೆಂಗಳೂರು: ಉಪ ಚುನಾವಣೆಯಲ್ಲಿ ಪಕ್ಷ ಯಾರಿಗೆ ಟಿಕೆಟ್ ಕೊಟ್ಟರೂ ಒಮ್ಮತದಿಂದ ಕೆಲಸ ಮಾಡುವುದಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸೇರಿದಂತೆ ನಮ್ಮ ನಾಯಕರು ಹೇಳಿದ್ದಾರೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ಕೆಪಿಸಿಸಿ ಕಚೇರಿಯಲ್ಲಿ ಸುರ್ಜೇವಾಲಾ ಜತೆಗಿನ ಸಭೆ ಬಳಿಕ ಮಾತನಾಡಿದ ಅವರು, ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಅಭ್ಯರ್ಥಿ ಆಯ್ಕೆ ಸಂಬಂಧ ಪಕ್ಷದ ಮುಖಂಡರ ಸಭೆ ನಡೆಸಿದ್ದು, ಎಲ್ಲರ ಅಭಿಪ್ರಾಯ ಸಂಗ್ರಹಿಸಲಾಗಿದೆ. ಎಲ್ಲರ ಅಭಿಪ್ರಾಯದಂತೆ ನಾವು ಹೈಕಮಾಂಡ್‌ಗೆ ನಮ್ಮ ಪಟ್ಟಿ ಕಳುಹಿಸುತ್ತೇವೆ. ಅಂತಿಮವಾಗಿ ಅವರು ತೀರ್ಮಾನ ಮಾಡಲಿದ್ದಾರೆ ಎಂದು ತಿಳಿಸಿದರು.



ಕುದುರೆಮುಖ ಕಾಡ್ಗಿಚ್ಚು ತನಿಖೆಗೆ ಖಂಡ್ರೆ ಆದೇಶ

ಬೆಂಗಳೂರು: ಕುದುರೆಮುಖ ರಾಷ್ಟ್ರೀಯ ಉದ್ಯಾನದ 25ಕ್ಕೂ ಹೆಚ್ಚು ಕಡೆ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ ಮಂಗಳೂರು ವಿಭಾಗದ ಅರಣ್ಯಾಧಿಕಾರಿ ಮರಿಯಪ್ಪ ಕರಿಕಳನ್ ನೇತೃತ್ವದಲ್ಲಿ ತನಿಖೆಗೆ ಆದೇಶ ನೀಡಿದ್ದಾರೆ. ತಮ್ಮ ನಿವಾಸ ದಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿದ ಅವರು, ಈ ಬಗ್ಗೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮದ ಶಿಫಾರಸಿನೊಂದಿಗೆ 7 ದಿನಗಳ ಒಳಗಾಗಿ ವರದಿ ಸಲ್ಲಿಸುವಂತೆ ಸೂಚಿಸಿದರು. ಕುದುರೆಮುಖ ಅರಣ್ಯದೊಳಗಿರುವ ಕೆಲವು ನಿವಾಸಿಗಳು ಸ್ವಯಂಪ್ರೇರಿತವಾಗಿ ಹೊರಬರಲು ಇಚ್ಛಿಸಿದ್ದು, ಈ ಬಗ್ಗೆ ಸಮಗ್ರ ವರದಿ ಸಿದ್ಧಪಡಿಸಿ, ಕಾಂಪಾ ನಿಧಿಯಿಂದ ಅರಣ್ಯ ವಾಸಿಗಳ ಸ್ಥಳಾಂತರ ಕುರಿತಂತೆ ವಾರ್ಷಿಕ ಕ್ರಿಯಾಯೋಜನೆಯಲ್ಲಿ ಸೇರಿಸಿ ತಕ್ಷಣವೇ ಕಡತ ಸಲ್ಲಿಸುವಂತೆ ಸೂಚಿಸಿದರು.

ತಟಸ್ಥ ನೀತಿ ಜವಾಬ್ದಾರಿ ನಡೆ

ಪುಟ ೧➡ ಅಂತೆಯೇ, ಯುದ್ಧವನ್ನು ಅಂತಾರಾಷ್ಟ್ರೀಯ ಕಾನೂನಿನಲ್ಲಿ ಸಮರ್ಥಿಸಲು ಸಾಧ್ಯವಿಲ್ಲ ಮತ್ತು ಇದು ಸಾರ್ವಭೌಮತ್ವದ ತತ್ವಗಳಿಗೆ ವಿರುದ್ಧವಾಗಿದೆ. ಆದರೆ, ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಭಾರತ ತಾಳ್ಮೆ ತೋರಿಸುತ್ತಿರುವುದು ಕಾರ್ಯತಂತ್ರದ ವಿವೇಕವನ್ನು ತೋರಿಸುತ್ತದೆ ಎಂದರು. ಮಾತ್ರವಲ್ಲದೇ, ಭಾರತದ ಮೌನವು ಯುದ್ಧಕ್ಕೆ ಬೆಂಬಲವಲ್ಲ ಅಥವಾ ದುರ್ಬಲತೆಗೂ ಸಂಕೇತವಲ್ಲ, ಬದಲಾಗಿ ದೇಶದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡ ತೀರ್ಮಾನ ಎಂದು ಶಶಿ ತರೂರ್ ಹೇಳಿದ್ದಾರೆ.

ಇದು ನಮ್ಮ ಯುದ್ಧವಲ್ಲ: ಚಂಡೀಗಢದ ಕಾಂಗ್ರೆಸ್ ಸಂಸದ ಮನೀಶ್ ತಿವಾರಿ ಕೂಡ ಇದೇ ನಿಲುವನ್ನು ಪ್ರತಿಪಾದಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಒಂದೇ ಒಂದು ಸಂಘರ್ಷವಲ್ಲ, ಹಲವು ಮಟ್ಟದ ಉದ್ವಿಗ್ನತೆಗಳು ನಡೆಯುತ್ತಿವೆ ಎಂದು ಅವರು ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಭಾರತ ನೇರವಾಗಿ ತೊಡಗಿಕೊಳ್ಳದಿರುವುದು ಸೂಕ್ತ ಎಂದು ಅವರು ಅಭಿಪ್ರಾಯಪಟ್ಟರು. ಇದು ನಮ್ಮ ಯುದ್ಧವಲ್ಲ, ನಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದು ಮುಖ್ಯ ಎಂದು ತಿವಾರಿ ಹೇಳಿದ್ದಾರೆ.

ಪಂಚಾಯತ್ ರಾಜ್ ವ್ಯವಸ್ಥೆಗೆ ಕೊಡಲಿ ಪೆಟ್ಟು: ವಿಜಯೇಂದ್ರ

ಕಲಬುರಗಿ: ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯತಿ ಚುನಾವಣೆ ನಡೆಸದಿರುವುದು ಪಂಚಾಯತ್ ರಾಜ್ ವ್ಯವಸ್ಥೆಗೆ ರಾಜ್ಯ ಸರ್ಕಾರ ನೀಡುತ್ತಿರುವ ಕೊಡಲಿ ಪೆಟ್ಟು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರದಿಂದ ಬರಬೇಕಿದ್ದ ಸುಮಾರು 14 ರಿಂದ 15 ಸಾವಿರ ಕೋಟಿ ರೂಪಾಯಿ ಅನುದಾನ ಕೈ ತಪ್ಪಿದೆ. ರಾಜ್ಯ ಸರ್ಕಾರದ ಈ ಧೋರಣೆಯೇ ಹಿನ್ನಡೆಗೆ ಮುಖ್ಯ ಕಾರಣ ಎಂದರು. ಬಾಗಲಕೋಟೆ ಹಾಗೂ ದಾವಣಗೆರೆಯಲ್ಲಿ ಭರ್ಜರಿ ಗೆಲುವು ಸಾಧಿಸುವ ವಿಶ್ವಾಸ ವ್ಯಕ್ತಪಡಿಸಿದರು. ಕಳೆದ ಆರು-ಎಂಟು ತಿಂಗಳಿಂದ ರಾಜ್ಯ ಸರ್ಕಾರದಲ್ಲಿ ಅಸ್ಥಿರತೆ ಹಾಗೂ ಕುರ್ಚಿ ಕಿತ್ತಾಟ ಮುಂದುವರಿದಿದ್ದು, ಇದರಿಂದ ಆಡಳಿತದ ಮೇಲೆ ಪರಿಣಾಮ ಬಿದ್ದಿದೆ ಎಂದು ಆರೋಪಿಸಿದರು.

ಕಲ್ಯಾಣ ಕರ್ನಾಟಕ ಸಚಿವ ಪ್ರಿಯಾಂಕ್ ಖರ್ಗೆ ಅವರ ಮೇಲ್ವಿಚಾರಣೆಯಲ್ಲಿದ್ದರೂ ಕಲಬುರಗಿ ಸೇರಿದಂತೆ ಈ ಭಾಗದಲ್ಲಿ ನಿರೀಕ್ಷಿತ ಮಟ್ಟದ ಅಭಿವೃದ್ಧಿ ಕಂಡುಬರುತ್ತಿಲ್ಲ. ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಟೀಕೆ ಮಾಡುವುದಕ್ಕಿಂತ ಸ್ಥಳೀಯ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಸಚಿವ ಖರ್ಗೆಗೆ ಸಲಹೆ ನೀಡಿದರು.



ರಾಜ್ಯ ಸರ್ಕಾರದ ಆಂತರಿಕ ಕಲಹವು ಈಗ ಕ್ಲೈಮ್ಯಾಕ್ಸ್ ಹಂತಕ್ಕೆ ತಲುಪಿದೆ. ಬಜೆಟ್ ಅಧಿವೇಶನದಲ್ಲಿ ಆಡಳಿತ ಪಕ್ಷದ ಶಾಸಕರೇ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಈಗ ಎಲ್ಲರ ಮುಂದಿರುವ ಪ್ರಶ್ನೆ ಮುಂದಿನ ಮುಖ್ಯಮಂತ್ರಿ ಯಾರು ಎನ್ನುವುದೇ ಆಗಿದೆ.

■ **ಬಿ.ವೈ.ವಿಜಯೇಂದ್ರ**, ರಾಜ್ಯಾಧ್ಯಕ್ಷ, ಬಿಜೆಪಿ



ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರಬೆಟ್ಟದಲ್ಲಿ ಶುಕ್ರವಾರ ನಡೆದ ಯುಗಾದಿ ಜಾತ್ರಾ ಮಹೋತ್ಸವದಲ್ಲಿ ಸೇರಿದ್ದ ಅಪಾರ ಜನಸ್ತೋಮ.

ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಮಹತ್ಸಾಧನೆ

ಬೆಂಗಳೂರು/ ಹೊಸದಿಲ್ಲಿ: ಸೌರಶಕ್ತಿ, ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಭಾರತ ಮೂರನೇ ಅತಿದೊಡ್ಡ ರಾಷ್ಟ್ರವಾಗಿ ನಿಂತಿದ್ದು, ಊಹಿಸಲು ಅಸಾಧ್ಯ ಎನ್ನುವಂತೆ



ಅಗಾಧ ಸಾಧನೆಗೈದಿದೆ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ವಿಯೋನ್ ವತಿಯಿಂದ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, 2030ರ ವೇಳೆಗೆ 500 ಜಿಡಬ್ಲ್ಯು ನವೀಕರಿಸಬಹುದಾದ ಇಂಧನ ಗುರಿಯತ್ತ ಸಾಗಿರುವ ಭಾರತದ ಶುದ್ಧ ಇಂಧನ ಪ್ರಯಾಣ ಅಭೂತಪೂರ್ವ ವೇಗ ಪಡೆಯುತ್ತಿದೆ ಎಂದರು. ಭಾರತದ ಮಾಡ್ಯೂಲ್ ಮತ್ತು ಉತ್ಪಾದನಾ ಸಾಮರ್ಥ್ಯವು ಗಮನಾರ್ಹವಾಗಿ ವಿಸ್ತರಿಸಿದ್ದು, ದೇಶೀಯ ಸಾಮರ್ಥ್ಯಗಳನ್ನು ಬಲಪಡಿಸುತ್ತಿದೆ. ವಿತರಿಸಿದ ನವೀಕರಿಸಬಹುದಾದ ಇಂಧನ ಕೇವಲ 35 ಜಿಡಬ್ಲ್ಯು ತಲುಪಿದ್ದು, 55 ಲಕ್ಷ ವಿಕೇಂದ್ರೀಕೃತ ಸ್ಥಾಪನೆಗಳಿಂದ ನಡೆಸಲ್ಪಡುತ್ತದೆ, ಇದರಲ್ಲಿ 31 ಲಕ್ಷ ಮನೆಗಳು ಸೇರಿವೆ ಎಂದು ವಿವರಿಸಿದರು. ಪಿಎಂ ಸೂರ್ಯಘರ್ ಮತ್ತು ಪಿಎಂ ಕುಸುಮ್ ಅಡಿಯಲ್ಲಿ 23 ಲಕ್ಷ ಸೌರಶಕ್ತಿ ನೀರಾವರಿ ಪಂಪ್‌ಗಳಾಗಿ ಪರಿವರ್ತನೆಗೊಂಡಿವೆ. 25 ವರ್ಷಗಳ ಹಿಂದೆ ಪ್ರತಿ ಯೂನಿಟ್ ವಿದ್ಯುತ್‌ಗೆ ಸುಮಾರು 20 ರೂ.ವೆಚ್ಚವಾಗುತ್ತಿತ್ತು. ಆದರೀಗ ಕೇವಲ 2.15 ರೂ. ಲಭ್ಯವಾಗುತ್ತಿದೆ. ಸಂಗ್ರಹಣೆ ವೆಚ್ಚ ಸೇರಿ ಸುಮಾರು 2.80 ರೂ. ಆಗಿದೆ. ಸೌರ, ಪವನ ಮತ್ತು ಬ್ಯಾಟರಿ ಸಂಯೋಜಿತವಾಗಿ ಪ್ರತಿ ಯೂನಿಟ್‌ಗೆ ಸುಮಾರು 4ರೂ. ತಲುಪುತ್ತಿದ್ದು, ಇದು ಉಷ್ಣ ವಿದ್ಯುತ್‌ಗೆ ಹೋಲಿಸಿದರೆ ಗಮನಾರ್ಹವಾಗಿ ಕಡಿಮೆಯಾಗಿದೆ ಎಂದರು.

ಭಾರತ ಪಳೆಯುಳಿಕೆಯೇತರ ಇಂಧನ ಪರಿವರ್ತನೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸುತ್ತಿದೆ. ಹಸಿರು ಜಲಜನಕ ವೆಚ್ಚ 279 ರೂ. ಕೆಜಿಗೆ ಇಳಿದರೆ, ಹಸಿರು ಅಮೋನಿಯಾ ಬೆಲೆ ಸುಮಾರು 45.70 ರೂ.ಕೆಜಿಗೆ ತಲುಪಿದ್ದು, ಇದು ವಿಶ್ವದಲ್ಲೇ ಅತ್ಯಂತ ಕಡಿಮೆಯಾಗಿದ್ದು, ಸುಸ್ಥಿರ ಕೈಗಾರಿಕಾ ಬಳಕೆಗೆ ಹೊಸ ಪಥವನ್ನು ಸೃಷ್ಟಿಸಿದೆ ಎಂದು ಪ್ರತಿಪಾದಿಸಿದರು.

ಕಿರುಸುದ್ದಿ

ಬಾಗಲಕೋಟೆ ಉಪ ಚುನಾವಣೆ ನಾಮಪತ್ರ ಸಲ್ಲಿಸಿದ ಚರಂತಿಮಠ



ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪಚುನಾವಣೆಗೆ ಶುಕ್ರವಾರ 5 ಅಭ್ಯರ್ಥಿಗಳಿಂದ ಒಟ್ಟು 7 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ. ಪಕ್ಷೇತರ ಅಭ್ಯರ್ಥಿಯಾಗಿ ಆನಂದ ಜಕಾತಿ, ಬ್ಲೂ ಇಂಡಿಯಾ ಪಾರ್ಟಿಯಿಂದ ತಳವಾರ ಶಿವಕುಮಾರ ತಲಾ 2 ನಾಮಪತ್ರ ಸಲ್ಲಿಸಿದರೆ, ಉತ್ತಮ ಪ್ರಜಾಕೀಯ ಪಕ್ಷದಿಂದ ಅಂತೋಷ ಸವ್ವಾಸೆ, ಭಾರತೀಯ ಜನತಾ ಪಕ್ಷದಿಂದ ವೀರಭದ್ರಯ್ಯ ಚರಂತಿಮಠ, ಇಂಡಿಯನ್ ನ್ಯಾಶನಲ್ ಕಾಂಗ್ರೆಸ್‌ದಿಂದ ಗೋವಿಂದರಾಜ ಟಿ. ಬಳ್ಳಾರಿ ತಲಾ ಒಂದು ನಾಮಪತ್ರ ಸೇರಿ ಒಟ್ಟು 7 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ತಿಳಿಸಿದ್ದಾರೆ.

ಕಾಫಿ ತೋಟಕ್ಕೆ ಬೀಟಮ್ಮ ಗ್ಯಾಂಗ್ ಲಗ್ಗೆ



ಚಿಕ್ಕಮಗಳೂರು: ರೈತರ ನಿದ್ದೆಗೆಡಿಸಿದ್ದ ಕಾಡಾನೆ ಬೀಟಮ್ಮ ಹಿಂಡು ಮತ್ತೆ ಕಾಫಿ ತೋಟಗಳಿಗೆ ಲಗ್ಗೆ ಇಟ್ಟಿದೆ. ಇದರಿಂದ ರೈತರ ಆತಂಕ ಮತ್ತಷ್ಟು ಹೆಚ್ಚಿದೆ. ಅರಣ್ಯ ಇಲಾಖೆಯ ಕಾಲರ್ ಐಡಿ ಅಳವಡಿಸಲಾದ ಬೀಟಮ್ಮ ಮರಿಗಳಲ್ಲದೆ ಸೇರಿದಂತೆ ಐದಾರು ಆನೆಗಳೊಂದಿಗೆ ಕಾಫಿ ತೋಟಗಳಲ್ಲಿ ಸಂಚರಿಸುತ್ತಿದ್ದು, ಜನರು ಮನೆಯಿಂದ ಹೊರಬರಲು ಭಯಪಡುತ್ತಿದ್ದಾರೆ. ಬೀಟಮ್ಮ ಗ್ಯಾಂಗ್ ಮರಿಗಳನ್ನು ಕಾಳಜಿಯಿಂದ ಜತೆಯಲ್ಲಿ ಕರೆದೊಯ್ಯುವ ಅಪರೂಪದ ದೃಶ್ಯ ಅರಣ್ಯ ಇಲಾಖೆ ಡ್ರೋನ್ ಕ್ಯಾಮರಾದಲ್ಲಿ ಸೆರೆಯಾಗಿದೆ. ಮೂಡಿಗೆರೆ ತಾಲೂಕಿನ ಜಿ.ಹೊಸಳ್ಳಿ-ಕಸ್ಕೆಬೈಲು ಗ್ರಾಮದಲ್ಲಿ ಆನೆಗಳು ಮರಿಗಳ ಜತೆ ಜಾಗರೂಕತೆಯಿಂದ ಸಂಚರಿಸುತ್ತಿರುವ ದೃಶ್ಯ ಸೆರೆಸಿಕ್ಕಿದೆ.

ಮಾ.22ಕ್ಕೆ ಈ ಹೊತ್ತಿಗೆ ಹೊನಲು ಕಾರ್ಯಕ್ರಮ

ಬೆಂಗಳೂರು: ಈ ಹೊತ್ತಿಗೆ ವತಿಯಿಂದ ಮಾ.22ರಂದು ಬೆಳಗ್ಗೆ 10 ಗಂಟೆಗೆ ಜೆಪಿ ನಗರದಲ್ಲಿರುವ ಕಪ್ಪಣ್ಣ ಅಂಗಳದಲ್ಲಿ ಈ ಹೊತ್ತಿಗೆಯ 13ನೇ ವಾರ್ಷಿಕೋತ್ಸವ ಹೊನಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಚಿತ್ರದುರ್ಗದ ಡಾ.ತಾರಿಣಿ ಶುಭದಾಯಿನಿ ಅವರಿಗೆ ಕಾವ್ಯ ಪ್ರಶಸ್ತಿ ವಿಜೇತೆ ಹಾಗೂ ಕಾರ್ಕಳದ ಎಂ ಮನೋಹರ ಪೈ ಅವರಿಗೆ ಕಥಾಪ್ರಶಸ್ತಿ ನೀಡಿ ಗೌರವಿಸಲಾಗುವುದು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಆರ್ ಸುನಂದಮ್ಮ ಪ್ರಶಸ್ತಿ ಪ್ರದಾನ ಮಾಡಲಿದ್ದು, ಇದೇ ಸಂದರ್ಭದಲ್ಲಿ ಪ್ರಶಸ್ತಿ ವಿಜೇತ ಕೃತಿಗಳ ಲೋಕಾರ್ಪಣೆಯಾಗಲಿದೆ.

ಪರಮ ವೈಭವ ಸ್ಥಿತಿಗಾಗಿ ಶ್ರಮಿಸೋಣ: ದಕ್ಷಿಣ ಪ್ರಾಂತ ಪ್ರಚಾರಕ ಗುರುಪ್ರಸಾದ್

ಆರೆಸ್ಸೆಸ್ ಅತಿ ಪ್ರಬಲ ಶಕ್ತಿ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ನೂರು ವರ್ಷಗಳ ಸಾರ್ಥಕ ಪಯಣದಲ್ಲಿ ಅನೇಕ ವಿರೋಧ ಮತ್ತು ಅಪಪ್ರಚಾರಗಳ ನಡುವೆಯೂ ಆರ್‌ಎಸ್‌ಎಸ್ ಇಂದು ಸಮಾಜದಲ್ಲಿ ಅತ್ಯಂತ ಪ್ರಬಲ ಶಕ್ತಿಯಾಗಿ ಬೆಳೆದು ನಿಂತಿದೆ ಎಂದು ದಕ್ಷಿಣ ಪ್ರಾಂತ ಪ್ರಚಾರಕ ಗುರುಪ್ರಸಾದ್ ಹೇಳಿದರು.



ಬಸವನಗುಡಿಯ ಮರಾಠಾ ಹಾಸ್ಟೆಲ್ ಮೈದಾನದಲ್ಲಿ ನಡೆದ ಆರ್‌ಎಸ್‌ಎಸ್‌ನ ಬೆಂಗಳೂರು ದಕ್ಷಿಣ ವಿಭಾಗದ ಯುಗಾದಿ ಉತ್ಸವದಲ್ಲಿ ಮಾತನಾಡಿದ ಅವರು, ನಿರಂತರವಾಗಿ ಸಾಗುತ್ತಿರು(ಚರೈವೇತಿ ಚರೈವೇತಿ) ಎಂಬ ಮಂತ್ರದಂತೆ ಆರ್‌ಎಸ್‌ಎಸ್ ಕಾರ್ಯಕರ್ತರು ಯಾವುದೇ ವಿಶ್ರಾಂತಿ ಇಲ್ಲದೆ ರಾಷ್ಟ್ರದ ಪರಮ ವೈಭವ ಸ್ಥಿತಿಗಾಗಿ ಶ್ರಮಿಸಬೇಕು. ನಮ್ಮ ಮನೆಗಳೇ ಸಮಾಜಕ್ಕೆ ಮಾದರಿಯಾಗುವಂತೆ ನಡೆದುಕೊಳ್ಳೋಣ. ಆರ್‌ಎಸ್‌ಎಸ್‌ನ ಆರು ಪ್ರಮುಖ ಉತ್ಸವಗಳಲ್ಲಿ ಯುಗಾದಿಯೂ ಒಂದಾಗಿದ್ದು, ಇದು ಪ್ರಕೃತಿಯ ಹೊಸ ಚಿಗುರಿನಂತೆ ಸಂಘದ ಕಾರ್ಯಕ್ಕೂ ಹೊಸ ಚೈತನ್ಯ ತುಂಬುತ್ತದೆ. ಸಂಘವು ವ್ಯಕ್ತಿಗಿಂತ ವಿಚಾರಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡುತ್ತಾ ಬಂದಿದ್ದು, ಭಗವಾಧ್ವಜವನ್ನೇ ಗುರುವಾಗಿ ಸ್ವೀಕರಿಸಿರುವುದು ಸಂಘದ ವಿಶಿಷ್ಟ ಪರಂಪರೆಯಾಗಿದೆ. ವ್ಯಕ್ತಿಗಳು ಶಾಶ್ವತವಲ್ಲ, ಆದರೆ ತತ್ವ, ವಿಚಾರಗಳು ಶಾಶ್ವತ ಎಂಬ ದೂರದೃಷ್ಟಿಯ ಫಲವಾಗಿ ಇಂದು ಸಂಘವು ಐದನೇ ತಲೆಮಾರಿನ ಕಾರ್ಯಕರ್ತರನ್ನು ಸಜ್ಜುಗೊಳಿಸಿದೆ ಎಂದು ತಿಳಿಸಿದರು.

ಮುಕ್ತವಾಗಿ ಸಂಘ ಸ್ವೀಕಾರ: ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣದ ಗುರಿಯನ್ನು ಹೊಂದಿರುವ ಪ್ರಕ್ರಿಯೆಯು ನಿತ್ಯ ಶಾಖೆಗಳ ಮೂಲಕ ನಿರಂತರವಾಗಿ ನಡೆಯುತ್ತಿದೆ. ಇತ್ತೀಚಿನ ಹಿಂದು ಸಮ್ಮೇಳನ ಮತ್ತು ಮನೆ-ಮನೆ ಸಂಪರ್ಕ ಅಭಿಯಾನಗಳ ಮೂಲಕ ಸಮಾಜವು ಸಂಘದೊಂದಿಗೆ ಅಭೂತಪೂರ್ವವಾಗಿ ಕೈಜೋಡಿಸುತ್ತಿದೆ. ಪಂಚ ಪರಿವರ್ತನೆ ವಿಚಾರಗಳನ್ನು ಸಮಾಜವು ಮುಕ್ತವಾಗಿ ಸ್ವೀಕರಿಸುತ್ತಿದೆ.

ಕೇವಲ ಸ್ವಯಂಸೇವಕರಷ್ಟೇ ಅಲ್ಲದೆ, ಮಾತೃಶಕ್ತಿ ಮತ್ತು ಯುವಶಕ್ತಿಯೂ ಹೆಚ್ಚಿನ ಸಂಖ್ಯೆಯಲ್ಲಿ ಸಂಘದ ಈ ಕಾರ್ಯಗಳಿಗೆ ಬೆಂಬಲ ನೀಡುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಅಷ್ಟೇ ಅಲ್ಲದೆ, ಪರಿಸರ ಸಂರಕ್ಷಣೆ ಮತ್ತು ಗೋಸೇವೆಯಂತಹ ಗತಿವಿಧಿಗಳ ಮೂಲಕ ವಿವಿಧ ಎನ್‌ಜಿಒಗಳು ಹಾಗೂ ಸಮಾಜದ ಬೇರೆ ಬೇರೆ ಸ್ತರದ ಜನರು ಸಂಘದೊಂದಿಗೆ ಸಹಭಾಗಿತ್ವ ಹೊಂದುತ್ತಿದ್ದಾರೆ ಎಂದು ಗುರುಪ್ರಸಾದ್ ತಿಳಿಸಿದರು. ಕಾರ್ಯಕ್ರಮದಲ್ಲಿ ಬೆಂಗಳೂರು ಮಹಾನಗರ ಸಂಘಚಾಲಕ ಮಿಲಿಂದ್ ಗೋಖಲೆ, ವಿಭಾಗ ಸಂಘಚಾಲಕ ಹರೀಶ್ ಉಪಸ್ಥಿತರಿದ್ದರು.

ಸೆ.20ರಿಂದ ಶಾಖಾ ವಿಸ್ತಾರ ಸಪ್ತಾಹ

ಸಂಘದ ಶತಮಾನೋತ್ಸವ ಅಂಗವಾಗಿ ಸೆಪ್ಟೆಂಬರ್ 20ರಿಂದ 27ರವರೆಗೆ ಶಾಖಾ ವಿಸ್ತಾರ ಸಪ್ತಾಹ ಆಯೋಜಿಸಲು ನಿರ್ಧರಿಸಲಾಗಿದ್ದು, ಬೆಂಗಳೂರಿನ ಪ್ರತಿ ಉಪವಸತಿಗಳಲ್ಲಿ ಹೊಸ ಶಾಖೆ ಆರಂಭಿಸುವ ಗುರಿ ಹೊಂದಲಾಗಿದೆ. ಈ ಸಪ್ತಾಹದ ಮೂಲಕ ಸಂಘದ ಶಕ್ತಿಯನ್ನು ವಿಸ್ತರಿಸಲು ಪ್ರತಿಯೊಬ್ಬ ಕಾರ್ಯಕರ್ತನು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಗುರುಪ್ರಸಾದ್ ಕರೆನೀಡಿದರು.

ಪ್ರಾಥಮಿಕ, ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್

ಬೆಂಗಳೂರು: 2026-27ನೇ ಶೈಕ್ಷಣಿಕ ಸಾಲಿನಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ಉಚಿತವಾಗಿ ಶೂ ಮತ್ತು ಸಾಕ್ಸ್ ವಿತರಿಸಲು ಸರ್ಕಾರ ಆದೇಶಿಸಿದೆ.



ಈ ಯೋಜನೆಗೆ ಒಟ್ಟು 104 ಕೋಟಿ ರೂ. ಮೊತ್ತವನ್ನು ಮೀಸಲಿಡಲಾಗಿದ್ದು, ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ಪ್ರತಿ ವಿದ್ಯಾರ್ಥಿಗೂ ಅತ್ಯುತ್ತಮ ಗುಣಮಟ್ಟದ 1 ಜತೆ ಕಪ್ಪು ಬಣ್ಣದ ಶೂ ಹಾಗೂ 2 ಜತೆ ಬಿಳಿ ಬಣ್ಣದ ಸಾಕ್ಸ್‌ಗಳನ್ನು ಉಚಿತವಾಗಿ ನೀಡಲಾಗುತ್ತದೆ. 2026-27ನೇ ಶೈಕ್ಷಣಿಕ ವರ್ಷದ ಜೂನ್ ತಿಂಗಳಿನಲ್ಲಿ ಆರಂಭವಾದ ಕೂಡಲೇ ವಿದ್ಯಾರ್ಥಿಗಳಿಗೆ ಶೂ-ಸಾಕ್ಸ್‌ಗಳನ್ನು ವಿತರಿಸುವ ಗುರಿಯನ್ನು ಶಾಲಾ ಶಿಕ್ಷಣ ಇಲಾಖೆ ಹೊಂದಿದೆ.

ಪ್ರತಿ ತರಗತಿಗೆ ನಿರ್ದಿಷ್ಟಪಡಿಸಿದ ಅಳತೆಯ ಶೂ ಮತ್ತು ಸಾಕ್ಸ್‌ಗಳನ್ನು ಪ್ರತಿ ತರಗತಿಯ ವಿದ್ಯಾರ್ಥಿಗಳಿಗೆ ಸರಬರಾಜುದಾರರಿಂದ ಪಡೆಯಲಾಗುವುದು. ಅಳತೆಯ ಯಾವುದೇ ವ್ಯತ್ಯಾಸಗಳಿದ್ದಲ್ಲಿ ಶೇ.5ರಷ್ಟು ಹೆಚ್ಚುವರಿ ದಾಸ್ತಾನನ್ನು ಪ್ರತಿ ತಾಲೂಕು ಹಂತದಲ್ಲಿ ಇಟ್ಟುಕೊಂಡು ಸರಿಯಾದ ಶೂ ಮತ್ತು ಸಾಕ್ಸ್‌ಗಳನ್ನು 30 ದಿನಗಳಲ್ಲಿ ವಿತರಿಸಲಾಗುವುದು ಎಂದು ತಿಳಿಸಿ, ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ಶೂ ಮತ್ತು ಸಾಕ್ಸ್ ಖರೀದಿಸಿ ವಿರಣೆ ಮಾಡುವ ಸಂಬಂಧ ಕೇಂದ್ರೀಕೃತವಾಗಿ ಅಥವಾ ಪ್ರತಿ ವಿಭಾಗಕ್ಕೆ ಪ್ರತ್ಯೇಕವಾಗಿ ಕೆಟಿಪಿಪಿ ಕಾಯ್ದೆ ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳಂತೆ ಟೆಂಡರ್ ಮೂಲಕ ಶೂ ಮತ್ತು ಸಾಕ್ಸ್‌ಗಳ ವಿತರಣೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಅಧಿಕ ಮಳೆಯಾಗುವ ಉತ್ತರ ಕನ್ನಡ, ಶಿರಸಿ, ಶಿವಮೊಗ್ಗ, ಉಡುಪಿ ಮತ್ತು ದ.ಕನ್ನಡ ಜಿಲ್ಲೆಗಳ ಶಾಲೆಗಳಲ್ಲಿನ ಎಸ್‌ಡಿಎಂಸಿಗಳು ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಶೂಗಳ ಬದಲು ಪಾದರಕ್ಷೆ ಸರಬರಾಜು ಮಾಡಲು ಕೋರಿದ್ದಾರೆ.

ತರಗತಿವಾರು ವೆಚ್ಚ

(ವಿದ್ಯಾರ್ಥಿಗಳ ವಯೋಮಾನಕ್ಕೆ ಅನುಗುಣ ಶೂ, ಸಾಕ್ಸ್ ಬೆಲೆ ನಿಗದಿ)

- 1 ರಿಂದ 5ನೇ ತರಗತಿ: ಪ್ರತಿ ವಿದ್ಯಾರ್ಥಿಗೆ 265 ರೂ.
- 6 ರಿಂದ 8ನೇ ತರಗತಿ: ಪ್ರತಿ ವಿದ್ಯಾರ್ಥಿಗೆ 295 ರೂ.
- 9 ರಿಂದ 10ನೇ ತರಗತಿ: ಪ್ರತಿ ವಿದ್ಯಾರ್ಥಿಗೆ 325 ರೂ.

ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜ್ ಭರವಸೆ

ಜೂನ್ ವೇಳೆಗೆ ಟಿಬಿ ಡ್ಯಾಂ ಕ್ರಸ್ಟ್ ಗೇಟ್

ವಿಜಯನಗರ: ಜೂನ್‌ನಲ್ಲಿ ಆರಂಭಗೊಳ್ಳುವ ಮುಂಗಾರಿಗೂ ಮುನ್ನವೇ ತುಂಗಭದ್ರಾ ಅಣೆಕಟ್ಟೆಯ ಎಲ್ಲ 33 ಕ್ರಸ್ಟ್ ಗೇಟ್‌ಗಳ ಬದಲಾವಣೆ ಕಾರ್ಯ ಪೂರ್ಣಗೊಳ್ಳಲಿದೆ. ಜತೆಗೆ ಹೊಸ ಲಿಂಕ್ ಚೈನ್ ಕೂಡ ಅವಳಡಿಸಲಾಗುವುದು. ಈ ಹಿನ್ನೆಲೆಯಲ್ಲಿ ಕೆಳ ಭಾಗದ ರೈತರು ಯಾವುದೇ ಕಾರಣಕ್ಕೂ ಆತಂಕಪಡುವ ಅಗತ್ಯವಿಲ್ಲ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜ್ ರೈತರಿಗೆ ಭರವಸೆ ನೀಡಿದ್ದಾರೆ.



ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯಕ್ಕೆ ಶುಕ್ರವಾರ ಭೇಟಿ ನೀಡಿ ಹೊಸ ಕ್ರಸ್ಟ್ ಗೇಟ್‌ಗಳ ಬದಲಾವಣೆ ಕಾರ್ಯವನ್ನು ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ತುಂಗಭದ್ರಾ ಜಲಾಶಯದ 33 ಗೇಟ್‌ಗಳ ಪೈಕಿ ಹೊಸದಾಗಿ 18 ಕ್ರಸ್ಟ್ ಗೇಟ್‌ಗಳನ್ನು ಅಳವಡಿಸಿ ಪರೀಕ್ಷಿಸಲಾಗಿದೆ. ಎಲ್ಲವೂ ಸುಗಮವಾಗಿ ಕಾರ್ಯನಿರ್ವಹಿಸುತ್ತಿವೆ. 5 ಪ್ರಗತಿಯಲ್ಲಿದ್ದು, ಮಾರ್ಚ್ ಅಂತ್ಯದೊಳಗೆ 23 ಪೂರ್ಣಗೊಳ್ಳುತ್ತವೆ. ಏಪ್ರಿಲ್ ಅಂತ್ಯದೊಳಗೆ ಇನ್ನುಳಿದ 10 ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸಲಾಗುವುದು. ಅವುಗಳನ್ನು ಸ್ಥಳದಲ್ಲೇ ನಿರ್ಮಿಸಿ ಅಳವಡಿಸಲು ತಂತ್ರಜ್ಞರು ಉದ್ದೇಶಿಸಿದ್ದಾರೆ. ಕ್ರಸ್ಟ್ ಗೇಟ್‌ಗಳ ಲಿಂಕ್ ಚೈನ್‌ಗಳು ಹಳೆಯದಾಗಿದ್ದು, ತುಕ್ಕು ಹಿಡಿದಿವೆ. ಅವುಗಳನ್ನೂ ಬದಲಿಸಬೇಕೆಂಬ ಜಲಾಶಯ ಸುರಕ್ಷತಾ ಪ್ರಾಧಿಕಾರದ ತಜ್ಞರ ಅಭಿಪ್ರಾಯದಂತೆ ಹೊಸ ಸರಪಳಿ ಅಳವಡಿಸಲು 4.5 ಕೋಟಿ ರೂ. ಮೊತ್ತದಲ್ಲಿ ಚೆನ್ನೈ ಮೂಲದ ಕಂಪನಿಗೆ ಟೆಂಡರ್ ನೀಡಲಾಗಿದೆ. ಮೇ ಅಂತ್ಯದೊಳಗೆ ಹೊಸ ಸರಪಳಿಯನ್ನೂ ಅಳವಡಿಸಲಾಗುತ್ತದೆ. ನಿರೀಕ್ಷೆಯಂತೆ ಮುಂಗಾರು ಚುರುಕು ಪಡೆಯುವುದರೊಳಗೆ ಜಲಾಶಯದ ಕ್ರಸ್ಟ್ ಗೇಟ್‌ಗಳ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಮಾನಾಂತರ ಡ್ಯಾಂ

ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿರುವುದರಿಂದ ಕೊಪ್ಪಳ ಜಿಲ್ಲೆ ನವಿಲೆ ಬಳಿ ಸಮಾನಾಂತರ ಜಲಾಶಯ ನಿರ್ಮಿಸುವ ಬಗ್ಗೆ ಈಗಾಗಲೇ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದೆ. ಆದರೆ, ಟಿಬಿ ಡ್ಯಾಂ ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣಕ್ಕೆ ಸಂಬಂಧಿಸಿದ್ದರಿಂದ ಆಯಾ ರಾಜ್ಯಗಳ ಅನುಮತಿ ಬೇಕು. ಈ ಕುರಿತಂತೆ ಆಂಧ್ರದ ನೀರಾವರಿ ಸಚಿವರನ್ನು ಅಮರಾವತಿಯಲ್ಲಿ ಭೇಟಿ ಮಾಡಿ, ಮನವರಿಕೆ ಮಾಡಿಕೊಟ್ಟಿದ್ದೇವೆ. ಎರಡು ಮೂರು ತಿಂಗಳಲ್ಲಿ ವ್ಯಾಜ್ಯ ಮುಗಿಯುವ ಮುನ್ಸೂಚನೆಯಿದ್ದು, ಆದಷ್ಟು ಬೇಗ ನವಿಲೆ ಜಲಾಶಯ ನಿರ್ಮಾಣಕ್ಕೆ ಅಡಿಗಲ್ಲು ಹಾಕಲಾಗುವುದು. ಅದರಂತೆ ಮಾನವಿ ತಾಲೂಕಿನ ಚೀಕಲಪರವಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮುಂದಾಗಿದ್ದು, ಇಂತಹದ್ದೇ ತಾಂತ್ರಿಕ ಸಮಸ್ಯೆ ಅಡ್ಡಿಯಾಗಿದೆ. ಆದಷ್ಟು ಬೇಗ ಅದನ್ನೂ ಸಾಕಾರಗೊಳಿಸಲು ಯತ್ನಿಸಲಾಗುತ್ತದೆ ಎಂದು ಸಚಿವ ಎನ್.ಎಸ್.ಬೋಸರಾಜ್ ವಿವರಿಸಿದರು.

ಹುಳಿಯಾರು ಠಾಣೆಯಲ್ಲಿ ಲಾಕಪ್ ಸಾವು

ತುಮಕೂರು: ಇಸ್ಪೀಟ್ ಆಡುತ್ತಿದ್ದಾರೆಂದು ವಶಕ್ಕೆ ಪಡೆದಿದ್ದ ವ್ಯಕ್ತಿ ಜಿಲ್ಲೆಯ ಹುಳಿಯಾರು ಪೊಲೀಸ್ ಠಾಣೆಯಲ್ಲೇ ವಿಚಾರಣಾಧೀನ ಕೈದಿಯೊಬ್ಬರು ಮೃತಪಟ್ಟಿದ್ದು, ಪೊಲೀಸರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಕುಟುಂಬಸ್ಥರು, ಗ್ರಾಮಸ್ಥರು, ಸಾರ್ವಜನಿಕರು ಠಾಣೆ ಮುಂದೆ ಶವವಿಟ್ಟು ಪ್ರತಿಭಟನೆ ನಡೆಸಿ ತನಿಖೆಗೆ ಆಗ್ರಹಿಸಿದ್ದಾರೆ. ಯಳನಾಡು ಗ್ರಾಮದ ಕಾಂತರಾಜು (45) ಮೃತಪಟ್ಟ ವ್ಯಕ್ತಿ. ಈ ಸಂಬಂಧ ಗ್ರಾಮಸ್ಥರು ಹುಳಿಯಾರು ಪೊಲೀಸ್ ಠಾಣೆಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು. ತೀವ್ರ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್, ಮಾಜಿ ಸಚಿವ ಮಾಧುಸ್ವಾಮಿ, ಮಾಜಿ ಶಾಸಕ ಕಿರಣ್ ಕುಮಾರ್ ಠಾಣೆಗೆ ಆಗಮಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಯಳನಾಡು ಗ್ರಾಮದಲ್ಲಿ ಇಸ್ಪೀಟ್ ಆಡುತ್ತಿದ್ದಾರೆಂಬ ಖಚಿತ ಮಾಹಿತಿಯ ಮೇರೆಗೆ ಹುಳಿಯಾರು ಪೊಲೀಸರು ದಾಳಿ ನಡೆಸಿದ್ದರು. ದಾಳಿ ವೇಳೆ ಕಾಂತರಾಜು(45)ಸೇರಿದಂತೆ ಐದು ಜನರನ್ನು ವಶಕ್ಕೆ ಪಡೆದ ಪೊಲೀಸರು ಖಾಸಗಿ ವಾಹನದಲ್ಲಿ ಠಾಣೆಗೆ ಕರೆತಂದಿದ್ದರು. ಆದರೆ, ಠಾಣೆಗೆ ಬಂದ ಕೆಲವೇ ಸಮಯದಲ್ಲಿ ಕಾಂತರಾಜು ಸಾವನ್ನಪ್ಪಿದ್ದಾರೆ. ಎಎಸ್‌ಐ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಕುಡಿಯಲು ನೀರು ಕೊಡದೆ, ತೀವ್ರವಾಗಿ ಹಲ್ಲೆ ಮಾಡಿ, ಹೆದರಿಸಿ ಭಯ ಮೂಡಿಸಿರುವುದರಿಂದ ವ್ಯಕ್ತಿ ಮೃತಪಟ್ಟಿದ್ದಾರೆ ಎಂದು ಗ್ರಾಮಸ್ಥರ ಮತ್ತು ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿ ಸಾವಿಗೆ ಕಾರಣವಾಗಿರುವ ಎಎಸ್‌ಐ, ಪೊಲೀಸ್ ಸಿಬ್ಬಂದಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದರು.

ಎಸ್ಪಿ ಭರವಸೆ ಬಳಿಕ ಪ್ರತಿಭಟನೆ ಅಂತ್ಯ: ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಹುಳಿಯಾರು ಠಾಣೆಗೆ ಭೇಟಿ ನೀಡಿ ಆಕ್ರೋಶಗೊಂಡಿದ್ದ ಗ್ರಾಮಸ್ಥರು ಮತ್ತು ಮೃತನ ಕುಟುಂಬಸ್ಥರೊಂದಿಗೆ ಮಾತುಕತೆ ನಡೆಸಿದರು. ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು. ಒಂದು ವೇಳೆ ಪೊಲೀಸರ ತಪ್ಪು ಕಂಡುಬಂದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಎಸ್ಪಿ ಅವರ ಭರವಸೆಯ ನಂತರ ಗ್ರಾಮಸ್ಥರು ಪ್ರತಿಭಟನೆಯನ್ನು ಕೈಬಿಟ್ಟರು. ಬಳಿಕ ಮೃತದೇಹವನ್ನು ತುಮಕೂರು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಮರಣೋತ್ತರ ಪರೀಕ್ಷೆಗಾಗಿ ರವಾನಿಸಲಾಗಿದೆ. ಪರೀಕ್ಷೆಯ ನಂತರ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಹೃದಯಾಘಾತದಿಂದ ಸಾವು?: ಪ್ರಾಥಮಿಕ ಮಾಹಿತಿ ಪ್ರಕಾರ, ಠಾಣೆಗೆ ಕರೆತಂದ ಬಳಿಕ ಕಾಂತರಾಜು ಅವರಿಗೆ ಪೊಲೀಸರ ಭಯದಿಂದಾಗಿ ತೀವ್ರ ಹೃದಯಾಘಾತವಾಗಿದೆ ಎನ್ನಲಾಗಿದೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರವಷ್ಟೇ ಸಾವಿಗೆ ನಿಖರ ಕಾರಣ ತಿಳಿಯಲಿದೆ.

ಠಾಣೆಗೆ ಬೀಗ ಹಾಕಿ ಆಕ್ರೋಶ: ಕಾಂತರಾಜು ಪೊಲೀಸರ ದೌರ್ಜನ್ಯದಿಂದಲೇ ಸಾವನ್ನಪ್ಪಿದ್ದಾರೆಂದು ಆರೋಪಿಸಿ ನೂರಾರು ಗ್ರಾಮಸ್ಥರು, ಹುಳಿಯಾರು ಪೊಲೀಸ್ ಠಾಣೆಗೆ ಮುತ್ತಿಗೆಹಾಕಿ ಬೀಗಹಾಕಿದ್ದಲ್ಲದೆ, ಮೃತದೇಹವನ್ನು ಠಾಣೆಯ ಒಳಗೇ ಇಟ್ಟುಕೊಂಡು, ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಟ್ಟು ಹಿಡಿದರು. ಪರಿಸ್ಥಿತಿ ಕೈಮೀರುತ್ತಿದ್ದಂತೆ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಯಿತು.

ಸಿಐಡಿ ತನಿಖೆಗೆ ಆದೇಶ

ಹುಳಿಯಾರು ಪೊಲೀಸ್ ಠಾಣೆಯಲ್ಲಿ ವ್ಯಕ್ತಿ ಮೃತಪಟ್ಟಿರುವ ಘಟನೆಗೆ ಸಂಬಂಧಿಸಿದಂತೆ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗುವುದು. ಪೊಲೀಸ್ ಅಧಿಕಾರಿಗಳು ಕರ್ತವ್ಯಲೋಪವೆಸಗಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹಸಚಿವ ಪರಮೇಶ್ವರ್ ತಿಳಿಸಿದ್ದಾರೆ.

ಜ್ಞಾನ ಭಾರತಿ ಪ್ರಕಾಶನದ 8ನೇ ಪುಸ್ತಕ | ಕನ್ನಡ, ಮರಾಠಿಯಲ್ಲಿ ಲಭ್ಯ

ಕಾಫಿಟೇಬಲ್ ಪುಸ್ತಕ ಲೋಕಾರ್ಪಣೆ ಇಂದು

ಬೆಳಗಾವಿ: ವಿಕ್ರಮ ವಾರಪತ್ರಿಕೆಯ ಲಾಂಛನದಲ್ಲಿ ನಮ್ಮ ನೆಲದ ಹೆಮ್ಮೆಯ ಪುತ್ರ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ರೋಮಾಂಚಕ, ಸ್ಫೂರ್ತಿದಾಯಕ ಬದುಕು ಮತ್ತು ಸಾಧನೆಗಳ ಕುರಿತಾಗಿ ಶಕಾವತಾರ ವಿಶೇಷ ಕಾಫಿ ಟೇಬಲ್ ಪುಸ್ತಕ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಹೊರ ತರಲಾಗಿದ್ದು, ಈ ಪುಸ್ತಕವು ಶನಿವಾರ (ಮಾ.21) ಸಂಜೆ 5.30ಕ್ಕೆ ಕೆಎಲ್‌ಇಯ ಡಾ. ಬಿ.ಎಸ್.ಜಿರಗೆ ಸಭಾಭವನದಲ್ಲಿ ಬಿಡುಗಡೆ ಆಗಲಿದೆ.

ಈ ಸಮಾರಂಭದಲ್ಲಿ ಬೆಂಗಳೂರಿನ ಗವಿಪುರಂನ ಶ್ರೀ ಗೋಸಾಯಿ ಮಹಾ ಸಂಸ್ಥಾನ ಮಠದ ಪ.ಪೂ. ಜಗದ್ಗುರು ವೇದಾಂತಾಚಾರ್ಯ ಶ್ರೀ ಮಂಜುನಾಥ ಭಾರತಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತ ಮಾಜಿ ಸಂಸದ ಪ್ರಭಾಕರ ಕೋರೆ ಆಗಮಿಸಲಿದ್ದಾರೆ. ಪ್ರಧಾನ ಭಾಷಣವನ್ನು ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖರಾದ ಮಂಗೇಶ್ ಭೇಂಡೆ ಮಾಡಲಿದ್ದಾರೆ. ಆರ್‌ಎಸ್‌ಎಸ್ ಕರ್ನಾಟಕ ಉತ್ತರದ ಪ್ರಾಂತ ಕಾರ್ಯಕಾರಿಣಿ ಸದಸ್ಯ ಅರವಿಂದರಾವ್ ದೇಶಪಾಂಡೆ ಪ್ರಾಸ್ತಾವಿಕ ನುಡಿ ಆಡುವರು. ಆರ್‌ಎಸ್‌ಎಸ್ ಅಖಿಲ ಭಾರತೀಯ ಸಹ ವ್ಯವಸ್ಥಾ ಪ್ರಮುಖರಾದ ಅನಿಲ್ ಓಕ್ ಪಾಲ್ಗೊಳ್ಳುವರು. ಜ್ಞಾನ ಭಾರತಿ ಪ್ರಕಾಶನ ಲಿಮಿಟೆಡ್ನ ನಿರ್ದೇಶಕ ನಿರ್ಮಲ್ ಕುಮಾರ್ ಸುರಾನಾ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ಇದು ಸಂಸ್ಥೆಯ ಎಂಟನೇ ಕಾಫಿ ಟೇಬಲ್ ಪುಸ್ತಕ, ಈ ಸರಣಿಯಲ್ಲಿ ಇದುವರೆಗೆ ವಿಜಯ ನಗರ ಸಾಮ್ರಾಜ್ಯ, ಬಂಜಾರಾ ಸಮುದಾಯ, ಡಾ. ಬಿ ಆರ್ ಅಂಬೇಡ್ಕರ, ಮೈಸೂರು ಒಡೆಯರು, ಮಲೆನಾಡಿನ ಅರಸರ, ಕಿತ್ತೂರು ಕರ್ನಾಟಕ, ಮತ್ತು ಕಲ್ಯಾಣ ಕರ್ನಾಟಕ ಕುರಿತು ವಿಶೇಷ ಪುಸ್ತಕಗಳನ್ನು ಹೊರತರಲಾಗಿದೆ.

ಇದೀಗ ಬರುತ್ತಿರುವ ಛತ್ರಪತಿ ಶಿವಾಜಿ ಮಹಾರಾಜರ ಕುರಿತ ಈ ಪುಸ್ತಕ ನಿಶ್ಚಿತವಾಗಿಯೂ ನಮ್ಮ ಇದು ವರೆಗಿನ ಅತ್ಯಂತ ಪ್ರತಿಷ್ಠಿತ, ಸಮಗ್ರ ಗ್ರಂಥಗಳಲ್ಲೊಂದು. ಮರಾಠಿ ಭಾಷೆಯಲ್ಲಿ ನಮ್ಮ ಮೊತ್ತ ಮೊದಲ ಪ್ರಯತ್ನ ಕೂಡ. ಕರ್ನಾಟಕ ಮತ್ತು ಮಹಾರಾಷ್ಟ್ರದ ಪ್ರಖ್ಯಾತ ವಿದ್ವಾಂಸರು ಹಾಗೂ ಇತಿಹಾಸ ತಜ್ಞರು ಆಳವಾದ ಅಧ್ಯಯನ ಮತ್ತು ಆಕರ್ಷಕ ಶೈಲಿಯಿಂದ ಬರೆದಿರುವ ಮಹತ್ತರ ಲೇಖನಗಳ ಗುಚ್ಛ ಇದರಲ್ಲಿದೆ. ಕನ್ನಡ ಮತ್ತು ಮರಾಠಿ ಎರಡೂ ಭಾಷೆಗಳಲ್ಲಿ ಲಭ್ಯವಿರುವ ಇದರಲ್ಲಿ ಮಹಾರಾಜರ ಬಗ್ಗೆ ಐತಿಹಾಸಿಕ ಪುರಾವೆಗಳು ಹಾಗೂ ಚಿತ್ತಾಕರ್ಷಕ ಚಿತ್ರ ಗಳೊಂದಿಗೆ ಕಟ್ಟಿಕೊಡಲಾಗಿದೆ ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಪಿ.ಎಸ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

- ಛತ್ರಪತಿ ಶಿವಾಜಿ ಮಹಾರಾಜರ ಪುಸ್ತಕ
- ರೋಮಾಂಚಕ, ಸ್ಫೂರ್ತಿದಾಯಕ ಬದುಕಿನ ಚಿತ್ರಣ
- ವಿಕ್ರಮ ವಾರಪತ್ರಿಕೆ ಲಾಂಛನದಲ್ಲಿ ಪ್ರಕಟಣೆ


ಶಾಮನೂರು ಕುಟುಂಬ, ಮುಸ್ಲಿಂ ಸಮುದಾಯ ಪಟ್ಟು | ಸಾದಿಕ್ ಪೈಲ್ವಾನ್ ನಾಮಪತ್ರ ಸಲ್ಲಿಕೆ

ದಾವಣಗೆರೆಯಲ್ಲಿ ಬಗೆಹರಿಯದ ಕೈ ಟಿಕೆಟ್ ಗೊಂದಲ

▸ **ಅರ್ಪಿತ್ ಎನ್.ಜಿ.**

ದಾವಣಗೆರೆ: ಟಿಕೆಟ್ ಘೋಷಣೆಗೂ ಮುನ್ನವೇ ದಾವಣಗೆರೆ ದಕ್ಷಿಣ ವಿಧಾನಸಭೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪುತ್ರ ಸಮರ್ಥ ಶಾಮನೂರು, ಅಲ್ಪಸಂಖ್ಯಾತ ಸಮುದಾಯದ ಕಾಂಗ್ರೆಸ್ ಮುಖಂಡ ಸಾದಿಕ್ ಪೈಲ್ವಾನ್ ಅವರು ನಾಮಪತ್ರ ಸಲ್ಲಿಸಿರುವುದರಿಂದ ಕಾಂಗ್ರೆಸ್ ಟಿಕೆಟ್‌ನ ಒಳಬೇಗುದಿ ಬಹಿರಂಗವಾಗಿದೆ.

ದಿಗಂತ ವಿಶೇಷ



ಸಾದಿಕ್



ಸಮರ್ಥ

ಸಮರ್ಥ ನಾಮಪತ್ರ ಸಲ್ಲಿಸುವ ಮೂಲಕ ಕ್ಷೇತ್ರ ಬಿಟ್ಟುಕೊಡುವ ಪ್ರಮೇಯವೇ ಇಲ್ಲವೆಂಬ ಸಂದೇಶ ರವಾನಿಸಿದರೆ, ಮತ್ತೊಂದೆಡೆ ಅಲ್ಪಸಂಖ್ಯಾತ ಸಮುದಾಯದ ಸಾದಿಕ್ ನಮಗೆ ಜಮೀರ್ ಸಾಥ್ ನೀಡುತ್ತಾರೆ ಎನ್ನುವ ಮೂಲಕ ತಮ್ಮ ಸಮಾಜ ಸಚಿವರ ಮೂಲಕ ಟಿಕೆಟ್‌ಗಾಗಿ ಪ್ರಯತ್ನ ಮುಂದುವರಿಸಿದೆ ಎಂಬ ಸ್ಪಷ್ಟನೆ ನೀಡಿದ್ದಾರೆ. ಎರಡೂ ಸಮುದಾಯಗಳ ನಡೆಯಿಂದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಪಾರುಪತ್ಯ ಸಾಧಿಸಿಕೊಂಡು ಬಂದಿದ್ದ ಆಡಳಿತಾರೂಢ ಕಾಂಗ್ರೆಸ್‌ಗೆ ಇದು ಬಿಸಿತುಪ್ಪದಂತಾಗಿದೆ.

ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ಸುರ್ಜೇವಾಲ ಅವರ ಸಭೆಯ ಪೂರ್ವದಲ್ಲಿ ನಾಮಪತ್ರ ಸಲ್ಲಿಕೆಯ ಬೆಳವಣಿಗೆ ನಡೆದಿರುವುದು ತೀವ್ರ ಕುತೂಹಲ ಮೂಡಿಸಿದೆ. ಕಾಂಗ್ರೆಸ್ ಕಟ್ಟಿರುವುದೇ ಅಪ್ಪಾಜಿ ಶಾಮನೂರು ಶಿವಶಂಕರಪ್ಪನವರು ಎಂಬ ಸಮರ್ಥ ಶಾಮನೂರು ಅವರ ಹೇಳಿಕೆ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ನಮ್ಮನ್ನು ಪರಿಗಣಿಸದಿದ್ದರೆ ಕ್ಷೇತ್ರ ಕಳೆದುಕೊಳ್ಳುವಿರಿ ಎಂಬ ಪರೋಕ್ಷ ಎಚ್ಚರಿಕೆಯ ಸಂದೇಶವನ್ನು ಹೈಕಮಾಂಡ್‌ಗೆ ರವಾನಿಸಿದಂತಿದೆ.

ಹಾಲಿ ಶಾಸಕ ನಿಧನ ಹೊಂದಿದರೆ ಅವರ ಕುಟುಂಬಕ್ಕೆ ಸ್ಪರ್ಧಿಸುವ ಅವಕಾಶ ನೀಡಿ ಅನುಕಂಪದಿಂದ ಗೆಲುವು ಸಾಧಿಸುವ ಲೆಕ್ಕಾಚಾರ ಸ್ವಾಭಾವಿಕ. ಆದರೆ ಶಾಮನೂರು ಶಿವಶಂಕರಪ್ಪ ಅವರ ವಿಚಾರ ಭಿನ್ನ. ಏಕೆಂದರೆ ಶಾಮನೂರು ಪ್ರಬಲ ವೀರಶೈವ ಲಿಂಗಾಯತ ಸಮುದಾಯದ ಅಗ್ರಗಣ್ಯರು, ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರಾಗಿದ್ದವರು. ಇಲ್ಲಿ ಅನುಕಂಪಕ್ಕಿಂತ ಶಾಮನೂರು ಸಾಹುಕಾರ್ ಎಂಬ ಹೆಸರೇ ಒಂದು ಮತ ಬ್ಯಾಂಕ್. ಹಾಗಾಗಿ ಕುಟುಂಬಕ್ಕೆ ಟಿಕೆಟ್ ನಿರಾಕರಿಸಲು ಕಾರಣ ಹುಡುಕಿದರೂ ಕಾಂಗ್ರೆಸ್‌ಗೆ ಸಿಗುತ್ತಿಲ್ಲ.

ಟಿಕೆಟ್‌ಗೆ ಬಿಗಿ ಪಟ್ಟು: ಇನ್ನೊಂದೆಡೆ ಕ್ಷೇತ್ರದಲ್ಲಿ ಅತಿಹೆಚ್ಚು ಮತದಾರರ ಸಂಖ್ಯೆ ಹೊಂದಿರುವ ಮುಸ್ಲಿಂ ಸಮುದಾಯ ಟಿಕೆಟ್‌ಗೆ ಬೇಡಿಕೆ ಸಲ್ಲಿಸಿ ಬಿಗಿ ಪಟ್ಟು ಹಿಡಿದಿದ್ದಾರೆ. ಅಲ್ಪಸಂಖ್ಯಾತರೂ ತಮ್ಮ ಸಮಾಜದ ಸಚಿವರ ಮೂಲಕ ಹೈಕಮಾಂಡ್ ಮೇಲೆ ಒತ್ತಡ ಹೇರುತ್ತಿದ್ದಾರೆ. ಸಮುದಾಯದ ಪರ ಟಿಕೆಟ್ ಕೇಳುವುದರಲ್ಲಿ ತಪ್ಪೇನು ಎಂಬ ಮಂತ್ರಿ ಜಮೀರ್ ಅವರ ಮಾತು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್‌ರನ್ನು ಕೆರಳಿಸಿತ್ತು.

ನೋಟಾ ಎಚ್ಚರಿಕೆ: ಮತ್ತೊಂದು ಕಡೆ ಎಸ್.ಎಸ್. ಮಲ್ಲಿಕಾರ್ಜುನ ಅವರ ಹೊರಗಿನವರಿಗೆ ಇಲ್ಲೇನು ಕೆಲಸ ಎಂಬ ಹೇಳಿಕೆ ಅಲ್ಪಸಂಖ್ಯಾತರು ಮಂಡಿಸಿದ್ದ ಟಿಕೆಟ್ ಬೇಡಿಕೆಯ ಪ್ರಬಲತೆ ಹೆಚ್ಚಿಸಿದೆ. ಮುಸ್ಲಿಂ ಸಮುದಾಯ ಕೂಡ ಶತಾಯಗತಾಯ ಟಿಕೆಟ್ ಪಡೆದುಕೊಳ್ಳುವ ಪ್ರತಿಜ್ಞೆ ಮಾಡಿ ಟಿಕೆಟ್ ಸಿಗದಿದ್ದರೆ ನೋಟಾ ಅಭಿಯಾನ ಮಾಡುವುದಾಗಿ ಕಾಂಗ್ರೆಸ್‌ಗೆ ಎಚ್ಚರಿಕೆ ರವಾನಿಸಿದೆ. ಈ ಎಲ್ಲಾ ಬೆಳವಣಿಗೆಗಳು ಸಚಿವದ್ವಯರಿಗೆ ಪ್ರತಿಷ್ಠೆಯ ವಿಚಾರವಾಗಿ ಮಾರ್ಪಟ್ಟಿದೆ. ಹೀಗಾಗಿ ಯಾರಿಗೆ ಅವಕಾಶ ಕೊಟ್ಟರೂ ಭಿನ್ನಾಭಿಪ್ರಾಯ ಏರ್ಪಟ್ಟು ಜೇನುಗೂಡಿಗೆ ಕಲ್ಲೆಸೆದಂತಾಗುವುದು ಸದ್ಯದ ಕಾಂಗ್ರೆಸ್ ಪರಿಸ್ಥಿತಿ.

ಸಂಪಾದಕೀಯ

ಬಿಗಡಾಯಿಸುತ್ತಿರುವ ತೈಲ ಬಿಕ್ಕಟ್ಟು

ಇರಾನ್– ಇಸ್ರೇಲ್– ಅಮೆರಿಕ ನಡುವಿನ ಸಮರವು ಮೂರನೇ ವಾರಕ್ಕೆ ಕಾಲಿಟ್ಟಿರುವಂತೆಯೆ ಜಾಗತಿಕ ತೈಲ ಬಿಕ್ಕಟ್ಟು ಮತ್ತು ಅಡುಗೆ ಅನಿಲ ಪೂರೈಕೆಯ ಬಿಕ್ಕಟ್ಟು ಇನ್ನಷ್ಟು ಉಲ್ಬಣಗೊಳ್ಳುವ ಸಂಕೇತಗಳು ಕಾಣುತ್ತಿವೆಯೆ ಹೊರತು ಶಮನಗೊಳ್ಳುವಂತೆ ತೋರುತ್ತಿಲ್ಲ. ಇದೀಗ ತೈಲ ನಿಕ್ಷೇಪಗಳ ಮೇಲೆ, ತೈಲ ಸಂಗ್ರಹಾಗಾರಗಳ ಮೇಲೆ ಕೂಡಾ ಕ್ಷಿಪಣಿ ದಾಳಿ ನಡೆಯುತ್ತಿರುವುದರಿಂದಾಗಿ ತೈಲ ಬಿಕ್ಕಟ್ಟು ಇನ್ನಷ್ಟು ಬಿಗಡಾಯಿಸುತ್ತಿರುವಂತೆ ಕಾಣುತ್ತಿದೆ.



ಇರಾನಿನ ದಕ್ಷಿಣ ಪಾರ್ಸ್ ಗ್ಯಾಸ್ ಫೀಲ್ಡ್ ಮೇಲೆ ಇಸ್ರೇಲ್ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ ಇರಾನ್ ಕೂಡಾ ಕುವೈತ್, ಕತಾರ್, ಬಹರೇನ್, ಅಬುದಾಬಿ ತೈಲ ನಿಕ್ಷೇಪಗಳ ಮೇಲೆ, ತೈಲ ಸಂಗ್ರಹಾಗಾರಗಳ ಮೇಲೆ ನಿರಂತರ ದಾಳಿ ನಡೆಸಲಾರಂಭಿಸಿದೆ. ಈ ಗ್ಯಾಸ್ ಫೀಲ್ಡ್ ಇರಾನಿನ ಪಾಲಿಗೆ ಜೀವನಾಡಿಯಂತಿದ್ದು, ವಿದ್ಯುತ್ ಉತ್ಪಾದನೆಗೆ, ಆಂತರಿಕ ಬಳಕೆಗೆ ಅತಿ ಮುಖ್ಯವಾಗಿದೆ. ಅದರ ಮೇಲೆ ನಡೆದ ದಾಳಿಗೆ ಇರಾನ್ ಪ್ರತೀಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಕೊಲ್ಲಿಯಲ್ಲಿ ಸಮರ ಆರಂಭವಾದಾಗಿನಿಂದ ಜಾಗತಿಕ ತೈಲ ಬೆಲೆ ಏರುತ್ತಾ ಬಂದಿದ್ದು ಈಗಂತೂ ಶೇ. 47ರಷ್ಟು ಏರಿಕೆ ಕಂಡಿದೆ ಎಂಬುದಾಗಿ ಮಾರುಕಟ್ಟೆ ಮೂಲಗಳು ಹೇಳುತ್ತಿವೆ. ಪ್ರತಿ ಬ್ಯಾರೆಲ್‌ಗೆ ತೈಲ ಬೆಲೆಯು 120 ಡಾಲರ್‌ಗೂ ಮೀರಬಹುದೆಂದು ಭೀತಿ ಪಡಲಾಗಿದ್ದು ಹಾಗಾದಲ್ಲಿ ಇದು ಜಾಗತಿಕವಾಗಿ ತೈಲ ಬೆಲೆಯನ್ನು ಗಗನಕ್ಕೇರಿಸಲಿದೆ.

ಭಾರತವು ಪೆಟ್ರೋಲ್, ಡೀಸೆಲ್ ಪೂರೈಕೆಯಲ್ಲಿ ಸದ್ಯಕ್ಕೆ ದೊಡ್ಡ ಪ್ರಮಾಣದ ಬಿಕ್ಕಟ್ಟು ಎದುರಿಸದಿದ್ದರೂ ಕೊಲ್ಲಿ ಸಮರವು ದೀರ್ಘಾವಧಿಗೆ ಎಳೆಯಲ್ಪಟ್ಟಲ್ಲಿ ತಾನೂ ಬಿಕ್ಕಟ್ಟು ಎದುರಿಸಬೇಕಾದೀತು. ಈಗಾಗಲೆ ಅಡುಗೆ ಅನಿಲದ ಸಮಸ್ಯೆಯು ದೇಶವನ್ನು ಗಂಭೀರವಾಗಿ ಕಾಡತೊಡಗಿದೆ. ಇದರ ಜತೆಗೇ ಪೆಟ್ರೋಲಿಯಂ ತೈಲಗಳ ಬೆಲೆ ಏರಿಕೆಯು ಸಹಜವಾಗಿಯೇ ಇನ್ನಿತರ ವಸ್ತುಗಳ ಬೆಲೆಯೇರಿಕೆಗೆ ಕಾರಣವಾಗಿ ದೇಶದ ಆರ್ಥಿಕತೆಯ ಮೇಲೆಯೇ ಪ್ರತಿಕೂಲ ಪರಿಣಾಮ ಬೀರಬಹುದು. ಇದರಿಂದಾಗಿ ದೇಶದ ಆರ್ಥಿಕ ಪ್ರಗತಿಯ ದರವು ಕುಂಠಿತವಾಗಬಹುದು. ಭಾರತವು ತನ್ನ ಕಚ್ಚಾ ತೈಲದ ಶೇ. 85ರಷ್ಟನ್ನು ಕೊಲ್ಲಿ ರಾಷ್ಟ್ರಗಳಿಂದಲೇ ಆಮದು ಮಾಡಿಕೊಳ್ಳುತ್ತಿರುವುದರಿಂದ ಹಾಗೂ ಹೊರ್ಮುಜ್ ಜಲಸಂಧಿ ಇನ್ನೂ ಮುಕ್ತವಾಗದಿರುವುದರಿಂದ ಸಮರವು ಮುಂದುವರಿದಷ್ಟೂ ಭಾರತಕ್ಕೆ ಹಾನಿ ಹೆಚ್ಚಾದೀತು. ಭಾರತ ಸರಕಾರವು ದೇಶದಲ್ಲಿ ತೈಲ ಪೂರೈಕೆ ಮತ್ತು ಅಡುಗೆ ಅನಿಲ ಪೂರೈಕೆ ಅಭಾದಿತವಾಗಿರಲು ಸರ್ವಪ್ರಯತ್ನಗಳನ್ನು ಮಾಡುತ್ತಿದೆಯಾದರೂ, ಸಂಭವನೀಯ ಬಿಕ್ಕಟ್ಟಿನ ಪ್ರಮಾಣ ಕಡಿಮೆ ಮಾಡುವಲ್ಲಿ ನಾಗರಿಕರ ಪಾತ್ರವೂ ಮಹತ್ವದ್ದಾಗಿದೆ. ಇಂಧನದ ಮಿತಬಳಕೆಯತ್ತ ಮತ್ತು ಪರ್ಯಾಯ ಇಂಧನ ಬಳಸುವತ್ತ ಜನರು ಕೂಡಾ ಗಮನ ಹರಿಸಬೇಕಾಗಿದೆ.

ನೀವು ವಿನಾ ಕಾರಣ ಮಾತನಾಡುತ್ತೀರಾ?

ಮಾತನಾಡುವ ಕಲೆ ನಿಮ್ಮದಾದರೆ ನೀವು ಹೇಳಿದ ಭಾವನೆಗಳನ್ನೇ ಕೇಳುಗರು ಸಹಾ ಅರ್ಥ ಮಾಡಿಕೊಳ್ಳುವುದನ್ನು ನೀವು ಕಾಣುತ್ತೀರಿ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಹೌದು, ಎಲ್ಲರೂ ವಿನಾ ಕಾರಣ ಮಾತನಾಡುವುದು ಸಾಮಾನ್ಯ. ಆದರಿಂದ ಯಾವುದೇ ಪರಿಣಾಮ ಆಗುವುದಿಲ್ಲ ಎಂದು ಎಲ್ಲರೂ ಅಂದುಕೊಂಡಿದ್ದಾರೆ. ಅತಿಯಾಗಿ ಮಾತನಾಡುವುದರಿಂದ, ಅನವಶ್ಯವಾಗಿ ಮಾತನಾಡುವುದರಿಂದ, ವಿನಾ ಕಾರಣ ಮಾತನಾಡುವುದರಿಂದ ಎಲ್ಲರಿಗೂ ಕಿರಿಕಿರಿ, ಬೇಸರ, ನೋವು, ಅವಮಾನ ಹೀಗೆ ಏನೆಲ್ಲಾ ಆಗುತ್ತದೆ. ಕೆಲವರು ಅದನ್ನು ವ್ಯಕ್ತಪಡಿಸುತ್ತಾರೆ. ಕೆಲವರು ಮನದಲ್ಲೇ ಇಟ್ಟುಕೊಂಡು ನೋವನ್ನು ಅನುಭವಿಸುತ್ತಾರೆ.

ಅತಿಯಾದ ಮಾತು ನಿಮ್ಮ ಸಂಬಂಧವನ್ನು ಒಡೆಯುತ್ತದೆ. ಹಾಗೂ ದ್ವೇಷವನ್ನು ಹುಟ್ಟುಹಾಕುತ್ತದೆ. ಮಾತಿನ ತೂಕ ತಪ್ಪಿ ಗೌರವ ಹಾಳಾಗುತ್ತದೆ. ಇತರರ ದೃಷ್ಟಿಯಲ್ಲಿ ನೀವು ಹೀನರಾಗುತ್ತೀರಿ. ಜಗಳಗಳು ಸೃಷ್ಟಿಯಾಗುತ್ತವೆ. ಅನಗತ್ಯ ವಾದಗಳು, ಪರಸ್ಪರ ಅವಹೇಳನ, ಸಮಸ್ಯೆಗಳು ಉಂಟಾಗುತ್ತವೆ. ಕೆಲವೊಮ್ಮೆ ಬಾಯಿಚಪಲದಿಂದಾಗಿ ಅಮಾಯಕರಿಗೆ ತೊಂದರೆಯಾಗುತ್ತದೆ. ಮನೆಯವರಿಗೆ ಇರಿಸುಮುರುಸಾಗುತ್ತದೆ. ಅದರಲ್ಲೂ ಚಾಡಿಯಂತೂ ಇನ್ನೊಬ್ಬರ ಬಾಳನ್ನೇ ಹಾಳುಮಾಡಬಹುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಬೇರೆಯವರಿಗೆ ಮಾತನಾಡಲೇ ಅವಕಾಶ ಕೊಡದಂತೆ ಮಾತನಾಡುವುದು ಗೀಳಾಗಿ ಪರಿವರ್ತನೆಯಾಗುತ್ತದೆ. ಸುಳ್ಳು ಮೊದಲಿಗೆ ಇನ್ನೊಬ್ಬರ ಬಾಳನ್ನು ಹಾಳುಮಾಡುತ್ತದೆ, ಬಳಿಕ ಅವರದೇ ಬಾಳನ್ನು ನುಂಗಿ ಹಾಕಿ ಬಿಡುತ್ತದೆ. ಹೀಗೆ ಮಾತಿನ ಸಮಸ್ಯೆಗಳು ಅಂದರೆ ಅತಿಯಾದ ಮಾತು, ಅನವಶ್ಯಕ ಮಾತು, ಚಾಡಿ ಹೇಳುವುದು, ಸುಳ್ಳು ಹೇಳುವುದು, ತುಂಬಾ ವಾದ ಮಾಡುವುದು, ಮಾತಿಗೆ ಮಾತು ಬೆಳೆಸುತ್ತಾ ಪರಸ್ಪರ ಹಳಿಯುವುದು, ಬೈಯುವುದು, ತೆಗಳುವುದು, ಕೆಟ್ಟ ಶಬ್ದಗಳ ಬಳಕೆ ಮಾಡುವುದು. ಹೀಗೆ ಇವುಗಳಿಗೆಲ್ಲಾ ಕಾರಣ ವಿಶುದ್ಧ ಚಕ್ರದ ಅಸಮತೋಲನ.

ಮಾತನಾಡುವಾಗ ಉಗ್ಗುವುದು, ತಡೆತಡೆದು ಮಾತನಾಡುವುದು, ಸಂಕೋಚ ಪಡುವುದು, ಭಯ ಪಡುವುದು, ಗಂಟಲಿನಲ್ಲಿ ಕಿಚ್ ಕಿಚ್ ಆಗುವುದು, ಕೆಮ್ಮು ಬರುವುದು, ನಾಲಿಗೆ ಹಿಡಿದಂತೆ ಆಗುವುದು, ಮನಸ್ಸಿನಲ್ಲಿ ಒಂದು ಬಾಯಲ್ಲಿ ಇನ್ನೊಂದು ಬರುವುದು, ವಿರಾಮವೇ ಇಲ್ಲದೇ ಮಾತನಾಡುತ್ತಲೇ ಇರುವುದು, ಇನ್ನೊಬ್ಬರಿಗೆ ಮಾತನಾಡಲು ಬಿಡದೇ ಅವರನ್ನು ತಿವಿದು ತಿವಿದು ಮಾತನಾಡುವುದು ಇವೂ ಸಹಾ ವಿಶುದ್ಧ ಚಕ್ರದ ಅಸಮತೋಲನದ ಗುರುತುಗಳು. ಅದನ್ನು ನಿವಾರಿಸುವುದು, ಬಿಡುವುದು, ಸರಿಪಡಿಸುವುದು ಸುಲಭವಲ್ಲ. ಕೆಲವರಿಗೆ ಮಾತನಾಡುವ ಹುಚ್ಚೇ ಹಿಡಿದಿರುತ್ತದೆ. ಅವರಿಗೆ ಇನ್ನೊಬ್ಬರ ಮಾತೇ ಬೇಕಾಗಿಲ್ಲ, ಅಂತಹವರು ಜೀವನ ಪೂರ್ತಿ ಮಾತನಾಡುತ್ತಲೇ ಇರುತ್ತಾರೆ. ನಿಲ್ಲಿಸುವುದು ಒಂದೇ ಬಾರಿ!

ನಿಧಾನವಾಗಿ, ಸ್ಪಷ್ಟವಾಗಿ ಮಾತನಾಡುವುದು ಸರಿಪಡಿಸುವ ಮೊದಲ ಹೆಜ್ಜೆ. ನೀವು ಬಳಸುವ ಭಾಷೆ ನಾಗರಿಕ ಸಮಾಜ ಮೆಚ್ಚುವಂತೆ ಇರಬೇಕು. ಸ್ವರ ತೀರಾ ಚಿಕ್ಕದಾಗಿ ಅಲ್ಲದೇ, ಅತಿ ದೊಡ್ಡದಾಗಿ ಅಲ್ಲದೇ, ಮೃದುವಾಗಿ ಮತ್ತು ನೇರವಾಗಿ ಇರಬೇಕು. ನೀವು ಮೊದಮೊದಲು ಮಾತನಾಡಿದಾಗ ಎಲ್ಲರೂ ನಿಮ್ಮ ಮುಖವನ್ನೇ ನೋಡುತ್ತಿದ್ದಾರೆ ಎನ್ನಿಸಿತ್ತಾ?! ಆಗ ನಿಮಗೆ ಭಯ ಆತಂಕಗಳು ತಾನಾಗಿಯೇ ಬರುತ್ತವೆ. ಬಳಿಕ ನೀವು ಪ್ರಖ್ಯಾತರಾಗುತ್ತಾ ಹೋದಂತೆ, ನಿಮ್ಮ ಮಾತಿಗೆ ಬೆಲೆ ಸಿಕ್ಕಿತು. ಪರಿಣಾಮ ಗಂಟಲಿನ ಅಡಚಣೆಗಳು ಕಡಿಮೆಯಾಗುವುದು ಸಹಜ. ಎಷ್ಟೇ ಮಾತನಾಡಿದರು ಒಮ್ಮೆ ನಿಮಗೆ ಎಲ್ಲಾ ತರಹದ ಸಮ್ಮಾನಗಳು ಸಿಕ್ಕಿದವು ಎಂದಾದರೆ ನಿಮ್ಮ ಮಾತೆಲ್ಲಾ ಮಾಣಿಕ್ಯ ಎನ್ನುವವರು ಇದ್ದಾರೆ.

ನೀವು ಪ್ರತಿಯೊಂದು ಕ್ರಿಯೆ, ಮಾತಿಗೂ, ಪ್ರಶ್ನೆಗೂ, ಉತ್ತರವನ್ನು ಮಾತಿನಲ್ಲೇ ಕೊಡಬೇಕೆಂದು ಎಂದವರು ಯಾರು. ನಿಮ್ಮ ಬಾಯಿನಿಂದಲೂ ಪ್ರಬಲ ವಾದಕ್ಕಿಂತ ಹೆಚ್ಚಾಗಿ ದೇಹಭಾಷೆಯನ್ನು ವ್ಯಕ್ತಪಡಿಸುವ ಕೈಗಳಿವೆ. ಮುಖವಿದೆ. ಇವುಗಳು ಸಹಾ ಮಾತನಾಡುತ್ತವೆ! ಪ್ರತಿಕ್ರಿಯೆಯನ್ನು ನೀಡುತ್ತವೆ!! ಭಾವನೆಗಳನ್ನು ವ್ಯಕ್ತ ಪಡಿಸಬಲ್ಲವು. ನೀವು ಪ್ರಯತ್ನ ಮಾಡಬೇಕು ಅಷ್ಟೇ!

ನೀವು ಮಾತನಾಡುವುದೇ ಆದರೆ ನಿಮ್ಮ ಸ್ವರಸ್ವಭಾವವಾಗಿರಲಿ. ಭಾಷೆಯ ಯಾವುದೇ ಆದರೂ ನಿಮಗೆ ಗೊತ್ತಿರಲಿ. ಸಣ್ಣ ವಾಕ್ಯಗಳನ್ನು ಮಾಡಿ. ಅಂದರೆ ಕಡಿಮೆ ಪದಗಳಿಂದ ಕೂಡಿದ ವಾಕ್ಯಗಳ ರಚನೆ ಮಾಡಿ ಮಾತನಾಡಿ. ಒಂದು ಸಂಗತಿ ಮುಗಿಯುವುದರ ಒಳಗೆ ಮತ್ತೊಂದು ಹೇಳಬೇಡಿ. ಕ್ರಮಬದ್ಧವಾಗಿ ಒಂದರ ನಂತರ ಇನ್ನೊಂದು ಸಂಗತಿಗಳನ್ನು ಹೇಳಿ. ಎಲ್ಲವನ್ನೂ ಒಟ್ಟಿಗೆ ಒದರಬೇಡಿ. ಹೀಗೆ ಹೇಳಲು ಪೂರ್ವ ತಯಾರಿ ಬೇಕೇಬೇಕು. ನಿಮ್ಮ ಮಾತುಗಳು ಹೆಚ್ಚು ಹೆಚ್ಚು ಇದ್ದರೆ ಕೇಳುಗರಿಗೆ ಬೇಸರ ಬರಬಹುದು. ಅದಕ್ಕಾಗಿ ಮಧ್ಯೆ ವಿಷಯಕ್ಕೆ ಪೂರಕವಾದ ಒಂದು ಆಟ ಆಡಿಸಿ. ಅಥವಾ ಕತೆ ಹೇಳಿ. ತಮಾಷೆ ಮಾಡಿ. ಆಡುವ ಮಾತುಗಳಲ್ಲಿ ಭಾವನೆಗಳಿಗೆ ತಕ್ಕಂತಹ ಏರಿಳಿತಗಳು ಇರಲಿ. ರಸಗಳು ತುಂಬಿರಲಿ. ನೀವು ಆಡುವ ಮಾತಿನ ಸತ್ವ ಮತ್ತು ನಿಮ್ಮ ದೇಹ ಭಾಷೆ ಒಂದಕ್ಕೊಂದು ಪೂರಕವಾಗಿರಲಿ. ಮಾತನಾಡುವುದು ಮುಖ್ಯವಲ್ಲ ಒಂದು ಸಂಗ್ರಹಿಸಿರುವ ಇದ್ದರೆ ನೀವು ಆತ್ಮವಿಶ್ವಾಸದಿಂದ ಮಾತನಾಡಲು ಸಾಧ್ಯ ಎಂದು ಒಬ್ಬ ಶಿಷ್ಯನಲ್ಲಿ ಹೇಳಿದ್ದೆ. ಒಬ್ಬ ಗೆಳೆಯನ ತಂದೆ ತೀರಿಹೋಗಿದ್ದರು. ಅವರನ್ನು ಮಾತನಾಡಿಸಲು ಹೋಗಿದ್ದೆವು. ಈ ನನ್ನ ಶಿಷ್ಯ ತುಂಬಾ ಉತ್ಸಾಹದಿಂದ ನನ್ನ ಗುರುತ್ವಾ "ನಿಮ್ಮ ತಂದೆ ತೀರಿ ಹೋಗಿರುವುದು ಎಲ್ಲರಿಗೂ ತುಂಬಾ ದುಃಖದ ಸಂಗತಿ ಎಂದು ಪ್ರಾರಂಭಿಸಿದರು. ಅವರ ಮಕ್ಕಳಾದ ನೀವು ಅವರ ದಾರಿಯಲ್ಲೇ ನಡೆಯಿರಿ ಎಂದು ಹೇಳಿದರು" ವಕ್ಕರದಲ್ಲಿದ್ದವರೆಗೆ ನನ್ನ ಶಿಷ್ಯನ ಮಾತನಾಡುತ್ತಿದ್ದಾನೆ ಎಂದುಕೊಳ್ಳುತ್ತಿದ್ದಂತೆ ನನ್ನ ಕಡೆಯೇ ತಿರುಗಿ, ನನ್ನ ಮಾತು ಮತ್ತು ಭಾವನೆಗಳು ಎಲ್ಲಾ ಸರಿಯಾಗಿದೆಯಾ ಸಾರ್ ಎಂದು ಕೇಳಿದ. ಗೆಳೆಯ ನಮ್ಮಿಬ್ಬರನ್ನು ಸಿಟ್ಟಿನಿಂದ ನೋಡಿ ಇನ್ನೊಬ್ಬರನ್ನು ಮಾತನಾಡಿಸಲು ಹೋದ.

ನಿಮ್ಮ ಮನದಾಳದ ಮಾತುಗಳಾದರೆ ನಿಮ್ಮ ಸಹಾನುಭೂತಿಯ ಜೊತೆ ನೇರವಾಗಿ ಇರುತ್ತದೆ. ಮತ್ತು ತಮ್ಮ ಗ್ರಹಿಕೆಯಾಗದಂತೆ ಪದಗಳ ಜೋಡಣೆ ಇರುತ್ತದೆ. ಅದು ಮನದಿಂದ ಬಂದ ಕಾರಣ ಅದಕ್ಕೆ ವಾದ ಇರುವುದಿಲ್ಲ. ಪೂರಕವಾದ ಸಂಗತಿಗಳು ಇರುತ್ತವೆ. ಅಥವಾ ಮೌನದ ಜೊತೆ ಇರುತ್ತದೆ. ನೀವದನ್ನು ಕೇಳಿಸಿಕೊಳ್ಳುತ್ತೀರಿ ಮತ್ತು ತಲೆದೂಗುತ್ತೀರಿ ಅಥವಾ ನಿಮಗದನ್ನು ಅನ್ವಯಿಸಿಕೊಳ್ಳುತ್ತೀರಿ. ಅದರಲ್ಲಿ ಯಾವುದೇ ಸಂಘರ್ಷ ಇರುವುದಿಲ್ಲ.

ಮಾತನಾಡುವ ಕಲೆ ನಿಮ್ಮದಾದರೆ ನೀವು ಭಾವನೆಗಳನ್ನು ಸೂಕ್ತವಾಗಿ ವ್ಯಕ್ತ ಪಡಿಸುವುದಷ್ಟೇ ಅಲ್ಲ, ನೀವು ಹೇಳಿದ ಭಾವನೆಗಳನ್ನೇ ಕೇಳುಗರು ಸಹಾ ಅರ್ಥ ಮಾಡಿಕೊಳ್ಳುವುದನ್ನು ನೀವು ಕಾಣುತ್ತೀರಿ. ನಿಮ್ಮ ಆಲೋಚನೆಗಳೆಲ್ಲಾ ನಿರ್ದಿಷ್ಟವಾದ ಪದಗಳಾಗಿ ಬದಲಾಗುತ್ತವೆ. ಅಂದರೆ ಹೃದಯ ಮತ್ತು ಮಿದುಳು ಜೊತೆಗೂಡುತ್ತವೆ. ಪರಿಣಾಮ ನಿಮ್ಮೊಳಗೆ ಒಂದು ಶಾಂತಿ ನೆಲೆಸುತ್ತದೆ. ಸೂಕ್ತವಾಗಿ ಹೊರ ಹಾಕಿದೆ ಎನ್ನುವ ನೆಮ್ಮದಿ ಅದು.

ವ್ಯಕ್ತಿಪರ ಮಾತುಗಳು

ಸಭೆಗಳು ಮತ್ತು ಸಮಾರಂಭಗಳು ನಿಮ್ಮನ್ನು ಅಗ್ನಿದಿವ್ಯಕ್ಕೆ ಒಳಗಾಗಿಸುತ್ತವೆ. ಅಂದರೆ ನಿಮ್ಮ ಸಾಮರ್ಥ್ಯವನ್ನು ನಿರ್ಣಯ ಮಾಡುವ ವೇದಿಕೆಗಳು. ಅಲ್ಲಿ ನಿಮ್ಮ ಮಾತೇ ನಿಮ್ಮ ವ್ಯಕ್ತಿತ್ವವನ್ನು ನಿರ್ಣಯಿಸುತ್ತದೆ. ನಿಮ್ಮ ದೇಹ ಭಾಷೆ, ನಿಮ್ಮ ನಿಲುವು, ನಿಮ್ಮ ತೀರ್ಮಾನಗಳು, ನಿಮ್ಮ ದೃಷ್ಟಿಕೋನ ಇವೆಲ್ಲವೂ ಅಲ್ಲಿ ಎಲ್ಲರಿಗೂ ಕಾಣುತ್ತದೆ. ನೀವು ನೀವಾಡುವ ಮಾತಿನಿಂದ ಮಾತ್ರವಲ್ಲ, ನಿಮ್ಮ ಎಲ್ಲಾ ರೀತಿಯ ಚರ್ಯೆಗಳಿಂದ ಗುರುತಿಸಲ್ಪಡುತ್ತೀರಿ. ನಿಮಗೆ ಅಲ್ಲಿ ಯಾವುದನ್ನೂ ಮುಚ್ಚಿಡಲು ಆಗುವುದಿಲ್ಲ. ನಿಮ್ಮ ಭಯ, ಆತಂಕಗಳು, ನಿಮ್ಮ ಒರಟುತನ, ನಿಮ್ಮ ಮೃದುತ್ವ ನಿಮ್ಮ ಆಲೋಚನಾ ರೀತಿಗಳು ಹೀಗೆ ಎಲ್ಲವೂ ನಿಮ್ಮ ವರ್ತನೆಯಿಂದಲೇ ಸಾರ್ವಜನಿಕರಿಗೆ ತಿಳಿದುಹೋಗುತ್ತದೆ. ಹೀಗಾಗಿ ನೀವು ಯಾರು, ಏನು, ಹೇಗೆ ಎನ್ನುವುದೆಲ್ಲಾ ಸಾರ್ವಜನಿಕ ಬದುಕಿನಲ್ಲಿ ಬಹಿರಂಗವಾಗುತ್ತದೆ.

ನೀವು ಮಾತನಾಡುವ ಸಭೆ ಅಥವಾ ಸಮಾರಂಭ ಯಾವುದು ಎನ್ನುವ ಅರಿವನ್ನು ಮೊದಲೇ ತಿಳಿದುಕೊಳ್ಳುವುದು ಒಳ್ಳೆಯದು. ಅದು ಬೃಹತ್ ಬಹಿರಂಗ ಸಭೆಯೋ, ಸಾಮಾನ್ಯ ಸಭೆಯೋ, ಗ್ರಾಮ ಸಭೆಯೋ ಅಥವಾ ನಿರ್ದೇಶಕರ ಸಭೆಯೋ ಹೀಗೆ ನಾನಾ ರೀತಿಯ ಸಭೆಗಳ ಕುರಿತು ನಿಮಗೆ ಮೊದಲೇ ಮಾಹಿತಿ ಇದ್ದರೆ ನೀವು ಅದಕ್ಕೆ ಬೇಕಾದ ಪೂರ್ವ ತಯಾರಿಯನ್ನು ಮಾಡಿಕೊಳ್ಳುವುದು ಸುಲಭವಾಗುತ್ತದೆ. ಸಭೆಯಲ್ಲಿ ಚರ್ಚಿಸುವ ವಿಷಯಗಳ ಅರಿವೂ ಸಹಾ ತುಂಬಾ ಮುಖ್ಯ. ಅಲ್ಲಿ ನೀವು ಯಾವ ಉದ್ದೇಶದಿಂದ ಮಾತನಾಡಲು ಹೋಗುತ್ತೀರಿ ಎನ್ನುವುದು ನಿಮಗೆ ಗೊತ್ತಿರಬೇಕು. ನೀವು ವಿರೋಧಿಗಳೋ, ಪರವಾಗಿರುವವರೋ, ಅಥವಾ ಪ್ರತಿಕ್ರಿಯಿಸುವವರೋ ಎನ್ನುವುದನ್ನು ತಿಳಿದುಕೊಂಡು ಅದಕ್ಕೆ ತಕ್ಕ ತಯಾರಿಯೂ ಸಹಾ ಅಗತ್ಯ. ಹೀಗೆ ನೀವು ಬಾಲ್ಯದಿಂದಲೇ ಕಲಿಯುತ್ತಾ ಹೋದಂತೆ ನಿಮ್ಮ ವಿಶುದ್ಧ ಚಕ್ರ ಸದಾ ಸಮತೋಲನದಲ್ಲಿ ಇರುತ್ತದೆ.

ಸಮಾರಂಭಗಳಲ್ಲಿ ನೀವು ತುಂಬಾ ವಿಶೇಷವಾಗಿ ಮಾತನಾಡಬೇಕಾಗುತ್ತದೆ. ಅದು ಮದುವೆಯೋ, ವೈಕುಂಠ ಸಮಾರಾಧನೆಯೋ, ಹೋಮ ಹವನಗಳೋ, ನವರಾತ್ರಿ ಪೂಜೆಯೋ, ಸತ್ಯನಾರಾಯಣ ಕತೆಯೋ, ವಿದ್ವದ್ಜನರ ಸಮಾವೇಶವೋ, ಹೀಗೆ ಯಾವುದು ಸಮಾರಂಭ ಎನ್ನುವುದು ತುಂಬಾ ಮುಖ್ಯ. ಇಲ್ಲದಿದ್ದರೆ ನೀವು ಜನರ ಮಧ್ಯೆ ಕಳೆದುಹೋಗುತ್ತೀರಿ. ನೀವು ತಮಾಷೆ ಮಾಡುವುದು ಮತ್ತು ನಿಮ್ಮನ್ನೇ ನೀವು ತಮಾಷೆಗೆ ಒಳಪಡಿಸಿಕೊಳ್ಳುವುದನ್ನು ಕಲಿತಿರಬೇಕು. ಗಂಭೀರವಾದ ವಿಷಯವನ್ನು ಮಾತನಾಡುವಾಗ ಅದರ ಸಂಪೂರ್ಣ ಜ್ಞಾನವನ್ನು ಪಡೆದುಕೊಂಡಿರಬೇಕು. ಮಾಹಿತಿಗಳು ಗೊತ್ತಿರಬೇಕು. ಆಗ ನಿಮ್ಮ ಮಾತು ಮೌಲ್ಯಯುತವಾಗಿರುತ್ತದೆ.

ಆತತಾಯಿಗಳು

ಅಗ್ನಿದೋ ದಗರದಶ್ಚೈವ ಶಸ್ತ್ರಪಾಣಿರ್ಧನಾಪಹಃ ।
ಕ್ಷೇತ್ರಧಾರಾಹರಶ್ಚೈವ ಷಡೇತೇ ಆತತಾಯಿನಃ॥

ಬೇರೆಯವರ ಆಸ್ತಿಗೆ ಬೆಂಕಿಯಿಡುವವ, ಪರರ ಬದುಕಿಗೆ ವಿಷವನ್ನು ಇಕ್ಕುವವ, ಆಯುಧ ಹಿಡಿದ ಕೊಲೆಗಾರ, ಸಂಪತ್ತನ್ನು ಅಪಹರಿಸುವವ, ಭೂಮಿಯನ್ನು ಕಬಳಿಸುವವ ಮತ್ತು ಪರಸ್ತ್ರೀಯನ್ನು ಅಪಹರಿಸುವವ– ಈ ಆರು ಬಗೆಯ ಜನರು ಆತತಾಯಿಗಳು– ಎಂಬುದು ಶ್ಲೋಕಾರ್ಥ.

ಆತತಾಯಿಗಳು ಎಂದರೆ ಕೊಲ್ಲುವ ಪ್ರಯತ್ನವುಳ್ಳವನು, ಕೊಲ್ಲುವ ಸ್ವಭಾವದವನು, ಇತರರನ್ನು ಹಿಂಸಿಸುವವನು ಎಂದರ್ಥ. ಸ್ವಾರ್ಥಕ್ಕಾಗಿಯೋ ವಿಕ್ಷಿಪ್ತ ಆತ್ಮಸಂತೋಷಕ್ಕಾಗಿಯೋ ಬೇರೆ ಬೇರೆ ಕಾರಣಕ್ಕಾಗಿ ಪರರನ್ನು ಹಿಂಸಿಸಿ ವಿಕೃತ ಖುಷಿಯನ್ನು ಅನುಭವಿಸುವ ಮಾನಸಿಕ ಸ್ಥಿತಿ ಇವರದು. ಇವರ ಮನಸ್ಸೇ ವಿಕ್ಷಿಪ್ತ. ಯಾವೆಲ್ಲ ಕಾರಣಕ್ಕಾಗಿ ಇವರು ಈ ರೀತಿ ವರ್ತಿಸುತ್ತಾರೆ ಎಂಬುದು ಊಹಿಸುವುದು ಕಷ್ಟ. ಆದರೂ ಪ್ರಕೃತ ಶ್ಲೋಕದಲ್ಲಿ ಆತತಾಯಿಗಳ ಆರು ಅಂಶವನ್ನು ಗುರುತಿಸಿ ನೀಡಲಾಗಿದೆ.



ಬೇರೆಯವರ ಆಸ್ತಿಗೆ ಬೆಂಕಿಯಿಡುವವರು ಆತತಾಯಿಗಳು. ಇವರಿಗೆ ಇನ್ನೊಬ್ಬರ ಸಂಪತ್ತು, ಆಸ್ತಿ, ಬೆಳವಣಿಗೆ ಇವುಗಳನ್ನು ನೋಡಿ ಸಹಿಸಿಕೊಳ್ಳಲು ಆಗುವುದಿಲ್ಲ. ಇತರರು ಸಂತೋಷದಿಂದ ಬದುಕುವುದನ್ನು ನೋಡಿ ಸಹಿಸಲಾರದೇ ಅವರನ್ನು ಹಾಳು ಮಾಡುವ ಕುತ್ಸಿತ ಮಾನಸಿಕತೆ ಇವರದ್ದು. ತಾವಂತೂ ಚೆನ್ನಾಗಿ ಬದುಕರು. ಚೆನ್ನಾಗಿ ಬದುಕುವವರನ್ನು ನೋಡಿ, ಮಾರ್ಗದರ್ಶನ ಪಡೆದು ತಾವೂ ಚೆನ್ನಾಗಿ ಬದುಕಲು ಬಯಸಬೇಕು. ಇದಕ್ಕೆ ಬದಲಾಗಿ ಚೆನ್ನಾಗಿರುವವರನ್ನು ನೋಡಿ ವಿಷಕಕ್ಕುವವರು, ವಿಷವಿಕ್ಕುವವರು ಆತತಾಯಿಗಳೆನಿಸುತ್ತಾರೆ. ಇವರಲ್ಲಿ ಮಾನವೀಯತೆ, ಸಭ್ಯತೆ, ಸಜ್ಜನಿಕೆ ಎಂದೆಂದೂ ಅರಳುವುದಿಲ್ಲ.

ಆಯುಧಾದಿಗಳನ್ನು ಹಿಡಿದು ಕೊಲ್ಲಲು ಮುಂದಾಗುವವರು, ಕೊಲ್ಲುವವರು ಆತತಾಯಿಗಳು. ಇವರು ಸ್ವಾರ್ಥಿಗಳಾಗಿರಬಹುದು ಅಥವಾ ಮತಾಂಧರಾಗಿರಬಹುದು. ಇವರಿಗೆ ಸ್ವಂತದಾದ ಉದ್ದೇಶವಿರುತ್ತದೆ. ಅದನ್ನು ಸಾಧಿಸಲು ಕೊಲ್ಲುವುದಕ್ಕೂ ಹೇಸುವುದಿಲ್ಲ. ಸ್ವಾರ್ಥ ಸಾಧನೆಯ ಮುಂದೆ ಯಾವ ಸಂಬಂಧವೂ ಇರುವುದಿಲ್ಲ.

ಇನ್ನೊಂದು ಬಗೆಯ ಆತತಾಯಿಗಳು ಸಂಪತ್ತನ್ನು ಅಪಹರಿಸುವವರು. ಇವರಿಗೆ ಹೇಗಾದರೂ ಮಾಡಿ ಸಂಪತ್ತನ್ನು ಕೂಡಿಹಾಕುವ ದುರಾಸೆ ಇರುತ್ತದೆ. ಸಂಪತ್ತಿನ ಗಳಿಕೆಗಾಗಿ ಯಾವ ಮಾರ್ಗವನ್ನೂ ತುಳಿಯಬಲ್ಲರು. ಕೊಲೆ, ಸುಲಿಗೆ, ವಂಚನೆ , ಮೋಸ.. ಇದಾವ ಪ್ರಶ್ನೆಯೂ ಇರುವುದಿಲ್ಲ, ತನ್ನವರು, ಬೇರೆಯವರು, ಸಜ್ಜನರು... ಇತ್ಯಾದಿ ಯಾವ ಭಾವನೆಯೂ ಇರುವುದಿಲ್ಲ, ಪಾಪ–ಪುಣ್ಯದ ಗೊಡವೆಯೂ ಇಲ್ಲದೆ ಯೇನಕೇನ ಪ್ರಕಾರೇಣ ಹಣ ಗಳಿಸಲು ಮುಂದಾಗುವವರೂ ಆತತಾಯಿಗಳೆನಿಸುತ್ತಾರೆ.

ಆಸ್ತಿಯನ್ನು ಕಬಳಿಸುವ ಸ್ವಭಾವದವರೂ ಆತತಾಯಿಗಳೇ. ಇಂಚಿಂಚಾಗಿ ಆಸ್ತಿಯನ್ನು ಕಬಳಿಸುವವರಿದ್ದಾರೆ. ಮೋಸದಿಂದ ಆಸ್ತಿಯನ್ನು ತಮ್ಮದಾಗಿಸಿಕೊಳ್ಳುವವರಿದ್ದಾರೆ. ತಮ್ಮದಲ್ಲದ ಆಸ್ತಿಯನ್ನು ಕೊಲೆ, ಮೋಸ, ಸುಲಿಗೆ ವಂಚನೆಗಳ ಮೂಲಕ ಹೊಡೆದು ತಿನ್ನುವವರೂ ಆತತಾಯಿಗಳು. ಪರಸ್ತ್ರೀಯರನ್ನು ಅಪಹರಿಸುವವರು ಒಂದು ಬಗೆಯ ಆತತಾಯಿಗಳು. ಆಸೆ ತೋರಿಸಿ, ಉಪಕಾರ ಮಾಡುವವರಂತೆ ನಟಿಸಿ, ಪರಮ ಹಿತೈಷಿಯಂತೆ ತೋರಿಸಿಕೊಂಡು, ಆತ್ಮೀಯತೆಯ ನಾಟಕವಾಡಿ, ಪ್ರೀತಿಯ ನೆಪವೊಡ್ಡಿ ಪರಸ್ತ್ರೀಯರನ್ನು, ಹುಡುಗಿಯರನ್ನು ಅಪಹರಿಸುವವರಿದ್ದಾರೆ. 'ಬ್ಲ್ಯಾಕ್‌ಮೇಲ್' ತಂತ್ರದ ಮೂಲಕ ಅಪಹರಿಸುವವರಿದ್ದಾರೆ. ಇವರು ಆತತಾಯಿಗಳಲ್ಲದೆ ಮತ್ತಾರು?

ಈ ಬಗೆಯ ಜನರೆಲ್ಲರೂ ಆತತಾಯಿಗಳೇ. ಇಂಥವರ ಬಗ್ಗೆ ನಾವು ಯಾವಾಗಲೂ ಜಾಗ್ರತವಾಗಿರಬೇಕು. ಸಮಾಜವನ್ನು ಎಚ್ಚರಗೊಳಿಸಬೇಕು. ಇದು ಲೋಕಹಿತೈಷಿಗಳ ಆದ್ಯ ಕರ್ತವ್ಯವಾಗಿದೆ.

ಸಂಘ ಶಾಖೆ – ಪುರುಷಸಿಂಹರ ನಿರ್ಮಾಣ ಕೇಂದ್ರ

ಒಳನೋಟ
• ಹೆ.ಬಾ. ಮಲ್ಯ



ಗುರೂಜೀ ಗೋಳ್ವಲ್ಕರ್ ಅವರು ಆಗಾಗ ಒಂದು ಶ್ಲೋಕವನ್ನು ಉಲ್ಲೇಖಿಸುತ್ತಿದ್ದರು –

''**ನಾಭಿಷೇಕೋ ನ ಸಂಸ್ಕಾರಃ ಸಿಂಹಸ್ಯಕ್ರಿಯತೇವನ್ಯೈಃ।**
ವಿಕ್ರಮಾರ್ಜಿತ ಸತ್ವಸ್ಯ ಸ್ವಯಮೇವ ಮೃಗೇಂದ್ರತಾ॥''

''ಸಿಂಹಕ್ಕೆ ಯಾರೋ ಬೇರೆಯವರು ರಾಜಾಭಿಷೇಕವನ್ನು, ಇತರ ಸಂಸ್ಕಾರಗಳನ್ನು ಮಾಡುವುದಿಲ್ಲ. ಅದು ತನ್ನ ಸ್ವಯಂ ಪರಾಕ್ರಮದಿಂದ ಗಳಿಸಿದ ಬಲದಿಂದ ಮೃಗರಾಜ ಎನಿಸಿಕೊಂಡಿದೆ''

ಕಾಡಿನಲ್ಲಿ ಹುಲಿ, ಚಿರತೆ, ಆನೆ, ಜಿರಾಫೆಯಂಥ ನೂರಾರು ಜಾತಿಯ ಪ್ರಾಣಿಗಳಿವೆ. ಆದರೆ ಅವುಗಳನ್ನು ಯಾರೂ ಮೃಗರಾಜ ಎನ್ನುವುದಿಲ್ಲ. ಸಿಂಹದಲ್ಲಿ ಧೈರ್ಯ, ಸಾಹಸ, ಬಲ, ಆತ್ಮವಿಶ್ವಾಸ ಮುಂತಾದ ಗುಣಗಳಿರುವುದರಿಂದ ಅದು ಕಾಡಿನ ಅನಭಿಷಿಕ್ತ ರಾಜ ಎನಿಸಿಕೊಂಡಿದೆ. ಮನುಷ್ಯರಲ್ಲೂ ಅಷ್ಟೇ–ಧೈರ್ಯ, ಸಾಹಸ, ಮುನ್ನುಗ್ಗುವಿಕೆಯ ಸ್ವಭಾವ, ಛಲ, ಪರಿಶ್ರಮ, ಏಕಾಂತಿಕನಿಷ್ಠೆ, ಆತ್ಮವಿಶ್ವಾಸ ಇವೇ ಮುಂತಾದ ಶ್ರೇಷ್ಠ ಗುಣಗಳಿದ್ದವನೇ ನಾಯಕನಾಗುತ್ತಾನೆ. Survival of the fittest (ಬಲಿಷ್ಠ ಮಾತ್ರ ಬದುಕಬಲ್ಲ) ಎಂಬುದು ಪಾಶ್ಚಾತ್ಯ ಡಾರ್ವಿನಿಯನ್ ಕಲ್ಪನೆ. ಆದರೆ ಭಾರತದ ಕಲ್ಪನೆಯೇ ಬೇರೆ. ಇಲ್ಲಿ ಬಲದೊಡನೆ ಧರ್ಮರಕ್ಷಣೆ, ಪ್ರಜಾಹಿತ, ದುಷ್ಟನಾಶ, ಶಿಷ್ಟರ ರಕ್ಷಣೆ ಮಾಡುವವನೇ ಶ್ರೇಷ್ಠ ಹಾಗೂ ಆದರ್ಶ ನಾಯಕ ಎನಿಸಿಕೊಳ್ಳುತ್ತಾನೆ. ಅಂಥವನೇ ಆಳಲು, ಚಕ್ರವರ್ತಿಯಾಗಲು ಅರ್ಹತೆ ಉಳ್ಳವನು ಎಂಬ ಭಾವನೆ ಇದೆ. ರಾವಣನಂತೆ ಕೇವಲ ಬಲವಿದ್ದರೆ ಸಾಲದು. ಧರ್ಮದಂತೆ ನಡೆಯುವವನಾಗಬೇಕು. ಇದು ಮಾನದಂಡ. ಅದಕ್ಕೆ ಶ್ರೀರಾಮ, ಶ್ರೀಕೃಷ್ಣ, ಛತ್ರಪತಿ ಶಿವಾಜಿ ಮುಂತಾದವರು ಅವತಾರಿ ಪುರುಷರೆನಿಸಿಕೊಂಡರು.

ಪ್ರಾಣಿಗಳು ಪ್ರಕೃತಿಗೆ ಅನುಗುಣವಾಗಿ ಜೀವಿಸುತ್ತವೆ. ಅವಕ್ಕೆ ಬುದ್ಧಿ ಕಡಿಮೆ. ಮನುಷ್ಯ ಹಾಗಲ್ಲ, ದೇವರು ಅವನಿಗೆ ಹೆಚ್ಚಿನ ಬುದ್ಧಿಶಕ್ತಿ, ವಿವೇಚನಾ ಶಕ್ತಿ, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನು ಕೊಟ್ಟಿದ್ದಾನೆ. ಅವನಲ್ಲಿ ಭಾವನೆಗಳನ್ನು ತುಂಬಿದ್ದಾನೆ. ಈ ಎಲ್ಲಾ ಶಕ್ತಿಗಳಿರುವುದರಿಂದಲೇ ಮಾನವ, ಪ್ರಾಣಿಲೋಕದ ಮೇಲೆ ಅಧಿಪತ್ಯ ಸಾಧಿಸಿದ್ದಾನೆ. ಆನೆ, ಹುಲಿ, ಸಿಂಹಗಳನ್ನು ಪಳಗಿಸಿ ತನ್ನ ಅಂಕೆಯಲ್ಲಿರಿಸಿಕೊಳ್ಳುವ ಬುದ್ಧಿಶಕ್ತಿ, ಸಾಮರ್ಥ್ಯಗಳನ್ನು ಹೊಂದಿದ್ದಾನೆ. ಪ್ರಾಣಿಗಳಿಗೂ ಮನುಷ್ಯನಿಗೂ ಇರುವ ಮುಖ್ಯ ವ್ಯತ್ಯಾಸವೇನು?:–

ಆಹಾರನಿದ್ರಾಭಯಮೈಥುನಂ ಚ ಸಾಮಾನ್ಯಮೇತತ್ ಪಶುಭಿರ್ನ ರಾಣಾಮ್।
ಧರ್ಮೋಹಿತೇಷಾಮಧಿಕೋ ವಿಶೇಷೋ ಧರ್ಮೇಣಹೀನಾಃ ಪಶುಭಿಃ ಸಮಾನಾಃ॥

''ಆಹಾರ, ನಿದ್ರೆ, ಭಯ, ಲೈಂಗಿಕತೆ ಪ್ರಾಣಿಗಳಿಗೆ ಮತ್ತು ಮನುಷ್ಯರಿಗೆ ಸಮಾನ ಹಾಗೂ ಪ್ರಕೃತಿ ಸಹಜವಾದ ಸ್ವಭಾವಗಳು. ಆದರೆ ಪ್ರಾಣಿ ಮತ್ತು ಮನುಷ್ಯರಲ್ಲಿ ವ್ಯತ್ಯಾಸ ತೋರಿಸುವ ಗುಣವೆಂದರೆ ಅದು ಧರ್ಮ. ಧರ್ಮವಿಹೀನವಾದ ಮನುಷ್ಯ ಪ್ರಾಣಿಗೆ ಸಮಾನ''. ಇದು ಈ ಸುಭಾಷಿತದ ಅರ್ಥ. ಮನುಷ್ಯ ಜೀವನದ ಉದ್ದೇಶ ನರನನ್ನು ನಾರಾಯಣನನ್ನಾಗಿ ರೂಪಿಸುವುದು. ಶ್ರೇಷ್ಠ ಸಂಸ್ಕಾರ ಹಾಗೂ ಶಿಕ್ಷಣದಿಂದ ಇದನ್ನು ಸಾಧಿಸಲು ಸಾಧ್ಯ. ಇಂದು ಹಿಂದುಗಳು ಧರ್ಮವನ್ನು ಮರೆಯುತ್ತಿದ್ದಾರೆ. ಅದರಿಂದಲೆ ಎಲ್ಲ ಸಮಸ್ಯೆಗಳು. ವಿಶೇಷವಾಗಿ ಮುಸ್ಲಿಂ ಭಯೋತ್ಪಾದಕರ ಹಾಗೂ ವಿದೇಶೀ ಕ್ರೈಸ್ತ ಮತಾಂತರಿ ಮಿಷನರಿಗಳ ಸಮಸ್ಯೆ. ಇವುಗಳನ್ನೆದುರಿಸಲು ಹಿಂದುಗಳನ್ನು ಪುರುಷ ಸಿಂಹರನ್ನಾಗಿ ರೂಪಿಸಬೇಕಾಗಿದೆ. ಡಾಕ್ಟರ್‌ಜೀ ಮುಂದೆ ಬರಲಿರುವ ಅಪಾಯವನ್ನು ಮನಗಂಡು ರಾ.ಸ್ವ.ಸಂಘವನ್ನು ಸ್ಥಾಪಿಸಿದರು. ದೈನಂದಿನ ಸಂಘ ಶಾಖೆಗಳೇ ಈ ಸಂಸ್ಕಾರ ಶಿಕ್ಷಣ ನೀಡುವ ಕೇಂದ್ರಗಳು. ನೂರು ವರ್ಷಗಳಲ್ಲಿ ಈ ಶಾಖಾ ಶಿಕ್ಷಣ ಅದ್ಭುತ ಫಲ ನೀಡಿದೆ. ಇನ್ನೂ ಹೆಚ್ಚಿನ ಶಕ್ತಿ, ಧೈರ್ಯ–ಸಾಹಸ, ಮುನ್ನುಗ್ಗುವ, ದುಷ್ಟರ ವಿರುದ್ಧ ಹೋರಾಡಿ ಸದೆ ಬಡಿಯುವ ಸ್ವಭಾವವನ್ನು ಹಿಂದುಗಳಲ್ಲಿ ಬೆಳೆಸಬೇಕಾಗಿದೆ. ಸ್ವಯಂಸೇವಕರು, ಕಾರ್ಯಕರ್ತರಲ್ಲಿ ಈ ಸ್ವಭಾವಗಳು ಒಂದಷ್ಟರ ಮಟ್ಟಿಗೆ ವಿಕಾಸಗೊಂಡಿವೆ. ಆದರೆ ಸಮಸ್ತ ಹಿಂದುಗಳಲ್ಲಿ ಈ ಹೋರಾಡುವ ಸ್ವಭಾವ ಬೆಳೆಸಬೇಕಾಗಿದೆ. ಸಾಮಾನ್ಯ ಹಿಂದುಗಳನ್ನೂ ಪುರುಷಸಿಂಹರನ್ನಾಗಿ ರೂಪಿಸಬೇಕಾಗಿದೆ. ಪುರಾಣಕಾಲದಲ್ಲಿ ಭಾರತ ವಿಶ್ವಗುರು ಹಾಗೂ ವಿಶ್ವವಿಜಯಿಯಾಗಿತ್ತು ಎಂಬುದನ್ನು ಕೇಳಿದ್ದೇವೆ. ಗುರುಕುಲಗಳ ಅದ್ಭುತ ಶಿಕ್ಷಣ ವ್ಯವಸ್ಥೆ ಇಂಥ ಪುರುಷಸಿಂಹರನ್ನು ರೂಪಿಸುತ್ತಿತ್ತು. ಇಂದು ಪಾಶ್ಚಾತ್ಯ ಮೆಕಾಲೆ ಶಿಕ್ಷಣ ಹಿಂದುಗಳಲ್ಲಿನ ಈ ಸಂಸ್ಕಾರಗಳನ್ನು ಸಂಪೂರ್ಣವಾಗಿ ಅಳಿಸಿ ಹಾಕಿ ದಾಸ್ಯ ಮನೋಭಾವವನ್ನು ಬೆಳೆಸಿದೆ. ಮೊದಲು ಈ ಮಾನಸಿಕ ದಾಸ್ಯವನ್ನು ತೊಡೆದು ಹಾಕುವ ಅಗತ್ಯವಿದೆ.

ಮನುಷ್ಯ ಪ್ರಾಣಿಗಳನ್ನು ಅಂಕಿತದಲ್ಲಿಟ್ಟುಕೊಂಡಿದ್ದಾನೆ. ಸರ್ಕಸ್ ಸಿಂಹ ಗಳನ್ನು, ರಾಜರುಗಳು ಸಾಕಿದ ಆನೆಗಳನ್ನು ನಾವೆಲ್ಲ ನೋಡಿಯೇ ಇದ್ದೇವೆ. ಅಸಾಮಾನ್ಯ ಬಲವಿದ್ದರೂ ಬುದ್ಧಿಶಕ್ತಿ, ವಿವೇಚನಾ ಶಕ್ತಿ, ಸಂಘೀಭಾವನೆ ಇಲ್ಲದ್ದರಿಂದ ತಮಗಿಂತಲೂ ದುರ್ಬಲನಾದ ಮನುಷ್ಯನಿಂದ ಗುಲಾಮರಂತಾಗಿವೆ. ಪುಕ್ಕಟೆ ಆಹಾರ, ವಸತಿ ಸಿಕ್ಕಿದಾಗ ಅವುಗಳಲ್ಲಿ ಅಡಗಿರುವ ಧೈರ್ಯ, ಸಾಹಸ, ಶಕ್ತಿ ಕ್ರಮೇಣ ಉಡುಗಿ ಹೋಗುತ್ತವೆ. ಭಾರತದಲ್ಲಿನ ಹಿಂದುಗಳ ಪರಿಸ್ಥಿತಿ ಇದೇ ಆಗಿದೆ. ಧೈರ್ಯ, ಶಕ್ತಿ, ಸಾಹಸ, ಪರಾಕ್ರಮ, ಧರ್ಮನಿಷ್ಠೆ, ಬುದ್ಧಿಶಕ್ತಿಯಲ್ಲಿ ಹಿಂದುಗಳು ಯಾರಿಗಿಂತಲೂ ಕಡಿಮೆ ಇರಲಿಲ್ಲ, ಆದರೆ ಕ್ರಮೇಣ ಸ್ವಾರ್ಥ, ಸಂಕುಚಿತತೆ, ಜಾತಿಭೇದಗಳಿಂದ, ಅಸಂಘಟನೆಯ ಕಾರಣದಿಂದ ಹಿಂದುಗಳ ಶಕ್ತಿ ಕುಗ್ಗಿತು. ಸಾವಿರ ವರ್ಷ ವಿದೇಶೀ ಆಕ್ರಮಕರ ಗುಲಾಮಗಿರಿಯಲ್ಲಿ ಕಳೆಯಬೇಕಾಯಿತು. ಮುಂದೆ ರಾಜಕೀಯ ಸ್ವಾತಂತ್ರ್ಯ ಬಂದ ಮೇಲೂ ಈ ಗುಲಾಮೀ ಮಾನಸಿಕತೆಯ ಜನ ವಿದೇಶೀಯರ ನೀತಿಗಳನ್ನೇ ಮುಂದುವರೆಸಿಕೊಂಡು ಬಂದರು. ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸಲೇ ಇಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಉತ್ಕಟ ರಾಷ್ಟ್ರೀಯ ಭಾವನೆಯೇ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿತ್ತೆಂಬುದನ್ನು ಮರೆಯಬಾರದು. ಡಾಕ್ಟರ್‌ಜೀ ಭವಿಷ್ಯವನ್ನು ಊಹಿಸಿಯೇ ರಾಷ್ಟ್ರಭಾವನೆ ಜಾಗೃತ ಮಾಡುವ ಶಾಖಾ ಶಿಕ್ಷಣವನ್ನು ಪ್ರಾರಂಭಿಸಿದರು. ಆದ್ದರಿಂದಲೇ ಅವರನ್ನು ದ್ರಷ್ಟಾರರು ಎನ್ನುವುದು. ಹಿಂದಿನ ಗುಲಾಮೀ ಮಾನಸಿಕತೆಯ ಆಳರಸರ ಕೈಯಿಂದ 2014ರಲ್ಲಿ ರಾಜ್ಯಾಧಿಕಾರದ ಚುಕ್ಕಾಣಿ ಸಂಘ ಶಾಖೆಯ ಗರಡಿಯಲ್ಲಿ ತಯಾರಾದ ಆಳರಸರ ಕೈಗೆ ಬಂತು. ಈಗ ಗುಲಾಮರನ್ನು ತಯಾರಿಸುವ ಮೆಕಾಲೆ ಶಿಕ್ಷಣ ವ್ಯವಸ್ಥೆಯನ್ನು ಕಿತ್ತು ಹಾಕಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಆದರೆ ರಾಜ್ಯಾಧಿಕಾರ ಶಾಶ್ವತ ಎನ್ನಲಾಗದು. ಹಾಗಾಗಿ ಸಂಘ ಶಾಖೆಯಲ್ಲಿನ ಸಂಸ್ಕಾರದ ಶಿಕ್ಷಣ ಇನ್ನಷ್ಟು ಬೆಳೆಯಬೇಕು. ಅದು ಶಾಶ್ವತವಾದುದು. ಅದು ಚಂಚಲ ಮನಸ್ಸಿನ ಮತದಾರರ ಮರ್ಜಿಗೆ ಒಳಪಟ್ಟಿಲ್ಲ.

ರಾಷ್ಟ್ರೀಯ ಭಾವನೆಯ ಜಾಗರಣದ ಹಾಗೂ ಪುರುಷ ಸಿಂಹರನ್ನು ರೂಪಿಸುವ ಸಂಸ್ಕಾರದ ಶಿಕ್ಷಣವನ್ನು ಸಂಘ ಶಾಖೆ ನೀಡುತ್ತಿದೆ. ಮುಂದಿನ ದಿನಗಳಲ್ಲಿ, ಎಲ್ಲ ರಾಜ್ಯಗಳಲ್ಲಿ, ಕೇಂದ್ರದಲ್ಲಿ ಹಿಂದು ಪರ ಸರಕಾರ ಸ್ಥಾಪನೆಯಾದಾಗ ಈ ಶಾಖಾ ಶಿಕ್ಷಣ ಪ್ರತಿ ಶಾಲೆಯಲ್ಲೂ ಸಿಗುವಂತಾಗಬೇಕು. ಪ್ರತಿ ಶಾಲೆಯೂ ಸಂಘ ಶಾಖೆ ಮಾದರಿಯ ಶಿಕ್ಷಣ ನೀಡುವಂತಾಗಬೇಕು. ಮನೆ–ಮನೆಗಳಲ್ಲಿ ಈ ಶಿಕ್ಷಣ ಶಿಶುಗಳಿಗೆ, ಮಕ್ಕಳಿಗೆ ಸಿಗುವಂತಾಗಬೇಕು. ತಾಯಿಯೇ ಮೊದಲ ಗುರು, ಮನೆಯೇ ಮೊದಲ ಶಾಲೆ, ಶಾಲೆ ಹಾಗೂ ಸಮಾಜಗಳೇ ವ್ಯಾವಹಾರಿಕ ಶಿಕ್ಷಣ ನೀಡುವ ಕೇಂದ್ರಗಳಾಗಬೇಕು. ಪಾಶ್ಚಾತ್ಯ ದೇಶಗಳು ಭೋಗಭೂಮಿ. ಹಾಗಾಗಿ ಅವರದ್ದು ಭೋಗ ಪ್ರಧಾನ ಜೀವನ. ಭಾರತ ತ್ಯಾಗಭೂಮಿ– ಹಾಗಾಗಿ ಇಲ್ಲಿ ಧರ್ಮವೇ ಜೀವನದ ಆಧಾರ. ಅದಕ್ಕಾಗಿ ಧರ್ಮ–ಅರ್ಥ–ಕಾಮ–ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳ ಕಲ್ಪನೆ. ತ್ಯಾಗ, ಸೇವೆ, ಪರಸ್ಪರ ಪ್ರೀತಿ–ವಿಶ್ವಾಸ, ಸಹಿಷ್ಣುತಾಭಾವ ಇಲ್ಲಿನ ಸಹಜ ಗುಣ.

ಶಾಖಾ ಶಿಕ್ಷಣದ ಗುರಿಯು ದೀರ್ಘಕಾಲದ ಗುಲಾಮಿ ಮಾನಸಿಕತೆಯಿಂದ ಬಳಲುತ್ತಾ ಬದುಕುತ್ತಿದ್ದ ಹಿಂದುಗಳನ್ನು ಸಿಂಹ, ಚಿರತೆ, ವ್ಯಾಘ್ರ, ಆನೆಗಳಂತೆ ಬಲಶಾಲಿಗಳನ್ನಾಗಿ, ಬುದ್ಧಿಶಾಲಿಗಳನ್ನಾಗಿ, ಪರಾಕ್ರಮಿಗಳನ್ನಾಗಿ ಪರಿವರ್ತಿಸಬೇಕೆಂಬುದೇ ಆಗಿದೆ. ಏಕೆಂದರೆ ಮುಸ್ಲಿಂ ಆಕ್ರಮಣಕಾರರು, ಪಾಶ್ಚಾತ್ಯಭೋಗವಾದಿಗಳು ಮತ್ತೆ ಭಾರತವನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಪಾಕಿಸ್ತಾನ, ಬಾಂಗ್ಲಾದೇಶಗಳಂಥ ಶತ್ರು ದೇಶಗಳು ಅಕ್ಕಪಕ್ಕದಲ್ಲಿ ಇದ್ದೇ ಇವೆ. ಅಮೆರಿಕದ ಜಾರ್ಜ್ ಸೊರೋಸ್‌ನಂಥವರು, ವಿದೇಶೀ ಕ್ರೈಸ್ತ ಮಿಷನರಿಗಳು ಭಾರತದಲ್ಲಿ ಅಸಂತೋಷ ನಿರ್ಮಾಣ ಮಾಡುವ ಪ್ರಯತ್ನ ನಡೆಸುತ್ತಿದ್ದಾರೆ. ದೇಶದ ಒಳಗೇ ಅವರ ಹಸ್ತಕರಾದ ಹಿತಶತ್ರುಗಳಿದ್ದಾರೆ. ಮುಸ್ಲಿಂ ಭಯೋತ್ಪಾದಕರ ಒಳನುಸುಳುವಿಕೆ, ಭಯೋತ್ಪಾದಕ ದಾಳಿಗಳು ನಡೆಯುತ್ತಲೇ ಇವೆ. ಇವೆಲ್ಲವನ್ನೂ ಒಟ್ಟಾಗಿ ಎದುರಿಸಿ ಗೆಲ್ಲಬೇಕಾದರೆ ಬಲವಾದ ಸಾಮಾಜಿಕ ಶಕ್ತಿಯನ್ನು ಕಟ್ಟಿ ನಿಲ್ಲಿಸುವ ಆವಶ್ಯಕತೆ ಇದೆ. ತ್ಯಾಗ–ಬಲಿದಾನಗಳಿಗೆ ಸಿದ್ಧವಾದ ತರುಣ ಪೀಳಿಗೆಯನ್ನು ರೂಪಿಸುವ ಆವಶ್ಯಕತೆ ಇದೆ. ಭಾರತ ಭೂಮಿಯ ಮೇಲೆ ಭಾರತ ಮಾತೆಯ ಹಾಗೂ ಭಗವಂತನ ಅಪಾರ ಕೃಪೆ ಇದೆ. ಅವನ ಅನುಗ್ರಹ ಭಾರತದ ಮೇಲೆ ವಿಶೇಷವಾಗಿ ಇದೆ. ಹಿಂದುಗಳನ್ನು ಈ ಅನುಗ್ರಹಕ್ಕೆ ಯೋಗ್ಯರನ್ನಾಗಿ ರೂಪಿಸಬೇಕಾಗಿದೆ. ಅದಕ್ಕಾಗಿ ಪುರುಷ ಸಿಂಹರನ್ನು ನಿರ್ಮಾಣ ಮಾಡುವ ಅಗತ್ಯವಿದೆ. ಭಾರತ, ಸನಾತನ ಧರ್ಮಕ್ಕೆ ಅಳಿವಿಲ್ಲ, ಅದು ಅವಿನಾಶಿ. ಭಾರತದಲ್ಲಿ ಮಾತ್ರ ಪರಮಾತ್ಮ ಶಿಷ್ಟ ರಕ್ಷಣೆ–ದುಷ್ಟಶಿಕ್ಷಣಕ್ಕಾಗಿ 10 ಬಾರಿ ಅವತಾರ ತಾಳಿದ್ದಾನೆ. ಹಾಗಂತ ಪರಮಾತ್ಮ ಸ್ವತಃ ಏನೂ ಮಾಡುವುದಿಲ್ಲ, ನಾವು ಪ್ರಯತ್ನ ಮಾಡಬೇಕು. ಆಗ ಅವನು ನಮ್ಮಿಂದಲೇ ಮಾಡಿಸುತ್ತಾನೆ. ಅವನು ಗೆಲ್ಲಲು ಅನುಗ್ರಹ ನೀಡುತ್ತಾನೆ.

'ಬಳಿಕುಂಟೆ'ಯಿಂದ 'ಮಿನಿ ಇರಾನ್'ವರೆಗೆ: ಅಲಿಪುರದ ಬದಲಾವಣೆಯ ಕತೆ

ಉತ್ಕರ್ಷ್ ಕೆ. ಎಸ್

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಅಲಿಪುರ ಗ್ರಾಮವು ಕೆಲವು ದಿನಗಳ ಹಿಂದೆ ರಾಜ್ಯದ ಸಾಮಾಜಿಕ ಹಾಗೂ ರಾಜಕೀಯ ಚರ್ಚೆಯ ಕೇಂದ್ರಬಿಂದುವಾಯಿತು. ಒಂದು ಕಾಲದಲ್ಲಿ 'ಬಳಿಕುಂಟೆ' ಅಥವಾ 'ಬೆಳ್ಳಿಕುಂಟೆ' ಎಂದು ಕರೆಯಲ್ಪಡುತ್ತಿದ್ದ ಈ ಗ್ರಾಮವು ಕಾಲಕ್ರಮೇಣ 'ಅಲಿಪುರ' ಎಂಬ ಹೆಸರಿನಿಂದ ಪರಿಚಿತವಾಯಿತು. ಇತಿಹಾಸದಲ್ಲಿ ವಲಸೆ ಮತ್ತು ಜನಸಂಖ್ಯೆಯ ಬದಲಾವಣೆ ಗಳಿಂದ ಈ ಪ್ರದೇಶದ ಸಾಮಾಜಿಕ ರಚನೆ ಸಂಪೂರ್ಣವಾಗಿ ಬದಲಾಗಿದೆ. ಇಂದು ಅಲಿಪುರ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮುಸ್ಲಿಂ ಸಮುದಾಯದ ಪ್ರಾಬಲ್ಯ ಸ್ಪಷ್ಟವಾಗಿ ಕಂಡುಬರುತ್ತದೆ.

ಒಂದು ಕಾಲದಲ್ಲಿ ಸಾಮಾನ್ಯ ಕೃಷಿ ಆಧಾರಿತ ಗ್ರಾಮವಾಗಿದ್ದ ಬಳಿಕುಂಟೆ, ನಿಧಾನವಾಗಿ ವಿಭಿನ್ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಗುರುತನ್ನು ಪಡೆದುಕೊಂಡಿದೆ. ಗೌರಿಬಿದನೂರು ಭಾಗದ ಕೆಲವು ಗ್ರಾಮಗಳಲ್ಲಿ ಜನಸಂಖ್ಯಾ ಸಮತೋಲನ ಬದಲಾಗಿರುವುದು ಸ್ಥಳೀಯ ಜನರಲ್ಲಿ ಚರ್ಚೆಗೆ ಕಾರಣವಾಗಿದೆ. ಅಲಿಪುರ ಗ್ರಾಮದಲ್ಲಿ ಇಂದು ಬಹುಪಾಲು ಜನರು ಶಿಯಾ ಮುಸ್ಲಿಂ ಸಮುದಾಯಕ್ಕೆ ಸೇರಿದ್ದಾರೆ. ಈ ಸಮುದಾಯದ ಪ್ರಭಾವವು ಸುತ್ತಮುತ್ತಲಿನ ಪ್ರದೇಶಗಳ ಮೇಲೂ ಕಂಡುಬರುತ್ತಿದೆ ಎಂಬ ಮಾತು ಸ್ಥಳೀಯವಾಗಿ ಕೇಳಿಬರುತ್ತಿದೆ. ಈ ಗ್ರಾಮವನ್ನು ಕೆಲವರು 'ಮಿನಿ ಇರಾನ್' ಎಂದು ಕರೆಯುವ ಮಟ್ಟಕ್ಕೆ ಇರಾನ್ ದೇಶದೊಂದಿಗೆ ಇಲ್ಲಿ ಗಾಢ ನಂಟು ನಿರ್ಮಾಣವಾಗಿದೆ. ಹಲವಾರು ಕುಟುಂಬಗಳು ಇರಾನ್ ದೇಶದೊಂದಿಗೆ ಧಾರ್ಮಿಕ, ಶೈಕ್ಷಣಿಕ ಹಾಗೂ ವ್ಯಾಪಾರಿಕ ಸಂಬಂಧ ಹೊಂದಿರುವುದಾಗಿ ಹೇಳಲಾಗುತ್ತದೆ. ಅಲಿಪುರದ ಹಲವಾರು ಯುವಕರು ಧಾರ್ಮಿಕ ಶಿಕ್ಷಣಕ್ಕಾಗಿ ಇರಾನ್‌ಗೆ ತೆರಳುವುದು ಸಾಮಾನ್ಯ ಸಂಗತಿಯಾಗಿರುವುದೂ ಗಮನಾರ್ಹವಾಗಿದೆ. ಈ ಸಂಬಂಧ ಇನ್ನಷ್ಟು ಗಟ್ಟಿಯಾಗಲು ಕಾರಣವಾದ ಘಟನೆ ಎಂದರೆ ಇರಾನ್‌ನ ಧಾರ್ಮಿಕ ನಾಯಕ ಆಯತೊಲ್ಲಾ ಅಲಿ ಖಮೇನಿಯ ಅಲಿಪುರ ಭೇಟಿ. 1986ರಲ್ಲಿ ಅವರು ಈ ಗ್ರಾಮಕ್ಕೆ ಭೇಟಿ ನೀಡಿ ಸಂಪರ್ಕ ಬೆಳೆಸಿದ್ದರು. ಆ ಭೇಟಿಯ ನಂತರ ಅಲಿಪುರ ಮತ್ತು ಇರಾನ್ ನಡುವಿನ ಸಂಬಂಧ ಮತ್ತಷ್ಟು ಗಟ್ಟಿಯಾಯಿತು. ಅಲ್ಲದೆ ಈ ಗ್ರಾಮದಲ್ಲಿ ಖಮೇನಿಯವರ ಹೆಸರಿನೊಂದಿಗೆ ಸಂಬಂಧಿಸಿದ ಆಸ್ಪತ್ರೆ ಮತ್ತು ಕೆಲವು ಸಂಸ್ಥೆಗಳು ಸ್ಥಾಪನೆಯಾಗಿದ್ದು ಆ ಸಂಬಂಧದ ಸಂಕೇತಗಳಾಗಿ ಇಂದಿಗೂ ಉಳಿದಿವೆ.

ಇತ್ತೀಚೆಗೆ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಯ ಘಟನೆಗಳ ಹಿನ್ನೆಲೆಯಲ್ಲಿ ಅಲಿಪುರ ಗ್ರಾಮದಲ್ಲಿ ನಡೆದ ಪ್ರತಿಭಟನೆಗಳು ಜಾಗತಿಕ ಮಟ್ಟದಲ್ಲಿ ಆಶ್ಚರ್ಯ ಮತ್ತು ಚಿಂತೆಯನ್ನು ಹುಟ್ಟುಹಾಕಿವೆ. ಸಾವಿರಾರು ಜನರು ಕಪ್ಪು ಧ್ವಜಗಳೊಂದಿಗೆ ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಿರುವುದು ಗಮನ ಸೆಳೆದಿದೆ. ಭಾರತದಲ್ಲಿರುವ ಒಂದು ಗ್ರಾಮವು ವಿದೇಶಿ ರಾಜಕೀಯ ಘಟನೆಗಳ ಬಗ್ಗೆ ಇಷ್ಟೊಂದು ತೀವ್ರ ಪ್ರತಿಕ್ರಿಯೆ ನೀಡುವುದು ಸರಿಯೇ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಇದೇ ಜನರು ಭಾರತದ ರಾಷ್ಟ್ರೀಯ ದುರಂತದ ಕ್ಷಣಗಳಲ್ಲಿ ಎಲ್ಲಿದ್ದರು? ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಸೈನಿಕರ ಬಗ್ಗೆ ಇದೇ ಮಟ್ಟದ ಕಾಳಜಿ ಮತ್ತು ಪ್ರತಿಕ್ರಿಯೆ ಏಕೆ ಕಾಣಿಸಲಿಲ್ಲ? ಇದು ಕೇವಲ ಎರಡು ಘಟನೆಗಳ ವಿಚಾರವಲ್ಲ. ಕಾಶ್ಮೀರದಲ್ಲಿ ಪಂಡಿತರ ಹತ್ಯೆಗಳು ನಡೆದಾಗ, ದೇಶದ ಸೈನಿಕರು ಗಡಿಯಲ್ಲೇ ಉಗ್ರರ ವಿರುದ್ಧ ಹೋರಾಡಿ ಪ್ರಾಣ ತ್ಯಾಗ ಮಾಡಿದಾಗ ಅಥವಾ ಭಾರತವನ್ನು ಗುರಿಯಾಗಿಸಿ ನಡೆಯುವ ಉಗ್ರ ದಾಳಿಗಳ ಸಮಯದಲ್ಲಿ ಇದೇ ರೀತಿಯ ಭಾವನಾತ್ಮಕ ಪ್ರತಿಕ್ರಿಯೆ ಕಾಣಿಸಿಕೊಂಡಿದ್ದರೆ ಅದು ದೇಶಭಕ್ತಿಯ ನಿಜವಾದ ಉದಾಹರಣೆಯಾಗುತ್ತಿತ್ತು. ಆದರೆ ದೂರದ ದೇಶದ ನಾಯಕನಿಗಾಗಿ ಭಾವೋದ್ರೇಕ ತೋರಿಸಿ, ತನ್ನದೇ ದೇಶದ ನೋವಿನ ಕ್ಷಣಗಳಲ್ಲಿ ಮೌನವಾಗಿರುವುದು ಅನೇಕ ಜನರಲ್ಲಿ ಅಸಮಾಧಾನ ಮತ್ತು ಅನುಮಾನ ಹುಟ್ಟಿಸುವುದು ಸಹಜ.

ಭಾರತದಲ್ಲಿ ಬದುಕುತ್ತಿರುವ ಪ್ರತಿಯೊಬ್ಬ ನಾಗರಿಕನಿಗೂ ಧಾರ್ಮಿಕ ನಂಬಿಕೆಗಳ ಸ್ವಾತಂತ್ರ್ಯ ಇದೆ. ಆದರೆ ಅವರಿಗಿಂತ ದೊಡ್ಡದು ರಾಷ್ಟ್ರಭಾವನೆ. ದೇಶದ ಭದ್ರತೆ, ಸೈನಿಕರ ತ್ಯಾಗ ಮತ್ತು ರಾಷ್ಟ್ರೀಯ ಗೌರವವೇ ಮೊದಲ ಆದ್ಯತೆಯಾಗಬೇಕು. ವಿದೇಶಿ ನಾಯಕರಿಗಾಗಿ ಬೀದಿಗೆ ಇಳಿಯುವಷ್ಟು ಉತ್ಸಾಹ ಇದ್ದರೆ, ದೇಶದ ಸೈನಿಕರಿಗಾಗಿ, ದುಃಖದ ಕ್ಷಣಗಳಿಗಾಗಿ ಮತ್ತು ಉಗ್ರವಾದದ ವಿರುದ್ಧವೂ ಅದೇ ಶಕ್ತಿಯಿಂದ ಧ್ವನಿ ಎತ್ತುವುದು ಅತ್ಯವಶ್ಯಕ. ವಿದೇಶಿ ರಾಜಕೀಯ ಅಥವಾ ಧಾರ್ಮಿಕ ಪ್ರಭಾವವು ಸ್ಥಳೀಯ ಸಮಾಜದ ಮೇಲೆ ಅತಿಯಾಗಿ ಪರಿಣಾಮ ಬೀರುವಂತಾಗುವುದು ಆರೋಗ್ಯಕರ ಬೆಳವಣಿಗೆ ಎಂದು ಹೇಳಲಾಗುವುದಿಲ್ಲ. ಈ ಲೇಖಕ ಸುಮಾರು ಮೂರು ತಿಂಗಳುಗಳ ಕಾಲ ಅಲಿಪುರ ಗ್ರಾಮದಲ್ಲೇ ವಾಸಿಸಿ ಅಲ್ಲಿನ ಸಾಮಾಜಿಕ ವಾತಾವರಣವನ್ನು ಸಮೀಪದಿಂದ ಗಮನಿಸಿದ್ದೇನೆ. ಆ ಅವಧಿಯಲ್ಲಿ ಸ್ಪಷ್ಟವಾಗಿ ಕಂಡ ಒಂದು ಸಂಗತಿ ಎಂದರೆ, ಅಲಿಪುರದ ಜನಸಂಖ್ಯಾ ಬದಲಾವಣೆಗಳು ಮತ್ತು ಅದರ ಪರಿಣಾಮವಾಗಿ ರೂಪುಗೊಂಡ ಸಾಮಾಜಿಕ ಪ್ರಭಾವವು ಸುತ್ತಮುತ್ತಲಿನ ಅನೇಕ ಹಳ್ಳಿಗಳಲ್ಲಿರುವ ಹಿಂದು ಸಮುದಾಯದ ಸ್ಥಿತಿಗೆ ಗಂಭೀರ ಪರಿಣಾಮ ಬೀರಿದೆ ಎಂಬುದು. ಹಲವೆಡೆ ಹಿಂದು ಕುಟುಂಬಗಳು ತಮ್ಮ ಹಿಂದಿನ ಸಾಮಾಜಿಕ ಪ್ರಭಾವವನ್ನು ಕಳೆದುಕೊಳ್ಳುತ್ತಿರುವ ಭಾವನೆ ವ್ಯಕ್ತಪಡಿಸುತ್ತಿರುವುದು ಕೇಳಿಬರುತ್ತದೆ.

ಇದೇ ಸಂದರ್ಭದಲ್ಲಿ ಅಲಿಪುರದಲ್ಲಿ ಕಂಡುಬರುವ ದೊಡ್ಡ ಕಟ್ಟಡಗಳು, ವಿಶಾಲ ಆಸ್ತಿಗಳು, ಅಲ್ಲಿರುವ ಹೆಲಿಪ್ಯಾಡ್ ಎಂಬ ಮೂಲಸೌಕರ್ಯಗಳು ಮತ್ತು ದೊಡ್ಡ ಮಟ್ಟದಲ್ಲಿ ನಡೆಯುತ್ತಿರುವ ವ್ಯಾಪಾರ ಚಟುವಟಿಕೆಗಳು ಹಲವರಲ್ಲಿ ಪ್ರಶ್ನೆಗಳನ್ನು ಹುಟ್ಟುಹಾಕುತ್ತಿವೆ. ವಿಶೇಷವಾಗಿ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ದೊಡ್ಡ ವ್ಯವಹಾರ ಜಾಲಗಳು ಮತ್ತು ಆರ್ಥಿಕ ಚಟುವಟಿಕೆಗಳು ಎಲ್ಲಿಂದ ಹಣಕಾಸು ಬೆಂಬಲ ಪಡೆಯುತ್ತಿವೆ ಎಂಬ ಪ್ರಶ್ನೆ ಸ್ಥಳೀಯ ಮಟ್ಟದಲ್ಲಿ ಚರ್ಚೆಯಾಗುತ್ತಿವೆ. ಒಂದು ಗ್ರಾಮ ಅಭಿವೃದ್ಧಿಯಾಗುವುದು ಸಹಜವಾದ ಸಂಗತಿ. ಆದರೆ ಆ ಅಭಿವೃದ್ಧಿಯ ಹಿಂದಿರುವ ಹಣಕಾಸಿನ ಮೂಲಗಳು ಪಾರದರ್ಶಕವಾಗಿರಬೇಕು ಎಂಬುದೂ ಮುಖ್ಯವಾಗುತ್ತದೆ.

ಪ್ರವಾಸಿ ತಾಣಗಳೇ ಟಾರ್ಗೆಟ್



- ಇರಾನ್‌ನಿಂದ ಅಮೆರಿಕ ಮಿತ್ರ ದೇಶಗಳಿಗೆ ಎಚ್ಚರಿಕೆ
- ಮೂರು ವಾರಗಳ ಬಳಿಕವೂ ಸೋಲದ ಇರಾನ್
- ಕ್ಷಿಪಣಿ ನಿರ್ಮಾಣ, ದಾಳಿ ನಿರಂತರ, ಗಲ್ಫ್ ದೇಶಗಳ ಮೇಲೆ ದಾಳಿ

ದುಬೈ: ಅಮೆರಿಕಾ-ಇಸ್ರೇಲ್ ದಾಳಿಗಳು ಆರಂಭವಾಗಿ ಮೂರು ವಾರಗಳು ಕಳೆದರೂ ಇರಾನ್ ತನ್ನ ದಾಳಿಯ ಸಾಮರ್ಥ್ಯ ಕಡಿಮೆಯಾಗಿಲ್ಲ ಎಂದು ತೋರಿಸಿದ್ದು, ವಿಶ್ವದ ಪ್ರವಾಸಿ ಹಾಗೂ ಮನರಂಜನಾ ತಾಣಗಳನ್ನು ಗುರಿಯಾಗಿಸಿ ದಾಳಿ ಮಾಡುತ್ತೇವೆ ಎಂದು ಗಂಭೀರ ಬೆದರಿಕೆ ಹಾಕಿದೆ. ಇದೇ ವೇಳೆ ಯುದ್ಧ ಪರಿಸ್ಥಿತಿಯಲ್ಲಿಯೂ ಕ್ಷಿಪಣಿಗಳ ನಿರ್ಮಾಣ ಮುಂದುವರಿದಿದೆ ಎಂದು ಘೋಷಿಸಿದ್ದು, ಮಧ್ಯಪ್ರಾಚ್ಯದ ಸಂಘರ್ಷವು ಜಾಗತಿಕ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ.

ಇರಾನ್, ಇಸ್ರೇಲ್ ಹಾಗೂ ಗಲ್ಫ್ ಅರಬ್ ರಾಷ್ಟ್ರಗಳ ಇಂಧನ ತಾಣಗಳ ಮೇಲೆ ದಾಳಿಗಳನ್ನು ಮುಂದುವರಿಸಿದೆ. ಮುಸ್ಲಿಂ ಸಮುದಾಯದ ಪವಿತ್ರ ದಿನಗಳಲ್ಲಿಯೇ ಈ ದಾಳಿಗಳು ನಡೆದಿದ್ದು, ಪರ್ಷಿಯನ್ ಹೊಸ ವರ್ಷ ನವ್ರೋಜ್ ಆಚರಣೆ ಈ ಬಾರಿ ಮಂಕಾಗಿದೆ.

ಫೆ. 28ರಿಂದ ಆರಂಭವಾದ ಯುದ್ಧದಲ್ಲಿ ಇರಾನ್‌ನ ಅಣು, ಶಸ್ತ್ರಾಸ್ತ್ರ ಮತ್ತು ಇಂಧನ ತಾಣಗಳಿಗೆ ಎಷ್ಟು ಹಾನಿಯಾಗಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ, ದೇಶದ ಆಡಳಿತದ ಮೇಲಿನ ನಿಯಂತ್ರಣದ ವಿಷಯವೂ ಅನಿಶ್ಚಿತವಾಗಿದೆ. ಆದರೂ ಇರಾನ್ ಇನ್ನೂ ದಾಳಿ ನಡೆಸಿ ತೈಲ ಸರಬರಾಜನ್ನು ಅಸ್ತವ್ಯಸ್ತಗೊಳಿಸುವ ಮೂಲಕ ಜಾಗತಿಕ ಆರ್ಥಿಕತೆಗೆ ಹೊಡೆತ ನೀಡುತ್ತಿದೆ.

ಅಮೆರಿಕಾ ಮತ್ತು ಇಸ್ರೇಲ್ ಯುದ್ಧದ ಉದ್ದೇಶವಾಗಿ ಇರಾನ್ ಆಡಳಿತವನ್ನು ಉರುಳಿಸುವುದು ಅಥವಾ ಅದರ ಅಣು ಹಾಗೂ ಕ್ಷಿಪಣಿ ಕಾರ್ಯಕ್ರಮಗಳನ್ನು ನಾಶಪಡಿಸುವುದನ್ನು ಹೇಳುತ್ತಿದ್ದರೂ, ಇದುವರೆಗೆ ಯಾವುದೇ ಬಂಡಾಯದ ಲಕ್ಷಣಗಳು ಕಾಣಿಸಿಕೊಂಡಿಲ್ಲ, ಯುದ್ಧದ ಅಂತ್ಯ ಹೇಗಿರಬಹುದು ಎಂಬುದೂ ಸ್ಪಷ್ಟವಾಗಿಲ್ಲ.

ಇರಾನ್ ಸೇನಾ ವಕ್ತಾರ ಜನರಲ್ ಅಬೋಲ್ಫಜ಼ಲ್ ಶೆಕಾರ್ಚಿ, ಪ್ರವಾಸಿ ತಾಣಗಳೂ ಶತ್ರುಗಳಿಗೆ ಸುರಕ್ಷಿತವಾಗಿರುವುದಿಲ್ಲ ಎಂದು ಎಚ್ಚರಿಸಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್ ನೌಕಾಪಡೆ ಮತ್ತು ವಾಯುಪಡೆಯು ಕುಸಿದಿದೆ ಎಂದು ಹೇಳಿದ್ದರೆ, ಇರಾನ್ ಅದನ್ನು ತಳ್ಳಿಹಾಕಿದೆ. ಕ್ರಾಂತಿಕಾರಿ ಗಾರ್ಡ್ ವಕ್ತಾರ ಅಲಿ ಮೊಹಮ್ಮದ್ ನಾಯಿನಿ, 'ಯುದ್ಧದ ನಡುವೆಯೂ ಕ್ಷಿಪಣಿ ಉತ್ಪಾದನೆ ನಡೆಯುತ್ತಿದೆ; ಸಂಗ್ರಹದಲ್ಲಿ ಸಮಸ್ಯೆ ಇಲ್ಲ' ಎಂದಿದ್ದಾರೆ. ಆದರೆ ಅವರ ಹೇಳಿಕೆಯ ಕೆಲವೇ ಗಂಟೆಗಳ ನಂತರ ಅವರು ವಾಯುದಾಳಿಯಲ್ಲಿ ಮೃತಪಟ್ಟಿದ್ದಾರೆ. ಹೊಸ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ, ಶತ್ರುಗಳ ಭದ್ರತೆಯನ್ನು ಕಿತ್ತುಕೊಳ್ಳಬೇಕು ಎಂದು ಹೇಳಿದ್ದಾರೆ.

ನ್ಯಾಟೋ ಮಿತ್ರರು ಹೇಡಿಗಳು: ಟ್ರಂಪ್

ಇರಾನ್ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿಕೊಳ್ಳಲು ತನ್ನ ಮನವಿಯಂತೆ ಯುದ್ಧನೌಕೆಗಳನ್ನು ಕಳುಹಿಸಲು ಒಪ್ಪದ ನ್ಯಾಟೋ ಮಿತ್ರ ರಾಷ್ಟ್ರಗಳನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಡಿಗಳೆಂದು ಟೀಕಿಸಿದ್ದಾರೆ. ಅಮೆರಿಕ ಇಲ್ಲದಿದ್ದರೆ, ನ್ಯಾಟೋ ಕೇವಲ ಕಾಗದದ ಹುಲಿ ಅಷ್ಟೇ! ಪರಮಾಣು ಶಕ್ತಿಯುಳ್ಳ ಇರಾನ್ ತಡೆಗಟ್ಟಲು ಯುದ್ಧ ಮಾಡೋಣವೆಂದರೆ ನ್ಯಾಟೋ ರಾಷ್ಟ್ರಗಳು ಸಿದ್ಧವಿಲ್ಲ, ಹಾರ್ಮುಜ್ ಜಲಸಂಧಿ ತೆರೆಯಲು ನೆರವಾಗುತ್ತಿಲ್ಲ, ಆದರೆ ಯುದ್ಧದಿಂದ ತೈಲ ಬೆಲೆ ಏರಿಕೆಯಾಗಿದೆ ಎಂದು ದೂರುತ್ತಿವೆ. ಅಪಾಯ ಎದುರಿಸಲು ಸಿದ್ಧರಿಲ್ಲದೆ ಸುಲಭ ಮಾರ್ಗ ಹಿಡಿದಿವೆ. ನ್ಯಾಟೋ ಮಿತ್ರ ರಾಷ್ಟ್ರಗಳು ಹೇಡಿಗಳು, ನಾವು ನೆನಪಿನಲ್ಲಿ ಇಡುತ್ತೇವೆ ಎಂದು ಟ್ರಂಪ್ ಟ್ರುಥ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ.

1 ಕೋಟಿ ಡಾಲರ್‌ನ ಎಫ್-35ಗೆ ಹಾನಿ?

ಅಮೆರಿಕದ ಸೇನೆಯ ಬೆನ್ನೆಲುಬೆಂದೇ ಕರೆಯಲ್ಪಡುವ 1 ಕೋಟಿ ಡಾಲರ್ ಮೌಲ್ಯದ ಎಫ್-35 ಲೈಟ್ನಿಂಗ್-2 ಯುದ್ಧ ವಿಮಾನಕ್ಕೆ ಹಾನಿ ಮಾಡಿರುವುದಾಗಿ ಇರಾನ್ ಸೇನೆ ಹೇಳಿಕೊಂಡಿದೆ. ಇರಾನ್ ವಾಯುಪ್ರದೇಶದೊಳಗೆ ಬಂದ ಎಫ್-35 ಮೇಲೆ ಕ್ಷಿಪಣಿ ದಾಳಿ ನಡೆಸಿರುವುದಾಗಿ ಇರಾನ್ ಹೇಳಿದೆ. ಹಾನಿಗೊಳಗಾದ ಎಫ್-35 ಅಮೆರಿಕ ಸೇನಾನೆಲೆಯಲ್ಲಿ ಸುರಕ್ಷಿತ ಲ್ಯಾಂಡಿಂಗ್ ನಡೆಸಿದ್ದು, ಪೈಲೆಟ್ ಸುರಕ್ಷಿತವಾಗಿದ್ದಾರೆ ಎಂದು ವರದಿಯಾಗಿದೆ. ಎಫ್-35 ಮೇಲೆ ಶತ್ರು ದಾಳಿಯಿಂದ ಬೆಂಕಿ ಕಾಣಿಸಿಕೊಂಡಿದ್ದು ಇದೇ ಮೊದಲು, ಅದರ ರಾಡಾರ್, ಸೆನ್ಸಾರ್ ಒಳಗೊಂಡ ಅತ್ಯಾಧುನಿಕ ವಿನ್ಯಾಸದಿಂದಾಗಿ ಎಫ್-35 ಮೇಲೆ ದಾಳಿ ನಡೆಸುವುದೇ ಕಷ್ಟವೆಂದು ಪರಿಗಣಿಸಲಾಗುತ್ತದೆ.

16.5 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮೋದನೆ

ಇರಾನ್‌ನೊಂದಿಗಿನ ಯುದ್ಧವು ತೀವ್ರಗೊಳ್ಳುತ್ತಿದ್ದಂತೆ ತಮ್ಮ ರಕ್ಷಣಾ ಸಾಮರ್ಥ್ಯ ಬಲಪಡಿಸಲು ಯುಎಸ್‌ಸ್ಟೇಟ್ ಡಿಪಾರ್ಟ್‌ಮೆಂಟ್ ಗಲ್ಫ್ ಮಿತ್ರರಾಷ್ಟ್ರಗಳಿಗೆ 16.5 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮೋದನೆ ನೀಡಿದೆ ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ ಸುಮಾರು 7 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಸಹ ಟ್ರಂಪ್ ಆಡಳಿತವು ಅನುಮೋದಿಸಿದೆ. ಪ್ರಾದೇಶಿಕ ಇಂಧನ ಮೂಲಸೌಕರ್ಯಕ್ಕೆ ಹಾನಿಯನ್ನುಂಟುಮಾಡಿರುವ ಇರಾನಿನ ಪ್ರಚೋದನೆ ಗಳಿಂದಾಗಿ ಕಾಂಗ್ರೆಸ್ಸಿನ ಪ್ರಮಾಣಿತ ಪರಿಶೀಲನಾ ಅವಧಿಗೂ ಕಾಯದೇ, ಈ ಒಪ್ಪಂದಗಳನ್ನು ತ್ವರಿತಗೊಳಿಸಲು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ತುರ್ತು ವಿನಾಯಿತಿಗಳನ್ನು ನೀಡಿದರು.

11 ಗಲ್ಫ್ ವಾಯುಪ್ರದೇಶಕ್ಕೆ ಪ್ರವೇಶಿಸದಂತೆ ಡಿಜಿಸಿಎ ಸೂಚನೆ

ಯುದ್ಧದಿಂದಾಗಿ ಕೊಲ್ಲಿ ಪ್ರದೇಶದಾದ್ಯಂತ ವಿಮಾನ ಕಾರ್ಯಾಚರಣೆ ಭಾರೀ ಪ್ರಮಾಣದಲ್ಲಿ ಅಡ್ಡಿಪಡಿಸಿದೆ. ಈ ಹಿನ್ನಲೆ, ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ವಿಮಾನಯಾನ ಸಂಸ್ಥೆಗಳಿಗೆ 11 ಗಲ್ಫ್ ವಾಯುಪ್ರದೇಶಗಳಿಗೆ ತೆರಳದಿರಲು ಸೂಚಿಸಿದೆ. ಈ ಹಿಂದೆ, ಪಶ್ಚಿಮ ಏಷ್ಯಾದ ಪರಿಸ್ಥಿತಿಯು ಸಾಮಾನ್ಯ ವಿಮಾನ ಮಾರ್ಗಗಳಿಗೆ ಅಡ್ಡಿಪಡಿಸುವುದನ್ನು ಮುಂದುವರೆಸಿದ್ದರಿಂದ ವಾಯುಯಾನ ನಿಯಂತ್ರಕವು ಏರ್ ಇಂಡಿಯಾಗೆ ಸಿಬ್ಬಂದಿ ಕರ್ತವ್ಯದ ನಿಯಮಗಳ ಮೇಲೆ ತಾತ್ಕಾಲಿಕ ಪರಿಹಾರ ನೀಡಿತ್ತು. ಪ್ರಸ್ತುತ ಇರಾನಿನ ಮತ್ತು ಇರಾಕ್ ವಾಯುಪ್ರದೇಶಕ್ಕೆ ನಿರ್ಬಂಧಿಸಿರುವುದರಿಂದ, ವಿಮಾನಯಾನ ಸಂಸ್ಥೆ ತನ್ನ ವಿಮಾನಗಳನ್ನು ದೀರ್ಘ ಮಾರ್ಗಗಳಲ್ಲಿ ತಿರುಗಿಸಬೇಕಾಯಿತು. ಇದರಿಂದ ವಿಮಾನ ಹಾರಾಟದ ಸಮಯ ಕೂಡ ವಿಸ್ತಾರವಾಗಿತ್ತು.

ಕುವೈತ್ ತೈಲ ಘಟಕಗಳ ಮೇಲೆ ಇರಾನ್ ದಾಳಿ

ಕುವೈತ್‌ನ ಅತಿ ದೊಡ್ಡ ತೈಲ ಸಂಸ್ಕರಣಾಗಾರದ ಮೇಲೆ ಸತತ ಎರಡನೇ ದಿನ ಇರಾನ್ ಡ್ರೋನ್ ದಾಳಿ ನಡೆಸಿದೆ. ಗಲ್ಫ್ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುತ್ತಿರುವ ಇರಾನ್, ಶುಕ್ರವಾರ ಬೆಳಗ್ಗೆ ಮಿನಾ ಅಲ್-ಅಹ್ಮದಿ ತೈಲ ಸಂಸ್ಕರಣಾ ಘಟಕದ ಮೇಲೆ ಡ್ರೋನ್ ದಾಳಿ ನಡೆಸಿದೆ. ಪ್ರತಿ ದಿನ 7,30,000 ಬ್ಯಾರೆಲ್ ಕಚ್ಚಾ ತೈಲವನ್ನು ಶುದ್ಧೀಕರಿಸುವ ಘಟಕ ಇದಾಗಿದೆ. ಯಾವುದೇ ಹಾನಿಯಾಗಿಲ್ಲ ಎಂದು ಕುವೈತ್ ಹೇಳಿದೆ.

ಎಂಇಎ ಖಂಡನೆ

ಗಲ್ಫ್ ರಾಷ್ಟ್ರಗಳ ಇಂಧನ ಮೂಲಸೌಕರ್ಯಗಳ ಮೇಲೆ ಇರಾನ್ ನಡೆಸಿದ ದಾಳಿಯನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಗುರುವಾರ ಖಂಡಿಸಿದ್ದು, ಇಂತಹ ದಾಳಿಗಳು ತಕ್ಷಣ ನಿಲ್ಲಬೇಕೆಂದು ಆಗ್ರಹಿಸಿದ್ದಾರೆ. ಯುದ್ಧ ಸಂಘರ್ಷದಲ್ಲಿ ನಾಗರಿಕ ಮೂಲಸೌಕರ್ಯ, ಅದರಲ್ಲೂ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಬಾರದೆಂದು ಭಾರತ ಹಿಂದೆಯೇ ಕರೆ ನೀಡಿತ್ತು. ಇಂತಹ ದಾಳಿಗಳಿಂದ ಈಗಾಗಲೇ ಅಸ್ಥಿರವಾದ ಜಾಗತಿಕ ಇಂಧನ ಪೂರೈಕೆ ಇನ್ನಷ್ಟು ಅಸ್ಥಿರಗೊಳ್ಳಲಿದೆ. ಇದು ಸ್ವೀಕಾರಾರ್ಹವಲ್ಲ ಎಂದು ಜೈಸ್ವಾಲ್ ಹೇಳಿದ್ದಾರೆ.

ಗಲ್ಫ್ ಮೇಲಿನ ದಾಳಿಗೆ ಮೋದಿ ಖಂಡನೆ

ಹೊಸದಿಲ್ಲಿ: ಗಲ್ಫ್ ರಾಷ್ಟ್ರಗಳ ಇಂಧನ ಮೂಲಸೌಕರ್ಯಗಳ ಮೇಲಿನ ಇರಾನ್ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಖಂಡಿಸಿದ್ದಾರೆ. ಕತಾರ್, ಫ್ರಾನ್ಸ್, ಜೋರ್ಡಾನ್, ಒಮನ್ ಹಾಗೂ ಮಲೇಷ್ಯಾ ನಾಯಕರ ಜತೆ ಮಧ್ಯಪ್ರಾಚ್ಯ ಯುದ್ಧ ಕುರಿತು ಚರ್ಚೆ ನಡೆಸಿದ ಪ್ರಧಾನಿ ಮೋದಿ, ಪ್ರದೇಶದಲ್ಲಿ ಯುದ್ಧ ತೀವ್ರತೆ ಹೆಚ್ಚುತ್ತಿರುವ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಸಂಘರ್ಷ ಶಮನಗೊಳಿಸುವ ನಿಟ್ಟಿನಲ್ಲಿ, ಪ್ರದೇಶದ ತೈಲ ಮೂಲಸೌಕರ್ಯಗಳ ಮೇಲಿನ ದಾಳಿಗಳನ್ನು ಪ್ರಧಾನಿ ಮೋದಿ ಬಲವಾಗಿ ಖಂಡಿಸಿದರು.

ಕತಾರ್ ಶೇಖ್ ತಮೀಮ್ ಬಿನ್ ಹಮದ್ ಬಿನ್ ಖಲೀಫಾ ಅಲ್ ಥಾನಿ, ಜೋರ್ಡಾನ್ ರಾಜ ಎರಡನೇ ಅಬ್ದುಲ್ಲಾ, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್, ಒಮನ್ ಸುಲ್ತಾನ್ ಹೈಥಮ್ ಬಿನ್ ತಾರಿಕ್ ಅಲ್ ಸಯೀದ್ ಮತ್ತು ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂರೊಂದಿಗೆ ಪ್ರತ್ಯೇಕ ದೂರವಾಣಿ ಕರೆಗಳಲ್ಲಿ ಮಾತನಾಡಿದ ಮೋದಿ, ಮಧ್ಯಪ್ರಾಚ್ಯದಲ್ಲಿ ಶಾಂತಿ, ಭದ್ರತೆ ಮತ್ತು ಸ್ಥಿರತೆ ನೆಲೆಗೊಳಿಸಲು ಸಂವಾದ ಮತ್ತು ರಾಜತಾಂತ್ರಿಕತೆಯ ಮಹತ್ವವನ್ನು ಅವರು ಒತ್ತಿ ಹೇಳಿದ್ದಾರೆ. ಅಲ್ಲದೆ, ಹಾರ್ಮುಜ್ ಜಲಸಂಧಿ ಮೂಲಕ ಸುರಕ್ಷಿತ ಮತ್ತು ಮುಕ್ತ ನೌಕಾ ಸಂಚಾರದ ಅಗತ್ಯವನ್ನೂ ಉಲ್ಲೇಖಿಸಿದ್ದಾರೆ.

ನನ್ನ ಸಹೋದರ ಕತಾರ್‌ನ ಶೇಖ್ ತಮೀಮ್ ಬಿನ್ ಹಮದ್‌ರೊಂದಿಗೆ ಮಾತನಾಡಿ, ಅವರಿಗೆ ಮತ್ತು ಕತಾರ್ ಜನತೆಗೆ ಹೃತ್ಪೂರ್ವಕ ಈದ್ ಶುಭಾಶಯಗಳನ್ನು ತಿಳಿಸಿದೆ ಎಂದು ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಕತಾರ್ ಜತೆಗಿನ ಭಾರತದ ಐಕ್ಯತೆಯನ್ನು ಮೋದಿ ಪುನರುಚ್ಚರಿಸಿದ್ದಾರೆ.

ಜೋರ್ಡಾನ್‌ನ ರಾಜ ಎರಡನೇ ಅಬ್ದುಲ್ಲಾರನ್ನು ಸಹ ಸಹೋದರ ಎಂದು ಕರೆದ ಮೋದಿ, ಅವರಿಗೆ ಮುಂಗಡ ಈದ್ ಶುಭಾಶಯಗಳನ್ನು ತಿಳಿಸಿದರು. ಭಾರತ ಮತ್ತು ಜೋರ್ಡಾನ್ ಸರಕುಗಳ ಮತ್ತು ನಿರ್ಬಂಧರಹಿತ ತೈಲ ಸಾಗಣೆಗೆ ಬೆಂಬಲ ನೀಡುತ್ತವೆ. ಪ್ರದೇಶದಲ್ಲಿ ಸಿಲುಕಿದ್ದ ಭಾರತೀಯರನ್ನು ಸುರಕ್ಷಿತವಾಗಿ ಮರಳಿಸಲು ಜೋರ್ಡಾನ್ ಮಾಡಿದ ಪ್ರಯತ್ನಗಳನ್ನು ಮೋದಿ ಶ್ಲಾಘಿಸಿದ್ದಾರೆ.

- ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ಸರಿಯಲ್ಲ
- ಪಶ್ಚಿಮ ಏಷ್ಯಾ ರಾಷ್ಟ್ರಗಳ ನಾಯಕರೊಂದಿಗೆ ಮಾತುಕತೆ
- ಶಾಂತಿ, ಭದ್ರತೆ ಮತ್ತು ಸ್ಥಿರತೆ ನೆಲೆಗೊಳಿಸಲು ಪ್ರಧಾನಿ ಕರೆ

ಆರು ಭಾರತೀಯರ ಸಾವು

ಪಶ್ಚಿಮ ಏಷ್ಯಾ ಸಂಘರ್ಷದ ನಡುವೆ ಕೊಲ್ಲಿ ಪ್ರದೇಶದಾದ್ಯಂತ ನಡೆದ ಪ್ರತ್ಯೇಕ ಘಟನೆಗಳಲ್ಲಿ ಆರು ಭಾರತೀಯ ಪ್ರಜೆಗಳು ಪ್ರಾಣ ಕಳೆದುಕೊಂಡಿದ್ದು, ಓರ್ವ ನಾಪತ್ತೆಯಾಗಿದ್ದಾರೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಶುಕ್ರವಾರ ಹೇಳಿದೆ. ಭಾರತೀಯ ರಾಯಭಾರ ಕಚೇರಿಗಳು ಸಹಾಯ ಮತ್ತು ವಾಪಸಾತಿಗಾಗಿ ಸ್ಥಳೀಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುತ್ತಿವೆ ಎಂದು ಹೇಳಿದೆ. ಮಾರ್ಚ್ 18ರಂದು ಸೌದಿ ಅರೇಬಿಯಾದ ರಿಯಾದ್‌ನಲ್ಲಿ ಭಾರತೀಯ ಪ್ರಜೆಯೊಬ್ಬ ಮೃತಪಟ್ಟಿದ್ದು, ಕೊಲ್ಲಿ ಪ್ರದೇಶದಲ್ಲಿ ಒಟ್ಟು ಭಾರತೀಯ ಮೃತರ ಸಂಖ್ಯೆ ಆರಕ್ಕೆ ಏರಿದೆ. ಸಾವು ಹೇಗೆ ಸಂಭವಿಸಿದೆ ಎಂಬ ಮಾಹಿತಿ ಇನ್ನೂ ಅಸ್ಪಷ್ಟವಾಗಿವೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಮಾರ್ಚ್ 18 ರಂದು ನಡೆದ ಇತ್ತೀಚಿನ ಘಟನೆಗಳಿಂದಾಗಿ ರಿಯಾದ್‌ನಲ್ಲಿ ಭಾರತೀಯ ಪ್ರಜೆಯೊಬ್ಬರ ದುರಂತ ನಿಧನಕ್ಕೆ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಮೃತರ ಕುಟುಂಬ ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ ಎಂದು ಹೇಳಿದೆ. ಈ ವಿಷಯದಲ್ಲಿ ಸಾಧ್ಯವಿರುವ ಎಲ್ಲಾ ಸಹಾಯವನ್ನು ನೀಡಲು ನಾವು ಬದ್ಧರಾಗಿದ್ದೇವೆ ಎಂದು ಪೋಸ್ಟ್ ಸೇರಿಸಲಾಗಿದೆ. ಅಂತರ ಸಚಿವಾಲಯದವನ್ನುದ್ದೇಶಿಸಿ ಮಾತನಾಡಿದ ಎಂಇಎಯ ಹೆಚ್ಚುವರಿ ಕಾರ್ಯದರ್ಶಿ (ಗಲ್ಫ್) ಅಸೀಮ್ ಆರ್. ಮಹಾಜನ್, ನಾಪತ್ತೆಯಾದ ವ್ಯಕ್ತಿಯನ್ನು ಪತ್ತೆಹಚ್ಚಲು ಮತ್ತು ಮೃತರನ್ನು ಭಾರತಕ್ಕೆ ಮರಳಿಸಲು ಅನೇಕ ದೇಶಗಳಲ್ಲಿನ ಭಾರತೀಯ ರಾಯಭಾರ ಕಚೇರಿಗಳು ಅಧಿಕಾರಿಗಳೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿದರು. ದುರದೃಷ್ಟವಶಾತ್ ಆರು ಭಾರತೀಯ ಪ್ರಜೆಗಳು ಪ್ರಾಣ ಕಳೆದುಕೊಂಡಿದ್ದಾರೆ. ಸೌದಿ ಅರೇಬಿಯಾ, ಒಮಾನ್, ಇರಾಕ್ ಮತ್ತು ಯುಎಇಯಲ್ಲಿರುವ ನಮ್ಮ ನಿಯೋಗಗಳು ನಾಪತ್ತೆಯಾದ ಭಾರತೀಯ ಪ್ರಜೆಗೆ ಸಂಬಂಧಿಸಿದಂತೆ ಮತ್ತು ಮೃತ ಭಾರತೀಯ ಪ್ರಜೆಗಳ ಪಾರ್ಥಿವ ಶರೀರವನ್ನು ಶೀಘ್ರವಾಗಿ ಭಾರತಕ್ಕೆ ಮರಳಿಸಲು ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಿಯಮಿತವಾಗಿ ಸಂಪರ್ಕದಲ್ಲಿವೆ ಎಂದು ಮಹಾಜನ್ ಹೇಳಿದರು.

ಕಿರುಸುದ್ದಿ

ಲಿಪುಲೇಖ್ ಮೂಲಕ ವ್ಯಾಪಾರ ಪುನರಾರಂಭ

ಹೊಸದಿಲ್ಲಿ: ಮಹತ್ವದ ರಾಜತಾಂತ್ರಿಕ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ, ಉತ್ತರಾಖಂಡದ ಪಿಥೌರಾಗಢ್ ಜಿಲ್ಲೆಯ ಲಿಪುಲೇಖ್ ಪಾಸ್ ಮೂಲಕ ಭಾರತ ಮತ್ತು ಚೀನಾ ನಡುವಿನ ಐತಿಹಾಸಿಕ ಗಡಿಯಾಚೆಗಿನ ವ್ಯಾಪಾರವು ಈ ಜೂನ್‌ನಲ್ಲಿ ಪುನರಾರಂಭಗೊಳ್ಳಲಿದೆ. 2025ರ ಆಗಸ್ಟ್‌ನಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತು ಚೀನಾದ ವಿದೇಶಾಂಗ ಸಚಿವ ಯಿ ನಡುವಿನ ಉನ್ನತ ಮಟ್ಟದ ರಾಜತಾಂತ್ರಿಕ ಮಾತುಕತೆಯ ನಂತರ, ಹಿಮಾಚಲ ಪ್ರದೇಶದ ಶಿಪ್ಕಿ ಲಾ ಮತ್ತು ಸಿಕ್ಕಿಂನ ನಾಥು ಲಾ ಸೇರಿದಂತೆ ಹಿಮಾಲಯದ ಪ್ರಮುಖ ವ್ಯಾಪಾರ ಮಾರ್ಗಗಳನ್ನು ಮತ್ತೆ ತೆರೆಯಲು ಎರಡೂ ರಾಷ್ಟ್ರಗಳು ಒಪ್ಪಿಕೊಂಡವು.

ಅಮೆರಿಕ ಯುದ್ಧ ವಿಮಾನ ನಿಲ್ಲಿಸಲು ಶ್ರೀಲಂಕಾ ಅಸಮ್ಮತಿ

ಕೊಲಂಬೊ: ಅಮೆರಿಕದ ತನ್ನ ಎರಡು ಯುದ್ಧ ವಿಮಾನಗಳನ್ನು ಮಟ್ಟಾಲ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಲ್ಲಿಸಲು ಅನುಮತಿ ನಿರಾಕರಿಸುವ ಮೂಲಕ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ತಟಸ್ಥ ನೀತಿ ದೋರಣೆಯನ್ನು ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸಾನಾಯಕೆ ದೃಢಪಡಿಸಿದ್ದಾರೆ.

300 ಬೆಟ್ಟಿಂಗ್ ಆ್ಯಪ್‌ಗೆ ಕೇಂದ್ರ ಸರ್ಕಾರ ನಿರ್ಬಂಧ

ಹೊಸದಿಲ್ಲಿ: ಕೇಂದ್ರ ಸರ್ಕಾರ ಅಕ್ರಮ ಬೆಟ್ಟಿಂಗ್ ಮೇಲೆ ಕಠಿಣ ಕ್ರಮ ಕೈಗೊಂಡಿದ್ದು, 300 ವೆಬ್‌ಸೈಟ್‌ಗಳು ಮತ್ತು ಆನ್‌ಲೈನ್ ಬೆಟ್ಟಿಂಗ್ ಅಪ್ಲಿಕೇಶನ್‌ಗಳನ್ನು ನಿರ್ಬಂಧಿಸಿದೆ. ಆನ್‌ಲೈನ್ ಕ್ರೀಡಾ ಬೆಟ್ಟಿಂಗ್, ಕ್ಯಾಸಿನೊ-ರೂಪದ ಗೇಮಿಂಗ್ ಮತ್ತು ಪೀರ್-ಟು-ಪೀರ್ ಬೆಟ್ಟಿಂಗ್, ಓಲ್ಡ್ ಸ್ಕೂಲ್ ಸತ್ತಾ ಆ್ಯಂಡ್ ಮಟ್ಕಾ ನೆಟ್‌ವರ್ಕ್, ಕ್ಯಾಸಿನೋ ಆ್ಯಪ್ ಸೇರಿದಂತೆ ವಿವಿಧ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಬೆಟ್ಟಿಂಗ್ ಪ್ಲಾಟ್‌ಫಾರ್ಮ್‌ಗಳ ಮೇಲೆ ಕೇಂದ್ರ ಸರ್ಕಾರ ನಿರ್ಬಂಧ ಹೇರಿದೆ. ಆನ್‌ಲೈನ್ ಗೇಮಿಂಗ್ ಕಾಯ್ದೆಯ ಅಂಗೀಕಾರದ ನಂತರ ಕಾನೂನುಬಾಹಿರ ಚಟುವಟಿಕೆಗಳಿಗಾಗಿ ನಿರ್ಬಂಧಿಸಲಾದ ವೆಬ್‌ಸೈಟ್‌ಗಳು ಅಥವಾ ಅಪ್ಲಿಕೇಶನ್‌ಗಳ ಸಂಖ್ಯೆ 8,400 ಕ್ಕೆ ಏರಿದೆ. ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಮಸೂದೆ, 2025 ಅನ್ನು 2025ರ ಆಗಸ್ಟ್ 21ರಂದು ಸಂಸತ್ತು ಅಂಗೀಕರಿಸಿತು. ಗೇಮಿಂಗ್ ಆಕ್ಟ್ ಎಲ್ಲಾ ರೀತಿಯ ಆನ್‌ಲೈನ್ ಮನಿ ಗೇಮ್‌ಗಳನ್ನು ಸಮಗ್ರವಾಗಿ ನಿಷೇಧಿಸುತ್ತದೆ. ಇದು ಕೌಶಲ್ಯದ ಆಟಗಳಾಗಿರಬಹುದು ಅಥವಾ ಯಾವುದೇ ಸಂಯೋಜನೆಯಾಗಿರಬಹುದು. ಇದು ಅಂತಹ ಆಟಗಳ ಜಾಹೀರಾತು, ಪ್ರಚಾರ ಮತ್ತು ಸೌಲಭ್ಯವನ್ನು ನಿಷೇಧಿಸುತ್ತದೆ. ಜತೆಗೆ ಬ್ಯಾಂಕುಗಳು ಅಥವಾ ಪಾವತಿ ವ್ಯವಸ್ಥೆಗಳ ಮೂಲಕ ಸಂಬಂಧಿತ ಹಣಕಾಸು ವಹಿವಾಟುಗಳ ಪ್ರಕ್ರಿಯೆಯನ್ನು ನಿಷೇಧಿಸುತ್ತದೆ. ಈ ಅಂಗೀಕಾರ ಡಿಜಿಟಲ್ ಗೇಮಿಂಗ್ ಮತ್ತು ಬೆಟ್ಟಿಂಗ್ ಚಟುವಟಿಕೆಗಳನ್ನು ನಿಯಂತ್ರಿಸಲು ಕಾನೂನು ಚೌಕಟ್ಟನ್ನು ಬಲಪಡಿಸಿತು. ಈ ವರ್ಷದ ಜನವರಿಯ ಆರಂಭದಲ್ಲಿ ಕೇಂದ್ರ ಸರ್ಕಾರವು 242 ಅಕ್ರಮ ಬೆಟ್ಟಿಂಗ್ ಮತ್ತು ಜೂಜಾಟ ವೆಬ್‌ಸೈಟ್ ಲಿಂಕ್‌ಗಳನ್ನು ನಿರ್ಬಂಧಿಸಿತ್ತು.

ಕೆನಡಾದಲ್ಲಿ ಭಾರತ ಗುಪ್ತ ಚಟುವಟಿಕೆ ನಡೆಸುತ್ತಿಲ್ಲ

ಒಟ್ಟಾವಾ: ಕೆನಡಾದಲ್ಲಿ ಭಾರತ ಸರ್ಕಾರಕ್ಕೆ ಸಂಬಂಧಿಸಿದಂತೆ ಯಾವುದೇ ಗುಪ್ತ ಕಾರ್ಯಾಚರಣೆಗಳಾಗಲಿ, ದಮನಕಾರಿ ಚಟುವಟಿಕೆಗಳು ಈಗ ನಡೆಯುತ್ತಿಲ್ಲ ಎಂದು ಕೆನಡಾ ಪೊಲೀಸ್ ಮುಖ್ಯಸ್ಥರು ಹೇಳಿದ್ದಾರೆ. ರಾಯಲ್ ಕೆನೇಡಿಯನ್ ಮೌಂಟೆಡ್ ಪೊಲೀಸ್ ಆಯುಕ್ತ ಮೈಕ್ ಡುಹೆಮ್ ಸಿಟಿವಿ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಈ ಸ್ಪಷ್ಟನೆ ನೀಡಿದ್ದಾರೆ. ಭಾರತ ಪರ ಏಜೆಂಟ್‌ಗಳು ಕೆನಡಾದಲ್ಲಿರುವವರ ಮೇಲೆ ಒತ್ತಡ ಹೇರುತ್ತಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಈಗಿನ ತನಿಖಾ ದಾಖಲೆಗಳಲ್ಲಿ ಯಾವುದೇ ವಿದೇಶಿ ರಾಷ್ಟ್ರದ ನೇರ ಸಂಪರ್ಕವನ್ನು ಸ್ಥಾಪಿಸಲು ಸಾಕ್ಷ್ಯ ಲಭ್ಯವಾಗಿಲ್ಲ ಎಂದು ತಿಳಿಸಿದ್ದಾರೆ.

ಬೆದರಿಕೆ, ಕಿರುಕುಳ, ಒತ್ತಡದಂತಹ ಕೆಲವು ಪ್ರತ್ಯೇಕ ಘಟನೆಗಳು ದಾಖಲಾಗಿದ್ದರೂ, ಅವುಗಳನ್ನು ಭಾರತ ಅಥವಾ ಇತರ ಯಾವುದೇ ವಿದೇಶಿ ಸರ್ಕಾರದೊಂದಿಗೆ ನೇರವಾಗಿ ಕೊಂಡಿ ಹಾಕಲು ತನಿಖಾಧಿಕಾರಿಗಳ ಬಳಿ ಸಮರ್ಪಕ ಆಧಾರ ಇಲ್ಲ ಎಂದಿದ್ದಾರೆ. ಹೀಗಾಗಿ, ಈ ಹೇಳಿಕೆಯಿಂದಾಗಿ ಭಾರತ-ಕೆನಡಾ ನಡುವಿನ ಕಳೆದ ಕೆಲ ತಿಂಗಳ ರಾಜತಾಂತ್ರಿಕ ಉದ್ವಿಗ್ನತೆಗೆ ಹೊಸ ತಿರುವು ನೀಡಿದಂತಾಗಿದೆ.

2023ರಲ್ಲಿ ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದಲ್ಲಿ ಭಾರತೀಯ ಸಂಪರ್ಕ ಇರಬಹುದು ಎಂದು ಆಗಿನ ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೋ ಆರೋಪಿಸಿದ್ದರು. ಭಾರತವು ಅದನ್ನು ಅಂದೇ ತೀವ್ರವಾಗಿ ತಳ್ಳಿ ಹಾಕಿತ್ತು. ಇದಾದ ಮೇಲೆ ಉಭಯ ದೇಶಗಳ ರಾಜತಾಂತ್ರಿಕ ಸಂಬಂಧ ಹಾಳಾಗಿತ್ತು. ಸದ್ಯ ಕೆನಡಾದಲ್ಲಿನ ಕಾರ್ನಿ ಸರ್ಕಾರ, ಭಾರತದ ಜತೆ ಉತ್ತಮ ಸಂಬಂಧ ಏರ್ಪಡಿಸಿಕೊಳ್ಳಲು ಮುಂದಾಗಿದ್ದು, ಇತ್ತೀಚೆಗಷ್ಟೇ ಭೇಟಿಯನ್ನೂ ನೀಡಿದ್ದರು.

ಆಫ್ಘಾನ್‌ಗೆ ಭಾರತದಿಂದ ವೈದ್ಯಕೀಯ ನೆರವು

ಹೊಸದಿಲ್ಲಿ: ಮಾರ್ಚ್ 16ರ ದಾಳಿಯಲ್ಲಿ ಗಾಯಗೊಂಡ ಜನರ ಚಿಕಿತ್ಸೆಗೆ ಸಹಾಯ ಮಾಡುವ ನಿಟ್ಟಿನಲ್ಲಿ ಭಾರತವು 2.50 ಟನ್ ತುರ್ತು ವೈದ್ಯಕೀಯ ಸರಬರಾಜುಗಳನ್ನು ಅಫ್ಘಾನಿಸ್ತಾನಕ್ಕೆ ಕಳುಹಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಶುಕ್ರವಾರ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಪಾಕಿಸ್ತಾನದ ದಾಳಿಯಲ್ಲಿ ಅಫ್ಘಾನ್‌ನ ಅನೇಕ ಜನರು ಮೃತಪಟ್ಟಿದ್ದು, ಹಲವಾರು ಜನರು ಗಾಯಗೊಂಡಿದ್ದರು.



ನಗರದಲ್ಲಿ ತುರ್ತು ವೈದ್ಯಕೀಯ ಅಗತ್ಯಗಳನ್ನು ಅನಿವಾರ್ಯತೆಗಾಗಿ ಈ ಮಾನವೀಯ ನೆರವು ಕಳುಹಿಸಲಾಗಿದೆ. ಈ ರವಾನೆಯು ತುರ್ತು ಔಷಧಿಗಳು, ವೈದ್ಯಕೀಯ ವಸ್ತುಗಳು, ಕಿಟ್‌ಗಳು ಮತ್ತು ಉಪಕರಣಗಳನ್ನು ಒಳಗೊಂಡಿದ್ದು, ತಕ್ಷಣದ ಚಿಕಿತ್ಸೆ ಮತ್ತು ಚೇತರಿಕೆಯ ಪ್ರಯತ್ನಗಳನ್ನು ಬೆಂಬಲಿಸುವ ಗುರಿಯನ್ನು ಹೊಂದಿದೆ ಎಂದು ಎಂಇಎ ಹೇಳಿದೆ. ಭಾರತವು ಅಫ್ಘಾನ್ ಜನರೊಂದಿಗೆ ಒಗ್ಗಟ್ಟಿನಿಂದ ನಿಲ್ಲುತ್ತದೆ ಮತ್ತು ಈ ಕಷ್ಟದ ಸಮಯದಲ್ಲಿ ಸಾಧ್ಯವಿರುವ ಎಲ್ಲಾ ಮಾನವೀಯ ಬೆಂಬಲವನ್ನು ನೀಡುವುದನ್ನು ಮುಂದುವರಿಸುತ್ತದೆ ಎಂದು ಅವರು ಹೇಳಿದರು. ಮಾರ್ಚ್ 16ರಂದು, ಕಾಬೂಲ್‌ನ ಆಸ್ಪತ್ರೆಯ ಮೇಲೆ ಪಾಕಿಸ್ತಾನದ ವಾಯುದಾಳಿಯಲ್ಲಿ ಕನಿಷ್ಠ 400 ಜನರು ಮೃತಪಟ್ಟಿದ್ದು, ಸುಮಾರು 250 ಜನರು ಗಾಯಗೊಂಡಿದ್ದರು.

ಅಮೋಘ್ ಜ್ವಾಲಾ ಸಮರಾಭ್ಯಾಸ ಯಶಸ್ವಿ

ಹೊಸದಿಲ್ಲಿ: ಭಾರತೀಯ ಸೇನೆಯ ದಕ್ಷಿಣ ಕಮಾಂಡ್, ಭವಿಷ್ಯದ ಯುದ್ಧ ತಂತ್ರಗಳನ್ನು ಪ್ರದರ್ಶಿಸುವ, ಸಾಂಪ್ರದಾಯಿಕ ಯುದ್ಧ ತಂತ್ರಗಳೊಂದಿಗೆ ತಂತ್ರಜ್ಞಾನ ಸಂಯೋಜಿಸುವ, 'ಅಮೋಘ್ ಜ್ವಾಲಾ' ಎಂಬ ಮಹತ್ವದ ಯುದ್ಧ ಸಮರಾಭ್ಯಸವನ್ನು ಮುಕ್ತಾಯಗೊಳಿಸಿತು. ಮಾರ್ಚ್ 6ರಿಂದ 18ರವರೆಗೆ ಬಬಿನಾ ಫೀಲ್ಡ್ ಫೈರಿಂಗ್ ಶ್ರೇಣಿಗಳಲ್ಲಿ ಅಮೋಗ್ ಜ್ವಾಲಾ ನಡೆಯಿತು. ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್, ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್, ದಕ್ಷಿಣ ಕಮಾಂಡ್, ಪಡೆಗಳನ್ನು ಅವರ ಸನ್ನದ್ಧತೆಗಾಗಿ ಶ್ಲಾಘಿಸಿದರು. ಆಧುನಿಕ ಯುದ್ಧವು ಭೂ ಕದನಗಳನ್ನು ಮೀರಿ, ವಾಯು, ಸೈಬರ್ ಮತ್ತು ಬಾಹ್ಯಾಕಾಶ ಕ್ಷೇತ್ರಗಳನ್ನು ಒಳಗೊಂಡಿದ್ದು, ಎಲ್ಲವೂ ನೈಜ ಸಮಯದಲ್ಲಿ ಕಾರ್ಯನಿರ್ವಹಿಸುತ್ತದೆ ಎಂದು ಲೆಫ್ಟಿನೆಂಟ್ ಜನರಲ್ ಸೇಠ್ ಒತ್ತಿ ಹೇಳಿದರು. ವಿವಿಧ ಮಿಲಿಟರಿ ಶಸ್ತ್ರಾಸ್ತ್ರಗಳ ತಡೆರಹಿತ ಕಾರ್ಯಾಚರಣೆಯನ್ನು ಪರೀಕ್ಷಿಸುವುದು ಇದರ ಮುಖ್ಯ ಉದ್ದೇಶವಾಗಿತ್ತು. ಟ್ಯಾಂಕ್‌ಗಳು ಮತ್ತು ಯಾಂತ್ರೀಕೃತ ಘಟಕಗಳು ದಾಳಿ ಹೆಲಿಕಾಪ್ಟರ್‌ಗಳು ಮತ್ತು ಫೈಟರ್ ಏರ್‌ಕ್ರಾಫ್ಟ್‌ಗಳೊಂದಿಗೆ ಸಮನ್ವಯಗೊಂಡವು, ಆದರೆ ಡ್ರೋನ್‌ಗಳು ನೇರ ಕಣ್ಗಾವಲು ಮತ್ತು ತ್ವರಿತ ಗುರಿಯನ್ನು ಗುರುತಿಸಿದವು.

11 ದಶಲಕ್ಷ ಡಾಲರ್ ಒಪ್ಪಂದ | ಬರಲಿದೆ ಇಸ್ರೇಲಿ ಎಐ-ಆಧಾರಿತ ಸ್ವದೇಶಿ ಡ್ರೋನ್

ದೇಸಿಡ್ರೋನ್ ಒಪ್ಪಂದಕ್ಕೆ ಭಾರತ-ಇಸ್ರೇಲ್ ಸಹಿ

ಹೊಸದಿಲ್ಲಿ: ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಯುದ್ಧ ನಡೆಸುತ್ತಿರುವ ಮಧ್ಯೆ, ಅಮೆರಿಕದಲ್ಲಿ ಉತ್ಪಾದನಾ ಘಟಕವಿರುವ ಇಸ್ರೇಲ್ ಕಂಪನಿಯ ಜತೆ ಭಾರತ ಎಐ-ಆಧಾರಿತ ಸ್ವದೇಶಿ ಡ್ರೋನ್ ಉತ್ಪಾದನೆಗಾಗಿ 11 ದಶಲಕ್ಷ ಡಾಲರ್ ಮೌಲ್ಯದ ಒಪ್ಪಂದ ಮಾಡಿಕೊಂಡಿದೆ. ಇಸ್ರೇಲ್‌ನ ಪ್ರಮುಖ ಎಐ-ಆಧಾರಿತ ರೋಬೋಟಿಕ್ಸ್ ಮತ್ತು ಸಾಫ್ಟ್‌ವೇರ್ ಕಂಪನಿ ಎಕ್ಸ್‌ಟೆಂಡ್ ಮೇಕ್ ಇನ್ ಇಂಡಿಯಾ ಅನ್ವಯದಲ್ಲಿ ಎಐ-ಆಧಾರಿತ ಮಾನವರಹಿತ ವಾಯುಯಾನ ವಾಹನ (ಯುಎವಿ)ಗಳನ್ನು ಉತ್ಪಾದಿಸಲಿದ್ದು, ಭಾರತದ ರಕ್ಷಣಾ ತಂತ್ರಜ್ಞಾನ ಕಂಪನಿ ರೇಯೋನಿಕ್ಸ್ ಟೆಕ್‌ನೊಂದಿಗೆ 11 ದಶಲಕ್ಷ ಡಾಲರ್ ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕಿದೆ.

ರೇಯೋನಿಕ್ಸ್ ಟೆಕ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳುವುದರ ಮೂಲಕ ಎಕ್ಸ್‌ಟೆಂಡ್ ತನ್ನ ಎಐ-ಆಧಾರಿತ ಆಟೋನಮಿ ಪ್ಲ್ಯಾಟ್‌ಫಾರಂ ಎಕ್ಸ್‌ಓಎಸ್ ವ್ಯವಹಾರವನ್ನು ಭಾರತದ ಎಐ ಮಾರುಕಟ್ಟೆಗೆ ವಿಸ್ತರಿಸಿದೆ. ಒಪ್ಪಂದದ ಪ್ರಕಾರ, ಎಕ್ಸ್‌ಟೆಂಡ್ ಒಡೆತನದ ಎಕ್ಸ್‌ಓಎಸ್ ಆಪರೇಟಿಂಗ್ ಸಿಸ್ಟಂ ಮತ್ತು ತಂತ್ರಜ್ಞಾನದ ನೆರವಿನೊಂದಿಗೆ ಡ್ರೋನ್‌ಗಳ ಉತ್ಪಾದನೆ, ಪರೀಕ್ಷೆ ಮತ್ತು ಪೂರೈಕೆಯನ್ನು ರೇಯೋನಿಕ್ಸ್ ನಡೆಸಲಿದೆ. ಕಳೆದ ವರ್ಷ ಇಸ್ರೇಲ್ ಸೇನೆಗೆ 5,000 ಅಸಾಲ್ಟ್ ಡ್ರೋನ್‌ಗಳನ್ನು ಪೂರೈಕೆ ಮಾಡುವ ಒಪ್ಪಂದವನ್ನು ಎಕ್ಸ್‌ಟೆಂಡ್ ಪಡೆದುಕೊಂಡಿತ್ತು.



ಸ್ವದೇಶಿ ಡ್ರೋನ್‌ಗಳಿಗೆ ಇಸ್ರೇಲಿ ತಂತ್ರಜ್ಞಾನ: ಮೇಕ್ ಇನ್ ಇಂಡಿಯಾ ಅನ್ವಯದಲ್ಲಿ, ರೇಯೋನಿಕ್ಸ್ ನಿರ್ಮಾಣದ ಡ್ರೋನ್‌ಗಳಿಗೆ ಸಾಫ್ಟ್‌ವೇರ್ ಬೆನ್ನೆಲುಬಾಗಿ ಎಕ್ಸ್‌ಓಎಸ್ ಕೆಲಸ ಮಾಡಲಿದೆ. ಇಸ್ರೇಲಿ ಆಪರೇಟಿಂಗ್ ಸಿಸ್ಟಂ ಸಾಫ್ಟ್‌ವೇರ್ ಎಐ-ಆಧಾರಿತ ಕಣ್ಗಾವಲು, ಮಿಷನ್ ಯೋಜನೆ ಮತ್ತು ನೈಜ ಸಮಯದ ಕಾರ್ಯಾಚರಣೆ ನಿಯಂತ್ರಣದಲ್ಲಿ ನೆರವಾಗಲಿದೆ. ಈಗಾಗಲೇ ಎಕ್ಸ್‌ಟೆಂಡ್ ಕಂಪನಿಯ ಕೆಲವು ಉತ್ಪನ್ನಗಳ ಉತ್ಪಾದನೆ ಮತ್ತು ಪೂರೈಕೆ ಪಾಲುದಾರಿಕೆ ಮಾಡಿರುವ ರೇಯೋನಿಕ್ಸ್ ಹೊಸ ಒಪ್ಪಂದ ಮಾಡಿಕೊಂಡಿದೆ.

> ಭಾರತವು ಜಾಗತಿಕ ಮಟ್ಟದಲ್ಲಿ ಅತ್ಯಂತ ವೇಗದಲ್ಲಿ ಪ್ರಗತಿ ಕಾಣುತ್ತಿರುವ ರಕ್ಷಣಾ ತಂತ್ರಜ್ಞಾನ ಮಾರುಕಟ್ಟೆಯಾಗಿದೆ. ಭಾರತೀಯ ರಕ್ಷಣಾ ಮಾರುಕಟ್ಟೆಯಲ್ಲಿ ಸ್ವದೇಶಿ ಉತ್ಪಾದನೆ ಮತ್ತು ಎಐ-ಆಧಾರಿತ ತಂತ್ರಜ್ಞಾನಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ.
>
> ■ **ಅವೀವ್ ಶಪೀರ,** ಎಕ್ಸ್‌ಟೆಂಡ್ ಸಿಇಒ ಮತ್ತು ಸಹ-ಸಂಸ್ಥಾಪಕ

> ಯುದ್ಧಗಳಲ್ಲಿ ಸಾಬೀತಾಗಿರುವ ಎಕ್ಸ್‌ಟೆಂಡ್‌ನ ಎಐ-ಆಧಾರಿತ ತಂತ್ರಜ್ಞಾನವನ್ನು ಭಾರತಕ್ಕೆ ಕರೆತರುವುದೇ ಈ ಒಪ್ಪಂದದ ಮುಖ್ಯ ಉದ್ದೇಶವಾಗಿದೆ. ಮೇಕ್ ಇನ್ ಇಂಡಿಯಾ ದೃಷ್ಟಿಕೋನದ ಮುಖೇನ ರಕ್ಷಣಾ ಕ್ಷೇತ್ರದಲ್ಲಿನ ಆತ್ಮನಿರ್ಭರ ಭಾರತದ ಕನಸು ನನಸಾಗಿಸಲು ಕೊಡುಗೆ ನೀಡಲಿದ್ದೇವೆ.
>
> ■ **ಅಮಿತ್ ಪಾಂಡೆ,** ರೇಯೋನಿಕ್ಸ್ ಎಂ.ಡಿ.

ಧಾರ್ಮಿಕ ಭಾವನೆಗಳಿಗೆ ಜಾರ್ಖಂಡ್ ಸಿಎಂ ಧಕ್ಕೆ

ಸನಾತನಕ್ಕೆ ಅವಮಾನ ಬಿಜೆಪಿ ಕಿಡಿ

ಹೊಸದಿಲ್ಲಿ : ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೆನ್ ಅವರು ವಿಧಾನಸಭೆಯಲ್ಲಿ ಸನಾತನ ಧರ್ಮ ಹಾಗೂ ಹಿಂದೂ ದೇವತೆಗಳ ಬಗ್ಗೆ ಮಾಡಿದ ಎನ್ನಲಾದ ಹೇಳಿಕೆಗಳ ಹಿನ್ನೆಲೆಯಲ್ಲಿ ಬಿಜೆಪಿ ಶುಕ್ರವಾರ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.



ಬಿಜೆಪಿ ಆರೋಪಿಸಿದಂತೆ, ಸೋರೆನ್ ಅವರ ಹೇಳಿಕೆಗಳು ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನುಂಟುಮಾಡುವಂತಿವೆ. ಜೊತೆಗೆ, ಇಂಡಿ ವಿರೋಧ ಪಕ್ಷಗಳ ಮೈತ್ರಿಯ ನಾಯಕರಿಗೆ ಹಿಂದೂ ದೇವತೆಗಳನ್ನು ಹಾಸ್ಯ ಮಾಡುವುದೂ, ಅವರ ಸಂಸ್ಕೃತಿಯನ್ನು ಹಿಗ್ಗಾಮುಗ್ಗಾ ಟೀಕಿಸುವುದೂ ಒಂದು ಫ್ಯಾಷನ್ ಆಗಿಬಿಟ್ಟಿದೆ ಎಂದು ಪಕ್ಷ ಟೀಕಿಸಿದೆ.

ವಿಡಿಯೋದಲ್ಲೇನಿದೆ?: ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಒಂದು ವಿಡಿಯೋದಲ್ಲಿ, ಸೋರೆನ್ ಅವರು ನಾವು ಸರಸ್ವತಿ ಪೂಜೆ ಹೆಚ್ಚು ಆಚರಿಸುತ್ತೇವೆ, ಆದರೆ ಅತ್ಯಂತ ಪ್ರತಿಭಾವಂತ ಮಕ್ಕಳು ಜಪಾನ್‌ನಲ್ಲಿ ಹುಟ್ಟುತ್ತಾರೆ. ನಾವು ಲಕ್ಷ್ಮೀ ಪೂಜೆ ಹೆಚ್ಚು ಮಾಡುತ್ತೇವೆ, ಆದರೆ ಶ್ರೀಮಂತರಾದವರು ಅಮೆರಿಕದಲ್ಲಿ ಹುಟ್ಟುತ್ತಾರೆ. ಇದರಲ್ಲಿ ಮೂಲಭೂತವಾಗಿ ಏನೋ ತಪ್ಪಿದೆ ಎಂದು ಹೇಳಿರುವುದು ಕೇಳಿಬಂದಿದೆ.

ಈ ವಿಡಿಯೋವನ್ನು ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಹಂಚಿಕೊಂಡ ಬಿಜೆಪಿ, ಸೋರೆನ್ ಅವರ ಹೇಳಿಕೆಯನ್ನು 'ಸನಾತನದ ಮೇಲೆ ದಾಳಿ ಮತ್ತು ಭಾರತದ ಅವಮಾನ' ಎಂದು ಬಣ್ಣಿಸಿದೆ.

'ಸನಾತನದ ಮೇಲೆ ದಾಳಿ ಎಂದರೆ ಭಾರತದ ಮೇಲೆ ದಾಳಿ. ಮತಬ್ಯಾಂಕ್ ರಾಜಕಾರಣಕ್ಕಾಗಿ ಸನಾತನ ಅನುಯಾಯಿಗಳ ನಂಬಿಕೆ ಮತ್ತು ಸಂಸ್ಕೃತಿಯನ್ನು ಗುರಿಯಾಗಿಸುವುದು ಹೇಮಂತ್ ಸೋರೆನ್ ಹಾಗೂ ಇಂಡಿ ಮೈತ್ರಿ ನಾಯಕರ ಅಭ್ಯಾಸವಾಗಿದೆ. ದೇವತೆಗಳನ್ನು ಹಾಸ್ಯ ಮಾಡುವುದು, ಆಚರಣೆಗಳನ್ನು ಟೀಕಿಸುವುದು ಈಗ ಅವರಿಗೆ ಸಾಮಾನ್ಯವಾಗಿದೆ. ದೇಶದ ಜನರು ಇದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ನೀಡುತ್ತಾರೆ,' ಎಂದು ಬಿಜೆಪಿ ಹೇಳಿದೆ.

ಕಿರುಸುದ್ದಿ



ಬೆನ್ನೂರಲ್ಲಿ ಕಾಳಿಕಾಂಬಾ ದೇವಿ ನೂತನ ಮೂರ್ತಿ ಪ್ರತಿಷ್ಠಾಪನೆ

• **ಚಂದ್ರಗುತ್ತಿ:** ಸಮೀಪದ ಬೆನ್ನೂರು ಗ್ರಾಮದಲ್ಲಿ ಕಾಳಿಕಾಂಬಾ ದೇವಿಯ ನೂತನ ಮೂರ್ತಿ ಪ್ರತಿಷ್ಠಾಪನೆ ಹಾಗೂ ಬ್ರಹ್ಮಕಲಶಾಭಿಷೇಕ ಮಹೋತ್ಸವವು ಶುಕ್ರವಾರ ಜರುಗಿತು.

ಮಹೋತ್ಸವದ ಅಂಗವಾಗಿ ಮುಂಜಾನೆಯಿಂದಲೇ ದೇವಸ್ಥಾನದ ಆವರಣದಲ್ಲಿ ಮಂತ್ರ ಘೋಷಗಳು ಮೊಳಗಿದವು. ಅರ್ಚಕ ವೃಂದದ ನೇತೃತ್ವದಲ್ಲಿಗಣಪತಿ ಪೂಜೆ, ದೇವಪ್ರಾರ್ಥನೆ, ಸ್ವಸ್ತಿ ಪುಣ್ಯಾಹ ವಾಚನಗಳೊಂದಿಗೆ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು. ದೇವಿಯ ಸಾನ್ನಿಧ್ಯ ವೃದ್ಧಿಗಾಗಿ ಬಿಂಬಶುದ್ಧಿ ಹವನ, ಅಧಿವಾಸ ಹವನ, ರತ್ನನ್ಯಾಸ ಹಾಗೂ ಪ್ರತಿಷ್ಠಾ ಹವನಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು. ಮಧ್ಯಾಹ್ನ ಸಕಾಲದ ವೃಷಭ ಲಗ್ನದ ಶುಭ ಮುಹೂರ್ತದಲ್ಲಿ ಕಾಳಿಕಾಂಬಾ ದೇವಿಯ ನೂತನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು.

ಮಹೋತ್ಸವದ ಪ್ರಯುಕ್ತ ಗ್ರಾಮವೇ ಹಬ್ಬದ ಕಳೆಯನ್ನು ಹೊತ್ತಿತ್ತು. ಗ್ರಾಮದ ಪ್ರಮುಖ ರಸ್ತೆಗಳನ್ನು ಕೇಸರಿ ಧ್ವಜಗಳು, ಬಾಳೆ ಕಂಬ ಹಾಗೂ ವಿದ್ಯುತ್ ದೀಪಾಲಂಕಾರಗಳಿಂದ ಶೃಂಗರಿಸಲಾಗಿತ್ತು. ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತಾದಿಗಳು ಮಹಾಮಂಗಳಾರತಿ ನಂತರ ದೇವಿಯ ದರ್ಶನ ಪಡೆದು ಪುನೀತರಾದರು. ಗ್ರಾಮಸ್ಥರ ಕ್ಷೇಮ, ಆರೋಗ್ಯ ಮತ್ತುಐಶ್ವರ್ಯ ವೃದ್ಧಿಗಾಗಿ ಅರ್ಚಕರ ಸಮಕ್ಷಮದಲ್ಲಿ ವಿಶೇಷ ಸಂಕಲ್ಪ ಪೂಜೆ ನೆರವೇರಿತು. ಆಗಮಿಸಿದ ಭಕ್ತರಿಗೆಅನ್ನದಾಸೋಹದ ವ್ಯವಸ್ಥೆ ಮಾಡಲಾಗಿತ್ತು.

ದೇವಸ್ಥಾನ ಅಭಿವೃದ್ಧಿ ಸಮಿತಿ ಸದಸ್ಯ ಮಾರ್ಯಪ್ಪ ಬೆನ್ನೂರು ಮಾತನಾಡಿ, ಗ್ರಾಮದಲ್ಲಿ ನೂತನವಾಗಿ ಕಾಳಿಕಾಂಬಾ ದೇವಿಯ ದೇವಸ್ಥಾನವನ್ನು ಸ್ಥಾಪಿಸಬೇಕೆಂಬುದು ಬಹುದಿನದ ಕನಸಾಗಿತ್ತು. ಈ ನಿಟ್ಟಿನಲ್ಲಿಗ್ರಾಮಸ್ಥರು ಮತ್ತು ಸುತ್ತಮುತ್ತಲಿನ ದಾನಿಗಳ ಅತ್ಯಂತ ಭಕ್ತಿ ಸೇವೆ ಹಾಗೂ ಸಹಕಾರದಿಂದ ಕಾರ್ಯ ಯಶಸ್ವಿಗೊಂಡಿದೆ ಎಂದರು.

ವೃದ್ಧಾಶ್ರಮದಲ್ಲಿ ಮಹಿಳಾ ದಿನಾಚರಣೆ

• **ಶಿವಮೊಗ್ಗ:** ಜೆಸಿ ಶಿವಮೊಗ್ಗ ಚಿರಂತನದ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಗೋಪಾಳದ ಜೀವನ ಸಂಜೆ ವೃದ್ಧಾಶ್ರಮದಲ್ಲಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವೈದ್ಯರಾದ ಪ್ರಿಯಾಂಕ ಚೌಹಾಣ್ ಮಾತನಾಡಿ, ವೃದ್ಧಾಪ್ಯದಲ್ಲಿ ಬರಬಹುದಾದ ಸಾಮಾನ್ಯ ತೊಂದರೆಗಳು, ಅದಕ್ಕೆ ಬೇಕಾದಂತಹ ಚಿಕಿತ್ಸೆಗಳನ್ನು ತಿಳಿಸಿದರು.

ಭಾಗ್ಯಲಕ್ಷ್ಮಿ ಆಚಾರ್ ಮಾತನಾಡಿ, ಮಹಿಳಾ ದಿನಾಚರಣೆಯನ್ನು ವೃದ್ಧಾಶ್ರಮದಲ್ಲಿ ಆಚರಿಸುವುದು ಅತ್ಯಂತ ಅರ್ಥಪೂರ್ಣ ಮತ್ತು ಮನಸ್ಸಿಗೆ ಹತ್ತಿರವಾಗಿರುವ ಕಾರ್ಯವಾಗಿದೆ. ಸಮಾಜದಲ್ಲಿ ತಮ್ಮ ಜೀವನವನ್ನು ಕುಟುಂಬಕ್ಕೆ ಅರ್ಪಿಸಿದ ಅನೇಕ ವೃದ್ಧ ಮಹಿಳೆಯರು ವೃದ್ಧಾಶ್ರಮಗಳಲ್ಲಿ ವಾಸಿಸುತ್ತಿದ್ದಾರೆ. ಈ ವಿಶೇಷ ದಿನದಂದು ಅವರನ್ನು ಸ್ಮರಿಸಿ ಗೌರವಿಸುವುದು ನಮ್ಮ ಕರ್ತವ್ಯ ಎಂದರು.

ಸಹನ.ಇ.ವಿ ಮಾತನಾಡಿ, ಪ್ರಸ್ತುತ ಹೆಣ್ಣು ಮಕ್ಕಳು ಸಾಕಷ್ಟು ಸಂಖ್ಯೆಯಲ್ಲಿ ಹೊರ ಪ್ರಪಂಚಕ್ಕೆ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಿಯ್ಯ ನಾಗರಾಜ್ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಶೇಷತೆ ಕುರಿತು ಹೇಳಿದರು.

ವಲಯ ಉಪಾಧ್ಯಕ್ಷ ಕುಮಾರ್ ಬೆಣ್ಣೆ, ಪೂರ್ವ ಅಧ್ಯಕ್ಷ ರುದ್ರೇಶ್ ಕೋರಿ, ಕಾರ್ಯದರ್ಶಿ ಮಹಿಮ ವಿ ಶಾನ್ಭೋಗ್, ಮಕ್ಕಳ ವಿಭಾಗದ ಕನಿಷ್ಕ.ವಿ, ಜೀವನ ಸಂಜೆ ವೃದ್ಧಾಶ್ರಮದ ಮುಖ್ಯಸ್ಥೆ ಹಾಲಪ್ಪ ಹಾಗೂ ಚಿರಂತನದ ಎಲ್ಲಾ ಸದಸ್ಯರು ಭಾಗವಹಿಸಿದ್ದರು.



ಸರ್ಕಾರದ ವಿರುದ್ಧ ಸ್ವಾಮೀಜಿ ಆಕ್ರೋಶ

• **ಹಿರಿಯೂರು:** ಒಳಮೀಸಲಾತಿ ಅನುಷ್ಠಾನಕ್ಕೆ ಆಗ್ರಹಿಸಿ ಹರಿಹರದಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸುತ್ತಿರುವ ಆದಿಜಾಂಬವ ಮಠದ ಷಡಕ್ಷರ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ಹಿರಿಯೂರು ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಚಪ್ಪಲಿ ಹೊಲಿಯುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು.

ನಗರದ ಪ್ರಧಾನ ರಸ್ತೆಯ ಚರ್ಮ ಕುಟೀರದಲ್ಲಿ ಚಪ್ಪಲಿ ಹೊಲಿಯುವ ಮೂಲಕ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಶ್ರೀಗಳು, ಮಾದಿಗರ ಕುಲಕಸುಬು ಚಪ್ಪಲಿ ಹೊಲಿಯುವುದು. ಇದನ್ನು ನಾವು ಇನ್ನೆಷ್ಟು ದಿನ ಮುಂದುವರಿಸಬೇಕು ಎಂದು ಪ್ರಶ್ನಿಸಿದರು. 35 ವರ್ಷಗಳ ಕಾಲ ದಲಿತ ಸಂಘಟನೆಗಳು ನಡೆಸಿದ

ಹೋರಾಟದ ಫಲ ಒಳಮೀಸಲಾತಿ ರಾಜ್ಯದಲ್ಲಿ ಜಾರಿಗೊಂಡಿದ್ದು, ಕಾನೂನು ರೂಪ ಪಡೆದುಕೊಂಡಿದೆ. ಆದರೆ, ಈಗ 50 ಸಾವಿರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಒಳಮೀಸಲಾತಿ ಇಲ್ಲದೆ ಆರಂಭಿಸಿರುವುದು ಆತಂಕ ತಂದೊಡ್ಡಿದೆ ಎಂದು ಹೇಳಿದರು.

ಒಳಮೀಸಲಾತಿ ಜಾರಿಗೊಂಡಲ್ಲಿ ಮಾತ್ರ ಮಾದಿಗ ಸಮುದಾಯಕ್ಕೆ ನ್ಯಾಯ ದೊರಕಲಿದೆ. ಈಗಾಗಲೇ 100 ಕಿ.ಮೀ ಆಗಮಿಸಿ ಬಿಸಿಲು ಲೆಕ್ಕಿಸದೆ ಕಾಲ್ನಡಿಗೆಯಲ್ಲಿ ಹೆಜ್ಜೆ ಹಾಕಿರುವೆ. ಕೊನೇಪಕ್ಷ ಸರ್ಕಾರದ ಪ್ರತಿನಿಧಿಯೊಬ್ಬರು ನಮ್ಮ ಬೇಡಿಕೆ ಆಲಿಸುವ ಸೌಜನ್ಯ ಪ್ರದರ್ಶಿಸಲಿಲ್ಲ, ಈ ವಿಷಯದಲ್ಲಿ ಸರ್ಕಾರವಷ್ಟೇ ಅಲ್ಲ, ಎಲ್ಲ ಪಕ್ಷಗಳು ಮಾದಿಗ ಸಮುದಾಯವನ್ನು ಕಡೆಗಣಿಸುವ ಕೆಲಸ ಮಾಡಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಹನುಮಂತರಾಯಪ್ಪ , ಘಾಟ್ ರವಿ, ಚಂದ್ರಪ್ಪ ಘಾಟ್, ಚಿದಾನಂದ, ಯೋಗೇಶ, ವಕೀಲ ಪ್ರಕಾಶ, ಜಿ.ಎಲ್. ಮೂರ್ತಿ, ಬೋರನಕುಂಟೆ ಕರಿಯಣ್ಣ, ಸುಜಾತಾ, ಲಿಂಗರಾಜ್, ಕಣುಮೇಶ್ ರಾಜಪ್ಪ ರಾಘು, ದೇವರಾಜ್ ಇತರರಿದ್ದರು.



ಜಿಲ್ಲಾಡಳಿತದ ಕ್ರಮದ ಬಗ್ಗೆ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ತೀವ್ರ ಅಸಮಾಧಾನ

ಗಡಿಪಾರು ನೋಟೀಸ್‌ಗೆ ಆಕ್ರೋಶ



• **ಚಿಕ್ಕಮಗಳೂರು:** ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸಂತೋಷ್ ಕೋಟ್ಯಾನ್ ಹಾಗೂ ಬಜರಂಗದಳದ ಹಾಸನ ವಿಭಾಗ ಸಂಚಾಲಕ ಶ್ಯಾಮ್ ವಿ. ಗೌಡ ಅವರಿಗೆ ಗಡಿಪಾರು ನೋಟೀಸು ನೀಡಿರುವ ಜಿಲ್ಲಾಡಳಿತದ ಕ್ರಮದ ಬಗ್ಗೆ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಹೇಳಿಕೆ ನೀಡಿರುವ ಅವರು, ಅವರಿಬ್ಬರೂ ವೈಚಾರಿಕ ಬದ್ಧತೆ ಹೊಂದಿರುವ, ಅನ್ಯಾಯದ ವಿರುದ್ಧ ಸಿಡಿದೇಳುವ ಕಾರ್ಯಕರ್ತರು. ನ್ಯಾಯದ ಪರವಾಗಿ ಹೋರಾಟ ಮಾಡುವುದು, ಪ್ರಶ್ನಿಸುವುದು ಅಪರಾಧವಲ್ಲ, ಪ್ರಶ್ನಿಸುವುದೇ ಅಪರಾಧ ಎನ್ನುವ ಮಾನಸಿಕತೆ ಸರ್ವಾಧಿಕಾರಿ ಮಾನಸಿಕತೆ ಎಂದು ವಿಧಾನ ಪರಿಷತ್ ಕಿಡಿಕಾರಿದ್ದಾರೆ.

ಗಡೀಪಾರು ನೋಟೀಸ್ ನೀಡುವ ಮೂಲಕ ನಮ್ಮ ಪಕ್ಷಕ್ಕೆ ಸವಾಲು ಹಾಕಿದ್ದಾರೆ. ನಾವು ಈ ಸವಾಲು ಸ್ವೀಕರಿಸಿ, ನ್ಯಾಯಾಲಯ ಮತ್ತು ಜನತಾ ನ್ಯಾಯಾಲಯಗಳಲ್ಲಿ ಇದನ್ನು ಪ್ರಶ್ನಿಸುತ್ತೇವೆ. ಈ ರೀತಿ ಬಿಜೆಪಿಯನ್ನು ಹೆದರಿಸಲು ಸಾಧ್ಯವಿಲ್ಲ. ಪೊಲೀಸ್ ಇಲಾಖೆ ಬಳಸಿರುವ ಭಾಷೆ ಕ್ಷಮಿಸಲಸಾಧ್ಯ ಎಂದಿದ್ದಾರೆ.

ರಾಜಕೀಯ ಕಾರ್ಯಕರ್ತರನ್ನು, ಸೈದ್ಧಾಂತಿಕ ಬದ್ಧತೆಯ ಕಾರ್ಯಕರ್ತರನ್ನು ಗೂಂಡಾಗಳು, ಹಫ್ತಾ ವಸೂಲಿ ಮಾಡಿದ್ದಾರೆ ಎಂದು ಆರೋಪಿಸಲು ನಾಚಿಕೆ ಆಗಬೇಕು. ಅವರನ್ನು ಕ್ರಿಮಿನಲ್‌ಗಳ ರೀತಿ ಕಾಣುವ ಮಾನಸಿಕತೆಗೆ ನಮ್ಮ ಧಿಕ್ಕಾರವಿದೆ. ನಮ್ಮ ಕಾರ್ಯಕರ್ತರ ಬೆನ್ನಿಗೆ ನಾವು ನಿಲ್ಲುತ್ತೇವೆ. ಅದೆಷ್ಟು ಜನರನ್ನು ಬಂಧಿಸುತ್ತೀರಿ, ಗಡೀಪಾರು ಮಾಡುತ್ತೀರಿ ನಾವೂ ನೋಡುತ್ತೇವೆ. ಇದು ಬ್ರಿಟಿಷ್ ಆಡಳಿತವಲ್ಲ ಎಂದು ರವಿ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷ ಈ ರೀತಿ ಬೆದರಿಸುವುದು ಹಳೆಯ ತಂತ್ರ. ಅದಕ್ಕೆ ನಾವು ಬೆದರುವುದಿಲ್ಲ, ಕಳೆದ ಮೂವತ್ತು ವರ್ಷಗಳಿಂದಲೂ ನಾವು ಯಾವುದಕ್ಕೂ ಬೆದರಿದವರಲ್ಲ, ಪೊಲೀಸ್ ಇಲಾಖೆಯನ್ನು ದುರ್ಬಳಕೆ ಮಾಡಿಕೊಂಡು ಬೆದರಿಸಲು ಬಿಜೆಪಿ ಕಾರ್ಯಕರ್ತರು ಬೆನ್ನೆಲುಬಿಲ್ಲದವರಲ್ಲ, ಅವರ ಬೆನ್ನಿಗೆ ನಾವು ನಿಲ್ಲುತ್ತೇವೆ ಎಂದಿದ್ದಾರೆ.

ಚಿಕ್ಕಮಗಳೂರು: ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂತೋಷ್ ಕೋಟ್ಯಾನ್, ಭಜರಂಗದಳದ ಮುಖಂಡ ಶ್ಯಾಮ್ ವಿ ಗೌಡ ಹಾಗೂ ಮುಸ್ಲಿಂ ಸಮುದಾಯದ 10 ಮಂದಿ ಸೇರಿ ಜಿಲ್ಲೆಯ ಒಟ್ಟು 15 ಮಂದಿಯ ಗಡಿಪಾರಿಗೆ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಚಿಕ್ಕಮಗಳೂರು ಉಪ ವಿಭಾಗಾಧಿಕಾರಿಗೆ ಶಿಫಾರಸು ಪತ್ರ ರವಾನೆಯಾಗಿದೆ. 15 ಮಂದಿಯ ಪೈಕಿ ಚಿಕ್ಕಮಗಳೂರು ನಗರದ 12 ಮಂದಿ ಇದ್ದಾರೆ, ಉಳಿದ ಮೂರು ಮಂದಿ ಚಿಕ್ಕಮಗಳೂರು ಗ್ರಾಮಾಂತರ ಭಾಗದವರಾಗಿದ್ದಾರೆ ಎಂದು ತಿಳಿದು ಬಂದಿದೆ. 10 ಮಂದಿ ಮುಸ್ಲಿಂ ಸಮುದಾಯದವರು, 5 ಮಂದಿ ಹಿಂದೂಗಳಾಗಿದ್ದಾರೆ. ಎಲ್ಲರಿಗೂ ನೋಟಿಸ್ ಜಾರಿ ಮಾಡಲಾಗಿದೆ.

ಶಾಂತಿ ಭಂಗ, ದರೋಡೆ, ಆಸ್ತಿಪಾಸ್ತಿ ಹಾನಿ ನಡೆದಿಲ್ಲ

• **ಚಿಕ್ಕಮಗಳೂರು:** ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸಂತೋಷ್ ಕೋಟ್ಯಾನ್ ಮತ್ತು ಭಜರಂಗದಳದ ಮುಖಂಡ ಶ್ಯಾಮ್ ವಿ.ಗೌಡ ಅವರುಗಳನ್ನು ಜಿಲ್ಲೆಯಿಂದ ಗಡಿಪಾರು ಮಾಡಲು ಚಿಕ್ಕಮಗಳೂರು ಉಪ ವಿಭಾಗಾಧಿಕಾರಿ ವಿಚಾರಣಾ ನೋಟೀಸ್ ಜಾರಿಗೊಳಿಸಿರುವುದನ್ನು ಬಿಜೆಪಿ ನಗರ ಮಂಡಲ ಅಧ್ಯಕ್ಷ ಕೆ.ಎಸ್. ಪುಷ್ಪರಾಜು ಖಂಡಿಸಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಹೋರಾಟದ ಹಕ್ಕನ್ನು ಸಂವಿಧಾನ ನೀಡಿದೆ. ಅದರ ವ್ಯಾಪ್ತಿಯೊಳಗೆ ಈ ಮುಖಂಡರುಗಳು ಜನಪರವಾಗಿ ನಡೆಸಿರುವ ವಿವಿಧ ಹೋರಾಟಗಳನ್ನು ನೆಪವಾಗಿಸಿಕೊಂಡು ಜಿಲ್ಲೆಯಿಂದ ಗಡಿಪಾರು ಮಾಡುವುದರೊಂದಿಗೆ ಹೋರಾಟವನ್ನು ಹತ್ತಿಕ್ಕಲು ಜಿಲ್ಲಾಡಳಿತ ನಡೆಸಿರುವ ಹುನ್ನಾರವನ್ನು ಖಂಡಿಸುವುದಾಗಿ ಅವರು ತಿಳಿಸಿದ್ದಾರೆ.

ಅಕ್ರಮವಾಗಿ ನಡೆಸುತ್ತಿರುವ ಗೋಹತ್ಯೆ ವಿರುದ್ಧ, ಸರ್ಕಾರದ ಜನ ವಿರೋಧಿ ನೀತಿಗಳನ್ನು ವಿರೋಧಿಸಿ, ಹಿಂದುತ್ವದ ಪರವಾಗಿ ಮತ್ತು ಜನಪರವಾಗಿ ನಡೆಸಿರುವ ವಿವಿಧ ಹೋರಾಟಗಳಲ್ಲಿ ಈ ಇಬ್ಬರು ನಾಯಕರು ಭಾಗವಹಿಸಿದ್ದಾರೆ. ಅವರುಗಳಿಂದ ಯಾವುದೇ ಶಾಂತಿ ಭಂಗ, ದರೋಡೆ, ಆಸ್ತಿಪಾಸ್ತಿ ಹಾನಿಗೊಳಿಸುವ ಯಾವುದೇ ಪ್ರಕರಣಗಳು ನಡೆದಿರುವುದಿಲ್ಲ, ಅಂತಹ ಪ್ರಕರಣಗಳನ್ನು ಪಕ್ಷ ಎಂದೂ ಬೆಂಬಲಿಸುವುದಿಲ್ಲ, ಆದರೆ, ಪೊಲೀಸರು ಶಾಂತಿ ಭಂಗ, ಆಸ್ತಿಪಾಸ್ತಿ ಹಾನಿ, ದರೋಡೆ, ನೈತಿಕ ಪೊಲೀಸ್ ಗಿರಿ, ಹಲ್ಲೆ, ಕೋಮು ಗಲಭೆ ಸೇರಿದಂತೆ ವಿವಿಧ ಕಾರಣಗಳನ್ನು ನೀಡಿ ನೋಟೀಸ್ ಜಾರಿಗೊಳಿಸಿರುವುದು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಕಗ್ಗೊಲೆಯಾಗಿದೆ ಎಂದು ಹೇಳಿದ್ದಾರೆ.

ದಾಖಲಾಗಿರುವ ಪ್ರಕರಣಗಳಲ್ಲಿ 3 ಪ್ರಕರಣಗಳು ಖುಲಾಸೆ, 2 ಪ್ರಕರಣಗಳು ಉಚ್ಚ ನ್ಯಾಯಾಲಯದಲ್ಲಿ ವಜಾಗೊಂಡಿರುತ್ತವೆ. 7 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ. ಮತ್ತು 2 ಪ್ರಕರಣಗಳು ತನಿಖೆಯಲ್ಲಿರುತ್ತವೆ ಎಂದು ಮಾಹಿತಿ ನೀಡಿರುವ ಅವರು, ಜನಪರವಾಗಿ ಹೋರಾಟ ಮಾಡುವವರ ವಿರುದ್ಧ ಪ್ರಕರಣಗಳು ದಾಖಲಾಗುವುದು ಸಹಜ. ಆದರೆ ಪೊಲೀಸರು ದುರುದ್ದೇಶದಿಂದ ಇಲ್ಲದ ಕಾರಣಗಳನ್ನು ನೀಡಿ ನೋಟೀಸ್ ಜಾರಿಗೊಳಿಸಿರುವುದು ಕಾನೂನು ಬಾಹಿರವಾಗಿದೆ ಎಂದು ತಿಳಿಸಿದ್ದಾರೆ.

ಪೊಲೀಸರು ನೀಡಿರುವ ಕಾರಣಗಳನ್ನು ಅವಲೋಕಿಸಿದಾಗ ಜನ ಪರವಾಗಿ, ದೇಶದ ಪರವಾಗಿ, ನ್ಯಾಯದ ಪರವಾಗಿ ಹೋರಾಟ ನಡೆಸುವುದೇ ತಪ್ಪು ಎಂಬಂತಾಗಿದೆ. ಈ ಪ್ರಕರಣವನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ. ನ್ಯಾಯಾಂಗ ವ್ಯವಸ್ಥೆ ಮೇಲೆ ನಮಗೆ ನಂಬಿಕೆ ಇರುವುದರಿಂದ ನ್ಯಾಯಾಲಯದ ಮೊರೆ ಹೋಗುವುದು ಅನಿವಾರ್ಯವಾಗಿದೆ.

ಯಾವುದೇ ಸಂದರ್ಭದಲ್ಲೂ ಈ ಮುಖಂಡರ ಬೆಂಬಲಕ್ಕೆ ಪಕ್ಷ ನಿಲ್ಲುತ್ತದೆ. ಆದರೆ, ಪೊಲೀಸರ ಯಾವುದೇ ಬೆದರಿಕೆಗಳಿಗೆ ಪಕ್ಷ ಎಂದೂ ಹಿಂಜರಿಯುವುದಿಲ್ಲ ಎಂದು ಹೇಳಿದ್ದಾರೆ.

ನ್ಯಾಯಾಂಗ ವ್ಯವಸ್ಥೆ ಮತ್ತು ಸಂವಿಧಾನದ ಬಗ್ಗೆ ನಿಜವಾಗಿಯೂ ಪೊಲೀಸರಿಗೆ ಕಾಳಜಿ ಇದ್ದರೆ ಗಡಿಪಾರು ನೋಟೀಸ್ ಪುನರ್ ಪರಿಶೀಲಿಸಿ ರದ್ದುಗೊಳಿಸಬೇಕು ಎಂದು ಬಿಜೆಪಿ ನಗರ ಮಂಡಲ ಆಗ್ರಹಿಸುತ್ತದೆ ಎಂದು ಹೇಳಿದ್ದಾರೆ.



ದಾಖಲಾಗಿರುವ ಪ್ರಕರಣಗಳಲ್ಲಿ 3 ಪ್ರಕರಣಗಳು ಖುಲಾಸೆ, 2 ಪ್ರಕರಣಗಳು ಉಚ್ಚ ನ್ಯಾಯಾಲಯದಲ್ಲಿ ವಜಾಗೊಂಡಿರುತ್ತವೆ. 7 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ. ಮತ್ತು 2 ಪ್ರಕರಣಗಳು ತನಿಖೆಯಲ್ಲಿರುತ್ತವೆ. ಜನಪರವಾಗಿ ಹೋರಾಟ ಮಾಡುವವರ ವಿರುದ್ಧ ಪ್ರಕರಣಗಳು ದಾಖಲಾಗುವುದು ಸಹಜ. ಆದರೆ ಪೊಲೀಸರು ದುರುದ್ದೇಶದಿಂದ ಇಲ್ಲದ ಕಾರಣಗಳನ್ನು ನೀಡಿ ನೋಟೀಸ್ ಜಾರಿಗೊಳಿಸಿರುವುದು ಕಾನೂನು ಬಾಹಿರವಾಗಿದೆ.

ಗಡಿಪಾರು ನೋಟೀಸು ವಾಪಸ್ಸು ಹಿಂಪಡೆಯಬೇಕು: ಮನವಿ

• **ಕೊಪ್ಪ :** ಭಾರತೀಯ ಜನತಾ ಪಾರ್ಟಿಯ ಜಿಲ್ಲಾ ಯುವಮೋರ್ಚಾ ಅಧ್ಯಕ್ಷ ಸಂತೋಷ್ ಕೋಟ್ಯಾನ್ ಮತ್ತು ಬಜರಂಗದಳ ಮುಖಂಡ ಶ್ಯಾಮ್ ವಿ. ಗೌಡ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಿ ಗಡಿಪಾರು ಮಾಡುವ ಉದ್ದೇಶದಿಂದ ಜಿಲ್ಲಾಡಳಿತ ನೋಟೀಸ್ ನೀಡಿರುವುದನ್ನು ಕೂಡಲೇ ವಾಪಸ್ಸು ಪಡೆಯುವಂತೆ ಆಗ್ರಹಿಸಿ ಶುಕ್ರವಾರ ಕೊಪ್ಪ ಮಂಡಲ ಬಿಜೆಪಿ ಯುವಮೋರ್ಚಾ ವತಿಯಿಂದ ತಹಶೀಲ್ದಾರ್ ಮೂಲಕ ಜಿಲ್ಲಾಡಳಿತಕ್ಕೆ ಮನವಿ ಮಾಡಲಾಯಿತು.

ಬಿಜಪಿ ಯುವ ಮೋರ್ಚಾ ಮಂಡಲ ಅಧ್ಯಕ್ಷ ಶರತ್ ಬಿಳುಕೊಪ್ಪ ನೇತ್ರತ್ವದಲ್ಲಿ ಬಿಜೆಪಿ ಕಾರ್ಯಕರ್ತರು ತಹಶೀಲ್ದಾರ್ ಕಚೇರಿಗೆ ಆಗಮಿಸಿ ಮನವಿಯನ್ನು ಸಲ್ಲಿಸಿದರು. ಮನವಿಯಲ್ಲಿ ಸಂವಿಧಾನ ಕೊಟ್ಟಿರುವ ಹೋರಾಟದ ಹಕ್ಕನ್ನು ಹತ್ತಿಕ್ಕುವ ಉದ್ದೇಶದಿಂದ ನೋಟೀಸು ನೀಡಲಾಗಿದೆ. ಈ ನೋಟೀಸಿನಲ್ಲಿ ತಿಳಿಸಿರುವ ವಿಷಯಗಳು ಸುಳ್ಳು ಮತ್ತು ಆಧಾರ ರಹಿತವಾಗಿವೆ. ಯಾವುದೇ ಸ್ಪಷ್ಟ ಸಾಕ್ಷಗಳಿಲ್ಲದೇ ಸುಲಿಗೆ, ದರೋಡೆ, ಬೆದರಿಕೆ ಮತ್ತು ಅಕ್ರಮ ಚಟುವಟಿಕೆ ಎಂಬ ಪದಗಳನ್ನು ಸೇರಿಸಿರುವುದು ಸತ್ಯಕ್ಕೆ ದೂರವಾಗಿದೆ. ಆದ್ದರಿಂದಸುಳ್ಳುಆರೋಪಗಳಿಂದ ಕೂಡಿರುವ ಈ ನೋಟೀಸನ್ನು ಕೂಡಲೇ ಹಿಂಪಡೆಯಬೇಕು. ಇಲ್ಲದಿದ್ದಲ್ಲಿ ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಂತೋಷ್ ಕೋಟ್ಯಾನ್ ಮತ್ತು ಶ್ಯಾಮ್ ವಿ. ಗೌಡರ ಪರವಾಗಿ ಬಿಜೆಪಿ ಯುವಮೋರ್ಚಾ ಹೋರಾಟ ನಡೆಸುತ್ತದೆ ಎಂದು ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಕೆ. ದಿನೇಶ್ ಹೊಸೂರು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಣ್ಯಪಾಲ್, ಮುಖಂಡರಾದ ಅರುಣ್ ಶಿವಪುರ, ಬಿಷೇಜ್ ಭಟ್, ಶತಾನಿಕ್, ಎಚ್.ಎಂ. ರವಿಕಾಂತ್, ಎ. ದಿವಾಕರ್, ಉದಯ ಕುಮಾರ್, ಕೆ.ಎ. ಮಹೇಶ್ ಕುಮಾರ್, ಶೃತಿ ರೋಹಿತ್, ಪದ್ಮಾವತಿ ರಮೇಶ್, ಲಲಿತಾ ನಾಗೇಂದ್ರ, ಅನುಸೂಯ ಕೆ. ಮೂರ್ತಿ, ಸಚಿನ್ ನಂದಿಗೋಡು, ವಿಜಯಕುಮಾರ್, ಶೃಂಗೇಶ್ವರ್, ಆಕಾಶ್, ರಂಜಿತ್, ನಿತಿನ್, ಸವಿನ್, ಸೃಜನ್ ಮುಂತಾದವರು ಪಾಲ್ಗೊಂಡಿದ್ದರು.



ಮೇ 17ರಂದು ಬಿಎಸ್‌ವೈಗೆ ಅಭಿನಂದನೆ

• **ಶಿವಮೊಗ್ಗ:** ಪಂಚಪೀಠಾಧೀಶ್ವರರ ಅಡ್ಡ ಪಲ್ಲಕ್ಕಿ ಮಹೋತ್ಸವ, ಧರ್ಮಜಾಗೃತಿ ಸಭೆ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿನಂದನಾ ಸಮಾರಂಭವನ್ನು ಮೇ.17ರಂದು ಆಯೋಜಿಸಲು ನಿರ್ಧರಿಸಿದ ಸಂಬಂಧ ಕಾರ್ಯಕ್ರಮದ ರೂಪರೇಷುಗಳನ್ನು ಚರ್ಚಿಸಲು ಹಾಗೂ ವಿವಿಧ ಸಮಿತಿಗಳ ಜವಬ್ದಾರಿಗಳ ನಿರ್ವಹಣೆ ಬಗ್ಗೆ ಚರ್ಚಿಸಲು ಸಭೆಯನ್ನು ಮಾ.22ರ ಸಂಜೆ 6.30ಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಕರೆಯಲಾಗಿದೆ.

ಸಭೆಯಲ್ಲಿ ಯಡೆಯೂರು, ಬಿಳಕಿ, ಮಳಲಿಮಠ, ತೊಗರ್ಸಿ, ತಾವರೆಕೆರೆ ಪೂಜ್ಯರು ಸೇರಿದಂತೆ ಸುಮಾರು 20 ಪೂಜ್ಯರು, ಜನಪ್ರತಿನಿದಿಗಳು, ಸಂಘ ಸಂಸ್ಥೆಗಳ ಪ್ರಮುಖರು ಉಪಸ್ಥಿತರಿರುವರು. ಸಭೆಗೆ ಎಲ್ಲಾ ವೀರಶೈವ ಲಿಂಗಾಯತ ಸಮಾಜದ ಪ್ರಮುಖರು , ವಿವಿಧ ಸಂಘಟನೆಗಳ ಪ್ರಮುಖರು ಆಗಮಿಸಿ ಕಾರ್ಯಕ್ರಮದ ಯಶಸ್ವಿಗೆ ಸಲಹೆ ಸೂಚನೆ ನೀಡುವಂತೆ ಸಮಿತಿ ಅಧ್ಯಕ್ಷ ಬಿ.ವೈ. ರಾಘವೇಂದ್ರ, ಕಾರ್ಯಾಧ್ಯಕ್ಷ ಆಯನೂರು ಮಂಜುನಾಥ್, ಗೌರವಾಧ್ಯಕ್ಷ ಎಸ್. ರುದ್ರೇಗೌಡರು, ಪ್ರಧಾನ ಕಾರ್ಯದರ್ಶಿಗಳಾದ ಸಿ.ಎಸ್. ಷಡಾಕ್ಷರಿ, ಬಳ್ಳಕೆರೆ ಸಂತೋಷ್, ಕೋಶಾಧ್ಯಕ್ಷ ಎಸ್ .ಪಿ. ದಿನೇಶ್ ಹಾಗೂ ಸಮಿತಿ ಪ್ರಕಟಣೆಯಲ್ಲಿ ಕೋರಿದೆ.

• **ಕಛೇರಿ ಉದ್ಘಾಟನೆ:** ಸಮಿತಿಯ ನೂತನ ಕಛೇರಿ ಉದ್ಘಾಟನೆಯನ್ನು ಅಂದು ಸಂಜೆ 5.20ಕ್ಕೆ ವೀರಶೈವ ಕಲ್ಯಾಣ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ತಿಳಿಸಿದೆ.

ಪಂಚಾಂಗ ಶ್ರವಣದಿಂದ ಪುಣ್ಯ ಪ್ರಾಪ್ತಿ: ಜಿ.ಎಸ್.ನಟೇಶ್

• **ಶಿವಮೊಗ್ಗ :** ಪಂಚಾಂಗ ಶ್ರವಣದಿಂದ ಪುಣ್ಯ ಪ್ರಾಪ್ತಿ ಆಗುತ್ತದೆ ಎಂದು ನಿವೃತ್ತ ಉಪನ್ಯಾಸಕ ಜಿ.ಎಸ್.ನಟೇಶ್ ಅಭಿಮತ ವ್ಯಕ್ತಪಡಿಸಿದರು.

ಸ್ವಾಮಿ ವಿವೇಕಾನಂದ ಬಡಾವಣೆಯ ನಾಗಸುಬ್ರಹ್ಮಣ್ಯ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಯುಗಾದಿ ಅಂಗವಾಗಿ ಹಮ್ಮಿಕೊಳ್ಳಲಾದ ವರ್ಷದ ಫಲ ಪಂಚಾಂಗ ಶ್ರವಣ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಮಾತನಾಡಿದರು.

ನಮ್ಮ ಎಲ್ಲಾ ಕಾರ್ಯಗಳು ಶ್ರವಣದಿಂದ ಆಗುವುದು. ಪಂಚಾಂಗ ಕೇಳುವುದರಿಂದ ನಮ್ಮ ಶತ್ರುಗಳನ್ನು ದೂರ ಮಾಡುತ್ತದೆ. ಗಂಗಾ ಸ್ನಾನ ಮಾಡಿದಷ್ಟು ಮತ್ತು ಗೋ ದಾನ ಮಾಡಿದಷ್ಟು ಪುಣ್ಯ ಲಭಿಸುತ್ತದೆ. ಪಂಚಾಂಗ ಶ್ರವಣ ಪುಣ್ಯ ಪ್ರದ, ಕೆಟ್ಟ ಸ್ವಪ್ನಗಳನ್ನು ದೂರ ಮಾಡುತ್ತದೆ. ಆಯುಷ್ಯ ಹೆಚ್ಚಾಗುತ್ತದೆ. ಈ ರೀತಿ ಹಲವಾರು ಸತ್ ಕಾರ್ಯಗಳು ನಡೆಯುವುದರ ಜೊತೆಗೆ ನಮಗೆ ಎಲ್ಲಾ ಫಲ ಲಭಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಾಗಸುಬ್ರಹ್ಮಣ್ಯ ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷ ರಾಮಲಿಂಗಪ್ಪ ಮಾತನಾಡಿ, ನಮ್ಮ ದೇವಸ್ಥಾನದಲ್ಲಿಪ್ರತಿಯೊಂದು ಹಬ್ಬ, ಹರಿದಿನಗಳು ವಿಶೇಷ ದಿನಗಳಲ್ಲಿ ಎಲ್ಲಾ ಧಾರ್ಮಿಕ ಕಾರ್ಯಗಳು, ವಿಧಿ ವಿಧಾನಗಳು ಕ್ರಮಬದ್ಧವಾಗಿ ನಡೆಯುತ್ತವೆ ಎಂದರು.

ದೇವಸ್ಥಾನದ ಪ್ರಧಾನ ಅರ್ಚಕ ಸಂದೇಶ ಉಪಾಧ್ಯ ಯುಗಾದಿ ಹಬ್ಬದ ಮಹತ್ವ ತಿಳಿಸಿದರು. ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಉಪಾಧ್ಯಕ್ಷ ಜಿ.ವಿಜಯ್ ಕುಮಾರ್, ನಿರ್ದೇಶಕ ಮಂಜುನಾಥ, ಆಡಳಿತ ಮಂಡಳಿ ಪದಾಧಿಕಾರಿಗಳು ಇದ್ದರು.

ಪಲ್ಟಿಯಾದ ಕಾರಿನಿಂದ ಹೊರಬಿದ್ದ ಮಹಿಳೆ | ಅಪಾಯದಿಂದ ಪಾರು

ಕಾರು-ಆಂಬುಲೆನ್ಸ್ ನಡುವೆ ಭೀಕರ ಅಪಘಾತ

• **ಶಿವಮೊಗ್ಗ:** ನಗರದ ಉಷಾ ನರ್ಸಿಂಗ್ ಹೋಂ ಸರ್ಕಲ್‌ನಲ್ಲಿ ಆಂಬ್ಯುಲೆನ್ಸ್ ಮತ್ತು ಕಾರಿನ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಗಾಯಗೊಂಡಿದ್ದಾರೆ. ಆಂಬ್ಯುಲೆನ್ಸ್ ಚಾಲಕನ ನಿರ್ಲಕ್ಷ್ಯ ಮತ್ತು ಸರ್ಕಲ್ ನಲ್ಲಿ ಅತಿ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ.

ಸಿಸಿಟಿವಿ ದೃಶ್ಯ ವೈರಲ್: ಮಾರ್ಚ್ 19ರ ಮಧ್ಯಾಹ್ನ 12:47ಕ್ಕೆ ಅಪಘಾತ ಸಂಭವಿಸಿದೆ. ರವೀಂದ್ರ ನಗರ ಗಣಪತಿ ದೇವಸ್ಥಾನದ ಕಡೆಯ ರಸ್ತೆಯ ಸಿಗ್ನಲ್ ಆಗಷ್ಟೆ ಬಿಟ್ಟಿತ್ತು. ಹಾಗಾಗಿ ಕಾರು ಸರ್ಕಲ್ ದಾಟಿ ರೈಲ್ವೆ ನಿಲ್ದಾಣದ ಕಡೆಗೆ ಸಾಗುತ್ತಿತ್ತು. ಇದೇ ವೇಳೆ ಸವಳಂಗ ರಸ್ತೆಯ ಫ್ಲೈ ಓವರ್ ಇಳಿದು ಬಂದ ಆಂಬ್ಯುಲೆನ್ಸ್ ಅತಿ ವೇಗವಾಗಿ ಉಷಾ ನರ್ಸಿಂಗ್ ಹೋಂ ಸರ್ಕಲ್‌ಗೆ ನುಗ್ಗಿದೆ.

ಆಂಬ್ಯುಲೆನ್ಸ್ ಸರ್ಕಲ್ ಮಧ್ಯದಲ್ಲಿ ಅಳವಡಿಸಿರುವ ಸಿಗ್ನಲ್ ಸುತ್ತಿಕೊಂಡು ಬಂದಿದ್ದರೆ ಅಪಘಾತ ತಪ್ಪುವ ಸಾಧ್ಯತೆ ಇತ್ತು. ಆದರೆ ಚಾಲಕ ಏಕಾಏಕಿ ಬಲಕ್ಕೆ ತಿರುಗಿಸಿದ್ದಾನೆ. ಹಾಗಾಗಿ ಆಂಬ್ಯುಲೆನ್ಸ್ ನೇರವಾಗಿ ಕಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಕಾರು ಬಲಭಾಗಕ್ಕೆ ತಿರುಗಿ ಪಲ್ಟಿಯಾಗಿದೆ. ಅಲ್ಲದೆ ಉಲ್ಟಾ ಬಿದ್ದು ಒಂದು ಸುತ್ತು ಸುತ್ತಿದೆ. ಹಿಂಬದಿಯ ಗಾಜು ಒಡೆದಿದ್ದು ಅಲ್ಲಿಂದಲೇ ಮಹಿಳೆ ಒಬ್ಬರು ಹೊರ ಬಿದ್ದಿದ್ದಾರೆ. ಅದೃಷ್ಟವಶಾತ್ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರಿಗೆ ಡಿಕ್ಕಿ ಹೊಡೆದ ಬಳಿಕ ಅಂಬ್ಯುಲೆನ್ಸ್ ಒಂದು ಬಾರಿ ಮೇಲಕ್ಕೆ ಹಾರಿ ನಿಂತಿದೆ. ನಂತರ ಸರ್ಕಲ್ ಮಧ್ಯದ ಸಿಗ್ನಲ್ ಲೈಟ್‌ಗೆ ಡಿಕ್ಕಿ ಹೊಡೆದಿದೆ.

ನೆರವಿಗೆ ಧಾವಿಸಿದ ಜನ:
ಘಟನೆ ತಕ್ಷಣ ಸುತ್ತಮುತ್ತಲು ಇದ್ದ ಜನರು ನೆರವಿಗೆ ಧಾವಿಸಿದ್ದಾರೆ. ಪಲ್ಟಿಯಾದ ಕಾರಿನಲ್ಲಿದ್ದವರನ್ನು ಹೊರಗೆ ತೆಗೆದು ಆರೈಕೆ ಮಾಡಿದ್ದಾರೆ. ಪಲ್ಟಿಯಾಗಿದ್ದ ಕಾರನ್ನು ಕೂಡಲೆ ಮೇಲೆತ್ತಿ ನಿಲ್ಲಿಸಿದ್ದಾರೆ. ಅಪಘಾತವಾದ ತಕ್ಷಣ ಆಂಬುಲೆನ್ಸ್‌ನ ಎಡಭಾಗದ ಬಾಗಿಲು ತೆಗೆದು ವ್ಯಕ್ತಿಯೊಬ್ಬ ಕೆಳಗಿಳಿಯುವುದು ದೃಶ್ಯದಲ್ಲಿ ಸೆರೆಯಾಗಿದೆ. ಆತ ಮೊಬೈಲ್ ಫೋನ್ ಕಿವಿಗೆ ಹಿಡಿದುಕೊಂಡು ಅಪಘಾತದ ಸ್ಥಳದಿಂದ ಕಾಲ್ಕೀಳುತ್ತಾನೆ. ಇನ್ನೊಂದೆಡೆ ಆಂಬುಲೆನ್ಸ್ ಚಾಲಕ ಬಾಗಿಲು ತೆಗೆದು ಕೆಳಗಿಳಿಯಲು ಯತ್ನಿಸಿ ಕುಸಿದು ಬೀಳುತ್ತಾನೆ. ಇದನ್ನು ಗಮನಿಸಿದ ಜನರು ಕೂಡಲೆ ಆತನ ನೆರವಿಗೆ ಧಾವಿಸಿದರು. ಗಾಯಾಳುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪಶ್ಚಿಮ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಘಟನೆ ಸಂಭವಿಸಿದೆ.

ವಿಷ ಸೇವಿಸಿದ್ದ ವ್ಯಕ್ತಿ ಸಾವು

• **ಶಿವಮೊಗ್ಗ:** ತಾಲೂಕಿನ ತುಪ್ಪೂರು ಗ್ರಾಮದಲ್ಲಿ ವಿಷ ಸೇವಿಸಿ ವ್ಯಕ್ತಿಯೋರ್ವ ಮೃತಪಟ್ಟಿದ್ದಾರೆ. ದಶವಂತ್ ಎಂಬಾತ (46) ವಿಷ ತೆಗೆದುಕೊಂಡು ತುಪ್ಪೂರಿನ ಮನೆಯಲ್ಲೇ ಮೃತಪಟ್ಟಿದ್ದಾರೆ.

2005 ರಲ್ಲಿ ದಶವಂತ್ ದೀಪಿಕ ಎಂಬುವರ ಜೊತೆ ಮದುವೆಯಾಗಿದ್ದರು. 11 ವರ್ಷದ ಹಿಂದೆ ಪತ್ನಿ ದೀಪಿಕರಿಂದ ವಿಚ್ಛೇದನವನ್ನೂ ಪಡೆದಿದ್ದರು. ಬಳಿಕ ತುಪ್ಪೂರಿನಲ್ಲಿ ದಶವಂತ ವೆಲ್ಡಿಂಗ್ ಕೆಲಸ ಮಾಡಿಕೊಂಡಿದ್ದರು. ಗುರುವಾರ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವಿಚ್ಛೇದನ ಪಡೆಯುವ ಮುಂಚೆ ದಶವಂತ್ ದೀಪಿಕಾರ ಜೊತೆ ಅನುಪಿನಕಟ್ಟೆಯಲ್ಲಿ ವಾಸವಿದ್ದರು. ವಿಚ್ಛೇಧನದ ನಂತರ ಬೇರೆ ಬೇರೆಯಾಗಿ ವಾಸ ಆರಂಭಿಸಿದ್ದರು. ಖಾಸಗಿ ಶಾಲೆಯಲ್ಲಿ ದೀಪಿಕಾ ಶಿಕ್ಷಕಿಯಾಗಿದ್ದರು. ಇವರಿಗೆ ಇಬ್ಬರು ಮಕ್ಕಳಿದ್ದು, ದೀಪಿಕಾ ಮಕ್ಕಳ ನಿರ್ವಹಣೆ ಮಾಡುತ್ತಿದ್ದಾರೆ.

ತುಪ್ಪೂರಿನಲ್ಲಿ 6 ಎಕರೆ ಬಾಳೆ ಮತ್ತು ಅಡಿಕೆ ತೋಟವನ್ನು ದಶವಂತ್ ಕುಟುಂಬ ಹೊಂದಿದೆ. ಇವರ ಮೊದಲನೇ ಮಗ ದರ್ಶಿತ್ ಭಾರತೀಯ ಸೇನೆಗೆ ಆಯ್ಕೆ ಆಗಿದ್ದ, ಅಪ್ಪನನ್ನ ಮಾತನಾಡಿಸಿಕೊಂಡು ಹೋಗಲು ಬರುತ್ತೇನೆ ಎಂದು ತಿಳಿಸಿದ್ದ ಎನ್ನಲಾಗಿದೆ. ಅಷ್ಟರಲ್ಲಿ ಘಟನೆ ನಡೆದಿದೆ. ಪ್ರಕರಣ ಕುಂಸಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಆಲಿಕಲ್ಲು ಮಳೆಗೆ ಕಲ್ಲಂಗಡಿ ಬೆಳೆ ನಾಶ



• **ಶಿವಮೊಗ್ಗ:** ಮೂರು ದಿನಗಳ ಹಿಂದೆ ಶಿವಮೊಗ್ಗ ನಗರದ ಸುತ್ತಮುತ್ತ ಸುರಿದ ಆಲಿಕಲ್ಲು ಮಳೆ ಅಕ್ಷರಶಃ ರೈತರ ಪಾಲಿಗೆ ನರಕವನ್ನೇ ತೋರಿಸಿದೆ. ಸಮೀಪದ ಅನುಪಿನಕಟ್ಟೆ ಗ್ರಾಮದಲ್ಲಿ ಇನ್ನೇನು ಕೈಗೆ ಬರಬೇಕಿದ್ದ ಮೂರು ಎಕರೆ ಕಲ್ಲಂಗಡಿ ಬೆಳೆ ಆಲಿಕಲ್ಲು ಮಳೆಗೆ ಸಂಪೂರ್ಣ ನಾಶವಾಗಿದೆ.

ಆಲಿಕಲ್ಲಿನ ಮಳೆ ರೈತರ ಯುಗಾದಿ ಸಂಭ್ರಮವನ್ನೇ ಕಸಿದುಕೊಂಡಿದೆ. ಶಿವಮೊಗ್ಗ ತಾಲೂಕಿನ ಅನುಪಿನಕಟ್ಟೆ ಗ್ರಾಮದಲ್ಲಿ ಮೂರು ಲಕ್ಷ ರೂ. ಖರ್ಚು ಮಾಡಿ ಬೆಳೆದಿದ್ದ ಕಲ್ಲಂಗಡಿ ಸಂಪೂರ್ಣ ಮಣ್ಣುಪಾಲಾಗಿದೆ. ಅನುಪಿನಕಟ್ಟೆ ಗ್ರಾಮದ ರಾಮಣ್ಣ ಎಂಬುವರು ಬೆಳೆದಿದ್ದ ಕಲ್ಲಂಗಡಿ ಸಂಪೂರ್ಣ ನಾಶವಾಗಿದೆ.

ಇನ್ನು 25 ದಿನದಲ್ಲಿ ಕಟಾವು ಮಾಡಬೇಕಿದ್ದ ಕಲ್ಲಂಗಡಿ ಸಂಪೂರ್ಣ ನಾಶವಾಗಿದೆ. ತಮ್ಮ ಬಾಳೆ ತೋಟದ ಮಧ್ಯೆ ಅಂತರ ಬೆಳೆಯಾಗಿ ಕಲ್ಲಂಗಡಿಯನ್ನು ರಾಮಣ್ಣ ಬೆಳೆದಿದ್ದರು. ಕಲ್ಲಂಗಡಿ ದೊಡ್ಡ ಗಾತ್ರದಲ್ಲಿ ಬಂದಿದ್ದವು. ಆದರೆ ಆಲಿಕಲ್ಲು ಮಳೆಯ ರಭಸಕ್ಕೆ ಕಲ್ಲಂಗಡಿ ಬಳ್ಳಿ ನೆಲಸಮವಾಗಿವೆ. ಕಲ್ಲಂಗಡಿ ಕಾಯಿಗಳು ಒಡೆದು ಹೋಗಿವೆ. ಇದರ ಜೊತೆಗಿದ್ದ ಬಾಳೆ ಬೆಳೆ ಸಹ ಹಾನಿಗೆ ಈಡಾಗಿದೆ. ಈ ದೃಶ್ಯ ಎಂತಹವರನ್ನೂ ಮನಕಲಕುವಂತೆ ಮಾಡುತ್ತಿದೆ.

ಇನ್ನು ಲಕ್ಷಾಂತರ ರೂ. ಬಂಡವಾಳ ತೊಡಗಿಸಿ ಬೆಳೆ ಪೂರ್ಣ ನಷ್ಟವಾಗಿದ್ದರೂ ತೋಟಗಾರಿಗೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ಸ್ಥಳಕ್ಕೆ ಭೇಟಿ ನೀಡುತ್ತಿಲ್ಲ, ಕರೆ ಮಾಡಿದರೂ ಅಧಿಕಾರಿಗಳು ಕರೆ ಸ್ವೀಕರಿಸುತ್ತಿಲ್ಲ ಎಂದು ರೈತರು ಆಕ್ರೋಶ ವ್ಯಕ್ತಡಿಸಿದ್ದಾರೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಮಾರ್ನಿಂಗ್ ಶೋ
ಶನಿವಾರ 21 ಮಾರ್ಚ್ 2026, ಶಿವಮೊಗ್ಗ

ಇದು ಯಾರನ್ನೂ ಯಾರೂ ಸಹ ನಂಬಲು ಕಷ್ಟವಾಗುವಂಥಾ ಕಾಲಮಾನ. ಇಂಥ ಸಮಯದಲ್ಲಿ ನಂಬಿಕೆಯೆಂಬ ಚುಂಬಕ ಶಕ್ತಿಯ ಸುತ್ತ ಹೊಸೆಯಲ್ಪಟ್ಟಿರುವ, ಪ್ರೇಮದ ಪರಾಗ ಮೆತ್ತಿಕೊಂಡಿರುವ ಅಪರೂಪದ ಕಥಾಹಂದರ ಲವ್ ಸೀಸನ್ಸ್ ಚಿತ್ರದಲ್ಲಿದೆ. ಬಹುತೇಕ ಬೆಂಗಳೂರು ಸುತ್ತಮುತ್ತಲ ಏರಿಯಾಗಳಲ್ಲಿ ಈ ಚಿತ್ರದ ಚಿತ್ರೀಕರಣವನ್ನು ನಡೆಸಲಾಗಿದೆ. ಸಧ್ಯ ಪೋಸ್ಟ್ ಪ್ರೊಡಕ್ಷನ್ಸ್ ಕೆಲಸಗಳಲ್ಲಿ ತೊಡಗಿಕೊಂಡಿರುವ ಚಿತ್ರತಂಡ ಕೆಲವೇ ದಿನಗಳಲ್ಲಿ ಈ ಚಿತ್ರದ ಟೀಸರನ್ನು ಬಿಡುಗಡೆಗೊಳಿಸಲು ತಯಾರಿ ನಡೆಸುತ್ತಿದೆ.

ನಂಬಿಕೆಯ ಸುತ್ತ ಹೆಣೆಯಲಾದ ಪ್ರೇಮಕಥಾನಕ ಲವ್ ಸೀಸನ್ಸ್



ಎಲ್ಲರ ಬದುಕಿಗೆ ಹತ್ತಿರಾದ ಕಥಾನಕವನ್ನು ನವಿರು ಪ್ರೇಮದ ಪರಿಧಿಯಲ್ಲಿ ನಿರ್ದೇಶಕ ಕೃತ್ವಿಕ್ ಅವರು 'ಲವ್ ಸೀಸನ್ಸ್' ಎಂಬ ಚಿತ್ರದ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಈಗಾಗಲೇ ಲವ್ ಸೀಸನ್ಸ್ ಚಿತ್ರವು ತನ್ನ ಚಿತ್ರೀಕರಣವನ್ನು ಯಶಸ್ವಿಯಾಗಿ ಮುಗಿಸಿಕೊಂಡಿದೆ. ರಂಗಭೂಮಿ ಹಿನ್ನೆಲೆಯಿರುವ ಕೃತ್ವಿಕ್ ಅವರ ನಿರ್ದೇಶನದಲ್ಲಿ ಮೂಡಿ ಬಂದಿರುವ 'ಲವ್ ಸೀಸನ್ಸ್' ಇದೀಗ ಪೋಸ್ಟ್ ಪ್ರೊಡಕ್ಷನ್ ಕೆಲಸ ಕಾರ್ಯಗಳತ್ತ ಹೊರಳಿಕೊಂಡಿದೆ. ಸಾಮಾನ್ಯವಾಗಿ ಕೆಲ ಸಿನಿಮಾಗಳನ್ನು ನೆಲಮೂಲದ ಕಥೆಯ ಮೂಲಕ ವಿಶೇಷವಾಗಿ ಗುರುತಿಸಲಾಗುತ್ತೆ. ಆದರೆ, 'ಲವ್ ಸೀಸನ್ಸ್' ನಮ್ಮ ಕಣ್ಣಿಗೆ ಕಂಡೂ ಕಾಣದಂತಿರುವ ಗಲ್ಲಿಗಲ್ಲಿಯಲ್ಲಿ ನಡೆಯುವ ಕಥೆ ಎಂದು ನಿರ್ದೇಶಕ ಕೃತ್ವಿಕ್ ಅವರು ಚಿತ್ರದ ಬಗ್ಗೆ ವಿವರಣೆ ನೀಡುತ್ತಾರೆ.

ರಂಗಭೂಮಿ ಮತ್ತು ಸಿನಿಮಾ ಜಗತ್ತಿನಲ್ಲಿ ಕಳೆದ ಹತ್ತು ವರ್ಷದಿಂದಲೂ ಕಾರ್ಯ ನಿರ್ವಹಿಸುತ್ತಿರುವವ ಕೃತ್ವಿಕ್ ಅವರು 'ಲವ್ ಸೀಸನ್ಸ್' ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಹೊಸ ಹೆಜ್ಜೆ ಇಟ್ಟಿದ್ದಾರೆ. ವಿಶೇಷವೆಂದರೆ, ರಂಗಭೂಮಿ ಹಿನ್ನೆಲೆಯ ಹೊಸಬರಿಂದಲೇ ಈ ಚಿತ್ರ ಕಳೆಗಟ್ಟಿಕೊಂಡಿದೆ. ಮಂಡ್ಯ ರಮೇಶ್ ಅವರ ಸಾರಥ್ಯದ ನಟನಾ ಸಂಸ್ಥೆಯಲ್ಲಿ ಪಳಗಿದ ಮುಕುಂದ ರಾಮಸ್ವಾಮಿ ಅವರು ಈ ಚಿತ್ರದ ನಾಯಕನಾಗಿ ನಟಿಸಿದ್ದಾರೆ. ದಿಯಾ ಕೀರ್ತಿ, ಚಂದನಗೌಡ ಮತ್ತು ಶ್ವೇತಾ ಕೊಗ್ಗೂರ್ ನಾಯಕಿಯರಾಗಿ ಜೊತೆಯಾಗಿದ್ದಾರೆ. ಗಟ್ಟಿ ಕಥೆ ಮತ್ತು ಈಗಿನ ಕಾಲಕ್ಕೆ ಅಗತ್ಯವಾಗಿರುವ ಸಂದೇಶ ಹೊಂದಿರುವ ಕಥೆಯೊಂದಿಗೆ ನಿರ್ದೇಶಕರು ಈ ಚಿತ್ರವನ್ನು ರೂಪಿಸಿದ್ದಾರಂತೆ.

ಎನ್.ಆರ್. ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಎನ್.ಆರ್. ಮಂಜುನಾಥ(ನೀಲೇರಿ) ಅವರು ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಇದು ಯಾರನ್ನೂ ಯಾರೂ ಸಹ ನಂಬಲು ಕಷ್ಟವಾಗುವಂಥಾ ಕಾಲಮಾನ. ಇಂಥ ಸಮಯದಲ್ಲಿ, ನಂಬಿಕೆಯೆಂಬ ಚುಂಬಕ ಶಕ್ತಿಯ ಸುತ್ತ ಹೊಸೆಯಲ್ಪಟ್ಟಿರುವ, ಪ್ರೇಮದ ಪರಾಗ ಮೆತ್ತಿಕೊಂಡಿರುವ ಅಪರೂಪದ ಕಥಾಹಂದರ ಲವ್ ಸೀಸನ್ಸ್ ಚಿತ್ರದಲ್ಲಿದೆ. ಬಹುತೇಕ ಬೆಂಗಳೂರು ಸುತ್ತಮುತ್ತಲ ಏರಿಯಾಗಳಲ್ಲಿ ಈ ಚಿತ್ರದ ಚಿತ್ರೀಕರಣವನ್ನು ನಡೆಸಲಾಗಿದೆ. ಸಧ್ಯ ಪೋಸ್ಟ್ ಪ್ರೊಡಕ್ಷನ್ಸ್ ಕೆಲಸಗಳಲ್ಲಿ ತೊಡಗಿಕೊಂಡಿರುವ ಚಿತ್ರತಂಡ ಕೆಲವೇ ದಿನಗಳಲ್ಲಿ ಈ ಚಿತ್ರದ ಟೀಸರನ್ನು ಬಿಡುಗಡೆಗೊಳಿಸಲು ತಯಾರಿ ನಡೆಸುತ್ತಿದೆ.

ವೀರ್ ಸಮರ್ಥ್ ಅವರ ಸಂಗೀತ ಸಂಯೋಜನೆಯಲ್ಲಿ ಈ ಚಿತ್ರದ ಹಾಡುಗಳು ಮೂಡಿ ಬಂದಿವೆ. ಕೆ.ಕಲ್ಯಾಣ್, ಪ್ರಮೋದ್ ಮರವಂತೆ, ಧನಂಜಯ್ ರಂಜನ್ ಹಾಗೂ ಸಾಯಿ ಸರ್ವೇಶ್ ಅವರುಗಳು ಲವ್ ಸೀಸನ್ಸ್ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಅವಿನಾಶ್ ಶಾಸ್ತ್ರಿ ಅವರ ಛಾಯಾಗ್ರಹಣ, ಮಧು ತುಂಬಕೆರೆ ಅವರ ಸಂಕಲನ, ಭಜರಂಗಿ ಮೋಹನ್ ಅವರ ನೃತ್ಯಸಂಯೋಜನೆಯಿರುವ ಈ ಚಿತ್ರದಲ್ಲಿ, ಮಂಡ್ಯ ರಮೇಶ್, ರಾಜೇಶ್ ನಟರಂಗ, ಸಂಗೀತಾ ಅನಿಲ್, ಜಯತೀರ್ಥ, ಚೇತನ್ ದುರ್ಗ, ಹುಲಿ ಕಾರ್ತಿಕ್, ಬೇಬಿ ರಿತುಸಿಂಗ್ ಮುಂತಾದವರು ಪ್ರಮುಖ ತಾರಾಗಣದಲ್ಲಿ ಕಾಣಿಸಿಕೊಂಡಿದ್ದಾರೆ.



ಜನಮೆಚ್ಚಿದ ಮಗ್ಗಿಪುಸ್ತಕ ಅರ್ಧ ಶತಕದತ್ತ..







ಅವನಿ ಎಂಬ ಮಗುವಿನ ಸುತ್ತ ನಡೆಯುವ ಘಟನೆಗಳನ್ನು ಇಟ್ಟುಕೊಂಡು ಹರಿವರಾಸನಂ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಚಿತ್ರ ಮಗ್ಗಿಪುಸ್ತಕ ಬಿಡುಗಡೆಯಾಗಿ ರಾಜ್ಯಾದ್ಯಂತ ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಈಗಾಗಲೇ ಮೂವತ್ತು ದಿನಗಳನ್ನು ಸಹ ದಾಟಿ ಐವತ್ತನೇ ದಿನದತ್ತ ದಾಪುಗಾಲನ್ನಿಟ್ಟಿದೆ, 4 ಆಯಾಮಗಳಲ್ಲಿ ನಡೆಯುವ ಕಥೆ ಹೊಂದಿದ ಈ ಚಿತ್ರದಲ್ಲಿ ಮಕ್ಕಳ ಜತೆಗೆ ಪೋಷಕರಿಗೂ ಸಹ ಈ ಚಿತ್ರದಲ್ಲಿ ಒಂದು ಮೆಸೇಜಿದೆ, ಅದೇ ನಾಡಿನ ಸಿನಿ ಪ್ರೇಕ್ಷಕರನ್ನು ಆಕರ್ಷಿಸಿರುವುದು ಎಂದರೆ ತಪ್ಪಾಗಲಾರದು, ಕನ್ನಡದ ಪ್ರತಿಭಾವಂತ ನಿರ್ದೇಶಕ ಹರಿವರಾಸನಂ ಅವರು ತಮ್ಮ ಮೊದಲ ಚಿತ್ರದಲ್ಲೇ ಪ್ರೇಕ್ಷಕರ ಮನದಾಳವನ್ನರಿತು ಪ್ರೇಕ್ಷಕರನ್ನು ರಂಜಿಸಿದ್ದಾರೆ. ಅವರ ನಿರ್ದೇಶನದ ಪ್ರಥಮ ಚಿತ್ರ ಮಗ್ಗಿ ಪುಸ್ತಕ ಈಗಾಗಲೇ 30 ದಿನಗಳನ್ನು ದಾಟಿ 50ನೇ ದಿನದತ್ತ ದಾಪುಗಾಲು ಹಾಕಿದೆ. ವಿಶೇಷವಾಗಿ ಈ ಚಿತ್ರವನ್ನು ಮಕ್ಕಳ ಜತೆಗೆ ಮಹಿಳಾ ಪ್ರೇಕ್ಷಕರೂ ಸಹ ಹೆಚ್ಚಾಗಿ ಬಂದು ವೀಕ್ಷಿಸುತ್ತಿದ್ದಾರೆ. ಹಲವಾರು ಸೆಂಟರ್‌ಗಳಲ್ಲಿ 30 ದಿನಗಳನ್ನು ಪೂರೈಸಿರುವ ಮಗ್ಗಿ ಪುಸ್ತಕ ಚಿತ್ರವು ತನ್ನ ಕಲೆಕ್ಷನ್‌ನಲ್ಲಿ ಸ್ಥಿರತೆ ಕಾಯ್ದುಕೊಂಡಿದೆ. ಈಗಾಗಲೇ ರಾಜ್ಯಾದ್ಯಂತ ಸಹಸ್ರಾರು ಸಂಖ್ಯೆಯಲ್ಲಿ ಶಾಲಾ ವಿದ್ಯಾರ್ಥಿಗಳು ಮಗ್ಗಿ ಪುಸ್ತಕ ಚಿತ್ರವನ್ನು ವೀಕ್ಷಿಸಿ ಮೆಚ್ಚಿಕೊಂಡಿದ್ದಾರೆ. ಈ ಚಿತ್ರವೀಗ ಉತ್ತರ ಕರ್ನಾಟಕದಲ್ಲೂ ಸಹ ಪ್ರೇಕ್ಷಕರನ್ನು ಹೆಚ್ಚು ಹೆಚ್ಚು ಸೆಳೆಯುತ್ತ ಸಾಗಿದೆ,

ಚಿನ್ನಸ್ವಾಮಿ ಫಿಲಂಸ್ ಬ್ಯಾನರ್ ಅಡಿ ಎತಿರಾಜ್ ಸ್ನೇಹಿತರ ಜತೆಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಜತೆಗೆ ನಿರ್ದೇಶಕರೂ ಕೈಜೋಡಿಸಿದ್ದಾರೆ. ಮಗ್ಗಿ ಪುಸ್ತಕ ಬದುಕಿನ ಲೆಕ್ಕಾಚಾರ, ನಮ್ಮ ಜೀವನವೇ ಒಂದು ಮಗ್ಗಿಪುಸ್ತಕ ಇದ್ದಂತೆ, ಇದರಲ್ಲಿ ಒಳ್ಳೆಯದನ್ನು ಕೂಡಬೇಕು, ಕೆಟ್ಟದ್ದನ್ನು ಕಳೆಯಬೇಕು, ಜ್ಞಾನವನ್ನು ಗುಣಿಸಬೇಕು, ಅಜ್ಞಾನವನ್ನು ಭಾಗಿಸಬೇಕು. ಅವನಿ ಎಂಬ ಕಾದಂಬರಿಯನ್ನು ಆಧರಿಸಿ ಮಾಡಿದ ಈ ಚಿತ್ರವು ನಾಲ್ಕು ಆಯಾಮಗಳಲ್ಲಿ ನಡೆಯುವ ಹೈಪರ್ ಲಿಂಕ್ ಸ್ಟೋರಿಯಾಗಿದ್ದು, ಜೀವನದ ಲೆಕ್ಕಾಚಾರವನ್ನು ಈ ಚಿತ್ರದಲ್ಲಿ ಹೇಳಲಾಗಿದೆ,



ಬೆಂಗಳೂರು, ಮೈಸೂರು, ಮಂಗಳೂರು, ನಂಜನಗೂಡು, ಶ್ರೀರಂಗಪಟ್ಟಣ, ಹೆಚ್.ಡಿ. ಕೋಟೆ ಸುತ್ತಮುತ್ತಲ ಪ್ರದೇಶಗಳಲ್ಲಿ ಸುಮಾರು 80ಕ್ಕೂ ಹೆಚ್ಚು ದಿನಗಳ ಕಾಲ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ, ಮಗ್ಗಿಪುಸ್ತಕ ಚಿತ್ರದಲ್ಲಿ ಒಟ್ಟು 7 ಹಾಡುಗಳಿದ್ದು ಎಸ್.ಎಸ್. ನಾಚಪ್ಪ ಅವರ ಸಂಗೀತ ಸಂಯೋಜನೆಯಿದೆ. ಡಾ. ವಿಷ್ಣುವರ್ಧನ್ ಅಭಿನಯದ ಅಪ್ಪಾಜಿ, ಜಮೀನ್ದಾರ್ರು ಚಿತ್ರಗಳಿಗೆ ಸಂಗೀತ ನೀಡಿದ್ದ ಎಂ.ಎಂ. ಕೀರವಾಣಿ ಅವರು ಬಹಳ ದಿನಗಳ ನಂತರ ಈ ಚಿತ್ರದ ಹಾಡೊಂದಕ್ಕೆ ದನಿಯಾಗಿರುವುದು ವಿಶೇಷ. ಉಳಿದಂತೆ ಕನ್ನಡ ಗಾಯಕರಾದ ರಾಜೇಶ್ ಕೃಷ್ಣನ್, ವಿಜಯ ಪ್ರಕಾಶ್, ಕಂಭದ ರಂಗಯ್ಯ, ನವೀನ್ ಸಜ್ಜು, ಇಂದು ನಾಗರಾಜ್, ಗುರುರಾಜ್ ಹೊಸಕೋಟೆ, ಸೈಂಧವಿ, ವೈಕಂ ವಿಜಯಲಕ್ಷ್ಮಿ ಹಾಗೂ ರವೀಂದ್ರ ಸೊರಗಾವಿ ಸೇರಿದಂತೆ 17 ಜನ ಈ ಚಿತ್ರದಲ್ಲಿ ಹಾಡಿರುವುದು ಮತ್ತೊಂದು ವಿಶೇಷ.

ಈ ಚಿತ್ರವನ್ನು ಎಂ.ಪಿ. ಫಿಲಂಸ್ ಮೂಲಕ ಕೆ. ಮುನೀಂದ್ರ ಅವರು ರಿಲೀಸ್ ಮಾಡಿದ್ದರು. ಮುನೀಂದ್ರ ಅವರ ಸಂಸ್ಥೆಯಿಂದ ಬಿಡುಗಡೆಯಾದ ಎಲ್ಲಾ ಚಿತ್ರಗಳು 25, 50ನೇ ದಿನದ ಸಂಭ್ರಮ ಆಚರಿಸುತ್ತಿರುವುದು ಇವರ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ, ಈ ಹಿಂದೆ ಇವರದೇ ವಿತರಣೆಯ ಕಂಗ್ರಾಚುಲೇಶನ್ಸ್ ಬ್ರದರ್ ಕೂಡ 50 ದಿನ ಪ್ರದರ್ಶನಗೊಂಡಿತ್ತು, ಈ ಚಿತ್ರದಲ್ಲಿ ಸರ್ಕಾರಿ ಹಿರಿಯ ಪಾಠಶಾಲೆ ಖ್ಯಾತಿಯ ರಂಜನ್ ಕಾಸರಗೋಡು, ರಾಣ್ವಿ ಶೇಖರ್, ಶೋಭರಾಜ್, ಗಿರಿಜಾ ಲೋಕೇಶ್, ಮೇಘನಾ, ಮೈಸೂರು ರಮಾನಂದ್, ಮೇಘಶ್ರೀ, ಮಿಮಿಕ್ರಿ ಗೋಪಿ, ಚಂದ್ರಪ್ರಭ, ರಘು ರಮನಕೊಪ್ಪ ಹಾಗೂ ಇನ್ನಿತರರು ನಟಿಸಿದ್ದಾರೆ. ಈ ಚಿತ್ರಕ್ಕೆ ನಂದಕುಮಾರ್ ಅವರ ಛಾಯಾಗ್ರಹಣ, ಶಿವಕುಮಾರ್ ಅವರ ಸಂಕಲನವಿದೆ.


ಮಾರ್ಚ್ 23 ಶೀರ್ಷಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಿಡುಗಡೆ



ಕನ್ನಡ ಚಿತ್ರರಂಗದಲ್ಲಿ ಆಗಾಗ ಒಂದಷ್ಟು ನೈಜ ಘಟನೆಗಳನ್ನು ಆಧರಿಸಿದ ಚಲನಚಿತ್ರಗಳು ತೆರೆಮೇಲೆ ಬಂದಿರುವುದನ್ನು ನೀವು ನೋಡಿರುತ್ತೀರಿ. ಈಗ ಅಂಥದ್ದೇ ಮತ್ತೊಂದು ನೈಜ ಘಟನೆ ಸಿನಿಮಾ ರೂಪದಲ್ಲಿ ತೆರೆಮೇಲೆ ಬರಲು ತಯಾರಾಗುತ್ತಿದೆ. ಅಂದಹಾಗೆ, ಆ ಸಿನಿಮಾದ ಹೆಸರು ಮಾರ್ಚ್ 23.

2021ರ ಮಾರ್ಚ್ 23ರಂದು ಸಂಜೆ 6.30ರ ಬಳಿಕ ಬೆಂಗಳೂರಿನ ರೈಲು ನಿಲ್ದಾಣದಲ್ಲಿ ನಡೆದ ನೈಜ ಘಟನೆಯೊಂದನ್ನು ಆಧರಿಸಿ, ಈ ಚಿತ್ರವನ್ನು ನಿರ್ಮಿಸಲಾಗುತ್ತಿದೆ. ಹಾಗಾಗಿ, ಚಿತ್ರಕ್ಕೆ ಮಾರ್ಚ್ 23 ಎಂದು ಹೆಸರಿಡಲಾಗಿದೆ. ರೈಲು ನಿಲ್ದಾಣದ ಆವರಣದಲ್ಲಿಯೇ ಅಮಾಯಕ ರೈಲ್ವೇ ನೌಕರನೊಬ್ಬನ ಮೇಲೆ ನಡೆಯುವ ಅನ್ಯಾಯವನ್ನು ಪ್ರತಿಭಟಿಸುವ ವ್ಯಕ್ತಿ ಹೇಗೆಲ್ಲ ದೌರ್ಜನ್ಯಕ್ಕೆ ಒಳಗಾಗುತ್ತಾನೆ. ಅಂತಿಮವಾಗಿ ಜನಸಾಮಾನ್ಯನೊಬ್ಬ ಶೋಷಣೆಯ ವಿರುದ್ಧ ಹೇಗೆಲ್ಲ ಹೋರಾಡುತ್ತಾನೆ? ಎಂಬ ವಿಷಯದ ಸುತ್ತ ಮಾರ್ಚ್ 23 ಚಿತ್ರದ ಕಥಾಹಂದರ ಸಾಗುತ್ತದೆ.

ಕನ್ನಡ ಚಿತ್ರರಂಗದಲ್ಲಿ ಸುಮಾರು ಮೂರು ದಶಕಗಳಿಂದ ಸಕ್ರಿಯರಾಗಿರುವ, ಹತ್ತಾರು ವಿಭಿನ್ನ ಪಾತ್ರಗಳಲ್ಲಿ ಸಹನಟನಾಗಿ ಕಾಣಿಸಿಕೊಂಡಿರುವ ಮಧು ಮಂದಗೆರೆ ಅವರು ಮಾರ್ಚ್ 23 ಚಿತ್ರದಲ್ಲಿ ನಾಯಕ ನಟನಾಗಿ ಮುಖ್ಯಭೂಮಿಕೆಯಲ್ಲಿ ಅಭಿನಯಿಸುತ್ತಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಈಗಾಗಲೇ ನಿರ್ದೇಶಕನಾಗಿ ಮತ್ತು ಸಂಕಲನಕಾರನಾಗಿ ಗುರುತಿಸಿಕೊಂಡಿರುವ ವೇದ್ ಅವರು ಮಾರ್ಚ್ 23 ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಜಿ. ರಾಜು ಅವರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಈಗಾಗಲೇ ಮಾರ್ಚ್ 23 ಚಿತ್ರದ ಬಹುತೇಕ ಸ್ಕ್ರಿಪ್ಟ್ ಕೆಲಸಗಳನ್ನು ಪೂರ್ಣಗೊಳಿಸಿರುವ ಚಿತ್ರತಂಡ, ಇತ್ತೀಚೆಗೆ ಮಾರ್ಚ್ 23 ಚಿತ್ರದ ಶೀರ್ಷಿಕೆ ಮತ್ತು ಟೈಟಲ್ ಟೀಸರನ್ನು ಬಿಡುಗಡೆ ಮಾಡಿದೆ.



2021ರಲ್ಲಿ ನಡೆದ ನೈಜ ಘಟನೆಗೆ ಚಿತ್ರರೂಪ ತೆರೆಗೆ ಬರುತ್ತಿದೆ ಕ್ರೌರ್ಯದ ಹಿಂದಿನ ಹೋರಾಟದ ಕಥೆ

ಕರ್ನಾಟಕದ ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಮಾರ್ಚ್ 23 ಚಿತ್ರದ ಶೀರ್ಷಿಕೆ ಮತ್ತು ಟೈಟಲ್ ಟೀಸರನ್ನು ಬಿಡುಗಡೆಗೊಳಿಸಿ, ಚಿತ್ರತಂಡಕ್ಕೆ ಶುಭ ಹಾರೈಸಿದರು. ಮಾರ್ಚ್ 23 ಚಿತ್ರಕ್ಕೆ ನಂದಕುಮಾರ್ ಅವರ ಛಾಯಾಗ್ರಹಣವಿದ್ದು, ನಿರ್ದೇಶಕ ವೇದ್ ಅವರೇ ಕಥೆ ಚಿತ್ರಕಥೆ ಬರೆದಯುವುದರೊಂದಿಗೆ ಸಂಕಲನ ಕಾರ್ಯವನ್ನು ಸಹ ನಿರ್ವಹಿಸುತ್ತಿದ್ದಾರೆ. ಈ ಚಿತ್ರದ ಹಾಡುಗಳಿಗೆ ಅನಂತ ಆರ್ಯನ್ ಅವರು ಸಂಗೀತ ಸಂಯೋಜಿಸುತ್ತಿದ್ದು, ಕೆ. ಕಲ್ಯಾಣ್, ನಾಗೇಶ್ ಪ್ರಸನ್ನ ಅವರುಗಳು ಹಾಡುಗಳಿಗೆ ಸಾಹಿತ್ಯ ರಚಿಸುತ್ತಿದ್ದಾರೆ. ಉಳಿದಂತೆ ಮಾರ್ಚ್ 23 ಚಿತ್ರಕ್ಕೆ ಕಲಾವಿದರು ಮತ್ತು ತಂತ್ರಜ್ಞರ ಆಯ್ಕೆ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.

ಸದ್ಯ ಮಾರ್ಚ್ 23 ಚಿತ್ರದ ಶೀರ್ಷಿಕೆ ಮತ್ತು ಟೈಟಲ್ ಟೀಸರ್ ಬಿಡುಗಡೆ ಮಾಡಿರುವ ಚಿತ್ರತಂಡ, ಇದೇ ಏಪ್ರಿಲ್ ಅಂತ್ಯದೊಳಗೆ ಚಿತ್ರದ ಮುಹೂರ್ತವನ್ನು ನೆರವೇರಿಸಿಕೊಂಡು ಚಿತ್ರೀಕರಣಕ್ಕೆ ಹೊರಡುವ ಯೋಜನೆ ಹಾಕಿಕೊಂಡಿದೆ. ಬೆಂಗಳೂರು ಸುತ್ತಮುತ್ತ ಮಾರ್ಚ್ 23 ಚಿತ್ರದ ಬಹುತೇಕ ಚಿತ್ರೀಕರಣ ನಡೆಯಲಿದೆ.

ಅಭಿಮಾನಿಗಳಿಂದ ಪುನೀತ್ ಹುಟ್ಟುಹಬ್ಬ ತಮ್ಮನ ನೆನಪಲ್ಲಿ ಶಿವಣ್ಣ ಭಾವುಕ



ಕೋಟ್ಯಂತರ ಅಭಿಮಾನಿಗಳ ಆರಾಧ್ಯದೈವ ಡಾ.ಪುನೀತ್ ರಾಜಕುಮಾರ್ ಅವರ 51ನೇ ಜನ್ಮದಿನವನ್ನು ಅಭಿಮಾನಿಗಳು ಸಂಭ್ರಮದಿಂದ ಆಚರಿಸಿದರು, ಭೌತಿಕವಾಗಿ ಅವರು ನಮ್ಮೊಂದಿಗಿಲ್ಲದಿದ್ದರೂ ಅವರ ನೆನಪುಗಳು, ಅವರು ಹಾಕಿಕೊಟ್ಟ ಆದರ್ಶಗಳು ಕನ್ನಡಿಗರ ಹೃದಯದಲ್ಲಿ ಅಚ್ಚಳಿಯದೆ ಉಳಿದಿವೆ. ದಿ.17ರ ಮಂಗಳವಾರ ಬೆಳಿಗ್ಗೆಯಿಂದಲೇ ಕಂಠೀರವ ಸ್ಟುಡಿಯೋ ಆವರಣದಲ್ಲಿರುವ ಪುನೀತ್ ರಾಜ್‌ಕುಮಾರ್ ಅವರ ಸಮಾಧಿಯತ್ತ ರಾಜ್ಯಾದ್ಯಂತ ಇರುವ ಸಹಸ್ರಾರು ಅಭಿಮಾನಿಗಳು ಬಂದು ನಮನ ಸಲ್ಲಿಸುತ್ತಿದ್ದುದು ಕಂಡು ಬಂದಿತು, ಅಭಿಮಾನಿಗಳಿಂದ ತುಂಬಿ ತುಳುಕುತ್ತಿದ್ದ ಆ ಸ್ಥಳದಲ್ಲಿ ಹಬ್ಬದ ವಾತಾವರಣವೇ ಸೃಷ್ಟಿಯಾಗಿತ್ತು, ರಾಘವೇಂದ್ರ ರಾಜ್‌ಕುಮಾರ್, ಗುರು ರಾಜ್‌ಕುಮಾರ್, ವಿನಯ್ ರಾಜ್ ಕುಮಾರ್ ಸೇರಿದಂತೆ ರಾಜ್‌ಕುಮಾರ್ ಕುಟುಂಬದ ಎಲ್ಲರೂ ಅಲ್ಲಿಗೆ ಬಂದು ಪುನೀತ್ ಸಮಾಧಿಗೆ ಪುಷ್ಪನಮನ ಸಲ್ಲಿಸಿದರು,

ತಮ್ಮನನ್ನು ನೆನೆದು ಭಾವುಕರಾದ ಶಿವರಾಜ್‌ಕುಮಾರ್ : ಪ್ರೀತಿಯ ತಮ್ಮನ ಹುಟ್ಟುಹಬ್ಬದ ಪ್ರಯುಕ್ತ ಹ್ಯಾಟ್ರಿಕ್‌ಹೀರೋ ಶಿವರಾಜಕುಮಾರ್ ಅವರು ಸೋಷಿಯಲ್ ಮೀಡಿಯಾದಲ್ಲಿ ಸಿನಿಮಾದ ಹಾಡಿನ ಸಾಲುಗಳ ಮೂಲಕ ಭಾವುಕ ನುಡಿಗಳನ್ನಾಡಿದ್ದಾರೆ. ಆಕಾಶದಾಚೆ ಎಲ್ಲೋ ದೇವರಿಲ್ಲವೋ, ಇದು ಆಗ ಕೇಳಿದಾಗ ಎಷ್ಟು ನಿಜ ಅನ್ನಿಸ್ತು.. ಈಗಲೂ ಹಾಗೇ ಇದೆ. ನಿನ್ನನ್ನು ಆಕಾಶದಾಚೆ ಹುಡುಕುವ ಅವಶ್ಯಕತೆ ಇಲ್ಲವೇ ಇಲ್ಲ, ಇಡೀ ಕರ್ನಾಟಕದಲ್ಲಿ ಎಲ್ಲೇ ಹೋದರೂ ಜನ ನಿನ್ನನ್ನು ಪ್ರತಿದಿನ ಸಂಭ್ರಮಿಸುತ್ತಾರೆ. ನಿನ್ನ ಹುಟ್ಟುಹಬ್ಬ ನಮ್ಮೆಲ್ಲರಿಗೂ ಹಬ್ಬ. ನಿನ್ನ ಹೆಸರು ಹೇಳಿದೊಡನೆ ಮೂಡುವ ನಗು, ನೀನು ಎಲ್ಲರಿಗೂ ಕೊಟ್ಟಿರುವ ಉಡುಗೊರೆ ಎಂದು ಬರೆಯುವ ಮೂಲಕ ಶಿವಣ್ಣ ಪ್ರೀತಿಯ ಸಹೋದರನನ್ನು ಸ್ಮರಿಸಿದ್ದಾರೆ

ಪತಿಯ ನೆನಪಲ್ಲಿ ಅಶ್ವಿನಿ ಪುನೀತ್ ರಾಜ್‌ಕುಮಾರ್ : ಅಶ್ವಿನಿ ಪುನೀತ್ ರಾಜಕುಮಾರ್ ಅವರು ತಮ್ಮ ಪತಿಯನ್ನು ನೆನೆದು, ಅಪ್ಪು ಈಗ ಕೇವಲ ಒಬ್ಬ ವ್ಯಕ್ತಿ ಅಲ್ಲ.. ಅವರು ಒಂದು ಭಾವನೆ. ಕನ್ನಡಿಗರಷ್ಟೇ ಅಲ್ಲ, ವಿಶ್ವದಾದ್ಯಂತ ಅನೇಕ ಜನ ಅವರ ಮಾನವೀಯತೆ ಮತ್ತು ವಿನಮ್ರತೆಯ ಗುಣಗಳನ್ನು ಆಳವಾಗಿ ಅನುಭವಿಸುತ್ತಿದ್ದಾರೆ. ಅಪ್ಪುವನ್ನು ತಮ್ಮವರಂತೆ ಪ್ರೀತಿಸುವ ಲಕ್ಷಾಂತರ ಜನರೊಂದಿಗೆ ಈ ದಿನವನ್ನು ಆಚರಿಸುವುದು ನನಗೆ ವಿನಮ್ರತೆಯ ಸಂಗತಿ. ನಮ್ಮ ಕುಟುಂಬ, ಸ್ನೇಹಿತರು ಮತ್ತು ಅಭಿಮಾನಿಗಳಂತೆ ಎಲ್ಲರ ಮನದಲ್ಲೂ ಅಪ್ಪು ಜೀವಂತವಾಗಿದ್ದಾರೆ ಎಂದು ಹೇಳಿದ್ದಾರೆ.

ಪುನೀತ್ ರಾಜಕುಮಾರ್ ಅವರ ನಿಸ್ವಾರ್ಥ ಸೇವೆ ಹಾಗೂ ಸಮಾಜಮುಖಿ ಕಾರ್ಯಗಳನ್ನು ಗೌರವಿಸಿದ ಕರ್ನಾಟಕ ಸರ್ಕಾರವು ಅವರಿಗೆ ಮರಣೋತ್ತರವಾಗಿ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಕರ್ನಾಟಕ ರತ್ನ ನೀಡಿ ಗೌರವಿಸಿದೆ. ಪುನೀತ್ ಅವರ ಹುಟ್ಟುಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಲು ಅವರು ನಟಿಸಿದ ಎವರ್ ಗ್ರೀನ್ ಸಿನಿಮಾ ಆಕಾಶ್ ಮರುಬಿಡುಗಡೆಯಾಗಿದೆ. ಇದರ ಜೊತೆಗೆ ಅಭಿಮಾನಿಗಳು ರಕ್ತದಾನ ಶಿಬಿರಗಳು, ಅನ್ನದಾನ ಮತ್ತು ನೇತ್ರದಾನ ನೋಂದಣಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ತಮ್ಮ ನೆಚ್ಚಿನ ನಟನಿಗೆ ಅರ್ಥಪೂರ್ಣ ಗೌರವ ಸಲ್ಲಿಸಿದ್ದಾರೆ.

ಗಾಡ್ ಪ್ರಾಮಿಸ್‌ನಲ್ಲಿ ಸೂಚನ್ - ಜೂಹಿ ಜಯಕುಮಾರ್



ನವ ನಿರ್ದೇಶಕ ಸೂಚನ್ ಶೆಟ್ಟಿ ಅವರ ಪರಿಕಲ್ಪನೆಯಲ್ಲಿ ಮೂಡಿ ಬರ್ತಿರುವ ಚಿತ್ರ ಗಾಡ್ ಪ್ರಾಮಿಸ್. ತನ್ನ ವಿಭಿನ್ನ ಶೈಲಿಯ ಟೈಟಲ್‌ನಿಂದಲೇ ಕುತೂಹಲ ಹುಟ್ಟು ಹಾಕಿರುವ ಈ ಚಿತ್ರದಿಂದ ಹೊಸ ಅಪ್ ಡೇಟ್‌ವೊಂದು ಈಗ ಸಿಕ್ಕಿದೆ. ಸೂಚನ್ ಶೆಟ್ಟಿ ನಾಯಕನಾಗಿ ನಟಿಸಿರುವ ಗಾಡ್ ಪ್ರಾಮಿಸ್ ಸಿನಿಮಾಗೀಗ ನಾಯಕಿಯೊಬ್ಬರು ಸಿಕ್ಕಿದ್ದಾರೆ. ಹೌದು, ಕೇರಳ ಮೂಲದ ಮಲಯಾಳಂ ಚಿತ್ರಗಳಲ್ಲಿ ಮಿಂಚಿರುವ ಜೂಹಿ ಜಯಕುಮಾರ್ ಅವರು ಸೂಚನ್ ಶೆಟ್ಟಿ ಅವರ ಜತೆ ನಾಯಕಿಯಾಗಿ ಸಾಥ್ ಕೊಟ್ಟಿದ್ದಾರೆ.

ಪವಿ ಕೇರ್ ಟೇಕರ್, ತಲೈವಾ ತಲೈವಿ ಹಾಗೂ ಸುಮತಿ ಒಲವು ಮುಂತಾದ ಸಿನಿಮಾಗಳಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ ಜೂಹಿ ಜಯಕುಮಾರ್ ಅವರೀಗ ಗಾಡ್ ಪ್ರಾಮಿಸ್ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕಿಯಾಗಿ ಕನ್ನಡಿಗರಿಗೆ ಪರಿಚಯವಾಗುತ್ತಿದ್ದಾರೆ. ಜೂಹಿ ಜಯಕುಮಾರ್ ಅವರನ್ನು ಚಿತ್ರತಂಡ ಆಡಿಷನ್ ಮೂಲಕ ಆಯ್ಕೆ ಮಾಡಿದೆ.

ಕುಂದಾಪುರ ಹಾಗೂ ಬೆಂಗಳೂರು ಎರಡೂ ನಗರಗಳಲ್ಲಿ ನಾಯಕಿಯ ಪಾತ್ರಕ್ಕೆ ಆಡಿಷನ್ ನಡೆಸಲಾಯಿತು. ಆನ್‌ಲೈನ್ ಹಾಗೂ ಆಫ್‌ಲೈನ್ ಎರಡರಲ್ಲೂ ನಡೆದ ಆಡಿಷನ್‌ನಲ್ಲಿ ಇವರು ಸೆಲೆಕ್ಟ್ ಆಗಿದ್ದಾರೆ, 4 ಸಾವಿರಕ್ಕೂ ಹೆಚ್ಚು ಆಕಾಂಕ್ಷಿಗಳು ಆನ್‌ಲೈನ್‌ನಲ್ಲಿ ಹಾಗೂ ಆಫ್‌ಲೈನ್ ಆಡಿಷನ್‌ನಲ್ಲಿ 1 ಸಾವಿರಕ್ಕೂ ಹೆಚ್ಚು ಯುವತಿಯರು ಭಾಗಿಯಾಗಿದ್ದರು. ಇಷ್ಟು ಜನರ ಪೈಕಿ ನಾಯಕಿ ಪಾತ್ರಕ್ಕೆ ಜೂಹಿ ಜಯಕುಮಾರ್ ಅವರೇ ಸೂಕ್ತರಾಗಿದ್ದಾರೆಂದು ಚಿತ್ರತಂಡ ಅವರನ್ನು ಆಯ್ಕೆ ಮಾಡಿದೆ. ಆಯ್ಕೆಯ ಬಳಿಕ ಜೂಹಿ ಅವರಿಗಾಗಿ ವರ್ಕ್ ಶಾಪ್ ನಡೆಸಲಾಯಿತು. ಈ ವೇಳೆ ಅವರು ತಮ್ಮ ಕಲಾ ಕೌಶಲ್ಯವನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿದರು. ತಮ್ಮ ಪಾತ್ರದ ಬಗ್ಗೆ ಮಾತನಾಡಿರುವ ಜೂಹಿ ಜಯಕುಮಾರ್, ಗಾಡ್ ಪ್ರಾಮಿಸ್ ಸಿನಿಮಾದಲ್ಲಿ ತಮ್ಮ ಪಾತ್ರಕ್ಕೆ ಒಳ್ಳೆಯ ಸ್ಕೋಪ್ ಇದೆ. ಇದು ಬರೀ ಮರ ಸುತ್ತವಂಥ ಪಾತ್ರವಲ್ಲ, ಬದಲಿಗೆ ತೂಕ ಇರುವಂತಹ ಪಾತ್ರದಲ್ಲಿ ತಾವು ಅಭಿನಯಿಸಿದ್ದೇನೆ. ಒಂದೊಳ್ಳೆ ತಂಡದ ಜೊತೆ ಕೆಲಸ ಮಾಡುತ್ತಿರುವ ಖುಷಿ ನನಗಿದೆ. ನಿರ್ದೇಶಕ ಸೂಚನ್ ಶೆಟ್ಟಿ ಅವರು ಹೊಸತನಕ್ಕೆ ತುಡಿತ ಹೊಂದಿರುವ ನಿರ್ದೇಶಕರು. ಗಾಡ್ ಪ್ರಾಮಿಸ್ ಪ್ರೇಕ್ಷಕರಿಗೆ ಮನರಂಜನೆಯ ಮಹಾಪೂರವನ್ನೇ ಉಣಬಡಿಸಲಿದೆ ಎಂದರು.

ಪಾಂಚಜನ್ಯ ಫಿಲಂ ಪ್ರೊಡಕ್ಷನ್ ಅಡಿ ಮಹೇಂದ್ರ ಶೆಟ್ಟಿ ಅವರು ನಿರ್ಮಿಸುತ್ತಿರುವ ಗಾಡ್ ಪ್ರಾಮಿಸ್ ಸಿನಿಮಾಗೆ ಗುರುಪ್ರಸಾದ್ ನರ್ನಾಡ್ ಅವರು ಛಾಯಾಗ್ರಹಣ ಮಾಡುತ್ತಿದ್ದಾರೆ. ಭರತ್ ಮಧುಸೂದನ್ ಅವರ ಸಂಗೀತ ಸಂಯೋಜನೆ, ನವೀನ್ ಶೆಟ್ಟಿ ಅವರ ಸಂಕಲನ ಈ ಚಿತ್ರಕ್ಕಿದೆ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಕೇಂದ್ರ ಸಚಿವ ಡಾ.ಜಿ.ಎಂ. ಸಿದ್ದೇಶ್ವರ ಕರೆ

ಭಿನ್ನಾಭಿಪ್ರಾಯ ಬದಿಗಿಟ್ಟು ಕೆಲಸ ಮಾಡಿದರೆ ಗೆಲುವು





• **ದಾವಣಗೆರೆ:** ಭಿನ್ನಾಭಿಪ್ರಾಯ ಬದಿಗಿಟ್ಟು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಗೆಲುವು ಸುಲಭವಾಗಲಿದೆ. ಇದು ಕೇವಲ ಚುನಾವಣೆ ಅಲ್ಲ, ರಾಷ್ಟ್ರದ ಅಭಿವೃದ್ಧಿ ಹಾಗೂ ಭವಿಷ್ಯಕ್ಕೆ ಸಂಬಂಧಿಸಿದ ಮಹತ್ವದ ಹೋರಾಟವಾಗಿದೆ ಎಂದು ಮಾಜಿ ಕೇಂದ್ರ ಸಚಿವ ಡಾ.ಜಿ.ಎಂ.ಸಿದ್ದೇಶ್ವರ ತಿಳಿಸಿದರು.

ನಗರದ ದಾವಣಗೆರೆ-ಹರಿಹರ ಅರ್ಬನ್ ಕೋ-ಆಪ್ ಬ್ಯಾಂಕ್ ಸಮುದಾಯ ಭವನದಲ್ಲಿ ಶುಕ್ರವಾರ ಭಾರತೀಯ ಜನತಾ ಪಾರ್ಟಿಯಿಂದ ಏರ್ಪಡಿಸಿದ್ದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಅತ್ಯಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಬೇಕಿದೆ.

ಪಕ್ಷದ ಸಂಘಟನೆಯ ಬಲವೇ ಗೆಲುವಿನ ಗುಟ್ಟು, ಪ್ರತಿಯೊಬ್ಬ ಕಾರ್ಯಕರ್ತರು ಮನೆ-ಮನೆಗೆ ತೆರಳಿ ಪಕ್ಷದ ಸಾಧನೆಗಳನ್ನು ಜನರಿಗೆ ತಲುಪಿಸಬೇಕು. ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಜಾಗ್ರತೆ ವಹಿಸಬೇಕು. ವಿವಾದಾತ್ಮಕ ವಿಷಯಗಳನ್ನು ಹಂಚದೇ, ಸಕಾರಾತ್ಮಕ ಪ್ರಚಾರಕ್ಕೆ ಒತ್ತು ಕೊಡಬೇಕು ಎಂದು ಕರೆ ನೀಡಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಪ್ರಧಾನಿ ನರೇಂದ್ರ ಮೋದಿಯವರ ಅಭಿವೃದ್ಧಿ ಪರ ಕಾರ್ಯಗಳನ್ನು ಜನರಿಗೆ ತಿಳಿಸಬೇಕು. ಕೇಂದ್ರ ಮತ್ತು ರಾಜ್ಯದ ಹಿಂದಿನ ಬಿಜೆಪಿ ಸರ್ಕಾರಗಳ ಸಾಧನೆಗಳ ಬಗ್ಗೆ ಮತದಾರರಿಗೆ ಮನವರಿಕೆ ಮಾಡಿಕೊಡಬೇಕು ಎಂದು ಅವರು ಸಲಹೆ ನೀಡಿದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ದಾವಣಗೆರೆ ದಕ್ಷಿಣದಲ್ಲಿ ಕಮಲ ಅರಳಿಸುವುದೇ ನಮ್ಮ ಗುರಿ. ಈ ಚುನಾವಣೆ ವ್ಯಕ್ತಿಗಳ ನಡುವಿನ ಪೈಪೋಟಿಯಲ್ಲ, ಸಿದ್ಧಾಂತ ಮತ್ತು ಅಭಿವೃದ್ಧಿಯ ಹೋರಾಟವಾಗಿದೆ. ಜಾತಿ ಲೆಕ್ಕಾಚಾರದ ಬದಲು ಹಿಂದುತ್ವ ಹಾಗೂ ಪಕ್ಷದ ತತ್ವಗಳ ಆಧಾರದ ಮೇಲೆ ಬಿಜೆಪಿ ಚುನಾವಣೆ ಎದುರಿಸಲಿದೆ. ನಮ್ಮ ಅಭ್ಯರ್ಥಿಗೆ ಎಲ್ಲಾ ನಾಯಕರು ಮತ್ತು ಕಾರ್ಯಕರ್ತರ ಒಗ್ಗಟ್ಟಿನ ಬೆಂಬಲವಿದೆ. ಅವರ ಗೆಲುವು ಪಕ್ಷದ ಸಮೂಹ ಗೆಲುವಾಗಲಿದೆ. ಪಕ್ಷದಲ್ಲಿ ಭಿನ್ನಾಭಿಪ್ರಾಯ ಸಹಜವಾದರೂ, ಬಿಜೆಪಿ ಗೆಲುವೇ ಅಂತಿಮ ಗುರಿಯಾಗಿದೆ. ನಮ್ಮಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ, ವೇದಿಕೆಯ ಮೇಲೆ ಇರುವ ನಾಯಕರುಗಳಿಗಿಂತ ಬಿಸಿಲಿನಲ್ಲಿ ಶ್ರಮಿಸುತ್ತಿರುವ ಕಾರ್ಯಕರ್ತರೇ ಪಕ್ಷದ ನಿಜವಾದ ಶಕ್ತಿ ಎಂದರು.

> ನಗರದೇವತೆ ಶ್ರೀದುರ್ಗಮ್ಮ ತಾಯಿಯ ಆಶೀರ್ವಾದದಿಂದ ದಾವಣಗೆರೆ ದಕ್ಷಿಣದಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಲಿದೆ. ಅಧಿವೇಶನ ಮುಗಿಯುತ್ತಿದ್ದಂತೆ ಕ್ಷೇತ್ರದಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಚಾರದಲ್ಲಿ ತೊಡಗಿಸಿಕೊಳ್ಳುತ್ತೇನೆ.
> ■ ಬಿ.ಪಿ. ಹರೀಶ್

> ಪ್ರತಿಯೊಬ್ಬ ಕಾರ್ಯಕರ್ತನು ತಾನೇ ಅಭ್ಯರ್ಥಿ ಎಂಬ ಭಾವನೆಯೊಂದಿಗೆ ಕೆಲಸ ಮಾಡಿದರೆ ದಾವಣಗೆರೆ ದಕ್ಷಿಣದಲ್ಲಿ ಇತಿಹಾಸ ನಿರ್ಮಾಣವಾಗಲಿದ್ದು, ಈ ಉಪಚುನಾವಣೆಯ ಗೆಲುವು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ದಿಕ್ಸೂಚಿಯಾಗಲಿದೆ
> ■ ಎಂ.ಪಿ. ರೇಣುಕಾಚಾರ್ಯ

> ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕಳೆದ 2-3 ವರ್ಷಗಳಲ್ಲಿ ಯಾವುದೇ ಗಮನಾರ್ಹ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಜನರಲ್ಲಿ ಸರ್ಕಾರದ ವಿರುದ್ಧ ಅಸಮಾಧಾನ ಹೆಚ್ಚುತ್ತಿದ್ದು, ಅದನ್ನು ಮತಗಳಾಗಿ ಪರಿವರ್ತಿಸುವ ಜವಾಬ್ದಾರಿ ಕಾರ್ಯಕರ್ತರ ಮೇಲಿದೆ.
> ■ ಜಿ.ಎಂ. ಸಿದ್ದೇಶ್ವರ

ಹರಿಹರ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ವಿಧಾನಸಭಾ ಅಧಿವೇಶನದ ಕಲಾಪದಲ್ಲಿ ದಾವಣಗೆರೆ ಜಿಲ್ಲಾಡಳಿತದ ವೈಫಲ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಹಗರಣಗಳನ್ನು ಅಂಕಿ-ಅಂಶಗಳ ಸಮೇತ ಬಯಲಿಗೆಳೆಯುತ್ತೇನೆ. ಸದನದಲ್ಲಿ ನಾನು ಚರ್ಚಿಸುವ ವಿಷಯಗಳನ್ನು ಬಿಜೆಪಿ ಕಾರ್ಯಕರ್ತರು ಚುನಾವಣಾ ಪ್ರಚಾರದ ಅಸ್ತ್ರವನ್ನಾಗಿ ಬಳಸಿಕೊಳ್ಳಬೇಕು. ಈ ಬಾರಿ ಸದನವೇ ನಮ್ಮ ಚುನಾವಣಾ ಪ್ರಚಾರದ ವೇದಿಕೆಯಾಗಲಿದೆ ಎಂದು ನುಡಿದರು.

ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ, ವಿಧಾನ ಪರಿಷತ್ ಮಾಜಿ ಮುಖ್ಯಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಶಾಸಕರಾದ ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಜೆಡಿಎಸ್‌ನ ಹೆಚ್.ಎಸ್. ಶಿವಶಂಕರ್, ಧೂಡಾ ಮಾಜಿ ಅಧ್ಯಕ್ಷರಾದ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ, ದೇವರಮನೆ ಶಿವಕುಮಾರ, ಬಿಜೆಪಿ ವಿಭಾಗ ಪ್ರಭಾರಿ ಟಿ.ಡಿ. ಮೇಘರಾಜ್, ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಜೆಡಿಎಸ್ ಜಿಲ್ಲಾಧ್ಯಕ್ಷ ಚಿದಾನಂದಪ್ಪ, ಜಿಲ್ಲಾ ಚುನಾವಣಾ ಉಸ್ತುವಾರಿ ಮೇಘರಾಜ್, ಮುಖಂಡರಾದ ವೀರೇಶ ಹನಗವಾಡಿ, ಲೋಕಿಕೆರೆ ನಾಗರಾಜ್, ಬಿ.ಜಿ. ಅಜಯಕುಮಾರ್, ಶಿವನಳ್ಳಿ ರಮೇಶ್, ಕೃಷ್ಣಮೂರ್ತಿ ಪವಾರ್, ಪಕ್ಷದ ಹೆಚ್.ಸಿ. ಜಯಮ್ಮ, ಡಾ.ನಾಸೀರ್ ಅಹಮದ್, ಮುರುಗೇಶ್ ಆರಾಧ್ಯ, ಎಸ್.ಟಿ. ವೀರೇಶ್, ಕೊಳೇನಹಳ್ಳಿ ಸತೀಶ್, ಕೆ.ಎಂ.ಸುರೇಶ್, ಶ್ಯಾಮ್, ಹೆಚ್.ಪಿ. ವಿಶ್ವಾಸ್, ಕೊಟ್ರೇಶ್ ಗೌಡ, ಆನಂದ್ ಜಿರ್ಲಿ ಉಪಸ್ಥಿತರಿದ್ದರು.

ಅಭ್ಯರ್ಥಿ ಗೆಲ್ಲಿಸುವ ಸಂಕಲ್ಪ

ಕಾರ್ಯಕ್ರಮದ ವೇದಿಕೆಯಲ್ಲಿ ಬಿಜೆಪಿ ಪಕ್ಷದ ನಾನಾ ಬಣಗಳಲ್ಲಿ ಗುರುತಿಸಿಕೊಂಡಿದ್ದ ಎಲ್ಲಾ ನಾಯಕರು ಒಗ್ಗಟ್ಟು ಪ್ರದರ್ಶಿಸುವ ಜೊತೆಗೆ ಅಭ್ಯರ್ಥಿ ಗೆಲುವಿಗೆ ಸಂಕಲ್ಪ ಮಾಡಿದರು. ಇತ್ತೀಚೆಗಷ್ಟೇ ರಾಜ್ಯ ಉಸ್ತುವಾರಿ ರಾಧಾಮೋಹನದಾಸ್ ಅಗರ್ವಾಲ್, ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮಕ್ಕೆ ಗೈರಾಗಿದ್ದವರು ಕೂಡ ಶುಕ್ರವಾರದ ಸಭೆಯಲ್ಲಿ ಪಾಲ್ಗೊಂಡಿದ್ದರು. ಉಭಯ ಬಣಗಳ ಮುಖಂಡರು, ತಮ್ಮಲ್ಲಿ ಯಾವುದೇ ಬಣಗಳಿಲ್ಲ, ಇರುವುದು ಬಿಜೆಪಿ ಬಣ ಮಾತ್ರ ಎಂಬ ಸಂದೇಶ ಸಾರಿದರು.

22.12 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶ: ಎಸ್‌ಪಿ

• **ದಾವಣಗೆರೆ:** ಸರಣಿ ಸರಗಳ್ಳತನ ಹಾಗೂ ದರೋಡೆ ಸಂಚು ರೂಪಿಸುತ್ತಿದ್ದ ಐವರು ಆರೋಪಿಗಳನ್ನು ಬಂಧಿಸಿರುವ ಹೊನ್ನಾಳಿ ಪೊಲೀಸರು, ಬಂಧಿತರಿಂದ ಸುಮಾರು 22.12 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ವಾಹನಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಎಸ್ಪಿ ಡಾ.ಹೆಚ್.ಟಿ. ಶೇಖರ್ ಮಾತನಾಡಿ, ಹಾವೇರಿ ಮೂಲದ ನಿಯಾಜ್ ಅಹಮದ್ ಅಲಿಯಾಸ್ ಸಾದಿಕ್(23 ವರ್ಷ), ಮುಸ್ತಾಕ್(20), ಸುಹೀಲ್ ಬಾಷಾ(19), ಅಂಜುಮ್ ಬಾನು(22) ಹಾಗೂ ಓರ್ವ ಕಾನೂನು ಸಂಘರ್ಷಕ್ಕೊಳಗಾದ ಬಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರಮುಖ ಆರೋಪಿ ನಿಯಾಜ್ ಅಹಮದ್ ಆನಲೈನ್ ಗೇಮಿಂಗ್ ಮತ್ತು ಕ್ರಿಕೆಟ್ ಬೆಟ್ಟಿಂಗ್ ಚಟಕ್ಕೆ ಬಿದ್ದು ಸುಮಾರು 15-20 ಲಕ್ಷ ರೂ. ಸಾಲ ಮಾಡಿಕೊಂಡಿದ್ದ. ಸಾಲಗಾರರ ಕಾಟದಿಂದ ಪಾರಾಗಲು ಮತ್ತು ತನ್ನ ಅಕ್ಕನ ಮದುವೆಗೆ ಹಣ ಹೊಂದಿಸುವ ಉದ್ದೇಶದಿಂದ ತನ್ನ ಸ್ನೇಹಿತರೊಂದಿಗೆ ಸೇರಿ ಸರಗಳ್ಳತನದ ಹಾದಿ ಹಿಡಿದಿದ್ದ ಎಂದರು.

ಕಳೆದ ಮಾ.8ರಂದು ಹೊನ್ನಾಳಿ-ಶಿಕಾರಿಪುರ ರಸ್ತೆಯ ಸೊರಟೂರು ಕ್ರಾಸ್ ಬಳಿ ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿಯನ್ನು ಅಡ್ಡಗಟ್ಟಿದ್ದ ಆರೋಪಿಗಳು, ಮಹಿಳೆಯ ಕೊರಳಲ್ಲಿದ್ದ 8 ಗ್ರಾಂ ತೂಕದ ಬಂಗಾರದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಹೊನ್ನಾಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗಳು ಬಿಟ್ಟು ಹೋಗಿದ್ದ ಬೈಕ್‌ನ ತಾಂತ್ರಿಕ ಮಾಹಿತಿಯ ಆಧಾರದಲ್ಲಿ ಕಾರ್ಯಾಚರಣೆ ಕೈಗೊಂಡ ಪೊಲೀಸರು, ರಾಣೇಬೆನ್ನೂರಿನಲ್ಲಿ ಆರೋಪಿಗಳನ್ನು ಸೆರೆ ಹಿಡಿದಿದ್ದಾರೆ. ಆರೋಪಿಗಳು ದಾವಣಗೆರೆಯ ಆಂಜನೇಯ ಬಡಾವಣೆಯ ಪಾರ್ಕ್‌ನಲ್ಲಿ ಕುಳಿತು 7-8 ಸರಗಳ್ಳತನ ಮಾಡಲು ಸಂಚು ರೂಪಿಸಿದ್ದರು. ಹೊನ್ನಾಳಿ ಮಾತ್ರವಲ್ಲದೆ, ಭರಮಸಾಗರ ಮತ್ತು ನ್ಯಾಮತಿ ತಾಲೂಕಿನಲ್ಲೂ ಇವರು ಕೃತ್ಯ ಎಸಗಿರುವುದು ಪತ್ತೆಯಾಗಿದೆ ಎಂದು ವಿವರಿಸಿದರು.

ಆರೋಪಿಗಳ ಬಂಧನದಿಂದ ಒಟ್ಟು 3 ಪ್ರಕರಣ ಭೇದಿಸಿದಂತಾಗಿದೆ. 2.12 ಲಕ್ಷ ರೂ. ಮೌಲ್ಯದ ಬಂಗಾರದ ಸರ, 20 ಲಕ್ಷ ರೂ. ಮೌಲ್ಯದ ಎರಡು ಕಾರು ಮತ್ತು ಒಂದು ಬೈಕ್ ಸೇರಿದಂತೆ ಒಟ್ಟು 22,12,200 ರೂ. ಮೌಲ್ಯದ ಸ್ವತ್ತನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆಯಲ್ಲಿ ಡಿವೈಎಸ್ಪಿ ರುದ್ರಪ್ಪ, ಸಿಪಿಐ ಸುನೀಲ್ ಕುಮಾರ್ ನೇತೃತ್ವದ ತಂಡ ಭಾಗವಹಿಸಿತ್ತು ಎಂದು ಅವರು ತಿಳಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಪರಮೇಶ್ವರ ಹೆಗಡೆ ಸೇರಿದಂತೆ ಅಧಿಕಾರಿ, ಸಿಬ್ಬಂದಿ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಮುಸ್ಲಿಂ ಒಮ್ಮತದ ಅಭ್ಯರ್ಥಿ ಸ್ಪರ್ಧೆ ಖಚಿತ: ಸಾದಿಕ್ ಪೈಲ್ವಾನ್

• **ದಾವಣಗೆರೆ:** ನನಗೆ ಕಾಂಗ್ರೆಸ್ ಬಿ-ಫಾರಂ ಸಿಗುವ ವಿಶ್ವಾಸವಿದೆ. ಒಂದು ವೇಳೆ ನನಗೆ ಟಿಕೆಟ್ ಸಿಗದಿದ್ದರೆ, ಮುಸ್ಲಿಂ ಸಮಾಜವು ಫೆ.23ರಂದು ಸೋಮವಾರ ಸೂಕ್ತ ನಿರ್ಧಾರ ಮಾಡುತ್ತದೆ ಎಂದು ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಆಕಾಂಕ್ಷಿ, ಮುಸ್ಲಿಂ ಸಮುದಾಯದ ಹಿರಿಯ ಮುಖಂಡ ಸಾದಿಕ್ ಪೈಲ್ವಾನ್ ತಿಳಿಸಿದ್ದಾರೆ.

ಇಲ್ಲಿನ ಪಾಲಿಕೆ ಆವರಣದಲ್ಲಿ ದಕ್ಷಿಣ ಕ್ಷೇತ್ರದ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಲ್ಪಸಂಖ್ಯಾತ ಸಮುದಾಯಕ್ಕೆ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಸಿಗದಿದ್ದರೆ, ಸೋಮವಾರದ ಸಭೆಯಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆ. ಅಲ್ಪಸಂಖ್ಯಾತ ಸಮುದಾಯದಿಂದ ಒಮ್ಮತದ ಅಭ್ಯರ್ಥಿಯ ಸ್ಪರ್ಧೆ ಖಚಿತ ಎಂದು ಸ್ಪಷ್ಟಪಡಿಸಿದರು.

ದಾವಣಗೆರೆ: 9 ನಾಮಪತ್ರ ಸ್ವೀಕೃತಿ

• **ದಾವಣಗೆರೆ:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಶುಕ್ರವಾರ 8 ಅಭ್ಯರ್ಥಿಗಳಿಂದ 9 ನಾಮಪತ್ರಗಳು ಸ್ವೀಕೃತವಾಗಿದ್ದು, ಈವರೆಗೆ ಒಟ್ಟಾರೆ 10 ನಾಮಪತ್ರಗಳು ಸಲ್ಲಿಕೆಯಾಗಿವೆ.

ಇಂಡಿಯನ್ ಪೊಲಿಟಿಕಲ್ ಕಾಂಗ್ರೆಸ್ ಪಕ್ಷದಿಂದ ಈರಣ್ಣ, ಕಂಟ್ರಿ ಸಿಟಿಜನ್ ಪಕ್ಷದಿಂದ ಎ.ಟಿ.ದಾದಾಕಲಾಂದರ್, ನವಭಾರತ ಸೇನಾ ಪಕ್ಷದಿಂದ ಎಂ.ಜಿ. ಶ್ರೀಕಾಂತ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದಿಂದ ಸಾದಿಕ್ ಪೈಲ್ವಾನ್, ಸ್ವತಂತ್ರ ಅಭ್ಯರ್ಥಿಯಾಗಿ ಕೆ.ಹೆಚ್. ಮೆಹಬೂಬ್, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಸ್ವತಂತ್ರ ಅಭ್ಯರ್ಥಿಯಾಗಿ ಸಮರ್ಥ್ ಶಾಮನೂರು, ಭಾರತೀಯ ಜನತಾ ಪಾರ್ಟಿ ಪಕ್ಷದಿಂದ ಟಿ. ಶ್ರೀನಿವಾಸ ದಾಸಕರಿಯಪ್ಪ, ಆಮ್ ಆದ್ಮಿ ಪಾರ್ಟಿಯಿಂದ ಕೆ.ಎಸ್.ಶಿವಕುಮಾರಪ್ಪ ನಾಮಪತ್ರ ಸಲ್ಲಿಸಿದ್ದಾರೆ ಎಂದು ಚುನಾವಣಾಧಿಕಾರಿ ಸಂತೋಷ್ ಕುಮಾರ್ ತಿಳಿಸಿದ್ದಾರೆ.

ಜಾತಿ ಪ್ರಮಾಣ ಪತ್ರ ನೀಡಲು ಒತ್ತಾಯ

• **ಶಿಕಾರಿಪುರ:** ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಶಿಳ್ಳೆಕ್ಯಾತ, ಕಿಳ್ಳೆಕ್ಯಾತ ಸಮುದಾಯಕ್ಕೆ ಇದುವರೆಗೂ ಸರ್ಕಾರ ಜಾತಿ ಪ್ರಮಾಣ ಪತ್ರ ನೀಡದೆ ವಿನಾಕಾರಣ ಸರ್ಕಾರ ಅಲೆದಾಡಿಸುತ್ತಿದೆ. ಸರ್ಕಾರದ ವಿಳಂಭ ಧೋರಣೆಯಿಂದಾಗಿ ಸಮುದಾಯ ಸೌಲಭ್ಯದಿಂದ ವಂಚಿತವಾಗುತ್ತಿದ್ದು ಕೂಡಲೇ ಸಮಾಜ ಕಲ್ಯಾಣ ಸಚಿವರು ಸೂಕ್ತ ನಿರ್ದಾರದ ಮೂಲಕ ಸಮುದಾಯಕ್ಕೆ ನ್ಯಾಯ ದೊರಕಿಸಿಕೊಡುವಂತೆ ರಾಜ್ಯ ಶಿಳ್ಳೆಕ್ಯಾತ ಸಮಾಜದ ಗೌರವಾಧ್ಯಕ್ಷ ಪಿ.ರಾಮಯ್ಯ ಮನವಿ ಮಾಡಿದ್ದಾರೆ.

ಪತ್ರಿಕಾ ಹೇಳಿಕೆಯಲ್ಲಿ ಈ ಬಗ್ಗೆ ತಿಳಿಸಿರುವ ಅವರು, ಪ್ರತಿ ಬಾರಿ ಮೂಗಿಗೆ ತುಪ್ಪ ಸವರುತ್ತಿರುವ ಸಚಿವರು ವರ್ಷದಿಂದ ಫೈಲು ಫೇರಾ ಫೇರಿಯಿಂದಾಗಿ ಪ್ರತೀ ಟೇಬಲ್ಲಿನಲ್ಲಿ ಸತ್ವ ಪರೀಕ್ಷೆ ನಡೆಯುತ್ತಿದೆ. ಫಲಿತಾಂಶಕ್ಕಾಗಿ ಚಾತಕ ಪಕ್ಷಿಗಳಂತೆ ಕಣ್ಣು ಬಿಟ್ಟು ಕಾಯುತ್ತಿರುವ ಸಮುದಾಯದ ಬಗ್ಗೆ ಸದನದಲ್ಲಿ ಚಿಮ್ಮನ ಕಟ್ಟಿ, ಉಪಸಭಾಪತಿ ರುದ್ರಪ್ಪ ಲಮಾಣಿ ಹಾಗೂ ಶಾಸಕ ಅರವಿಂದ ಬೆಲ್ಲದ ರವರ ಪ್ರಶ್ನೆಗೆ ಉತ್ತರಿಸದೆ ಸಚಿವರು ಪಲಾಯನವಾದ ಅನುಸರಿಸುತ್ತಿದ್ದಾರೆ. ಅತ್ಯಂತ ನಿಕೃಷ್ಟ ಅಲೆಮಾರಿ ಸಮುದಾಯಕ್ಕೆ ಸಹಾಯ ಹಸ್ತ ನೀಡುವ ಬದಲು ಇಲ್ಲದ ಕಾನೂನು ಹೇಳಿ ತುಳಿಯಲು ಪ್ರಯತ್ನಿಸುತ್ತಿರುವ ಸಚಿವರ ವರ್ತನೆ ಅತ್ಯಂತ ಬೇಜವಾಬ್ದಾರಿಯುತವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಚುನಾವಣಾ ತರಬೇತಿಗೆ ಅನಧಿಕೃತ ಗೈರು; ಅಮಾನತು

• **ದಾವಣಗೆರೆ:** ಚುನಾವಣಾ ತರಬೇತಿ ಕಾರ್ಯಾಗಾರಕ್ಕೆ ಅನಧಿಕೃತವಾಗಿ ಗೈರುಹಾಜರಾದ ಕಾರಣಕ್ಕೆ ಹರಿಹರದ ಎಸ್.ಜೆ.ವಿ.ಪಿ ಕಾಲೇಜಿನ ಉಪನ್ಯಾಸಕರೊಬ್ಬರನ್ನು ಜಿಲ್ಲಾಧಿಕಾರಿಗಳು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತುಗೊಳಿಸಿ ಆದೇಶಿಸಿದ್ದಾರೆ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಮತದಾನದ ಸಿಬ್ಬಂದಿಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಕ್ಕೆ ಹರಿಹರದ ಎಸ್.ಜೆ.ವಿ.ಪಿ ಕಾಲೇಜಿನ ಉಪನ್ಯಾಸಕ ಕೆ.ಎಂ. ರುದ್ರಮುನಿಸ್ವಾಮಿ ಅವರನ್ನು ಪಿ.ಆರ್.ಓ ಆಗಿ ನೇಮಿಸಲಾಗಿತ್ತು. ಮಾ.19ರಂದು ಬೆಳಗ್ಗೆ 10 ಗಂಟೆಗೆ ದಾವಣಗೆರೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ನಡೆದ ತರಬೇತಿಗೆ ಇವರು ಹಾಜರಾಗಿರಲಿಲ್ಲ, ಅಲ್ಲದೆ, ಪ್ರಾಧಿಕಾರದ ಅಧಿಕಾರಿಗಳು ದೂರವಾಣಿ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದರೂ ಸ್ಪಂದಿಸದೆ ಕರ್ತವ್ಯ ನಿರ್ಲಕ್ಷ್ಯ ತೋರಿದ್ದರು.

ಚುನಾವಣಾ ಕಾರ್ಯವು ಅತ್ಯಂತ ಮಹತ್ವದ್ದಾಗಿದೆ. ಯಾವುದೇ ಪೂರ್ವಾನುಮತಿ ಇಲ್ಲದೆ ಗೈರು ಹಾಜರಾಗಿರುವುದನ್ನು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಗಂಭೀರವಾಗಿ ಪರಿಗಣಿಸಿ, ಕರ್ನಾಟಕ ಸಿವಿಲ್ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿಗಳು 1957ರ ನಿಯಮ 10ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಉಪನ್ಯಾಸಕರನ್ನು ಅಮಾನತ್ತು ಮಾಡಿದ್ದಾರೆ. ಅಮಾನತ್ತಿನ ಅವಧಿಯಲ್ಲಿ ಕೇಂದ್ರ ಸ್ಥಾನ ಬಿಟ್ಟು ತೆರಳುವಂತಿಲ್ಲ ಮತ್ತು ಕೆ.ಸಿ.ಎಸ್.ಆರ್ ನಿಯಮ 98ರಡಿ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಯಕ್ಷ ಕಲಾವಿದ ಗೋವಿಂದ ಭಟ್ ನಿಧನ



• **ತೀರ್ಥಹಳ್ಳಿ:** ಸುಪ್ರಸಿದ್ಧ ಯಕ್ಷಗಾನ ಕಲಾವಿದರಾದ ಕೆ.ಗೋವಿಂದ ಭಟ್ಟರು (90) ಹೆದ್ದೂರಿನ ಸಮೀಪದ ಸಂತೆಕೊಪ್ಪದಲ್ಲಿ ಅವರ ಮಗನ ಮನೆಯಲ್ಲಿ ಶುಕ್ರವಾರ ವಿಧಿವಶರಾಗಿದ್ದಾರೆ. ಅಂತಿಮ ಕ್ರಿಯೆಯನ್ನು ಶನಿವಾರ ಹೆದ್ದೂರು ಸಂತೆಕೊಪ್ಪದಲ್ಲಿ ನಡೆಸಲಾಗುವುದು ಎಂದು ಕುಟುಂಬ ಮೂಲಗಳಿಂದ ತಿಳಿದು ಬಂದಿದೆ. ಸೂರಿಕುಮೇರಿ ಗೋವಿಂದ ಭಟ್ ಪ್ರತಿಭಾನ್ವಿತ ಕಲಾವಿದ ಮತ್ತು ಗುರು. 70 ವರ್ಷಗಳಿಗೂ ಹೆಚ್ಚು ಕಾಲ ಧರ್ಮಸ್ಥಳ ಮೇಳ ಸೇರಿದಂತೆ ಪ್ರಸಿದ್ಧ ಮೇಳಗಳಲ್ಲಿ ನಾಯಕ, ಸ್ತ್ರೀವೇಷ ಮತ್ತು ಪೌರಾಣಿಕ ಪಾತ್ರಗಳಲ್ಲಿ (ರಾವಣ, ಕರ್ಣ, ದುರ್ಯೋಧನ) ಅಭಿನಯಿಸಿರುವ ಇವರು ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಪ್ರಮುಖವಾಗಿ ಧರ್ಮಸ್ಥಳ ಮಂಜುನಾಥೇಶ್ವರ ಯಕ್ಷಗಾನ ಮಂಡಳಿಯಲ್ಲಿ 50 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ. ಇವರು ಕಿರೀಟವೇಷ (ರಾಜವೇಷ)ಗಳಿಗೆ ಪ್ರಸಿದ್ಧರು. ದಕ್ಷ, ಕಾರ್ತವೀರ್ಯಾರ್ಜುನ, ಅರ್ಜುನ, ರಾವಣ, ಇಂದ್ರಜಿತ್, ಕರ್ಣ, ಕಂಸ, ದುರ್ಯೋಧನ ಮುಂತಾದ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ರಾಧಾ (ಚಂದ್ರಾವಳಿ ವಿಲಾಸ), ರಾಣಿ (ಬೇಡರ ಕಣ್ಣಪ್ಪ), ಶಶಿಪ್ರಭೆ ಮುಂತಾದ ಸ್ತ್ರೀವೇಷಗಳಲ್ಲೂ ಪ್ರಖ್ಯಾತರಾದವರು. 1000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಯಕ್ಷಗಾನ ತರಬೇತಿ ನೀಡಿದ್ದಾರೆ. 2016ರ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ. ಇವರ ಜೀವನದ ಕುರಿತಾದ ಎಪ್ಪತ್ತು ತಿರುಗಾಟಗಳು ಪುಸ್ತಕ ಬಿಡುಗಡೆಯಾಗಿದೆ.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಇ/ಲೋಇ/ಯಾವಿ/ಶಾಶಾ-1/ಇ-ಟೆಂಡರ್ ಪ್ರಕಟಣೆ/2025-26/ 3558, ದಿನಾಂಕ:20.03.2026

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-2 ಮತ್ತು 4 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2025-26ನೇ ಸಾಲಿನ 3054 ರಾಹೆ, ಜಿಮುರ ನಿರ್ವಹಣೆ ಅಡಿಯಲ್ಲಿ ಸುರಪುರ ತಾಲೂಕಿನ (1)34541, (2)34042, (3)34040 & (4)34764 ಮತ್ತು 4059 ಸಿಎಂಡಿಪಿ (ಯೋಜನೆ) (1)34047 ಹಾಗೂ 5054 ಜಮುರ ಸೇತುವೆ (ಯೋಜನೆ) (1)27570/2ನೇ ಕರೆ ಒಟ್ಟಾರೆ 6 (ಆರು) ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. 2) ಟೆಂಡರಿನಿಟ್ಟ ಅಂದಾಜು ಮೊತ್ತ: ಕನಿಷ್ಠ ರೂ.50.00 ಲಕ್ಷಗಳು ಹಾಗೂ ಗರಿಷ್ಠ ರೂ:200.00 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ: ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ರಂತೆ. 5) ಪ್ರಿ ಬಿಡ್ ಮೀಟಿಂಗ್ ದಿನಾಂಕ: 25.03.2026 (11.30 ಗಂಟೆ ನಂತರ) 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 27.03.2026 (17.30 ಗಂಟೆವರೆಗೆ) 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 31.03.2026 (16.00 ಗಂಟೆವರೆಗೆ) 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್: 01.04.2026 (16.30 ಗಂಟೆ ನಂತರ) 9) ಆರ್ಥಿಕ ಬಿಡ್ ತೆರೆಯುವ ದಿನಾಂಕ: 04.04.2026 (11.30 ಗಂಟೆ ನಂತರ) 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/606/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382-220556 ಇ-ಮೇಲ್: predkarwar@gmail.com

ಕ್ರ.ಸಂ:ಪಂರಾ.ಇಂ/ಕಾ/ಪಿಡಿ-1/2025-26/57 | ದಿ: 18.03.2026

ಟೆಂಡರ್ ಪ್ರಕಟಣೆ-57/2025-26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1, 2 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರುಗಳನ್ನು ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) 2024-25 ನೇ ಸಾಲಿನ ಐ.ಸಿ.ಡಿ ಎಸ್ ಹಾಗೂ ನರೇಗಾ ಅನುದಾನದ ಕ್ರಿಯಾ ಯೋಜನೆಯಡಿ ಅಂಕೋಲಾ ತಾಲೂಕಿನ ಭಾವಿಕೇರಿ ಗ್ರಾ.ಪಂ ಬಡಗೇರಿ ಹರಿಕಂತ್ರವಾಡ-2 ಅಂಗನವಾಡಿ ಕಟ್ಟಡ ನಿರ್ಮಾಣ. RDPR/2025-26/BD/WORK_INDENT24631/CALL-2, ಅಂದಾಜು ಮೊತ್ತ: ರೂ. 12.00 ಲಕ್ಷ, ಮುಂಗಡ ಠೇವಣಿ: ರೂ. 30,000.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು

(ಮೀಸಲಾತಿ: ಪ್ರವರ್ಗ 1) (2) 2245-08-101-0-01-059 ರಾಷ್ಟ್ರೀಯ ವಿಪತ್ತು ಉಪಶಮನ ನಿಧಿ (NDRF) ಮತ್ತು ರಾಜ್ಯ ವಿಪತ್ತು ಉಪಶಮನ ನಿಧಿ (SDRF) ಯೋಜನೆಯಡಿ ಭಟ್ಕಳ ತಾಲೂಕಿನ ಮಾವಿನಕುರ್ವಾ ಪಂಚಾಯತ ತಲಗೋಡ ರಸ್ತೆ ಬದಿಯ ಗುಡ್ಡ ಕುಸಿತ ಮಣ್ಣು ತೆರವುಗೊಳಿಸಿ ತಡೆಗೋಡೆ ನಿರ್ಮಿಸುವುದು. RDPR/2025-26/RD/WORK_INDENT23880/Call-2, ಅಂದಾಜು ಮೊತ್ತ: ರೂ. 37.70 ಲಕ್ಷ, ಮುಂಗಡ ಠೇವಣಿ: ರೂ. 47,500.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್-ದಿನಗಳನ್ನು ಮತ್ತು Technical Bid ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 30.03.2026 ರ ಅಪರಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 01.04.2026 ರ ಅಪರಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/1232/25-26 dt. 20.03.2026

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,

ಶಿಶು ಅಭಿವೃದ್ಧಿ ಯೋಜನೆ, ಹೊಳಲ್ಕೆರೆ-577526

ಹರಿಹರ ಬಿಲ್ಡಿಂಗ್, ಶಿವಮೊಗ್ಗ ರಸ್ತೆ, ಹೊಳಲ್ಕೆರೆ. ದೂರವಾಣಿ ಸಂಖ್ಯೆ: 08191-275250

ಸಂಖ್ಯೆ:ಶಿಯೋ/ಹೊ/ಮಮಅಇ/ವಾಹನ/ಟೆಂಡರ್/2025-26/967 ದಿ:18.03.2026

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹೊಳಲ್ಕೆರೆ ಕಚೇರಿಗೆ ವಾಹನ ಬಾಡಿಗೆಯ ಮೇಲೆ 01 (4 Wheeler LMW AC)ವಾಹನ ಸೇವೆಯನ್ನು ಆದೇಶವಾದ ದಿನಾಂಕದಿಂದ 31-03-2027 ರ ವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (ಕೆ.ಟಿ.ಪಿ.ಪಿ) 1999 ನಿಯಮಗಳು 2000ರ ಪ್ರಕಾರ KTPP-Portal (ದ್ವಿ-ಲಕೋಟೆ ಪದ್ಧತಿ) ಮೂಲಕ ಟೆಂಡರ್ ಕರೆಯಲಾಗಿದೆ.

Website:www.eproc.karnataka.gov.in

(1) ಟೆಂಡರ್‌ದಾರರು KTPP-Portal ಮೂಲಕ ಟೆಂಡರ್ ಸಲ್ಲಿಸುವುದು. ಈ ಬಗ್ಗೆ ಟೆಂಡರದಾರರಿಗೆ ನಿಗದಿ ಪಡಿಸಿರುವ ಅರ್ಹತೆ ಮತ್ತು ಅನುಭವಗಳು ಇರತಕ್ಕದ್ದು. (2) ಟೆಂಡರ್ ದಸ್ತಾವೇಜುಗಳನ್ನು ದಿ: 18-03-2026 ರಿಂದ ದಿನಾಂಕ: 02-04-2026 ಸಂಜೆ: 5.30 ಗಂಟೆಯೊಳಗೆ ಪಡೆದು ಆನ್‌ಲೈನ್ ಮುಖಾಂತರ ಸಲ್ಲಿಸುವುದು. (3) ಟೆಂಡರ ಮತ್ತು ಇ.ಎಂ.ಡಿ ಮೊತ್ತವನ್ನು ತಪ್ಪದೇ KTPP-Portal ಮುಖಾಂತರ ಸಲ್ಲಿಸತಕ್ಕದ್ದು. (4) ಟೆಂಡರ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:02-04-2026 ಸಾಯಂಕಾಲ 5.30 ಗಂಟೆ ಇರುತ್ತದೆ. (5) ಹೆಚ್ಚಿನ ವಿವರಗಳನ್ನು ಟೆಂಡರದಲ್ಲಿ ವೀಕ್ಷಣೆಗಳಲ್ಲಿ ಲಭ್ಯವಿದ್ದು https://ktpp.karnataka.gov.in ವೆಬ್‌ಸೈಟ್ ನಲ್ಲಿ ಪಡೆದು ಪರಿಶೀಲಿಸುವುದು. ಹಾಗೂ ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹೊಳಲ್ಕೆರೆ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

DIPR/CTA/KSMCA/ 778/2025-26

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಹೊಳಲ್ಕೆರೆ.

ರಕ್ತದಾನ ಮಹಾದಾನ, ರಕ್ತದಾನ ಮಾಡಿ ಜೀವ ಉಳಿಸಿ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ

ನಂ.1 ಕಟ್ಟಡಗಳ ವಿಭಾಗ, ಎಸ್.ಜಿ.ಎ. ಆವರಣ, ಬೆಂಗಳೂರು.ದೂರವಾಣಿ: 080-22255210

ಸಂಖ್ಯೆ: ಕಾಇ/ಕಟ್ಟಿ.ವಿ-1/ಎಇ-3/ಎನ್-2/ಇ-ಎಸ್ಟಿಎ/2025-26/86 ದಿನಾಂಕ: 18.03.2026

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯ ಸೂಚಿತ ಸ್ಥಳಗಳಲ್ಲಿ ವುಡನ್ ಸ್ಟೋರೇಜ್ ಯೂನಿಟ್‌ಗಳು/ವಾರ್ಡ್‌ರೋಬ್‌ಗಳು, ಮಾಡ್ಯುಲರ್ ಕಿಚನ್, ಟಿವಿ ಯೂನಿಟ್‌ಗಳನ್ನು ಒದಗಿಸುವುದು, ಶೌಚಾಲಯ ದುರಸ್ತಿ, ಕುಶೇರಿ ನವೀಕರಣ, ಆರ್ಕಿಟೆಕ್ಚರಲ್/ಒಳಾಂಗಣ/ಹೊರಾಂಗಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲಹಾ ಸೇವೆಗಳು, ಎಂಎಸ್ ಗ್ರಿಲ್‌ಗಳ ಒದಗಿಸುವುದು, ಪಾರ್ಕಿಂಗ್ ಪಡಿಯಗೆ ಫ್ಲೋರಿಂಗ್ ಟೈಲ್ಸ್ ಒದಗಿಸುವುದು, ಟೇರೇಸ್ ವಾಟರ್‌ಪ್ರೂಫಿಂಗ್, ಪೇಂಟಿಂಗ್ ಒದಗಿಸುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು 05 ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಳ ಅಂದಾಜು ಮೊತ್ತ: ಕನಿಷ್ಠ ರೂ.10.07 ಲಕ್ಷಗಳು, ಗರಿಷ್ಠ ರೂ.762.62 ಲಕ್ಷಗಳು. ಇಎಂಡಿ: ಕನಿಷ್ಠ ರೂ.12,600/-, ಗರಿಷ್ಠ ರೂ.11,44,000/- ಪ್ರತೀ ಕಾಮಗಾರಿಯ ಅವಧಿ: 2 ರಿಂದ 24 ತಿಂಗಳು (ಮಳೆಗಾಲ ಸೇರಿದಂತೆ). ಕಾಮಗಾರಿಯ ದಸ್ತಾವೇಜು ಬೆಲೆ: ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: ಕ್ರ.ಸಂ.1ಕ್ಕೆ 23.03.2026, ಸಂಜೆ 5.00 ಗಂಟೆಯೊಳಗೆ ಮತ್ತು ಕ್ರ.ಸಂ.2 ರಿಂದ 5ಕ್ಕೆ 24.03.2026, ಸಂಜೆ 5.00 ಗಂಟೆಯೊಳಗೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಗಳ ಸಂಕ್ಷಿಪ್ತ ವಿವರ, ಇಂಡೆಂಟ್ ಸಂಖ್ಯೆಗಳು, ಅಂದಾಜು ಮೊತ್ತ, ಇಎಂಡಿ, ಕಾಲಾವಧಿ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು

ವಾಸಾಸಂ/ಇಇಸಿ/ಸಿ-ಸಿ.ಪಿ/6382/ಕೆಎಸ್ಎಂಸಿಎ/2025-26

ಕರ್ನಾಟಕ ಸರ್ಕಾರ
ಜಿಲ್ಲೆ : ರಾಯಚೂರು | ರಾಜ್ಯ : ಕರ್ನಾಟಕ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಿಂಗಸಗೂರು.

Agricultural Produce Market Committee, LINGASAGUR-PIN: 584 122
E-Mail: apmclingasugur@gmail.com ph.No (08537) 257382

ಸಂ:ಕೃಮಾಇ/ಕೃಉಮಾಸ/ಲಿಂ/ಅಭಿಕೆವಿ/1424/2025-26 | ದಿನಾಂಕ : 16-03-2026

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಲಿಂಗಸುಗೂರು ವತಿಯಿಂದ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ತತ್ಸಂಬಂಧವಾಗಿ ಸರ್ಕಾರದ ಆದೇಶ ಹಾಗೂ ಸುತ್ತೋಲೆಗಳನ್ವಯ Standard Tender Documents ರಂತೆ ಅರ್ಹರಿರುವ ಕರ್ನಾಟಕ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಯಮಾನುಸಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ನ್ನು ಈ ಕೆಳಗಿನ ಕಾಮಗಾರಿ ನಿರ್ವಹಿಸಲು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಗುತ್ತಿಗೆದಾರರ ಅರ್ಹತೆ
1	APMC/2025-26/BD/ WORK_INDENT 836)	18.64	46,600.00	3ನೇ ದರ್ಜೆ ಹಾಗೂ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು As per KW-1 Eligible Contractor
2	(APMC/2025-26/ OW/WORK_ INDENT 842)	60.57	1,21,500.00	As per KW-3 Eligible Contractor
3	(APMC/2025-26/ BD/WORK_ INDENT 893)	104.44	2,00,000.00	As per KW-4 Eligible Contractor
4	(APMC/2025-26/ RD/WORK_ INDENT 843)	59.03	1,18,500.00	As per KW-3 Eligible Contractor

-::ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ::- 1) ಇ-ಪ್ರಕ್ಯೂರಮೆಂಟ್‌ನಲ್ಲಿ ಶೆಡ್ಯೂಲ್‌ಗಳನ್ನು ಬಿಡುವ ದಿನಾಂಕ : 20-03-2026. 2) ಪ್ರಿಬಿಡ್ ಮೀಟಿಂಗ್ ದಿ:23-03-2026 ಬೆಳ್ಳಿಗೆ 11:30ಕ್ಕೆ ಆಡಳಿತ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಲಿಂಗಸುಗೂರು. 3) ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 02-04-2026, 04:30 ಸಾಯಂಕಾಲ ವರೆಗೆ 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06-04-2026, 04:30 ಸಾಯಂಕಾಲ ಒಳಗಡೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ:16-04-2026, 04:30 ಸಾಯಂಕಾಲ ಒಳಗಡೆ (ಸಾಧ್ಯವಾದಲ್ಲಿ)ಅಥವಾ ತಾಂತ್ರಿಕ ಬಿಡ್-ಗಳಿಗೆ ಅನುಮೋದನೆ ದೊರೆತ ನಂತರ ತೆರೆಯಲಾಗುತ್ತದೆ.

ಇ.ಎಂ.ಡಿ. ಹಾಗೂ ಇ-ಟೆಂಡರ್ ಪ್ರೊಸೆಸಿಂಗ್ ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಎಕ್ಸಿಸ್ ಬ್ಯಾಂಕಿನಲ್ಲಿ ಹೊಂದಿರುವ ಕರ್ನಾಟಕ ಸರಕಾರ ಸೆಂಟ್ರಲ್ ಪೂಲಿಂಗ್ ಅಕೌಂಟಿನ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವ ಯಾವುದಾದರೊಂದು ಮಾದರಿಯಲ್ಲಿ ಸಂದಾಯ ಮಾಡುವುದು.

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ, ಸಮಿತಿ ಕಛೇರಿ ವೇಳೆಯಲ್ಲಿ ಅಥವಾ http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080-22485867 ಮತ್ತು ಕಾರ್ಯದರ್ಶಿ, ಕೃ.ಉ.ಮಾ.ಸ, ಲಿಂಗಸುಗೂರು ಸಹಾಯವಾಣಿ 08537-257382 ರವರಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ, ಕೃಉಮಾಸ ಲಿಂಗಸುಗೂರು | DIP/RCR/776/KSMC&A/779/2025-26 | ಸಹಿ/- ಅಧ್ಯಕ್ಷರು, ಕೃಉಮಾಸ ಲಿಂಗಸುಗೂರು

CHANGE OF NAME

I, YASHODA SHANKAR K.B. W/O SHANKAR T.D(New name) Previously Called as YASHODA SHANKAR (OldName) 59 years, Residing #300, 19th Cross, 1st Main BDA Layout Kengeri Upanagi 2nd Stage Kengeri Bangalore Karnataka-560060, have changed my name as YASHODA SHANKAR K.B. on Dated:04.03.2026 sworn before Notary Manjula jangam Hence forth all my transactions & dealings will be in my new name YASHODA SHANKAR K.B.

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ ಕ: 08382-220556 E-mail: predkarwar@gmail.com

ಪಂರಾಇಂವಿ/ಕಾರವಾರ/ಹೊಗು/ಇ-ಟೆಂಡರ್/2025-26/58 ದಿನಾಂಕ: 18.03.2026

ಇ-ಟೆಂಡರ್ ಪ್ರಕಟಣೆ

ಉತ್ತರ ಕನ್ನಡ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮತ್ತು ಉಪ-ವಿಭಾಗಗಳಲ್ಲಿ ಖಾಲಿ ಇರುವ ಕಂಪ್ಯೂಟರ್ ಆಪರೇಟರ್, ಗ್ರೂಪ್ 'ಡಿ' ಹಾಗೂ ವಾಹನ ಚಾಲಕ ಖಾಲಿ ಇರುವ ಹುದ್ದೆಗಳಲ್ಲಿ ಒಟ್ಟು 18 ಸಿಬ್ಬಂದಿಗಳ ಸೇವೆಯನ್ನು ದಿನಾಂಕ: 01.04.2026 ರಿಂದ 11 ತಿಂಗಳ ಅವಧಿಗೆ ಹೊರಗುತ್ತಿಗೆಯ ವಿಷಯದ ಮುಖಾಂತರ ಪಡೆಯಲು ಇ-ಟೆಂಡರ್ ಕರೆಯಲಾಗಿದ್ದು, ಆಸಕ್ತ ಟೆಂಡರ್‌ದಾರರು ದಿನಾಂಕ: 26.03.2026 ರ ಸಂಜೆ 04.00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. ಟೆಂಡರ್ ನಮೂನೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ವಿಳಾಸ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

(1) ಟೆಂಡರ್ ಪ್ರಕಟಣೆ ದಿನಾಂಕ: 18.03.2026 (2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: ರೂ. 54.88 ಲಕ್ಷ (3) ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 26.03.2026 ಸಂಜೆ 04.00 ಗಂಟೆ (4) ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಹಾಕಿರುವ ಟೆಂಡರ್ ತೆರೆಯುವ ದಿನಾಂಕ: 27.03.2026 ಸಂಜೆ 05.30 ಗಂಟೆಗೆ (5) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ: ರೂ. 10000.00

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/1231/ 25-26 dt. 20.03.2026

ನಗರಸಭೆ ಕಾರ್ಯಾಲಯ ಚಿಕ್ಕಬಳ್ಳಾಪುರ

ವೆಬ್‌ಸೈಟ್:www.chikkaballapurcity.gov.in, ಇ-ಮೇಲ್: itstaff_ulb_chickballapur@yahoo.co.in, ದೂರವಾಣಿ: 08156-275557, ಫ್ಯಾಕ್ಸ್: 08156-274742

ಸಂಖ್ಯೆ: ನ.ಸ.ಚಿ/ಶಾ.ಪಾ.ಗಿ.ಆರ್/ಟಿಂ-32/2025-26 ದಿನಾಂಕ : 10.03.2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರಂತೆ 2025-26ನೇ ಸಾಲಿನ ನಗರಸಭಾ ನಿಧಿಯಲ್ಲಿ, 2025-26ನೇ ಸಾಲಿನ 15ನೇ ಹಣಕಾಸು ಮತ್ತು ಡಲ್ಪ್ ಯೋಜನೆಗಳ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ/ ಸರಬರಾಜುದಾರರಿಂದ ಟೆಂಡರ್‌ಗಳನ್ನು (ಇ-ಪ್ರೊಕ್ಯೂರ್‌ಮೆಂಟ್-2.0) ಆಹ್ವಾನಿಸಲಾಗಿದೆ. ವೆಬ್‌ಸೈಟ್ https:kppp.karnataka.gov.in ಮೂಲಕ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಟೆಂಡರ್ ಸ್ವೀಕೃತಿ ಮತ್ತು ತೆರೆಯುವ ದಿನಾಂಕಗಳ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಂತೆ ಇರುತ್ತದೆ. ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವತ್ರಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ಕೆಲಸದ ದಿನಗಳನ್ನು ಪರಿಗಣಿಸಲಾಗುವುದು. ಇಂಡೆಂಟ್ ಸಂಖ್ಯೆ ವಿವರ

(1) DMA/2025-26/IND5138/CALL-2 (2) DMA/2025-26/IND5139/CALL-2 (3) DMA/2025-26/IND5140/CALL-2 (4) DMA/2025-26/IND5980/CALL-2 (5) DMA/2025-26/IND5983/CALL-2 (6) DMA/2025-26/ IND5981/CALL-2 (7) DMA/2025-26/IND5708/CALL-2 (8) DMA/2024-25/OW/WORK_INDENT36014/CALL-3

ಸಹಿ/- ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ

ವಾಸಾಸಂ/ಚಿಕ್ಕಬಳ್ಳಾಪುರ/ಆರ್.ಟಿ.ಸಂಖ್ಯೆ502/ಕೆಎಸ್ಎಂಸಿಎ/2025-26

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ-580 005

ಸಂಖ್ಯೆ:ಆ.ಅ/ಕೃವಿಧಾ/2025-26 | ದಿನಾಂಕ: 20.03.2026

ಆಸಕ್ತಿ ಅಭಿವ್ಯಕ್ತ ಪಡಿಸುವುದು (ದ್ವಿತೀಯ ಕರೆ)

ನಿಖರ ಠೇವಣಿಗಳ ಆಸಕ್ತಿ ಅಭಿವ್ಯಕ್ತ ಪಡಿಸುವುದಕ್ಕಾಗಿ ಕೃಷಿ ವಿಶ್ವವಿದ್ಯಾಲಯ, ಧಾರವಾಡವು ಕೆ.ಪಿ-1 ರಂತೆ ಇ-ಟೆಂಡರ್ ಮೂಲಕ ವಿಜಯಪುರ ನಗರ ವ್ಯಾಪ್ತಿಯಲ್ಲಿ ಶಾಖೆಯನ್ನು ಹೊಂದಿರುವಂತಹ ಸಾರ್ವಜನಿಕ ವಲಯದ ಬ್ಯಾಂಕುಗಳು/ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಹಾಗೂ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಕೋರಲಾಗಿದೆ. ಫಾರ್ಮ್ ಮತ್ತು ಷರತ್ತುಗಳ ಸಂಗ್ರಹ, ವಿಜಯಪುರದ ಇದರ ಅವರ್ತ ನಿಧಿಯ ಹೆಚ್ಚುವರಿ ಹಣ ಸುಮಾರು ರೂ.1.5 ಕೋಟಿಗಳು ಅಲ್ಪಾವಧಿ ಠೇವಣಿಗಾಗಿ ಲಭ್ಯವಿರುವುದು. ವಿವರವಾದ ಅಧಿಸೂಚನೆ ಮತ್ತು ಅರ್ಹತೆಗಳನ್ನು ತಿಳಿದುಕೊಳ್ಳಲು ವೆಬ್ ಸೈಟ್ https://kppp.karnataka.gov.in. ನ್ನು ನೋಡುವುದು.

ಟೆಂಡರ್ ವೇಳಾಪಟ್ಟಿ

1	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	27.03.2026 ಸಾಯಂಕಾಲ 04.00 ಘಂಟೆ
2	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	28.03.2026 ಸಾಯಂಕಾಲ 04.15 ಘಂಟೆ

ಆಸಕ್ತ ಬ್ಯಾಂಕುಗಳು ಇ-ಟೆಂಡರ್ ಪೋರ್ಟಲ್ ಮೂಲಕ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-23010900 ಯನ್ನು ಸಂಪರ್ಕಿಸಬಹುದು. ಬ್ಯಾಂಕುಗಳು ಈ ಟೆಂಡರ್‌ಗೆ ತಿದ್ದುಪಡಿ/ಹೊಂದಿಕೆ ಅಥವಾ ಇನ್ನಿತರೆ ತಿಳಿದುಕೊಳ್ಳಲು ಸದಾ ವೆಬ್ ಸೈಟ್ https://kppp.karnataka.gov.in. ನ್ನು ನೋಡುವುದು. ವಿಶ್ವವಿದ್ಯಾಲಯವು ಯಾವುದೇ ಸಮಯದಲ್ಲಿ ಟೆಂಡರ್ ಮುಂದುವರಿಸುವ ಅಥವಾ ರದ್ದು ಪಡಿಸುವ ಕುರಿತು ಅಂತಿಮ ಅಧಿಕಾರವನ್ನು ಹೊಂದಿರುವುದು. ವಿಶ್ವವಿದ್ಯಾಲಯವು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

ಸಹಿ/- ಆಸ್ತಿ ಅಧಿಕಾರಿಗಳು

ವಾ.ಸಾ.ಇ./ಧಾರವಾಡ/1376/2025-26/ಜಿಲ್ಲಾವಾರ್ತಾಇಲಾಖೆ

PUBLIC NOTICE

I, Sri. A.S. Chandrashekar, S/o Late Siddappa, aged about 67 years, R/o 2nd Cross Road, Kumbara beedi, Basavanahalli, Chikkamagalur. Aadhar No.**** **** 9068 have availed loan from State Bank of India, Hosmane branch, by pledging the below mentioned property documents. The documents have been laminated. So this is brought to general public that any objection/ grievances regarding these documents or its authentication can approach the below mentioned branch manager within 15 days from the date of this publication.

TYPE OF DOCUMENT

1. Sale Deed dated 10-12-1959 which is registered as document No. 2378/59-60 of S.R., Chikkamagaluru executed by Smt. Lakshmamma and others in favour of Sri.K.Achutha Prabhu.
2. Sale Deed dated 8-5-1949 registered as document No. 1840/48-49 of S.R., Chikkamagaluru executed by Sri. Annappa Setty in favour of Sri. Keshava Prabhu.
3. Sale Deed dated 16-10-1947 registered as document No. 382/47-48 of S.R., Chikkamagaluru executed by Sri. Syed Abdul Khader in favour of Sri. Dasappa Shetty.
4. Sale Deed dated 18-3-1946 registered as document No. 1213 of S.R., Chikkamagaluru executed by Sri. B. Venkata Narasimha Naidu in favour of Sri. Syed Abdul Khader.
5. Sale Deed dated 18-6-1942 registered as document No. 1780/41-42 of S.R., Chikkamagaluru executed by Smt. Kulsambi in favour of Sri. Keshava Prabhu

DESCRIPTION OF THE PROPERTY

All that pieces and parcels of the residential house situated at No. 127, 3rd A Main Road, South Block, Ward No. 28, within the limits of Chikkamagaluru Municipality.

PID No: 28-1-505-127
Assessment No: 14853/9889
Measurement: East West 7.010414 mtrs X North South 17.068834 mtrs
Total Measurement: 119.659064
Plinth Area: 116.12875
Ground Floor: 116.128750 Mangalore Tiled house
Bounded by:- East by: PID No. 28-1-505-125 West by: Road
North by: Road South by: PID No. 28-1-504-96

Branch address: **State Bank of India, Hosmane Extension Branch, Chikkamagalur.**

Place: Chikkamagaluru | Date: 20.03.2026

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590002

ದೂರವಾಣಿ: 0831-2407207/2407212, ಇ-ಮೇಲ್ ವಿಳಾಸ: dsadmbgm@gmail.com

ಟೆಂಡರ್ ಪ್ರಕಟಣೆ (4ನೇ ಕರೆ)

ಬೆಳಗಾವಿ ಜಿಲ್ಲೆಯ ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಪೂರೈಸುವ ಸಲುವಾಗಿ.

ಉಪ ಕಾರ್ಯದರ್ಶಿಗಳು (ಆಡಳಿತ), ಜಿಲ್ಲಾ ಪಂಚಾಯತ ಬೆಳಗಾವಿ ಇವರು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ಮೂಲಕ ಬೆಳಗಾವಿ ಜಿಲ್ಲೆಯ 477 ಗ್ರಾಮ ಪಂಚಾಯತ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಪೂರೈಸಲು ಅರ್ಹ ಬಿಡ್‌ದಾರರಿಂದ ತಾಂತ್ರಿಕ ಮತ್ತು ವಾಣಿಜ್ಯ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ಸಿದ್ಧರಿರುವ ನಿರೀಕ್ಷಿತ ಬಿಡ್‌ದಾರರು ಅಗತ್ಯವಾಗಿ ಮೇಲೆ ತಿಳಿಸಿದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.

ಟೆಂಡರ್ ವೇಳಾಪಟ್ಟಿ

1	ಟೆಂಡರ್ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ (4ನೇ ಕರೆ)	ಸಂ./ಜಿಪಂಬೆ/ಆಡಳಿತ/ಗ್ರಂಥಾಲಯ/ವಿಡಿ-43/ 2024-25 ದಿನಾಂಕ: 19.02.2026
2	ಅಂದಾಜು ಬಿಡ್ ಮೌಲ್ಯ	ರೂ. 477 ಲಕ್ಷಗಳು
3	ಟೆಂಡರ್ ಡಾಕ್ಯುಮೆಂಟ್ ಡೌನ್‌ಲೋಡ್ ಮಾಡಲು ಲಭ್ಯವಾಗುವ ಮತ್ತು ಟೆಂಡರ್ ಪ್ರಾರಂಭದ ದಿನಾಂಕ	ದಿನಾಂಕ: 18.03.2026
4	ಬಿಡ್ ಪೂರ್ವ ಸಭೆ	ದಿನಾಂಕ: 24.03.2026 ಸಮಯ: 11.00 ಪೂರ್ವಾಹ್ನ @ ಜಿಲ್ಲಾ ಪಂಚಾಯತ ಕಚೇರಿ, ಬೆಳಗಾವಿ
5	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 02.04.2026 ಸಮಯ: 05.00 ಅಪರಾಹ್ನ
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 04.04.2026 ಸಮಯ: 11.00 ಪೂರ್ವಾಹ್ನ
7	ಮಾದರಿಗಳನ್ನು ಸಲ್ಲಿಸಲು ತಾತ್ಕಾಲಿಕ ದಿನಾಂಕ ಮತ್ತು ಸಮಯ	ದಿನಾಂಕ: 06.04.2026 ಸಮಯ: 11.00 ಪೂರ್ವಾಹ್ನ @ ಜಿಲ್ಲಾ ಪಂಚಾಯತ ಕಚೇರಿ, ಬೆಳಗಾವಿ
8	ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ ದಿನಾಂಕ ಮತ್ತು ಸಮಯ	ದಿನಾಂಕ: 10.04.2026 ಸಮಯ: 11.00 ಪೂರ್ವಾಹ್ನ
9	ಇಎಂಡಿ ಮೊತ್ತ ಶೇ. 1.5% (ಎಲ್ಲ ಬಿಡ್‌ದಾರರಿಗೆ ಕಡ್ಡಾಯ)	ರೂ. 7,15,500/-

ಈ ಟೆಂಡರ್‌ನಲ್ಲಿ ಭಾಗವಹಿಸಲು ನಿರೀಕ್ಷಿತ ಪೂರೈಕೆದಾರರು https://kppp.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡುವ ಮೂಲಕ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು. ಯಾವುದೇ ಟೆಂಡರ್ ಸ್ಪಷ್ಟೀಕರಣಕ್ಕಾಗಿ ಮೊಬೈಲ್ ಸಂಖ್ಯೆ: 9480854001 & e-mail: dsadmbgm@gmail.com ಸಂಪರ್ಕಿಸಬಹುದು.

ಸಹಿ/- ಉಪಕಾರ್ಯದರ್ಶಿಗಳು (ಆಡಳಿತ), ಜಿಲ್ಲಾ ಪಂಚಾಯತ ಬೆಳಗಾವಿ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ | ಸಹಿ/- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಮತ್ತು ಟೆಂಡರ್ ಅನುಮೋದನೆ ಪ್ರಾಧಿಕಾರ

ವಾ.ಸಾ.ಇ/ಬೆಳಗಾವಿ/2127/ಜಿಲ್ಲಾವಾರ್ತಾ/25-26

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಕ್ರಮಾಂಕ: ಶಿಮಪಾ/ಪಿ/ವಿ/ಕಾಅ/ಆರ್/385/2025-26 ದಿ: 09.02.2026

ದರಪಟ್ಟಿ ಪ್ರಕಟಣೆ

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ- 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ದರಪಟ್ಟಿ ಆಹ್ವಾನಿಸಲಾಗಿದ್ದು ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಕಡ್ಡಾಯವಾಗಿ ನೋಂದಣಿ ಪಡೆದಿರಬೇಕು ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಕ್ರ.ಸಂ. 01. ಕಾಮಗಾರಿಯ ವಿವರ : Discovery of rates for Conversion of E Toilets into Conventional Toilets at various locations in Shivamogga City Corporation Limits (DMA/2025- 26/OW/WORK_INDENT56501) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 23-03-2026 5.00 PM ಟೆಂಡರ್ ತೆರೆಯುವ ದಿನಾಂಕ : 24-03-2026 5.30 PM

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ) ಮಹಾನಗರ ಪಾಲಿಕೆ, ಶಿವಮೊಗ್ಗ

ವಾ.ಸಾ.ಸಂ.ಇ/ಶಿಎಂಎ/ಶಿ/25-26/114/03/2042

ಕಡೂರು ಹಿರಿಯ ಸಿವಿಲ್ ಜಡ್ಜ್ ರವರ ನ್ಯಾಯಾಲಯದಲ್ಲಿ, ಕಡೂರು

ಅಸಲು ದಾವಾ ನಂ : 67/2023

ವಾದಿ: ಕರ್ನಾಟಕ ಬ್ಯಾಂಕ್, ಅಂತರಗಟ್ಟೆ ಶಾಖೆ.

ವಿರುದ್ಧ

ಪ್ರತಿವಾದಿಗಳು : ಚನ್ನಬಸಪ್ಪ ಮತ್ತು ಇತರರು.

1ನೇ ಪ್ರತಿವಾದಿಯ ವಾರಸುದಾರರು : (ಎ)ನಾಗರಾಜಪ್ಪ ಬಿನ್ ಲೇಟ್ ಚನ್ನಬಸಪ್ಪ 58 ವರ್ಷ, (ಬಿ) ಬಸವರಾಜಪ್ಪ ಬಿನ್ ಲೇಟ್ ಚನ್ನಬಸಪ್ಪ 50 ವರ್ಷ, (ಸಿ)ಚಂದ್ರಪ್ಪ ಬಿನ್ ಲೇಟ್ ಚನ್ನಬಸಪ್ಪ 45 ವರ್ಷ, ಎಲ್ಲರೂ ದಾಸೇನಹಳ್ಳಿ ಗ್ರಾಮದ ವಾಸಿಗಳು, ಸಾಣೇಹಳ್ಳಿ ಅಂಚೆ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ,

ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ ವಾದಿಗಳು ಮೇಲ್ಕಂಡ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವೆಯಲ್ಲಿ ನಮೂದು ಮಾಡಿರುವ ಬಾಕಿ ಹಣ ಮತ್ತು ಅದರ ಮೇಲಿನ ಬಡ್ಡಿಯನ್ನು ವಸೂಲು ಮಾಡುವ ಬಗ್ಗೆ ದಾವೆ ಸಲ್ಲಿಸಿರುತ್ತಾರೆ. ಸದರಿ ಕೇಸಿನ 1ನೇ ಪ್ರತಿವಾದಿಯಾದ ಚನ್ನಬಸಪ್ಪ ಇವರು ಮರಣ ಹೊಂದಿದ್ದು ಅವರ ವಾರಸುದಾರರುಗಳನ್ನು ನೀವುಗಳು ಇದ್ದು, ನಿಮ್ಮನ್ನು ದಾವೆಯಲ್ಲಿ 1ನೇ ಪ್ರತಿವಾದಿಯ ವಾರಸುದಾರರನ್ನಾಗಿ ಸೇರ್ಪಡೆ ಮಾಡಲು ವಾದಿಯು ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಮಧ್ಯಂತರ ಅರ್ಜಿಯ ನ್ಯಾಯಾಲಯವು ನಿಮ್ಮುಗಳಿಗೆ ನೋಟೀಸು ಜಾರಿ ಮಾಡಲು ಆದೇಶ ಮಾಡಿದ್ದು, ಆದರೆ ನೀವುಗಳು ಸದರಿ ಮಧ್ಯಂತರ ಅರ್ಜಿಯ ಮೇಲಿನ ನೋಟೀಸನ್ನು ಪಡೆದುಕೊಳ್ಳದೇ ಇದ್ದು, ನೀವು ಸದರಿ ವಿಳಾಸದಲ್ಲಿ ವಾಸವಾಗಿದ್ದರೂ ಸಹ ನೋಟೀಸು ಪಡೆದುಕೊಳ್ಳಲು ನಿರಾಕರಿಸುತ್ತಿರುವ ದಾವೆಯು ತೀರ್ಮಾನಿಸಿದ್ದು ಈ ಪ್ರಕಟಣೆಯ ಮೂಲಕ ನಿಮಗೆ ತಿಳಿಸುವುದೇನೆಂದರೆ, ಸದರಿ ಕೇಸು ದಿನಾಂಕ:28-04-2026 ಕ್ಕೆ ಹಿಯರಿಂಗ್ ಇದ್ದು ಆ ದಿವಸ ನೀವು ನ್ಯಾಯಾಲಯದ ಮುಂದೆ ಬೆಳಗ್ಗೆ 11 ಗಂಟೆಗೆ ಹಾಜರಾಗಲು ತಿಳಿಸಿದೆ, ತಪ್ಪಿದ್ದಲ್ಲಿ ಸದರಿ ಮಧ್ಯಂತರ ಅರ್ಜಿಯ ಮೇಲಿನ ನೋಟೀಸು ನಿಮ್ಮ ಮೇಲೆ ಜಾರಿಯಾಗಿದೆ ಎಂದು ತೀರ್ಮಾನಿಸಿಕೊಂಡು ಮುಂದಿನ ಕ್ರಮ ವಹಿಸಲು ವಾದಿಗೆ ಸೂಚಿಸಲಾಗುವುದೆಂದು ಈ ಪ್ರಕಟಣೆಯ ಮೂಲಕ ತಿಳಿಯಪಡಿಸಲಾಗಿದೆ. ಈ ಪ್ರಕಟಣೆಯನ್ನು ಈ ದಿವಸ ದಿನಾಂಕ:18-03-2026 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲ್ಪಟ್ಟಿರುತ್ತದೆ.

ವೈ.ಸಿ.ಪ್ರಕಾಶ್ ವಾದಿಗಳ ಪರ ವಕೀಲರು ಕಡೂರು ದಿನಾಂಕ:21-02-2026 | ನ್ಯಾಯಾಲಯದ ಆಜ್ಞೆಯ ಮೇರೆಗೆ ಸಹಿ/-ಶಿರಸ್ತೇದಾರರು, ಹಿರಿಯ ಸಿವಿಲ್ ಜಡ್ಜ್ ರವರ ನ್ಯಾಯಾಲಯ, ಕಡೂರು

ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯಡಿಯೂರು ವಿಭಾಗ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ, 4ನೇ ಅಡ್ಡರಸ್ತೆ, ಜಯನಗರ 7ನೇ ಬ್ಲಾಕ್ ಪಶ್ಚಿಮ ಬೆಂಗಳೂರು-560070

ಸಂಖ್ಯೆ:ಕಾ.ಪಾ.ಅ.(ಯ.ವಿ.)/ಟೆಂಡರ್/03/2025-26 | ದಿನಾಂಕ:20-03-2026

ಟೆಂಡರ್ ತಿದ್ದುಪಡಿ ಪ್ರಕಟಣೆ-2

ವಿಷಯ: ಟೆಂಡರ್ ಪ್ರಕಟಣೆಯನ್ನು ತಿದ್ದುಪಡಿ ಮಾಡುವ ಬಗ್ಗೆ.

ಉಲ್ಲೇಖ:1) ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: ಕಾ.ಪಾ.ಅ.(ಯ.ವಿ.)/ಟೆಂಡರ್/03/2025-26 ದಿನಾಂಕ: 04-02-2026

2) ಈ ಕಚೇರಿಯ ಟೆಂಡರ್ ತಿದ್ದುಪಡಿ ಪ್ರಕಟಣೆ-1 ರ ಸಂಖ್ಯೆ: ಕಾ.ಪಾ.ಅ.(ಯ.ವಿ.)/ಟೆಂಡರ್/03/2025-26 ದಿನಾಂಕ: 21-02-2026

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಈ ಕಚೇರಿಯಿಂದ ದಿನಾಂಕ: 04-02-2026 ರಂದು ಟೆಂಡರ್ ಪ್ರಕಟಣೆ ಸಂಖ್ಯೆ: ಕಾ.ಪಾ.ಅ.(ಯ.ವಿ.)/ಟೆಂಡರ್/03/2025-26 ರಂತೆ ಟೆಂಡರ್ ಕರೆಯಲಾಗಿದ್ದು, ಸದರಿ ಪ್ರಕಟಣೆಯಲ್ಲಿ ತಿಳಿಸಲಾದ ಷೆಡ್ಯೂಲ್ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಮುಂದೂಡಲಾಗಿದೆ. ಉಳಿದಂತೆ ಪ್ರಕಟಣೆಯಲ್ಲಿರುವ ಟೆಂಡರ್ ನಿಯಮಗಳಲ್ಲಿ ಬದಲಾವಣೆ ಇರುವುದಿಲ್ಲ.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 23-03-2026ರ ಸಂಜೆ 4:30 ಗಂಟೆಯವರೆಗೆ ಡೌನ್‌ಲೋಡ್ ಮಾಡಬಹುದು. (2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 06-04-2026ರ ಸಂಜೆ 4:00 ಗಂಟೆಯವರೆಗೆ (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 26-03-2026ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ದಾಖಲೆಗಳನ್ನು, ದಿನಾಂಕ: 07-04-2026ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ ತೆರೆಯುವಿಕೆ ದಿನಾಂಕವನ್ನು ಕೆಪಿಪಿ ಪೋರ್ಟಲ್ ಮೂಲಕ ತಿಳಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಯಡಿಯೂರು ವಿಭಾಗ, ಬೆಂ.ಪ.ನ.ಪಾಲಿಕೆ

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Diganta Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.

ಕಿರುಸುದ್ದಿ

ಒಲಿಂಪಿಕ್ಸ್ ವಿಜೇತೆ ಮಣಿಸಿದ 13 ಹರೆಯದ ಯು-ಝಿದಿ

• **ಹೊಸದಿಲ್ಲಿ:** ವಿಶ್ವವೇ ನಿಬ್ಬೆರಗಾಗಿ ರೋಮಾಂಚನ ಗೊಳ್ಳುವಂತೆ ಚೀನಾದ 13 ವರ್ಷದ ಈಜುಗಾರ್ತಿ ಯು-ಝಿದಿ ಅವಳಿ ಒಲಿಂಪಿಕ್ ಪದಕ ವಿಜೇತೆ ರೇಗಾನ್ ಸ್ಮಿತ್ ಅವರನ್ನು ಸೋಲಿಸಿದರು. ಶೆನ್ಜೆನ್‌ನಲ್ಲಿ ನಡೆದ ಮಹಿಳೆಯರ 200 ಮೀ. ಬಟರ್‌ಫ್ಲೈ ಕೂಟದಲ್ಲಿ ವೈಯಕ್ತಿಕ ಅತ್ಯುತ್ತಮ ದಾಖಲೆಯೊಂದಿಗೆ ಈ ದಾಖಲೆ ಮಾಡಿದರು. ಕಳೆದ ಬೇಸಿಗೆಯಲ್ಲಿ ಬಾಲಕಿ ಯು 12 ನೇ ವಯಸ್ಸಿನಲ್ಲಿ ಈಜು ವಿಶ್ವ ಚಾಂಪಿಯನ್ ಶಿಪ್ ಇತಿಹಾಸದಲ್ಲಿ



ಅತ್ಯಂತ ಕಿರಿಯ ಪದಕ ವಿಜೇತೆ ಎಂಬ ಹೆಗ್ಗಳಿಕೆಗೆ ಪಾತ್ರಳಾಗುವ ಮೂಲಕ ಜಾಗತಿಕ ಸುದ್ದಿಯಾಗಿದ್ದರು. ಗುರುವಾರ ನಡೆದ ಚೀನಾ ಓಪನ್‌ನಲ್ಲಿ, 200 ಮೀಟರ್ ಫ್ಲೈನಲ್ಲಿ 2 ನಿಮಿಷ 05.71 ಸೆಕೆಂಡುಗಳಲ್ಲಿ ಗುರಿ ತಲುಪಿ, ಅಮೆರಿಕದ ಸ್ಮಿತ್ ಅವರನ್ನು ಮತ್ತೊಂದು ಗಮನಾರ್ಹ ಪ್ರದರ್ಶನದಲ್ಲಿ ಎರಡನೇ ಸ್ಥಾನಕ್ಕೆ ತಳ್ಳಿದರು. ಅವರ ಸಮಯವು ಯು ಅವರನ್ನು ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ವೇದಿಕೆಯ ಮೇಲೆ ಇರಿಸುತ್ತಿತ್ತು. ಪ್ಯಾರಿಸ್ 2024 ರ ಒಲಿಂಪಿಕ್ಸ್‌ನಲ್ಲಿ ಕೆನಡಾದ ಸಮ್ಮರ್ ಮೆಕಿಂತೋಷ್ ಅವರ ಹಿಂದೆ ಸ್ಮಿತ್ ಬೆಳ್ಳಿ ಪದಕ ಗೆದ್ದರು 24 ವರ್ಷದ ಸ್ಮಿತ್ ಒಟ್ಟು ಎಂಟು ಒಲಿಂಪಿಕ್ ಪದಕಗಳನ್ನು ಗೆದ್ದಿದ್ದಾರೆ, ಅವುಗಳಲ್ಲಿ ಎರಡು ಚಿನ್ನ. ದಕ್ಷಿಣ ನಗರವಾದ ಶೆನ್ಜೆನ್‌ನಲ್ಲಿ ನಡೆಯುವ ಚೀನಾ ಓಪನ್ ಚೀನಾ ಮತ್ತು ಅಂತರರಾಷ್ಟ್ರೀಯ ತಾರೆಗಳ ಪ್ರಬಲ ಕ್ಷೇತ್ರವನ್ನು ಆಕರ್ಷಿಸಿದೆ. ಯು ಐದು ಸ್ಪರ್ಧೆಗಳಲ್ಲಿ ಸ್ಪರ್ಧಿಸಲಿದ್ದಾರೆ.

ಭಾರತದಲ್ಲಿ ವಿಶ್ವ ಒಳಾಂಗಣ ಅಥ್ಲೆಟಿಕ್ಸ್

• **ಹೊಸದಿಲ್ಲಿ:** ವಿಶ್ವ ಇಂಡೋರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕ್ರೀಡಾಕೂಟವು ಭಾರತದಲ್ಲೇ ನಡೆಯುವುದು ಖಚಿತವಾಗಿದೆ. ಭುವನೇಶ್ವರದಲ್ಲಿ ಈ ಕೂಟ ನಡೆಸುವುದಕ್ಕೆ ಸಿದ್ಧತೆ ನಡೆಸಲಾಗಿದೆ ಎಂದು ರಾಷ್ಟ್ರೀಯ ಅಥ್ಲೆಟಿಕ್ಸ್ ಸಂಸ್ಥೆ ಗುರುವಾರ ತಿಳಿಸಿದೆ. ಪೋಲ್ಯಾಂಡಿನ ತೋರನ್‌ನಲ್ಲಿ ನಡೆದಿದ್ದ ಬಿಡ್ಡಿಂಗ್ ಕಾರ್ಯಕ್ರಮದಲ್ಲಿ ಭಾರತ ಹೋಸ್ಟಿಂಗ್ ರೈಟ್ಸ್ ಗೆದ್ದುಕೊಂಡಿದೆ. 2032ರ ಒಲಿಂಪಿಕ್ಸ್ ಆಯೋಜನೆಯಲ್ಲಿ ಆತಿಥ್ಯ ಪ್ರಮುಖವಾಗಿರಲಿದೆ. ಈ ಹಿಂದೆಯೇ ಅಥ್ಲೆಟಿಕ್ಸ್ ಸಂಸ್ಥೆ ಬಿಡ್ ಸಲ್ಲಿಸಿರುವ ಬಗ್ಗೆ ಹೇಳಿತ್ತು. ಭುವನೇಶ್ವರದ ಕಾಳಿಂಗ ಕ್ರೀಡಾಂಗಣವನ್ನು ವಿಶ್ವ ಅಥ್ಲೆಟಿಕ್ಸ್ ಸಂಸ್ಥೆಯ ಅಧಿಕಾರಿಗಳು ಪರಿಶೀಲನೆ ನಡೆಸಿರುವ ನಂತರ ಈ ಬಗ್ಗೆ ಘೋಷಣೆಯಾಗಿದೆ. ಇದೇ ಮೊದಲ ಬಾರಿಗೆ ಭಾರತ ದೊಡ್ಡ ಆತಿಥ್ಯ ವಹಿಸುತ್ತಿದೆ. ಇದರೊಂದಿಗೆ ಭಾರತ ಈ ಕೂಟವನ್ನು ಆಯೋಜಿಸಲಿರುವ ಏಷ್ಯಾದ ನಾಲ್ಕನೇ ರಾಷ್ಟ್ರವಾಗಲಿದೆ. ಜಪಾನ್ ಈ ಕೂಟವನ್ನು ಆಯೋಜಿಸಿದ್ದ ಮೊದಲ ಏಷ್ಯನ್ ರಾಷ್ಟ್ರವಾಗಿತ್ತು.

ಯುದ್ಧದ ಬಿಸಿ: ಪ್ಯಾಲೆಸ್ತೀನ್ ಫುಟ್‌ಬಾಲ್ ಪಂದ್ಯ ರದ್ದು

• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದ ಹಿನ್ನೆಲೆಯಲ್ಲಿ ಪ್ಯಾಲೆಸ್ತೀನ್ ರಾಷ್ಟ್ರೀಯ ಫುಟ್‌ಬಾಲ್ ತಂಡದ ಸ್ನೇಹಪೂರ್ಣ ಪಂದ್ಯಗಳು ರದ್ದುಗೊಂಡಿವೆ. ಪ್ಯಾಲೆಸ್ತೀನ್ ತಂಡವು ಈ ತಿಂಗಳ ಕೊನೆಯಲ್ಲಿ ಮೊರೊಕ್ಕೊದಲ್ಲಿ ಮೌರಿಟಾನಿಯಾ ಮತ್ತು ಬೆನಿನ್ ವಿರುದ್ಧ ಪಂದ್ಯಗಳನ್ನು ಆಡಬೇಕಾಗಿತ್ತು. ಆದರೆ ಪ್ರಸ್ತುತ ಪರಿಸ್ಥಿತಿಗಳಿಂದಾಗಿ ಈ ಪಂದ್ಯಗಳನ್ನು ರದ್ದುಪಡಿಸಲಾಗಿದೆ ಎಂದು ಪ್ಯಾಲೆಸ್ತೀನ್ ಫುಟ್‌ಬಾಲ್ ಸಂಘ ತಿಳಿಸಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಇರಾನ್ ಮೇಲಿನ ದಾಳಿಗಳ ನಂತರ, ಪ್ರದೇಶದಲ್ಲಿ ವ್ಯಾಪಕ ಪ್ರಯಾಣ ವ್ಯತ್ಯಯ ಉಂಟಾಗಿದೆ. ಹಲವಾರು ಪ್ರಮುಖ ಗಲ್ಫ್ ಟ್ರಾನ್ಸಿಟ್ ಕೇಂದ್ರಗಳಲ್ಲಿ ವಿಮಾನ ಸಂಚಾರಕ್ಕೆ ತೊಂದರೆ ಉಂಟಾಗಿದ್ದು, ಭದ್ರತಾ ಕಾರಣಗಳಿಂದ ಕೆಲವು ವಿಮಾನ ನಿಲ್ದಾಣಗಳನ್ನು ಮುಚ್ಚಲಾಗಿದೆ.ಕೋಚ್ ಇಹಾಬ್ ಅಬು ಜಜಾರ್ ನೇತೃತ್ವದ ತಂಡ ಮಾರ್ಚ್ 27ರಂದು ಬೆನಿನ್ ವಿರುದ್ಧ ಮತ್ತು ನಾಲ್ಕು ದಿನಗಳ ಬಳಿಕ ಮೌರಿಟಾನಿಯಾ ವಿರುದ್ಧ ಆಡಬೇಕಾಗಿತ್ತು. ಈ ಪಂದ್ಯಗಳು 2027ರ ಏಷ್ಯನ್ ಕಪ್‌ಗೆ ಸಿದ್ಧತೆಯ ಭಾಗವಾಗಿದ್ದವು. ಈ ಟೂರ್ನಿಯನ್ನು ಸೌದಿ ಅರೇಬಿಯಾದಲ್ಲಿ ಆಯೋಜಿಸಲಾಗುತ್ತಿದೆ. ಮೊರೊಕ್ಕೊದಲ್ಲಿ ಆಯೋಜಿಸಲಾದ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ ಎಂದು ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

ಚಿನ್ನಸ್ವಾಮಿಯಲ್ಲಿ ಕ್ರಿಕೆಟ್ | ಹೊಸ ನಿಯಮ | ಮೆಟ್ರೋ ಉಚಿತ, ಪ್ರವೇಶ-ನಿರ್ಗಮನ ದ್ವಾರಗಳ ನವೀಕರಣ

ಅಭಿಮಾನಿಗಳಿಗೆ ಹೊಸ ಮಾರ್ಗಸೂಚಿ

• **ಬೆಂಗಳೂರು:** ಮುಂದಿನ ವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಉದ್ಘಾಟನಾ ಪಂದ್ಯಕ್ಕೆ ಬೆಂಗಳೂರು ಸಜ್ಜುಗೊಳ್ಳುತ್ತಿದೆ. ಸುಮಾರು 8 ತಿಂಗಳ ಮಟ್ಟಿಗೆ ನಿಂತಿದ್ದ ಕ್ರಿಕೆಟ್ ಮತ್ತೊಮ್ಮೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೊಳಗಲು ಅಣಿಯಾಗಿದೆ.

ಪಂದ್ಯಕ್ಕೆ ಒಂದು ವಾರ ಉಳಿದಿರುವಂತೆ ಸಕಲ ಸಿದ್ಧತೆಗಳು ನಡೆಯುತ್ತಿದ್ದು, ಶುಕ್ರವಾರದಂದು ಅಭಿಮಾನಿಗಳಿಗೆ ಪಂದ್ಯದ ಟಿಕೆಟ್, ಪಾರ್ಕಿಂಗ್ ಮತ್ತು ನೂತನ ಪ್ರವೇಶ-ನಿರ್ಗಮಿಸುವ ಗೇಟುಗಳ ಮಾರ್ಗಸೂಚಿಯನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪ್ರಕಟಿಸಿದೆ. ಮೆಟ್ರೋ ಜತೆಗೆ ಬೆಂಗಳೂರು ತಂಡ ಟೈ-ಅಪ್ ಮಾಡಿಕೊಂಡಿದ್ದು ಪಂದ್ಯದ ಟಿಕೆಟ್ ಇರುವವರಿಗೆ ಉಚಿತ ಮೆಟ್ರೋ ಸೇವೆ ಕೂಡ ಲಭ್ಯವಿದೆ ಎಂದು ಆರ್‌ಸಿಬಿ ಅಧಿಕೃತ ಘೋಷಣೆ ಮಾಡಿದೆ.

ವಾಹನ ದಟ್ಟಣೆ ನಿಯಂತ್ರಣ: ಪಂದ್ಯಗಳು ನಡೆಯುವ ಹಂತದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಹತ್ತಿರ ವಾಹನ ದಟ್ಟಣೆ ಆಗದಂತೆನೋಡಿಕೊಳ್ಳುವನಿಟ್ಟಿನಲ್ಲಿಹೊಸಮಾರ್ಗಸೂಚಿಯನ್ನು ನೀಡಲಾಗಿದೆ. ಮುಖ್ಯವಾಗಿ ಅಭಿಮಾನಿಗಳಿಗೆ ಮೆಟ್ರೋ ಅಥವಾ ಸಾರ್ವಜನಿಕ ವಾಹನಗಳನ್ನು ಬಳಸಿಕೊಳ್ಳಲು ಸಲಹೆ ನೀಡಿರುವ ಕೆಎಸ್‌ಸಿಎ, ಬೆಂಗಳೂರು ಪೊಲೀಸ್ ಮತ್ತು ಬೆಂಗಳೂರು ಫ್ರಾಂಚೈಸಿ ವಾಹನ ದಟ್ಟಣೆಗೆ ವಿವಿಧ ಕ್ರಮಗಳನ್ನೂ ಕೂಡ ಜರುಗಿಸಿದೆ. ಇದೇ ವಿಭಾಗದಲ್ಲಿ ಮೆಟ್ರೋದೊಂದಿಗೆ ಟೈ-ಅಪ್ ಮಾಡಿಕೊಂಡಿದ್ದು, ಪಂದ್ಯದ ವೇಳೆ ಟಿಕೆಟ್ ಪಡೆದವರಿಗೆ ಕ್ರೀಡಾಂಗಣದವರೆಗೂ ಉಚಿತ ಮೆಟ್ರೋ ಸೇವೆ ಒದಗಿಸುವ ಬಗ್ಗೆ ಘೋಷಣೆಯಾಗಿದೆ.

ಕಾರ್ಯನಿರ್ವಹಿಸುವುದು ಹೇಗೆ?: ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಹೋಗಲು ಎರಡು ಪ್ರಮುಖ ಮೆಟ್ರೋ ನಿಲ್ದಾಣಗಳಿವೆ. ಎಮ್‌ಜಿ ರೋಡ್ ಮತ್ತು ಕಬ್ಬನ್ ಪಾರ್ಕ್. ಪ್ರತಿಷ್ಠಿತ ಪಂದ್ಯದ ಟಿಕೆಟ್ ಖರೀದಿಸುವ ಅಭಿಮಾನಿಗಳಿಗೆ ಪಂದ್ಯದ ವೇಳೆ ಈ ಎರಡೂ ನಿಲ್ದಾಣಕ್ಕೆ ಉಚಿತ ಪ್ರಯಾಣ ಒದಗಿಸಲಾಗುವುದು. ವೆಬ್‌ಸೈಟ್‌ನಲ್ಲಿ ಖರೀಸಿರುವ ಟಿಕೆಟಿನಲ್ಲಿ ಎರಡು ಬಾರ್‌ಕೋಡ್‌ಗಳಿರುತ್ತವೆ. ಪಂದ್ಯದ ಟಿಕೆಟ್ ಎಂಬ ಆಯ್ಕೆಯ ಪಕ್ಕದಲ್ಲೇ ಮೆಟ್ರೋ ಟಿಕೆಟ್ ಅನ್ನುವ ಆಯ್ಕೆಯನ್ನೂ ನೀಡಲಾಗಿದೆ. ಇದರ ಮೇಲೆ ಕ್ಲಿಕ್ ಮಾಡಿಕೊಂಡರೆ, ಅಭಿಮಾನಿಗಳು ಉಚಿತ ಮೆಟ್ರೋ ಟಿಕೆಟ್ ಪಡೆದುಕೊಳ್ಳಲಿದ್ದಾರೆ.

ಕ್ವೀನ್ಸ್ ರೋಡ್ ಮೂಲಕ ಪ್ರವೇಶ ಬಂದ್: ಕಬ್ಬನ್ ಪಾರ್ಕ್ ರೋಡ್ ಹಾಗೂ ಲಿಂಗ್ ರೋಡ್‌ನಿಂದ ಮಾತ್ರ ಪ್ರವೇಶ ಪಡೆಯಬಹುದು. ಇನ್ನುಮುಂದೆ ಕ್ವೀನ್ಸ್ ರೋಡ್ ಮೂಲಕ ಪ್ರವೇಶ ಪಡೆಯುವ ಹಾಗಿಲ್ಲ ಎಂಬುದು ಖಚಿತವಾಗಿದೆ. ಒಟ್ಟು 18 ಗೇಟುಗಳ ಮೂಲಕ ಮೈದಾನದೊಳಗೆ ಹೋಗಬಹುದು. ಆದರೆ ಕ್ವೀನ್ಸ್ ರೋಡ್ ಮೂಲಕ ಪ್ರವೇಶ ರದ್ದುಗೊಳಿಸಲಾಗಿದೆ. ಸ್ಟ್ಯಾಂಡ್‌ಗಳಿಗೆ ಹೋಗಲು ಹೆಚ್ಚಿನ ಒಳಗೇಟ್‌ಗಳನ್ನು ಅಳವಡಿಸಲಾಗಿದೆ.

ವೆಬ್‌ಸೈಟ್‌ನಲ್ಲಿ ಮಾತ್ರ ಟಿಕೆಟ್ ಲಭ್ಯ: ಪ್ರಮುಖ ವಿಚಾರದಲ್ಲಿ ಆರ್‌ಸಿಬಿ ಕೇವಲ ಫ್ರಾಂಚೈಸಿ ವೆಬ್‌ಸೈಟ್‌ನಲ್ಲಿ ಮಾತ್ರ ಟಿಕೆಟ್ ಸಿಗಲಿದ್ದು, ಯಾವುದೇ ಕಾರಣಕ್ಕೂ ವಂಚನೆಗೆ ಒಳಗಾಗದಿರಿ ಎಂಬ ಕಿವಿಮಾತು ಹೇಳಿದೆ. ಅಧಿಕೃತ ವೆಬ್‌ಸೈಟ್ SHOP.ROYALCHALLENGER.COM ನಲ್ಲಿ ಮಾತ್ರ ಅಸಲು ಟಿಕೆಟ್‌ಗಳು ಸಿಗಲಿವೆ. ಆ ಟಿಕೆಟ್‌ಗಳು ಮೆಟ್ರೋದೊಂದಿಗೆ ಲಿಂಕ್ ಹೊಂದಿದ್ದು, ಮೆಟ್ರೋ ಟಿಕೆಟ್ ಕೂಡ ಅದರಲ್ಲಿ ಲಭ್ಯ ಎಂದು ಆರ್‌ಸಿಬಿ ತಿಳಿಸಿದೆ.

ಪರಿಶೀಲನೆ ಮುಕ್ತಾಯ: ಚಿನ್ನಸ್ವಾಮಿ ಕ್ರೀಡಾಂಗಣವು ಪಂದ್ಯದ ಸಂಭ್ರಮಕ್ಕೆ ಸಜ್ಜಾಗುತ್ತಿರುವ ಬೆನ್ನಲ್ಲೇ, ನಗರ ಪೊಲೀಸರು ಹಾಗೂ ಕೆಎಸ್‌ಸಿಎ ಜಂಟಿಯಾಗಿ ಭದ್ರತಾ ವ್ಯವಸ್ಥೆಯನ್ನು ರೂಪಿಸಿವೆ. ಪಂದ್ಯದ ವೇಳೆ ಯಾವುದೇ ಸಣ್ಣ ಲೋಪಕ್ಕೂ ಅವಕಾಶ ನೀಡಬಾರದೆಂಬ ಉದ್ದೇಶದಿಂದ ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಪ್ರಮುಖ ಭಾಗೀದಾರರು ಕ್ರೀಡಾಂಗಣದಲ್ಲಿ ಖುದ್ದಾಗಿ ಭೇಟಿ ನೀಡಿ ಸಕಲ ಸಿದ್ಧತೆಗಳನ್ನು ಪರಿಶೀಲನೆ ನಡೆಸಿದ್ದಾರೆ. ಭದ್ರತಾ ಸಿಬ್ಬಂದಿಯ ನಿಯೋಜನೆ, ಹೈಟೆಕ್ ಕಣ್ಗಾವಲು ಮತ್ತು ತುರ್ತು ಪರಿಸ್ಥಿತಿಗಳನ್ನು ಎದುರಿಸುವ ತಂತ್ರಗಳ ಬಗ್ಗೆ ಹಿರಿಯ ಅಧಿಕಾರಿಗಳು ಚರ್ಚೆನಡೆಸಿದ್ದಾರೆ. ಕ್ರೀಡಾಂಗಣದ ಸುತ್ತಮುತ್ತಲಿನ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ವಿಶೇಷ ಸಂಚಾರ ವ್ಯತ್ಯಯ ಯೋಜನೆಗಳನ್ನು ರೂಪಿಸಲಾಗಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ತಾಂತ್ರಿಕ ತಂಡಗಳು ಸಿಸಿಟಿವಿ ಕ್ಯಾಮೆರಾಗಳ ಮೂಲಕ ಪ್ರತಿ ಚಲನವಲನದ ಮೇಲೆ ಹದ್ದಿನ ಕಣ್ಣಿಡಲು ಸನ್ನದ್ಧವಾಗಿವೆ.



ಪಾರ್ಕಿಂಗ್ ವ್ಯವಸ್ಥೆ

- ಗರುಡ ಮಾಲ್
- ಸೆಂಟ್ ಜೋಸೆಫ್ ಇಂಡಿಯನ್ ಶಾಲೆ
- ಸೆಂಟ್ ಜೋಸೆಫ್ ಪುರುಷರ ಪ್ರೌಢ ಶಾಲೆ
- ಫ್ರೀಡಂ ಪಾರ್ಕ್

ವಿಶೇಷ ಪಾರ್ಕಿಂಗ್ ವ್ಯವಸ್ಥೆ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಪಾರ್ಕಿಂಗ್ ಸಮಸ್ಯೆ ಮೊದಲಿನಿಂದಲೂ ಎದುರಿಸುತ್ತಲೇ ಬಂದಿತ್ತು. ಪಂದ್ಯ ಶುರುವಾಗುವ ಮೊದಲು ಮತ್ತು ಮುಗಿದ ನಂತರ ಕ್ರೀಡಾಂಗಣದ ಸುತ್ತಲೂ ಭಾರೀ ವಾಹನ ದಟ್ಟಣೆಯಾಗುತ್ತಿತ್ತು. ಈ ಸಮಸ್ಯೆಯ ಪರಿಹಾರವಾಗಿ ಹೊಸ ಪಾರ್ಕಿಂಗ್ ವ್ಯವಸ್ಥೆ ಬಗ್ಗೆಯೂ ಆರ್‌ಸಿಬಿ ಅಭಿಮಾನಿಗಳಿಗೆ ನೀಡಿದೆ. ಕ್ರೀಡಾಂಗಣದ ಸಮಿಪ ನಾಲ್ಕು ಕಡೆ ಪಾರ್ಕಿಂಗ್ ಮಾಡಬಹುದಾಗಿ ತಿಳಿಸಿದೆ. ಪಾರ್ಕಿಂಗ್‌ಗಾಗಿ ಪ್ರೀ ಬುಕ್ಕಿಂಗ್ ಕೂಡ ಆನ್‌ಲೈನ್‌ನಲ್ಲಿ ಇರಿಸುವುದಾಗಿ ಆರ್‌ಸಿಬಿ ತಿಳಿಸಿದೆ. ಪಾರ್ಕಿಂಗ್ ಮಾಡುವ ಅಭಿಮಾನಿಗಳಿಗೆ ಕ್ರೀಡಾಂಗಣದವರೆಗೂ ಬಸ್ ವ್ಯವಸ್ಥೆ ಕೂಡ ಇರಲಿದೆ.

ತುರ್ತು ವಾಹನಕ್ಕೆ ಬೇರೆ ಗೇಟ್

ಕೆಲವು ಗೇಟ್‌ಗಳನ್ನು ಆಂಬ್ಯುಲೆನ್ಸ್, ಅಗ್ನಿಶಾಮಕ ವಾಹನ ಸೇರಿದಂತೆ ತುರ್ತು ವಾಹನಗಳಿಗೆ ಮಾತ್ರ ಪ್ರವೇಶಕ್ಕಾಗಿ ವಿಶೇಷ ಗೇಟ್‌ಗಳನ್ನು ಸ್ಥಾಪಿಸಲಾಗಿದೆ. ಇವುಗಳಿಗಾಗಿ ಕ್ರೀಡಾಂಗಣದ ಒಳಗೆ ಪ್ರತ್ಯೇಕ ಗೇಟ್‌ಗಳನ್ನು ಮೀಸಲಿಡಲಾಗಿದೆ.

ಅನ್‌ಬಾಕ್ಸಿಂಗ್ ರದ್ದು?

ಪ್ರತಿ ವರ್ಷ ನಡೆಯುವ ಆರ್‌ಸಿಬಿ ಜೆರ್ಸಿ ಅನಾವರಣ ಕಾರ್ಯಕ್ರಮ ಈ ಬಾರಿ ರದ್ದಾಗುವ ಸಾಧ್ಯತೆಯಿದೆ. ಪಂದ್ಯಾವಳಿಗೆ ಕೆಲವೇ ದಿನಗಳು ಉಳಿದರೂ ಈ ಬಗ್ಗೆ ಘೋಷಣೆಯಾಗಿಲ್ಲ. ಕನಿಷ್ಠ ಪಕ್ಷ ದಿನಾಂಕವೂ ನಿಗದಿಯಾಗಿಲ್ಲ. ಉದ್ಘಾಟನಾ ಸಮಾರಂಭ ಬೆಂಗಳೂರಲ್ಲೇ ನಡೆಯಬೇಕಿದೆ. ಇದಕ್ಕೂ ಮುನ್ನ ಅಂತಹ ದೊಡ್ಡ ಕಾರ್ಯಕ್ರಮ ನಡೆಯುವುದು ಅನುಮಾನ ಎಂದು ವರದಿಯಾಗಿವೆ.

ಮುಂದಿನ ವರ್ಷ ಟೇಬಲ್ ಟೆನಿಸ್ ಡಬಲ್ಸ್ ವಿಶ್ವಕಪ್

• **ಹೊಸದಿಲ್ಲಿ:** ಹೊಚ್ಚಹೊಸ ಟೇಬಲ್ ಟೆನಿಸ್ ಡಬಲ್ಸ್ ವಿಶ್ವಕಪ್ ಪಂದ್ಯಾವಳಿ ಯನ್ನು ಮುಂದಿನ ವರ್ಷ ಪರಿಚಯಿಸಲು ಅಂತಾ ರಾಷ್ಟ್ರೀಯ ಟೇಬಲ್ ಟೆನಿಸ್ ಸಂಸ್ಥೆ ಮುಂದಾಗಿದೆ. ಶುಕ್ರವಾರ ಈ ಬಗ್ಗೆ ಘೋಷಣೆ ಯಾಗಿದ್ದು ಮೊದಲ ಆವೃತ್ತಿ 2027ರಲ್ಲಿ ನಡೆಯಲಿದೆ. ಡಬಲ್ಸ್‌ಗಳಿಗಾಗಿಯೇ ಮಾಡ ಲಾಗುವ ಈ ಕೂಟದಲ್ಲಿ ಮಹಿಳೆಯರ ಮತ್ತು ಪುರುಷರ ವಿಭಾಗ ಇರಲಿವೆ. ಸಿಂಗಲ್ಸ್ ಪಂದ್ಯಗಳು ನಡೆಯುವುದಿಲ್ಲ.

2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೂ ಮುನ್ನ ವಿಶ್ವಕಪ್ ನಡೆಯುತ್ತಿರುವುದು ಜೋಡಿ ಟಿಟಿ ಆಟಗಾರರಿಗೆ ಭರವಸೆ ಮೂಡಿಸಿದೆ. ಸದ್ಯ ಜಾರಿಯಲ್ಲಿರುವ ಐಟಿಟಿಎಫ್ ವಿಶ್ವಕಪ್ ಕೇವಲ



ಸಿಂಗಲ್ಸ್‌ಗೆ ಮಾತ್ರ ಸೀಮಿತವಾಗಿತ್ತು. ಡಬಲ್ಸ್ ಹಾಗೂ ಮಿಶ್ರ ವಿಶ್ವಕಪ್ ಈ ರಚನೆಯನ್ನು ಪೂರ್ಣಗೊಳಿಸುತ್ತದೆ. 2004ರ ಅಥೇನ್ಸ್ ಒಲಿಂಪಿಕ್ಸ್ ನಂತರ ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಡಬಲ್ಸ್ ಪಂದ್ಯಗಳು ಮರಳಿವೆ. ಟಿಟಿ ವಿಭಾಗದಲ್ಲಿ ಸಿಂಗಲ್ಸ್ ಪಂದ್ಯಗಳು ಮಾತ್ರ ನಡೆಯುತ್ತಿದ್ದವು. 2020ರ ಟೋಕಿಯೊ ಒಲಿಂಪಿಕ್ಸ್ ಸಮಯ ದಲ್ಲಿ ಮಿಶ್ರ ಡಬಲ್ಸ್ ವಿಭಾಗವನ್ನು ಸೇರಿಸ ಲಾಯಿತು. ಇದೀಗ 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ನಲ್ಲಿ ಮಹಿಳೆಯರ ಹಾಗೂ ಪುರುಷರ ಡಬಲ್ಸ್ ವಿಭಾಗವನ್ನು ಮೊದಲ ಬಾರಿಗೆ ಸೇರಿಸಲಾಗಿದೆ. ಈ ಬಗ್ಗೆ ಘೋಷಣೆ ಮಾಡುತ್ತಾ, ಅಂತಾ ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ ಅಧ್ಯಕ್ಷೆ ಪೆಟ್ರಾ ಸೋರ್ಲಿಂಗ್ ಅವರು ಮಾತನಾಡುತ್ತಾ, ಒಲಿಂಪಿಕ್ಸ್‌ನಲ್ಲಿ ಡಬಲ್ಸ್ ವಿಭಾಗವನ್ನು ಈ ಬಾರಿ ಮತ್ತೆ ಸೇರಿಸಲಾಗುತ್ತಿರುವುದು ಖುಷಿಯ ವಿಚಾರ. ಈ ತಯಾರಿ ಮತ್ತು ಸಂಭ್ರಮಾಚರಣೆ ಯನ್ನು ಐಟಿಟಿಎಫ್ ವಿಶ್ವಕಪ್ ಮೂಲಕ ಶುರು ಮಾಡುತ್ತೇವೆ ಎಂದರು. 100 ವರ್ಷದ ಟೇಬಲ್ ಟೆನಿಸ್ ಸಂಭ್ರಮಾಚರಣೆ ಮಾಡುವುದಲ್ಲದೆ ನಾವು ಮುಂದಿನ 100 ವರ್ಷಕ್ಕೆ ಸಿದ್ಧತೆಗಳನ್ನು ನಡೆಸಿದ್ದೇವೆ ಎಂದಿದ್ದಾರೆ.

ಆರಂಭಿಕ ಪಂದ್ಯಗಳಿಗೆ ಸ್ಟಾರ್ಕ್ ಕೂಡ ಅಲಭ್ಯ

• **ಮುಂಬೈ:** ವೇಗಿ ಮಿಚೆಲ್ ಸ್ಟಾರ್ಕ್, ಲೋಕಿ ಫರ್ಗುಸನ್, ಸ್ಯಾಮ್ ಕರ್‍ರನ್ ಸೇರಿದಂತೆ ಪ್ರಮುಖ ಆಟಗಾರರು ಐಪಿಎಲ್‌ಗೆ ಅಲಭ್ಯರಾಗಿದ್ದಾರೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯು ಮಾರ್ಚ್ 28ರಿಂದ ಶುರುವಾಗಲಿದೆ. ಆಸ್ಟ್ರೇಲಿಯಾ ವೇಗಿ ಜೋಷ್ ಹ್ಯಾಜೆಲ್ವುಡ್, ಪ್ಯಾಟ್ ಕಮ್ಮಿನ್ಸ್ ಅಲಭ್ಯರಿರುವುದು ಈ ಹಿಂದೆ ಖಚಿತವಾಗಿತ್ತು. ಇದೀಗ ಮಿಚೆಲ್ ಸ್ಟಾರ್ಕ್ ಕೂಡ ಒಂದಿಷ್ಟು ಪಂದ್ಯಗಳಿಗೆ ಲಭ್ಯರಿಲ್ಲ ಎಂಬ ಮಾಹಿತಿ ಹೊರಬಿದ್ದಿದೆ. ವರ್ಕ್ ಲೋಡ್ ಹೆಚ್ಚಳ ಬೆನ್ನಲ್ಲೇ ಒಂದಿಷ್ಟು ಪಂದ್ಯಗಳಿಗೆ ಸ್ಟಾರ್ಕ್ ಲಭ್ಯರಿಲ್ಲ, ಪಂಜಾಬ್ ವೇಗಿ ವೈಯಕ್ತಿಕ ಕಾರಣಗಳಿಂದ ಅಲಭ್ಯರಾಗಿದ್ದಾರೆ. ರಾಜಸ್ಥಾನಕ್ಕೆ ಟ್ರೇಡ್ ಆಗಿರುವ ಸ್ಯಾಮ್ ಕರ್‍ರನ್ ಗಾಯದಿಂದಾಗಿ ಹಿನ್ನಡೆ ಅನುಭವಿಸಿದ್ದಾರೆ. ಮುಂಬೈನ ಅಥರ್ವಾ ಅಂಕೋಲಾ, ಲಖನೌ ತಂಡದ ಜೋಶ್ ಇಂಗ್ಲಿಸ್, ಚೆನ್ನೈ ತಂಡದ ನಾಥನ್ ಎಲ್ಲಿಸ್ ಕೂಡ ಅಲಭ್ಯರಿದ್ದಾರೆಂದು ಹೇಳಲಾಗುತ್ತಿದೆ. ಎರಡನೇ ಹಂತದ ವೇಳಾ ಪಟ್ಟಿ ಪ್ರಕಟವಾದ ನಂತರ ಮುಂದಿನ ಪಂದ್ಯಗಳಿಗೆ ಲಭ್ಯತೆ ಬಗ್ಗೆ ಮಾಹಿತಿ ಹೊರಬರಲಿದೆ.

ಅ.29ರಿಂದ ಯೂಥ್ ಕಾಮನ್‌ವೆಲ್ತ್


• **ಹೊಸದಿಲ್ಲಿ:** ಕಾಮನ್‌ವೆಲ್ತ್ ಯುವ ಕ್ರೀಡಾ ಕೂಟದ ಎಂಟನೇ ಆವೃತ್ತಿ ಮುಂದಿನ ವರ್ಷ ಅಕ್ಟೋಬರ್ 29ರಿಂದ ನವೆಂಬರ್ 4ರವರೆಗೆ ಮಾಲ್ಟಾ ಮತ್ತು ಗೊಜೊದಲ್ಲಿ ನಡೆಯಲಿದೆ. ಅಕ್ಟೋಬರ್ 29ರಂದು ಉದ್ಘಾಟನಾ ಸಮಾರಂಭ ನಡೆಯಲಿದ್ದು, ಅಕ್ಟೋಬರ್ 30ರಿಂದ ನವೆಂಬರ್ 4ರವರೆಗೆ ಆರು ದಿನಗಳ ಕ್ರೀಡಾ ಕಾರ್ಯಕ್ರಮಗಳು ನಡೆಯಲಿವೆ ಎಂದು ಘೋಷಣೆಯಾಗಿದೆ.

ಈ ಕ್ರೀಡಾಕೂಟದಲ್ಲಿ ಈಜು ಮತ್ತು ಪ್ಯಾರಾ ಈಜು, ಅಥ್ಲೆಟಿಕ್ಸ್ ಮತ್ತು ಪ್ಯಾರಾ ಅಥ್ಲೆಟಿಕ್ಸ್, ನೆಟ್ಬಾಲ್, ಸೇಲಿಂಗ್, ಸ್ಕ್ವ್ಯಾಷ್, ಟ್ರೈಥ್ಲಾನ್, ವಾಟರ್ ಪೋಲೊ ಮತ್ತು ವೇಟ್‌ಲಿಫ್ಟಿಂಗ್ ಸೇರಿ ಒಟ್ಟು ಎಂಟು ಕ್ರೀಡೆಗಳು ಇರಲಿವೆ. ಕಾಮನ್ ವೆಲ್ತ್ ಸ್ಪೋರ್ಟ್ ಮುಖ್ಯ ಕಾರ್ಯನಿರ್ವಾಹಕ ಕೇಟಿ ಸಾಡ್ಲೈರ್ ಅವರು ಪ್ರಕಟಣೆಯಲ್ಲಿ, ಮಾಲ್ಟಾ 2027 ಯುವ ಕ್ರೀಡಾಕೂಟವು ಉತ್ಸಾಹಭರಿತ ಮತ್ತು ಸ್ಪರ್ಧಾತ್ಮಕ ವಾತಾವರಣವನ್ನು ಒದಗಿಸಲಿದೆ. ವಿಶ್ವಮಟ್ಟದ ಸೌಲಭ್ಯಗಳು ಯುವ ಆಟಗಾರರಿಗೆ ಹೊಸ ಅನುಭವವನ್ನು ನೀಡಲಿವೆ ಮತ್ತು ಭವಿಷ್ಯದ ತಾರೆಗಳನ್ನು ಬೆಳೆಸಲು ಸಹಾಯ ಮಾಡಲಿವೆ ಎಂದು ತಿಳಿಸಿದ್ದಾರೆ. ಈ ಬಾರಿ ಕ್ರೀಡಾಕೂಟದಲ್ಲಿ ಇತಿಹಾಸದಲ್ಲೇ ಅತಿ ದೊಡ್ಡ ಪ್ಯಾರಾ ಕ್ರೀಡಾ ಕಾರ್ಯಕ್ರಮ ಇರಲಿದೆ. 2023ರಲ್ಲಿ ಟ್ರಿನಿಡಾಡ್ ಮತ್ತು ಟೊಬಾಗೋದಲ್ಲಿ ನಡೆದ ಕ್ರೀಡಾಕೂಟದಲ್ಲಿ ಪ್ಯಾರಾ ಅಥ್ಲೆಟಿಕ್ಸ್ ಸೇರಿಸಿದ ಬಳಿಕ ಇದನ್ನು ಇನ್ನಷ್ಟು ವಿಸ್ತರಿಸಲಾಗಿದೆ. ಇದೇ ವೇಳೆ, ಈ ಬಾರಿ ಸೇಲಿಂಗ್ ಮತ್ತು ವಾಟರ್ ಪೋಲೊ ಮೊದಲ ಬಾರಿಗೆ ಕಾಮನ್ ವೆಲ್ತ್ ಯುವಕ್ರೀಡಾಕೂಟದಲ್ಲಿ ಪರಿಚಯವಾಗುತ್ತಿವೆ. ಸುಮಾರು 14ರಿಂದ 18 ವರ್ಷದ ವಯಸ್ಸಿನ 1200ಕ್ಕೂ ಹೆಚ್ಚು ಆಟಗಾರರು ಕಾಮನ್‌ವೆಲ್ತ್‌ನ 74 ರಾಷ್ಟ್ರಗಳು ಮತ್ತು ಪ್ರದೇಶಗಳಿಂದ ಭಾಗವಹಿಸುವ ನಿರೀಕ್ಷೆಯಿದೆ.

ಕ್ರೀಡಾಕೂಟದ ಪ್ರಮುಖ ಸ್ಥಳಗಳು: ಕಾಟೋನೆರಾ ಇಂಡೋರ್ ಪೂಲ್, ತಲ್-ಕ್ರೋಕ್ ರಾಷ್ಟ್ರೀಯ ಪೂಲ್, ಮಾರ್ಸಾ ಅಥ್ಲೆಟಿಕ್ಸ್ ಸ್ಟೇಡಿಯಂ, ಮಾರ್ಸಾ ಸ್ಪೋರ್ಟ್ಸ್ ಸೆಂಟರ್, ಮೆಲ್ಲಿಹಾ ಬೇ, ಗೊಜೊ ಇಂಡೋರ್ ಸ್ಪೋರ್ಟ್ಸ್ ಪೆವಿಲಿಯನ್, ಮಾರ್ಸಲ್‌ಫೋರ್ನ್ ಬೇ.

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ



5929

5928 ಉತ್ತರ

ಎಡದಿಂದ ಬಲಕ್ಕೆ:
1.ಭವಪಾಶ 3.ಭದ್ರಗಜ
5.ರಜಕ 7.ತಹನಾಮೆ
9.ನರಕುಲ 11.ಬಾಕಿದಾರ
14.ಹರಿಹರ 16.ಸಕಲ
17.ಬೇರುಬಿಡು
18.ಒಳಸುಳಿ
ಮೇಲಿನಿಂದ ಕೆಳಕ್ಕೆ :
2.ವನರುಹ 4.ಗಡಿಯಾರ
5.ರಮೆ 6.ಕಲ 8.ನಾರದಾ
10.ಕುತ್ತರಿ 12.ಕಿಡಿಕಾರು
13.ರಸ 14.ಹಲ
15.ಹವಣಿಸು

ಎಡದಿಂದ ಬಲಕ್ಕೆ
1.ಹಿಂದೂಗಳ ಪ್ರಸಿದ್ಧ ಧರ್ಮಗ್ರಂಥ (5)
3.ಕುಕ್ಕು-ತಿವಿಯುವಿಕೆ (3)
5.ಈತ ಹಣದೊಡತಿಯ ಪತಿ (3)
6.ನನ್ನ ಕುಲ ಕೇಳಿದ ಪಾಂಡವ (3)
8.ಈತ ಆಕೃತಿಗಳನ್ನು ಬರೆಯುವವನು (3)
9.ಅಕ್ಷರ ವಿದ್ಯೆ ಗೊತ್ತಿರುವವನು (3)
13.ಕಣ ಕಡೆಯಲ್ಲಿ ತಿರುಗಿ ಪ್ರಾಯದ ಹೋರಿಯಾಯ್ತು (3)
15.ತಳದ ನಡುವೆ ಹೊಂಗೆಯ ಮರವಿದೆ (3)
16.ನಮ್ಮವನು ನನಗೆ ಮಾಡಿದ ವಂದನೆ (3)
17.ನೈದಿಲೆಗಳಿಂದ ಕೂಡಿದ ಸರೋವರ (5)

ಮೇಲಿನಿಂದ ಕೆಳಕ್ಕೆ
1.ಕುಂಭವನ್ನವನು ಇಟ್ಟದ್ದು ದೊಡ್ಡ ಕಟ್ಟಡದಲ್ಲಿ (3)
2.ಅಲ್ಲಿಗೆ ಹೋಗು ಎಂಬರ್ಥದ ಶಬ್ದ (3)
3.ಕುನು ಲಲಿತೆಗೆ ಕೇಳಿದ ಕ್ಷೇಮ ಸಮಾಚಾರ (3)
4.ಕಾರ-ಚಾಕು ಇರುವ ಹೀನವಾದ ನಡತೆ (5)
7.ಕೆಟ್ಟ ಹಂಚಿಕೆ-ಕುಟಿಲೋಪಾಯವಿದು (3)
8.ಯಾವಾಗಲೂ ಹೊಸದರಂತಿರುವುದು (5)
10.ಕ್ಷಣದ ನಡುವೆ ಇರುವ ಬೌದ್ಧಭಿಕ್ಷು (3)
11.ವೇಗದಿಂದ ಬಂದ ತನಯ ಪಡೆದ ಸಂಬಳ (3)
12.ಸೂರ್ಯ-ದೀಪಗಳ ಪ್ರಕಾಶವಿದು (3)
14.ವಿಠೋಬನ ಕರದಲ್ಲಿರುವ ಕಠಿಣವಾದುದು (3)

ಜಲ ಸುರಕ್ಷತೆ: ನೀರಿಗಾಗಿ ಜನಾಂದೋಲ ರೂಪಿಸೋಣ

▸ ಸಿ. ಆರ್. ಪಾಟೀಲ್, ಕೇಂದ್ರ ಜಲಶಕ್ತಿ ಸಚಿವ



ಮಾ. 22ರಂದು ನಾವು 'ವಿಶ್ವ ಜಲ ದಿನ'ವನ್ನು ಆಚರಿಸುತ್ತೇವೆ. ದೇಶದಸಮಸ್ತ ನಾಗರಿಕರಿಗೂ ಇದರ ಶುಭಾಶಯಗಳು. ನೀರು ಬದುಕಿನಲ್ಲಿ ಎಷ್ಟು ಮುಖ್ಯ ಮತ್ತು ಭವಿಷ್ಯದ ಪೀಳಿಗೆಗಾಗಿ ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ ಎಂಬ ಸಂಗತಿಯನ್ನು ಈ ದಿನ ನಮಗೆ ನೆನಪಿಸುತ್ತದೆ.

ನಮ್ಮ ಜೀವ ಸಂಕುಲ, ಪರಿಸರ ಮತ್ತು ದೇಶದ ಆರ್ಥಿಕತೆಗೆ ನೀರೇ ಆಧಾರ. ಆದರೆ, ಈ ಅಮೂಲ್ಯ ಸಂಪನ್ಮೂಲದ ಮೇಲೆ ಒತ್ತಡ ಹೆಚ್ಚುತ್ತಿದೆ. ಜಗತ್ತಿನ ಒಟ್ಟು ಜನಸಂಖ್ಯೆ ಮತ್ತು ಜಾನುವಾರುಗಳಲ್ಲಿ ಶೇ. 18ರಷ್ಟು ಭಾರತದಲ್ಲಿದ್ದರೂ, ನಮ್ಮಲ್ಲಿರುವ ಸಿಹಿನೀರಿನ ಪ್ರಮಾಣ ಕೇವಲ ಶೇ. 4ರಷ್ಟು ಮಾತ್ರ. ವೇಗವಾಗಿ ಬೆಳೆಯುತ್ತಿರುವ ನಗರಗಳು, ಹೆಚ್ಚುತ್ತಿರುವ ನೀರಿನ ಬೇಡಿಕೆ ಮತ್ತು ಹವಾಮಾನ ಬದಲಾವಣೆಯ ಸವಾಲುಗಳ ನಡುವೆ, ನೀರಿನ ಸಮರ್ಥ ನಿರ್ವಹಣೆ ಮಾಡುವುದು ನಮ್ಮ ರಾಷ್ಟ್ರೀಯ ಆದ್ಯತೆಯಾಗಿದೆ.

ಈ ಸವಾಲನ್ನು ಸಮರ್ಥವಾಗಿ ಎದುರಿಸಲು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತವು ನೀರಿಗಾಗಿ ಒಂದು ಸಮಗ್ರ ಆಡಳಿತ ನೀತಿ ಅಳವಡಿಸಿಕೊಂಡಿದೆ. ಇದಕ್ಕಾಗಿಯೇ 'ಜಲಶಕ್ತಿ ಸಚಿವಾಲಯ'ವನ್ನು ಸ್ಥಾಪಿಸಿ, ನೀರಿನ ನಿರ್ವಹಣೆಗೆ ಸಂಬಂಧಿಸಿದ ವಿವಿಧ ವಿಭಾಗಗಳನ್ನು ಒಂದೇ ಸೂರಿನಡಿ ತರಲಾಗಿದೆ. ಇದು ನೀರಿನ ಯೋಜನೆಗಳನ್ನು ರೂಪಿಸುವಲ್ಲಿ ಒಂದು ದೊಡ್ಡ ಬದಲಾವಣೆಯನ್ನು ತಂದಿದ್ದು, ಸಮಗ್ರವಾದ ಯೋಜನೆಯತ್ತ ನಾವೀಗ ಸಾಗುತ್ತಿದ್ದೇವೆ.

ಈ ವಿಧಾನವು ನೀರಿನ ಸಂಪೂರ್ಣ ಚಕ್ರದ ಮೇಲೆ ಗಮನ ಹರಿಸುತ್ತದೆ. ಅಂದರೆ, ನೀರಿನ ಸಂರಕ್ಷಣೆ ಮತ್ತು ಅಂತರ್ಜಲ ಮರುಪೂರಣ ಮಾಡುವುದು; ಅಣೆಕಟ್ಟು ಹಾಗೂ ಜಲಾಶಯಗಳ ಮೂಲಕ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸುವುದು; ನದಿ ಜೋಡಣೆಯ ಮೂಲಕ ಎಲ್ಲ ಪ್ರದೇಶಗಳಿಗೂ ಸಮಾನವಾಗಿ ನೀರನ್ನು ಹಂಚುವುದು; 'ಜಲ ಜೀವನ್ ಮಿಷನ್' ಮತ್ತು ಆಧುನಿಕ ನೀರಾವರಿ ಯೋಜನೆಗಳ ಮೂಲಕ ಎಲ್ಲರಿಗೂ ನೀರು ತಲುಪಿಸುವುದು. 'ನಮಾಮಿ ಗಂಗೆ'ಯಂತಹ ಕಾರ್ಯಕ್ರಮಗಳ ಮೂಲಕ ನೀರಿನ ಶುದ್ಧತೆ ಕಾಪಾಡುವುದು, ಮತ್ತು ಸಂಶೋಧನೆ ಹಾಗೂ ಹೊಸ ಆಲೋಚನೆಗಳ ಮೂಲಕ ಜಲ ಭದ್ರತೆಯನ್ನು ಗಟ್ಟಿಗೊಳಿಸುವುದು. ಇವೆಲ್ಲವೂ ದೀರ್ಘಕಾಲದ ಜಲ ಭದ್ರತೆಯ ದೂರದೃಷ್ಟಿಯನ್ನು ಉಲ್ಲೇಖಿಸುತ್ತದೆ.

ಯೋಜನೆಯ ಕೇಂದ್ರಬಿಂದುವೇನೆಂದರೆ, ನೀರಿನ ನಿರ್ವಹಣೆಯು ಎಲ್ಲಾ ಹಂತಗಳಲ್ಲೂ ಒಂದು 'ಜನ ಚಳವಳಿ' ಅಥವಾ ಜನಾಂದೋಲನವಾಗಬೇಕು ಎನ್ನುವುದು. ಸರ್ಕಾರದ ಯೋಜನೆಗಳು ಕೇವಲ ದಾರಿ ತೋರಿಸಿ ಅಗತ್ಯ ಸೌಲಭ್ಯಗಳನ್ನು ಒದಗಿಸಬಹುದು. ಆದರೆ, ನಿಜವಾದ ಬದಲಾವಣೆಗಾಗಿ ಪ್ರತಿಯೊಬ್ಬ ನಾಗರಿಕನೂ ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದು ನನ್ನ ಹೊಣೆ ಎಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕು.

ಜಲ ಜೀವನ್ ಮಿಷನ್ ಪ್ರತಿಯೊಂದು ಗ್ರಾಮೀಣ ಮನೆಗೂ ಸುರಕ್ಷಿತ ಮತ್ತು ಸಮರ್ಪಕ ಕುಡಿಯುವ ನೀರನ್ನು ಒದಗಿಸುವ ವಿಶ್ವದ ಅತಿದೊಡ್ಡ ಕಾರ್ಯಕ್ರಮವಾಗಿ ಜಾರಿಯಾಗುತ್ತಿದೆ. ಈಗಾಗಲೇ 15.8 ಕೋಟಿಗೂ ಹೆಚ್ಚು ಗ್ರಾಮೀಣ ಕುಟುಂಬಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲಾಗಿದ್ದು, ಜನರ ಜೀವನಮಟ್ಟ ಸುಧಾರಿಸಿದೆ. ಲಕ್ಷಾಂತರ ಮಹಿಳೆಯರಿಗೆ ಮೈಲುಗಟ್ಟಲೆ ನಡೆದು ನೀರು ಹೊರುವ ಸಂಕಷ್ಟ ತಪ್ಪಿದೆ. ಇದು ಅವರ ಆರೋಗ್ಯವನ್ನು ಸುಧಾರಿಸಿದ್ದಲ್ಲದೆ, ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಯೋಜನೆ ಕೇವಲ ಪೈಪ್‌ಲೈನ್‌ಗಳನ್ನು ಅಳವಡಿಸುವುದಕ್ಕಷ್ಟೇ ಸೀಮಿತವಾಗಿಲ್ಲ; ಬದಲಿಗೆ ಗ್ರಾಮ ಪಂಚಾಯತಿಗಳು ಮತ್ತು 'ಗ್ರಾಮ ನೀರು ಹಾಗೂ ನೈರ್ಮಲ್ಯ ಸಮಿತಿ'ಗಳ ಮೂಲಕ ಜನರನ್ನೇ ಈ ಯೋಜನೆಯ ಮಾಲೀಕರನ್ನಾಗಿ ಮಾಡುತ್ತಿದೆ. ಅದರಲ್ಲೂ ವಿಶೇಷವಾಗಿ, ನೀರಿನ ಗುಣಮಟ್ಟವನ್ನು ಪರೀಕ್ಷಿಸಲು ಮಹಿಳೆಯರಿಗೆ ತರಬೇತಿ ನೀಡಿ ಸ್ಥಳೀಯ ಮಟ್ಟದಲ್ಲಿ ಹೊಣೆಗಾರಿಕೆಯನ್ನು ಗಟ್ಟಿಗೊಳಿಸಲಾಗುತ್ತಿದೆ. 'ನಮಾಮಿ ಗಂಗೆ' ಯೋಜನೆಯು ಗಂಗಾ ನದಿ ಮತ್ತು ಅದರ



ಉಪನದಿಗಳ ನೀರಿನ ಗುಣಮಟ್ಟವನ್ನು ಸುಧಾರಿಸಿದ್ದಲ್ಲದೆ, ಅಲ್ಲಿನ ನೈಸರ್ಗಿಕ ಪರಿಸರವನ್ನು ಮರುಸ್ಥಾಪಿಸುವಲ್ಲಿ ಯಶಸ್ಸು ಕಂಡಿದೆ. ಪರಿಣಾಮ, ಗಂಗಾ ನದಿಯ ಡಾಲ್ಫಿನ್‌ಗಳಂತಹ ಪ್ರಮುಖ ಜಲಚರಗಳ ಆವಾಸಸ್ಥಾನಗಳು ಸುಧಾರಿಸಿದ್ದು, ಅವುಗಳ ಸಂಖ್ಯೆ ಹೆಚ್ಚಿದೆ. ಗಂಗೆಯನ್ನು 'ನಿರ್ಮಲ' (ಶುದ್ಧ) ಮತ್ತು 'ಅವಿರಲ' (ನಿರಂತರ ಹರಿವು) ಮಾಡುವುದರ ಜೊತೆಗೆ, ಈ ಯೋಜನೆಯು 'ಅರ್ಥ ಗಂಗೆ' ಮತ್ತು 'ಜನಗಂಗೆ' ಎಂಬ ಹೊಸ ಆಲೋಚನೆಗಳನ್ನು ತಂದಿದೆ. ಇದು ನದಿಯನ್ನು ಕೇವಲ ಸ್ವಚ್ಛಗೊಳಿಸುವುದಷ್ಟೇ ಅಲ್ಲ, ಜನರ ಜೀವನೋಪಾಯ, ಜಾಗೃತಿ ಮತ್ತು ಸ್ಥಳೀಯರ ಸಕ್ರಿಯ ಸಹಭಾಗಿತ್ವವನ್ನು ನದಿ ಸಂರಕ್ಷಣೆಯೊಂದಿಗೆ ಜೋಡಿಸಿದೆ. ಈ ಮೂಲಕ ನದಿ ಪುನಶ್ಚೇತನದ ಕಾರ್ಯದಲ್ಲಿ ಸಮುದಾಯವನ್ನೇ ಕೇಂದ್ರಬಿಂದುವನ್ನಾಗಿ ಮಾಡಲಾಗಿದೆ.

ಜಲಶಕ್ತಿ ಅಭಿಯಾನ ಇಂದು ನೀರಿನ ಸಂರಕ್ಷಣೆಯನ್ನು ಒಂದು ದೊಡ್ಡ ಜನಾಂದೋಲನವನ್ನಾಗಿ ಮಾಡಿದೆ. ಪ್ರಧಾನಮಂತ್ರಿಯವರ ಕ್ಯಾಚ್ ದಿ ರೈನ್ (ಮಳೆ ನೀರನ್ನು ಹಿಡಿದಿಡಿ - ಎಲ್ಲಿ ಬೀಳುತ್ತದೋ ಅಲ್ಲಿ, ಯಾವಾಗ ಬೀಳುತ್ತದೋ ಆಗ) ಎನ್ನುವ ಘೋಷಣೆ ದೇಶಾದ್ಯಂತ ಸಂಚಲನ ಮೂಡಿಸಿದೆ. 'ಜಲ ಸಂಚಯ ಜನ ಭಾಗೀದಾರಿ' ಉಪಕ್ರಮದ ಅಡಿಯಲ್ಲಿ ಜನರು ಮತ್ತು ಸಮುದಾಯಗಳು ಒಟ್ಟಾಗಿ ಮಳೆನೀರು ಕೊಯ್ಲು, ಹಳೆಯ ಕೆರೆ-ಕುಂಟೆಗಳ ಪುನಶ್ಚೇತನ, ಜಲಾನಯನ ಅಭಿವೃದ್ಧಿ ಮತ್ತು ಗಿಡಗಳನ್ನು ನೆಡುವ ಕೆಲಸಗಳನ್ನು ಕೈಗೆತ್ತಿಕೊಂಡಿದ್ದಾರೆ. ಸೆಪ್ಟೆಂಬರ್ 2024ರಿಂದೀಚೆಗೆ, ಇಂತಹ ಸಂಘಟಿತ ಪ್ರಯತ್ನಗಳಿಂದಾಗಿ ದೇಶಾದ್ಯಂತ 45 ಲಕ್ಷಕ್ಕೂ ಹೆಚ್ಚು ಜಲ ಸಂರಕ್ಷಣಾ ರಚನೆಗಳು ನಿರ್ಮಾಣವಾಗಿವೆ. ಸರ್ಕಾರದ ಬೆಂಬಲದೊಂದಿಗೆ ಜನಸಾಮಾನ್ಯರು ಮನಸ್ಸು ಮಾಡಿದರೆ ಎಷ್ಟು ದೊಡ್ಡ ಬದಲಾವಣೆ ತರಬಹುದು ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಇಂತಹ ಸಕ್ರಿಯ ಜನಭಾಗೀದಾರಿಕೆಯ ಉದಾಹರಣೆಗಳು ಭಾರತದ ಉದ್ದಗಲಕ್ಕೂ ಕಾಣಸಿಗುತ್ತವೆ. ಗುಜರಾತಿನ ಬನಸ್ಕಾಂತ ಜಿಲ್ಲೆಯಲ್ಲಿ, ಹೈನುಗಾರಿಕೆ ಸಹಕಾರ ಸಂಘಗಳು ಮತ್ತು ರೈತರು ಕೈಜೋಡಿಸಿ ಕಡಿಮೆ ವೆಚ್ಚದಲ್ಲಿ ಅಂತರ್ಜಲ ಮರುಪೂರಣ ಘಟಕಗಳನ್ನು ನಿರ್ಮಿಸಿದ್ದಾರೆ. ಇತ್ತ ಛತ್ತೀಸಗಢದ ಕೊರೆಯಾ ಜಿಲ್ಲೆಯಲ್ಲಿ, ರೈತರು ತಮ್ಮ ಜಮೀನಿನ ಒಂದು ಭಾಗವನ್ನೇ ಅಂತರ್ಜಲ ಹೆಚ್ಚಿಸುವ ಕೆಲಸಕ್ಕಾಗಿ ಮೀಸಲಿಟ್ಟಿದ್ದಾರೆ. ನಗರ ಪ್ರದೇಶಗಳಲ್ಲೂ ಬದಲಾವಣೆ ಗಾಳಿ ಬೀಸುತ್ತಿದ್ದು, ಅನೇಕ ವಸತಿ ಸಂಘಗಳು ಮಳೆನೀರು ಕೊಯ್ಲು ಮತ್ತು ನೀರಿನ ಮರುಬಳಕೆ ಪದ್ಧತಿಗಳನ್ನು ಅಳವಡಿಸಿಕೊಳ್ಳುತ್ತಿವೆ. 'ಕರ್ಮಭೂಮಿಯಿಂದ ಮಾತೃಭೂಮಿಗೆ' ಎಂಬಂತಹ ಅಭಿಯಾನಗಳು ಜನರ ಹೊಣೆಗಾರಿಕೆಯನ್ನು ಹೆಚ್ಚಿಸಿವೆ. ತಾವು ಕೆಲಸ ಮಾಡುವ ಊರಿನಲ್ಲಿದ್ದುಕೊಂಡೇ, ತಮ್ಮ ಹುಟ್ಟಿದ ಊರಿನ ಜಲಮೂಲಗಳನ್ನು ರಕ್ಷಿಸಲು ಜನರು ಸ್ವಯಂಪ್ರೇರಿತರಾಗಿ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ.

ಜಲ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಕೈಗಾರಿಕೆ ಮತ್ತು ಕೃಷಿ ವಲಯಗಳ ಪಾತ್ರ ಬಹಳ ದೊಡ್ಡದಿದೆ. ಇಂದು ಅನೇಕ ಕೈಗಾರಿಕೆಗಳು ಸ್ವಯಂಪ್ರೇರಿತವಾಗಿ ನೀರಿನ ಉಳಿತಾಯದ ಉತ್ತಮ ಪದ್ಧತಿಗಳನ್ನು ಅಳವಡಿಸಿಕೊಳ್ಳುತ್ತಿವೆ. ನೀರಿನ ಲೆಕ್ಕಪರಿಶೋಧನೆ, ಬಳಸಿದ ನೀರಿನ ಮರುಬಳಕೆ, 'ಜೀರೋ ಲಿಕ್ವಿಡ್ ಡಿಸ್ಚಾರ್ಜ್' ಮತ್ತು ಮಳೆನೀರು ಕೊಯ್ಲಿನಂತಹ ಕ್ರಮಗಳನ್ನು ಜಾರಿಗೆ ತರುತ್ತಿವೆ. ಇವುಗಳಿಗೆ ನೀರಿನ ತಂತ್ರಜ್ಞಾನದಲ್ಲಿನ ಹೊಸ ಆವಿಷ್ಕಾರಗಳು ಗಣನೀಯವಾಗಿ ಬೆಂಬಲ ನೀಡುತ್ತಿವೆ.

ಕೃಷಿ ಕ್ಷೇತ್ರದಲ್ಲಿ ಹನಿ ನೀರಾವರಿ ಮತ್ತು ತುಂತುರು ನೀರಾವರಿಯಂತಹ ಸೂಕ್ಷ್ಮ ನೀರಾವರಿ ಪದ್ಧತಿಗಳು ಜನಪ್ರಿಯವಾಗುತ್ತಿವೆ. ಜಮೀನಿನಲ್ಲಿ ಲಭ್ಯವಿರುವ ನೀರನ್ನು ಪೋಲು ಮಾಡದೆ ಸಮರ್ಪಕವಾಗಿ ನಿರ್ವಹಿಸುವ ಮತ್ತು ಮಿತವಾಗಿ ಬಳಸುವ ವಿಧಾನಗಳನ್ನು ದೇಶಾದ್ಯಂತ ಅಳವಡಿಸಿಕೊಳ್ಳಲಾಗುತ್ತಿದೆ. 'ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿಯ ಆಧುನೀಕರಣ'ದಂತಹ ಸರ್ಕಾರಿ ಯೋಜನೆಗಳು ಇದಕ್ಕೆ ದೊಡ್ಡ ಮಟ್ಟದ ಬೆಂಬಲ ನೀಡುತ್ತಿವೆ. ಈ ಪ್ರಯತ್ನಗಳು ಕೇವಲ ನೀರಿನ ಉಳಿತಾಯಕ್ಕೆ ಮಾತ್ರವಲ್ಲದೆ, ರೈತರ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡುತ್ತಿವೆ. ನಗರ ಪ್ರದೇಶಗಳಲ್ಲಿ ವಾಸಿಸುವವರು ಕೂಡ ಮಳೆನೀರು ಕೊಯ್ಲು, ಬಳಸಿದ ನೀರಿನ ಮರುಬಳಕೆ ಮತ್ತು ದೂರದೃಷ್ಟಿಯ ಸುಸ್ಥಿರ ಯೋಜನೆಗಳ ಮೂಲಕ ಜಲ ಸಂರಕ್ಷಣೆಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಬೇಕು. ನೀರಿನ ಜವಾಬ್ದಾರಿಯುತ ಬಳಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಪ್ರತಿಯೊಂದು ಮನೆ, ಶಾಲಾ-ಕಾಲೇಜುಗಳಂತಹ ಸಂಸ್ಥೆಗಳು ಪ್ರಮುಖ ಪಾತ್ರವನ್ನು ಹೊಂದಿವೆ.

ಭಾರತವನ್ನು 'ವಿಕಸಿತ ಭಾರತ'ವನ್ನಾಗಿ ನಿರ್ಮಿಸುವ ಕನಸು ನನಸಾಗಬೇಕಾದರೆ, ಜಲ ಸುರಕ್ಷತೆಯನ್ನು ಸಾಧಿಸುವುದು ನಮ್ಮೆಲ್ಲರ ಸಾಮೂಹಿಕ ರಾಷ್ಟ್ರೀಯ ಪ್ರಯತ್ನವಾಗಬೇಕು. ಜಲ ಭದ್ರತೆ ಎನ್ನುವುದು ಕೇವಲ ದೊಡ್ಡ ದೊಡ್ಡ ಕಟ್ಟಡಗಳು, ಪೈಪ್‌ಲೈನ್‌ಗಳು ಅಥವಾ ಸರ್ಕಾರದ ನೀತಿಗಳಿಂದ ಮಾತ್ರ ಸಾಧ್ಯವಿಲ್ಲ; ಬದಲಿಗೆ ಅದು ನಮ್ಮೆಲ್ಲರ ದೈನಂದಿನ ನಡವಳಿಕೆಯಲ್ಲಿ ಬರುವ ಬದಲಾವಣೆಯ ಮೇಲೆ ಅಂತಿಮವಾಗಿ ಅವಲಂಬಿತವಾಗಿದೆ.

ಈ ವಿಶ್ವ ಜಲ ದಿನದಂದು, ನಾವು ಮಾತಿನಿಂದ ಕೃತಿಯತ್ತ ಸಾಗೋಣ. ನಮ್ಮ ದೇಶದ ಪ್ರತಿಯೊಬ್ಬ ನಾಗರಿಕನೂ ದಿನಕ್ಕೆ ಕೇವಲ ಒಂದು ಲೀಟರ್ ನೀರನ್ನು ಉಳಿಸಿದರೆ, ನಾವು ದಿನವೊಂದಕ್ಕೆ 140 ಕೋಟಿ ಲೀಟರ್‌ಗಳಿಗಿಂತ ಹೆಚ್ಚು ನೀರನ್ನು ಸಂರಕ್ಷಿಸಬಹುದು! ಇದೊಂದು ಸಣ್ಣ ಕೆಲಸ ಎಂದು ಅನಿಸಬಹುದು, ಆದರೆ ದೇಶದ ಮೇಲೆ ಇದು ಬೀರುವ ಪ್ರಭಾವ ಅಸಾಧಾರಣ. ನೀರನ್ನು ಉಳಿಸುವುದು ಕೇವಲ ಒಂದು ದಿನದ ಆಚರಣೆಯಾಗದೆ ನಮ್ಮ ದೈನಂದಿನ ಅಭ್ಯಾಸವಾಗಲಿ. ಎಲ್ಲಿ ಪ್ರತಿಯೊಂದು ಹನಿ ನೀರಿಗೂ ಮೌಲ್ಯವಿರುತ್ತದೆಯೋ, ಪ್ರತಿಯೊಂದು ಜಲಮೂಲವೂ ಸುಸ್ಥಿರವಾಗಿರುತ್ತದೆಯೋ ಮತ್ತು ಪ್ರತಿಯೊಬ್ಬ ನಾಗರಿಕನೂ ಈ ಅಮೂಲ್ಯ ಸಂಪನ್ಮೂಲದ ರಕ್ಷಕನಾಗುತ್ತಾನೋ, ಅಂತಹ ಭಾರತವೇ ನಿಜವಾದ ಸುಭಿಕ್ಷ ಭಾರತ.